
ಮಂಗಳೂರು
ಶುಕ್ರವಾರ, 17 ಏಪ್ರಿಲ್ 2026
ಸಂಪುಟ 48, ಸಂಚಿಕೆ 29 ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಬಾಲಚೇತನ ಹೆಸರಲ್ಲಿ ಪಠ್ಯಪುಸ್ತಕ | ೦೩
ನಿದಾಗೆ ಉಗ್ರ ವೈದ್ಯೆ ಶಾಹೀನ್ ಸಂಪರ್ಕ | ೦೩
ರಾಜ್ಯಗಳಿಗಿಲ್ಲ ತಾರತಮ್ಯ: ಮೋದಿ | ೦೩

ಲೋಕಸಭೆ ಕ್ಷೇತ್ರಗಳ ಪುನರ್‌ವಿಂಗಡಣೆ ಗೊಂದಲಕ್ಕೆ ತೆರೆ ಎಳೆದ ಶಾ

ದಕ್ಷಿಣದ ಸ್ಥಾನ 195ಕ್ಕೆ ಏರಿಕೆ

ಹೊಸದಿಲ್ಲಿ: ದೇಶದ ಲೋಕಸಭೆ ಸ್ಥಾನಗಳ ಮರುಹಂಚಿಕೆ ಕುರಿತಾಗಿ ಉಂಟಾಗಿದ್ದ ಗೊಂದಲ ಮತ್ತು ಆತಂಕಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸ್ಪಷ್ಟನೆ ನೀಡಿದ್ದು, ಕರ್ನಾಟಕ ಸೇರಿ ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗುವುದಿಲ್ಲ, ಬದಲಿಗೆ ಗಣನೀಯವಾಗಿ ಹೆಚ್ಚಲಿದೆ ಎಂದು ತಿಳಿಸಿದ್ದಾರೆ. ಐದು ದಕ್ಷಿಣ ರಾಜ್ಯಗಳಲ್ಲಿ ಲೋಕಸಭೆ ಸ್ಥಾನಗಳು ಪ್ರಸ್ತುತ 129ರಿಂದ 195ಕ್ಕೆ ಏರಿಕೆಯಾಗಲಿದ್ದು, ಇದು ಶೇ.50ರಷ್ಟು ಹೆಚ್ಚಳವಾಗುತ್ತದೆ ಎಂದು ಅವರು ಲೋಕಸಭೆಯಲ್ಲಿ ಹೇಳಿದ್ದಾರೆ.

ಲೋಕಸಭೆಯ ಒಟ್ಟು ಸ್ಥಾನಗಳನ್ನು 543ರಿಂದ 816ಕ್ಕೆ ಹೆಚ್ಚಿಸುವ ಪ್ರಸ್ತಾವನೆ ಕುರಿತು ನಡೆದ ಚರ್ಚೆಯಲ್ಲಿ ಮಧ್ಯಪ್ರವೇಶಿಸಿದ ಶಾ, ದಕ್ಷಿಣ ರಾಜ್ಯಗಳ ಬಗ್ಗೆ ತಪ್ಪು ಮಾಹಿತಿ ಹರಡಲಾಗುತ್ತಿದೆ ಎಂದು ಆರೋಪಿಸಿದರು. ➡ಪುಟ ೪



- ದಕ್ಷಿಣ ರಾಜ್ಯಗಳಲ್ಲಿ ಲೋಕಸಭೆ ಸ್ಥಾನಗಳು 129ರಿಂದ 195ಕ್ಕೆ ಏರಿಕೆ
- ಕರ್ನಾಟಕಕ್ಕೆ 28ರಿಂದ 42 ಸ್ಥಾನಗಳು
- ಲೋಕಸಭೆ ಒಟ್ಟು ಬಲ 543ರಿಂದ 816ಕ್ಕೆ ಹೆಚ್ಚಳ
- ಮಹಿಳಾ ಮೀಸಲಾತಿ 2029ರಿಂದ ಮಾತ್ರ ಜಾರಿ
- ಡಿಲಿಮಿಟೇಶನ್ ಬಗ್ಗೆ ತಪ್ಪು ಪ್ರಚಾರಕ್ಕೆ ಅಮಿತ್ ಶಾ ತಿರುಗೇಟು
- ಜಾತಿ ಗಣತಿ ಜನಗಣತಿಯೊಂದಿಗೆ ನಡೆಸಲು ಸರ್ಕಾರ ನಿರ್ಧಾರ

598 ಗ್ರಾಪಂಗಳಲ್ಲಿದೆ ಕುಡಿಯುವ ನೀರಿನ ಸಮಸ್ಯೆ

ಬೆಂಗಳೂರು: ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹು ದಾದ 213 ತಾಲೂಕುಗಳನ್ನು ಹಾಗೂ 2410 ಗ್ರಾಮ ಪಂಚಾಯತ್‌ಗಳನ್ನು ಗುರುತಿಸಲಾಗಿದೆ. ಪ್ರಸ್ತುತ 114 ತಾಲೂಕುಗಳ 598 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದ್ದು, ಜಿಲ್ಲಾಧಿಕಾರಿಗಳು ಯಾವುದೇ ತೊಂದರೆ ಆಗದಂತೆ ಎಚ್ಚರ ವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ◆ ವಿವರ ಪುಟ ೩

ಸಿಎಂ ರೇವಂತ್ ಜಿಡಿಪಿ ಮಾದರಿ ಹಾಸ್ಯಾಸ್ಪದ

ಹೊಸದಿಲ್ಲಿ: ಲೋಕಸಭೆ ಕ್ಷೇತ್ರ ಮರುಹಂಚಿಕೆ ವಿಚಾರಕ್ಕೆ ಸಂಬಂಧಿಸಿದಂತೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಸೂಚಿಸಿರುವ ಜಿಡಿಪಿ ಆಧಾರಿತ ಮಾದರಿ 'ಹಾಸ್ಯಾಸ್ಪದ ಹಾಗೂ



ಅಸಾಧ್ಯ' ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಟೀಕಿಸಿದ್ದಾರೆ. ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿ ಸೇರಿದಂತೆ ಸಂಬಂಧಿತ ಮಸೂದೆಗಳ ಚರ್ಚೆಯಲ್ಲಿ ಮಾತನಾಡಿದ ಅವರು, ಕ್ಷೇತ್ರ ಮರುಹಂಚಿಕೆ ಪ್ರಕ್ರಿಯೆ 'ಜನತಾಂತ್ರಿಕ ಅಗತ್ಯವಷ್ಟೇ ಅಲ್ಲ. ➡ಪುಟ ೪

ಕಿರುಸುದ್ದಿ

ಖಾಸಗಿ ವಾಹನಗಳಲ್ಲಿ ಶಾಲಾ ಮಕ್ಕಳ ಸಾಗಾಟ: ಸೂಕ್ತ ಕ್ರಮಕ್ಕೆ ಆಗ್ರಹ

ಮಂಗಳೂರು: ಖಾಸಗಿ ವಾಹನಗಳಲ್ಲಿ ಶಾಲಾ ಮಕ್ಕಳನ್ನು ಸಾಗಾಟ ಮಾಡಲಾಗುತ್ತಿದ್ದು, ಇದರ ವಿರುದ್ಧ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾ ಶಾಲಾ ಮಕ್ಕಳ ವಾಹನ ಚಾಲಕರ ಸಂಘದ ಗೌರವಾಧ್ಯಕ್ಷ ಸುನೀಲ್ ಕುಮಾರ್ ಬಜಾಲ್ ಆಗ್ರಹಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿಯಮ ಉಲ್ಲಂಘನೆಯ ಕುರಿತು ಈಗಾಗಲೇ 17 ಬಾರಿ ದೂರು ನೀಡಿದರೂ ಕ್ರಮವಾಗಿಲ್ಲ. ಶಾಲಾರಂಭ ಆಗುವುದರೊಳಗೆ ಸೂಕ್ತ ಕ್ರಮಕೈಗೊಳ್ಳದಿದ್ದಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದರು. ಖಾಸಗಿ ವಾಹನದ ಚಾಲಕರು, ಮಾಲಕರು ನಿಯಮ ಮೀರಿ ಮಕ್ಕಳನ್ನು ಖಾಸಗಿ ಕರೆದುಕೊಂಡು ಹೋಗುತ್ತಿದ್ದಾರೆ ಇದು ಅಪಾಯಕಾರಿಯಾಗಿದೆ. ತ್ರಾಸಿಯಲ್ಲಿ ಕೆಲ ವರ್ಷದ ಹಿಂದೆ ಖಾಸಗಿ ವಾಹನದಲ್ಲಿ ವಿದ್ಯಾರ್ಥಿಗಳನ್ನು ಸಾಗಾಟ ಮಾಡಿದ ಸಂದರ್ಭ ದುರ್ಘಟನೆಯಾಗಿತ್ತು. ಈ ಸಂದರ್ಭ ಮಕ್ಕಳಿಗೂ ಸಮರ್ಪಕವಾದ ಪರಿಹಾರವೂ ಸಿಕ್ಕಿಲ್ಲ. ಇಂತಹ ಘಟನೆಗಳು ನಮ್ಮ ಕಣ್ಣ ಮುಂದಿದ್ದರೂ ಮಂಗಳೂರು ಸೇರಿದಂತೆ ಜಿಲ್ಲೆಯ ಅನೇಕ ಕಡೆಗಳಲ್ಲಿ ವಾಹನ ಸಂಚಾರ ನಿಯಮಗಳನ್ನೇ ಉಲ್ಲಂಘಿಸಿ ಖಾಸಗಿ ವಾಹನಗಳಲ್ಲಿ ವಿದ್ಯಾರ್ಥಿಗಳನ್ನು ಸಾಗಾಟ ಮಾಡಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಸತೀಶ್ ಪೂಜಾರಿ ಅಶೋಕನಗರ, ಸಂಘದ ಪ್ರಧಾನ ಕಾರ್ಯದರ್ಶಿ ಹರೀಶ್ ಪೂಜಾರಿ, ಸ್ಥಾಪನಾಧ್ಯಕ್ಷ ಮೋಹನ್ ಕುಮಾರ್ ಅತ್ತಾವರ, ಕಾರ್ಯಾಧ್ಯಕ್ಷ ಕಿರಣ್ ಲೇಡಿಹಿಲ್, ಸಂಘಟನಾ ಕಾರ್ಯದರ್ಶಿ ಲೋಕೇಶ್ ಸುರತ್ಕಲ್ ಉಪಸ್ಥಿತರಿದ್ದರು.

ಇಂದಿನಿಂದ ಇತಿಹಾಸ ಪ್ರಸಿದ್ಧ ಎಮ್ಮೆಮಾಡು ಉರೂಸ್ ಮುಬಾರಕ್ ಆರಂಭ

ಮಂಗಳೂರು: ಸುಮಾರು 400 ವರ್ಷಗಳ ಇತಿಹಾಸವಿರುವ ಎಮ್ಮೆಮಾಡು ಹಝ್ರತ್ ಸೂಫಿ ಶಹೀದ್ ಮತ್ತು ಸೈಯ್ಯದ್ ಹಸನ್ ಸಖಾಫ್ ಅಲ್ ಹಳ್ರಮೀ ಹಾಗೂ ಇತರ ವಲಿಯಾಗಳ ಹೆಸರಲ್ಲಿ ಪ್ರತಿ ವರ್ಷ ಆಚರಿಸಿಕೊಂಡು ಬರುತ್ತಿರುವ ಉರೂಸ್ ಮುಬಾರಕ್ ಏ.17ರಿಂದ 24ರ ತನಕ ನಡೆಯಲಿದೆ ಎಂದು ಎಮ್ಮೆಮಾಡು ತಾಜುಲ್ ಇಸ್ಲಾಂ ಮುಸ್ಲಿಮ್ ಜಮಾಅತ್ ಕಮಿಟಿ ಅಧ್ಯಕ್ಷ ಕೆ.ಎಂ.ಹುಸೈನ್ ಸಖಾಫಿ ತಿಳಿಸಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಏ.17 ರಂದು ಉರೂಸ್ ಕಾರ್ಯಕ್ರಮದ ಉದ್ಘಾಟನೆಯನ್ನು ಸಮಸ್ತ ಕೇರಳ ಜಂಇಯ್ಯತುಲ್ ಉಲಮಾದ ಅಧ್ಯಕ್ಷ ಸಯ್ಯದುಲ್ ಉಲಮಾ ಸೈಯ್ಯಿದ್ ಜಿಫ್ರಿ ಮುತ್ತುಕೋಯ ತಂಙಲ್ ನೆರವೇರಿಸಲಿರುವರು ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಕಮಿಟಿಯ ಸದಸ್ಯರಾದ ಅಶ್ರಫ್‌ಜೌಹರಿ ಎಮ್ಮೆಮಾಡು, ಅಬ್ದುಲ್ ರಹಿಮಾನ್ ಉಪಸ್ಥಿತರಿದ್ದರು.

ಏ.20: ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ಜಯಂತಿ

ಉಡುಪಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಡುಪಿ ಜಿಲ್ಲೆ, ಉಡುಪಿ ಬಸವ ಸಮಿತಿ (ರಿ) ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ) ಉಡುಪಿ ಜಿಲ್ಲೆ ಇವರ ಸಹಯೋಗದಲ್ಲಿ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ಜಯಂತಿ ಕಾರ್ಯಕ್ರಮವು ಏ.20 ರಂದು ಬೆಳಗ್ಗೆ 10.30 ಕ್ಕೆ ನಗರದ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಉದ್ಘಾಟಿಸಲಿದ್ದು, ಶಾಸಕ ಯಶ್‌ಪಾಲ್ ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಶರಣ ಸಾಹಿತ್ಯ ಪರಿಷತ್ತು ಜಿಲ್ಲಾ ಅಧ್ಯಕ್ಷ ಡಾ. ನಿರಂಜನ ಯು.ಸಿ ಉಪನ್ಯಾಸ ನೀಡಲಿದ್ದಾರೆ.

ಏ. 21: ರಜತಾದ್ರಿಯಲ್ಲಿ ಶ್ರೀ ಶಂಕರಾಚಾರ್ಯ ಜಯಂತಿ

ಉಡುಪಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಡುಪಿ ಜಿಲ್ಲೆ ಇವರ ಸಂಯುಕ್ತ ಆಶ್ರಯದಲ್ಲಿ ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮವು ಏಪ್ರಿಲ್ 21 ರಂದು ಬೆಳಗ್ಗೆ 10 ಗಂಟೆಗೆ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಉದ್ಘಾಟಿಸಲಿದ್ದು, ಶಾಸಕ ಯಶ್‌ಪಾಲ್ ಎ ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಆದಮಾರು ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನ ಸಂಸ್ಕೃತ ಉಪನ್ಯಾಸಕ ಡಾ. ಜಯಶಂಕರ ಕಂಗಣ್ಣಾರು ಉಪನ್ಯಾಸ ನೀಡಲಿದ್ದಾರೆ.

ಏ.28: ಉಡುಪಿಯಲ್ಲಿ ಪ್ರಗತಿ ಪರಿಶೀಲನಾ ಸಭೆ

ಉಡುಪಿ: ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯು ಏ.28 ರಂದು ಬೆಳಗ್ಗೆ 10.30 ಕ್ಕೆ ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾ ಪಂಚಾಯತ್ ಡಾ.ವಿ.ಎಸ್ ಆಚಾರ್ಯ ಸಭಾಂಗಣದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಆರ್. ಹೆಬ್ಬಾಳಕರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ್‌ನ ಕಚೇರಿ ಪ್ರಕಟಣೆ ತಿಳಿಸಿದೆ.



ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದ ಜಾತ್ರೋತ್ಸವದ ಪ್ರಯುಕ್ತ ಗುರುವಾರ ಪೂರ್ವಾಹ್ಣ ದೇವಾಲಯದಲ್ಲಿ ತುಲಾಭಾರ ಸೇವೆ ನಡೆಯಿತು. ಅನೇಕ ಭಕ್ತರು ತುಲಾಭಾರ ಸೇವೆ ನಡೆಸಿ, ಹರಕೆ ತೀರಿಸಿದರು.

ಸ್ಥಳೀಯರ ಆಗ್ರಹಕ್ಕೆ ಎಚ್ಚೆತ್ತ ರಾಷ್ಟ್ರೀಯ ಹೆದ್ದಾರಿ ಇಲಾಖೆ

ಕೋಲ್ನಾಡ್ ಸೇತುವೆ ದುರಸ್ತಿಗೆ ಚಾಲನೆ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66 ಚತುಷ್ಪಥಗೊಂಡ ಬಳಿಕ ಕೋಲ್ನಾಡ್ ಕಿರು ಸೇತುವೆ ಅಪಾಯದಲ್ಲಿದ್ದು ಶೀಘ್ರ ದುರಸ್ತಿ ಪಡಿಸಬೇಕು ಎಂಬ ಸ್ಥಳೀಯರ ಆಗ್ರಹದ ಹಿನ್ನೆಲೆಯಲ್ಲಿ ಎಚ್ಚೆತ್ತ ಹೆದ್ದಾರಿ ಇಲಾಖೆಯು ಸೇತುವೆಯ ದುರಸ್ತಿಗೆ ಮುಂದಾಗಿದೆ

ಗುರುವಾರ ಬೆಳಿಗ್ಗೆ ಹೆದ್ದಾರಿ ಇಲಾಖೆಯ ಕಾರ್ಮಿಕರು ರಾಷ್ಟ್ರೀಯ ಹೆದ್ದಾರಿ 66ರ ಹಳೆ ಸೇತುವೆಯ ಮುರಿದುಹೋದ ಸಿಮೆಂಟ್ ಬೇಲಿಗಳನ್ನು ದುರಸ್ತಿ ನಡೆಸುತ್ತಿದ್ದಾರೆ. ಹೆದ್ದಾರಿ ಇಲಾಖೆ ಸೈಟ್ ಇಂಜಿನಿಯರ್ ಎಸ್. ಪಾನ್ ಮಾಧ್ಯಮದ ಜೊತೆ ಮಾತನಾಡಿ, ಮುಂದಿನ ನಾಲ್ಕು ದಿನದ ಒಳಗಡೆ ಕಿರು ಸೇತುವೆಯ ತಡೆಬೇಲಿಯನ್ನು ದುರಸ್ತಿ ಪಡಿಸಲಾಗುವುದು. ಈ ಸಂದರ್ಭ ವಾಹನ ಸಂಚಾರ ದಟ್ಟಣೆ ಯಾಗುವ ಸಾಧ್ಯತೆಯಿದ್ದು ವಾಹನ ಸವಾರರು ಎಚ್ಚರಿಕೆಯಿಂದ ಚಲಿಸಬೇಕಾಗಿದೆ ಎಂದರು.



ಸೇತುವೆಯ ಮೇಲ್ಭಾಗದಲ್ಲಿ ಉಂಟಾಗಿರುವ ರಂದ್ರದಲ್ಲಿ ಯಾವುದೇ ಅಪಾಯ ಸಂಭವಿಸುವ ಸಾಧ್ಯತೆ ಇಲ್ಲ ಆದರೆ ಅದನ್ನು ಕಾಂಕ್ರೀಟ್ ಹಾಕಿ ಮುಚ್ಚಲಾಗುವುದು ಎಂದರು

ಸೇತುವೆಯ ಕೆಳಗಡೆ ನೀರಿನಲ್ಲಿ ಹಾಗೂ ಸೇತುವೆಯ ಇಕ್ಕೆಲಗಳಲ್ಲಿ ತ್ಯಾಜ್ಯದ ರಾಶಿ ಕಂಡು ಬರುತ್ತಿದ್ದು ತೆರವುಗೊಳಿಸಲು ಪಡುಪಣಂಬೂರು ಗ್ರಾಮ ಪಂಚಾಯತ್ ಅಧಿಕಾರಿಗಳು ಮುಂದಾಗಬೇಕು ಹಾಗೂ ತ್ಯಾಜ್ಯ ಎಸೆಯುತ್ತಿರುವ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸ್ಥಳದಲ್ಲಿ ಸಿಸಿ ಕ್ಯಾಮೆರಾ ಅಳವಡಿಸಬೇಕು ಎಂದು ಸ್ಥಳೀಯ ನಾಗರಿಕ ಹಾಗೂ ಸಾಮಾಜಿಕ ಕಾರ್ಯಕರ್ತ ಅಶೋಕ್ ಭಟ್ ಆಗ್ರಹಿಸಿದ್ದಾರೆ.

ಫಾದರ್ ಮುಲ್ಲರ್ | 36ನೇ ಪದವಿ ಪ್ರದಾನ ಸಮಾರಂಭ

ಶೈಕ್ಷಣಿಕ ಸಾಧಕರಿಗೆ ಸನ್ಮಾನ

ಮಂಗಳೂರು: ವಿವಿಧ ಸವಾಲುಗಳು, ಅಡೆತಡೆಗಳ ನಡುವೆಯೂ ಹೋಮಿಯೋಪತಿ ಬೆಳೆದಿದೆ. ಈ ಕ್ಷೇತ್ರದಲ್ಲಿ ಇಂದು ಸಾಕಷ್ಟು ಅವಕಾಶಗಳು ಸೃಷ್ಟಿಯಾಗಿವೆ ಎಂದು ಯೇನೆಪೊಯ ವಿವಿ ಕುಲಪತಿ ಡಾ. ಕೆ.ಎಸ್. ಗಂಗಾಧರ ಸೋಮಯಾಜಿ ಹೇಳಿದರು.

ಅವರು ಗುರುವಾರ ಕಂಕನಾಡಿಯ ಫಾದರ್ ಮುಲ್ಲರ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಫಾದರ್ ಮುಲ್ಲರ್ ಹೋಮಿಯೋಪತಿಕ್ ಮೆಡಿಕಲ್ ಕಾಲೇಜಿನ 36ನೇ ಪದವಿ ಪ್ರದಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನಿಸಿ ಮಾತನಾಡಿದರು.

ಹೋಮಿಯೋಪಥಿ ವಿಧಾನದಲ್ಲಿ ರೋಗಿಯ ಹಿನ್ನೆಲೆಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ರೋಗಿಗಳೊಂದಿಗೆ ಮಾತನಾಡುವುದರಿಂದ ಶೇ. 90ರಷ್ಟು ರೋಗ ಪತ್ತೆ ಮಾಡಲು ಸಾಧ್ಯವಿದೆ. ಆದರೆ, ಇಂದು ಅಲೋಪತಿ ವಿಧಾನ ಬೆಳೆದಿದ್ದು, ವೈದ್ಯರು ರೋಗಿಗಳನ್ನು ನೋಡುವ ಬದಲು ಮೊದಲು ವಿವಿಧ ಪರೀಕ್ಷೆಗಳನ್ನು ನಡೆಸುತ್ತಾರೆ. ಅದರ ವರದಿಯ ಆಧಾರದ ಬಳಿಕವೇ ಅನೇಕ ಕಡೆಗಳಲ್ಲಿ ವೈದ್ಯರು ರೋಗಿಗಳನ್ನು ನೋಡುವ ಸನ್ನಿವೇಶ ಬಂದಿದೆ ಎಂದರು.

ಹೋಮಿಯೋಪತಿ ಇಂದಿಗೂ ಪ್ರಸ್ತುತ

ರೋಗಿಗಳೊಂದಿಗೆ ಮಾತನಾಡುವುದರಿಂದ ಸಾಕಷ್ಟು ಮಾಹಿತಿಗಳು ಸಿಗುತ್ತವೆ. ಇದರಿಂದಾಗಿ ಹೆಚ್ಚಿನ ಪರೀಕ್ಷೆಗಳಿಲ್ಲದೆ ರೋಗ ನಿರ್ಣಯ ಸಾಧ್ಯ. ರೋಗಿಗಳ ಆತ್ಮವಿಶ್ವಾಸ ಗೆಲ್ಲಬಹುದು. ವಿವಿಧ ಸವಾಲುಗಳು, ಅಡೆತಡೆಗಳ ನಡುವೆಯೂ ಹೋಮಿಯೋಪತಿ ಇಂದಿಗೂ ಉಳಿದುಕೊಂಡಿದೆ. ನೀಟ್ ಅರ್ಹತೆಯ ಆಧಾರದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುತ್ತಿರುವುದರಿಂದ ಅನೇಕ ಕಡೆಗಳಲ್ಲಿ ನೋಂದಣಿಗೆ ಸಮಸ್ಯೆಯಾಗುತ್ತಿದೆ. ಸರಕಾರ ಇದನ್ನು ಸರಳಗೊಳಿಸಬೇಕು. ಆದಾಗ್ಯೂ ಎಲ್ಲ ಅಡೆತಡೆಗಳನ್ನು ಮೀರಿ ಹೋಮಿಯೋಪತಿ ಮುನ್ನಡೆಯುತ್ತಿದೆ ಎಂದರು.



> **ಗ್ರಾಮಾಂತರದಲ್ಲಿ ವೈದ್ಯರ ಕೊರತೆ**
>
> **ಪ್ರಸ್ತುತ ಹೋಮಿಯೋಪತಿಗೆ ಸಾಕಷ್ಟು ಅವಕಾಶಗಳಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯರ ಕೊರತೆ ಇದ್ದು, ನಗರ ಹೊರ ಭಾಗದಲ್ಲಿ ಸೇವೆ ನೀಡುವ ಅವಕಾಶ ಸಾಕಷ್ಟಿದೆ. ಅದರ ಸದುಪಯೋಗವಾಗಬೇಕು. ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿಯುವುದರೊಂದಿಗೆ ಸಂಶೋಧನೆಗೆ ಒತ್ತು ನೀಡಬೇಕು.**
>
> ■ **ಡಾ.ಕೆ.ಎಸ್.ಗಂಗಾಧರ, ಸೋಮಯಾಜಿ, ಯೇನೆಪೊಯ ವಿವಿ ಕುಲಪತಿ**

ಮಂಗಳೂರು ಧರ್ಮಪ್ರಾಂತ್ಯದ ಬಿಷಪ್ ಹಾಗೂ ಫಾದರ್ ಮುಲ್ಲರ್ ಸಂಸ್ಥೆಗಳ ಅಧ್ಯಕ್ಷ ಫಾ.ಡಾ.ಪೀಟರ್ ಪಾವ್ಲ್ ಸಲ್ಡಾನ್ಹಾ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಫಾದರ್ ಮುಲ್ಲರ್ ಸಂಸ್ಥೆಗಳ ನಿರ್ದೇಶಕ ವಂ.ಫಾವುಸ್ಟಿನ್ ಲೂಕಸ್ ಲೋಬೊ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಫಾದರ್ ಮುಲ್ಲರ್ ಹೋಮಿಯೋಪತಿಕ್ ಮೆಡಿಕಲ್ ಕಾಲೇಜಿನ ಆಡಳಿತಾಧಿಕಾರಿ ವಂ. ಡೊನಾಲ್ಡ್ ನೀಲೇಶ್ ಕ್ರಾಸ್ತಾ ವಂದಿಸಿದರು. ಫಾದರ್ ಮುಲ್ಲರ್ ಹೋಮಿಯೋಪತಿಕ್ ಫಾರ್ಮಾಸಿಟಿಕಲ್ ಡಿವಿಷನ್ ನ ಆಡಳಿತಾಧಿಕಾರಿ ವಂ.ನೆಲ್ಸನ್ ಧೀರಜ್ ಪಾಯಿಸ್, ಸಹಾಯಕ ಆಡಳಿತಾಧಿಕಾರಿ ವಂ. ಅಶ್ವಿನ್ ಲಾರೆನ್ಸ್ ಕ್ರಾಸ್ತಾ, ಪ್ರಾಂಶುಪಾಲರಾದ ಡಾ.ಇ.ಎಸ್.ಜೆ. ಪ್ರಭುಕಿರಣ್, ಉಪಪ್ರಾಂಶುಪಾಲರಾದ ಡಾ. ವಿಲ್ಮಾ ಮೀರಾ ಡಿಸೋಜಾ, ವೈದ್ಯಕೀಯ ಅಧೀಕ್ಷಕ ಡಾ. ಗಿರೀಶ್ ನಾವಡ, ಉಪ ವೈದ್ಯಕೀಯ ಅಧೀಕ್ಷಕಿ ಡಾ. ದೀಪಾ ಪಾಯಿಸ್ ಮತ್ತಿತರರು ಉಪಸ್ಥಿತರಿದ್ದರು.

ಆರ್‌ಜಿಎಚ್‌ಎಸ್ ಚಿನ್ನದ ಪದಕ ವಿಜೇತರಾದ ಡಾ. ಮರ್ಲಿನ್ ಲಿಜಾ ಜೇಮ್ಸ್, ಯುಜಿ ವಿಭಾಗದಲ್ಲಿ ಪ್ರೆಸಿಡೆನ್ಸ್ ಗೋಲ್ಡ್ ಮೆಡಲ್ ವಿಜೇತರಾದ ಡಾ.ಅತಿಲ್ ಮೊಂತೇರೊ ಹಾಗೂ ಶೈಕ್ಷಣಿಕ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಬೆಳ್ಳೂರು ಶ್ರೀ ಕ್ಷೇತ್ರದಲ್ಲಿ ಯೋಜನೆಗೆ ಮುನ್ನುಡಿ

650 ಭತ್ತದ ತಳಿ ರಕ್ಷಣೆಗಾಗಿ ಮ್ಯೂಸಿಯಂ ಸ್ಥಾಪನೆಗೆ ಸಿದ್ಧತೆ

ಮುಳ್ಳೇರಿಯ: ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಸತ್ಯನಾರಾಯಣ ಬೆಳೇರಿ ಅವರ ಬಳಿ ಇರುವ 650ಕ್ಕೂ ಅಧಿಕ ಭತ್ತದ ತಳಿ ಸಂರಕ್ಷಿಸಿ ಜೋಪಾನ ಮಾಡುವ ಉದ್ದೇಶದಿಂದ ಮ್ಯೂಸಿಯಂ ಮತ್ತು ಅಧ್ಯಯನ ಕೇಂದ್ರ ಸ್ಥಾಪಿಸಲು ನಿರ್ಧರಿಸಲಾಗಿದೆ.

ವಿಷು ದಿನವಾದ ಬುಧವಾರ ಬೆಳೇರಿ ಅಭಿಮಾನಿ ಬಳಗವು ಬೆಳ್ಳೂರು ಶ್ರೀ ಮಹಾವಿಷ್ಣು ಕ್ಷೇತ್ರದಲ್ಲಿ ಪ್ರಾರ್ಥನೆ, ವಿಶೇಷ ಪೂಜೆ ಸಲ್ಲಿಸಿ ಯೋಜನೆ ಸಾಕಾರಕ್ಕೆ ಮುನ್ನುಡಿ ಇಟ್ಟಿದೆ.

ಬೆಳೇರಿಗೆ 650ಕ್ಕೂ ಅಧಿಕ ತಳಿ ಸುವ್ಯವಸ್ಥಿತವಾಗಿ ಇರಿಸಲು ಜಾಗವಿಲ್ಲ. ಹಟ್ಟಿಯ ಒಂದು ಕೋಣೆಯಲ್ಲೇ ಇದನ್ನೆಲ್ಲಾ ಜೋಪಾನ ಮಾಡಬೇಕಾಗಿದೆ. ಜೊತೆಗೆ ಪದ್ಮಶ್ರೀ ಸಹಿತ ರಾಷ್ಟ್ರ, ರಾಜ್ಯ ಪ್ರಶಸ್ತಿ ವಿಜೇತನಿಗೆ ಪ್ರಶಸ್ತಿ, ಪಾರಿತೋಷಕ ಇರಿಸಲೂ ಸ್ಥಳಾವಕಾಶಗಳಿಲ್ಲ. ಅಲ್ಲದೆ ದೇಶದ ವಿವಿಧ ಕಡೆಯ ಕೃಷಿ ವಿಜ್ಞಾನಿ ಸಂಶೋಧಕರು, ವಿದ್ಯಾರ್ಥಿಗಳು ಅಧ್ಯಯನಕ್ಕೆ ಬರುವ ಭವನವಾಗಿ ಇದು ಬದಲಾಗಿದೆ. ಆದರೆ ಯಾವುದೇ ಪ್ರಾಥಮಿಕ ಸೌಲಭ್ಯಗಳಿಲ್ಲ. ಈ ಹಿನ್ನೆಲೆಯಲ್ಲಿ ಭತ್ತದ ಮ್ಯೂಸಿಯಂ ಜೊತೆಗೆ ತಳಿಗಳ ಕುರಿತಾದ ರಾಷ್ಟ್ರೀಯ ಅಧ್ಯಯನ– ಸಂರಕ್ಷಣಾ ಕೇಂದ್ರ ಸ್ಥಾಪಿಸಿ, ಮುಂದಿನ ಪೀಳಿಗೆಯ ದೃಷ್ಟಿಯಿಂದ ಕಾಳಜಿಯ ಕರ್ತವ್ಯ ನಿರತರಾಗುವುದು ಉದ್ದೇಶವಾಗಿದೆ. ಈ ದೃಷ್ಟಿಯಲ್ಲಿ ಮೊದಲಿಗೆ ಟ್ರಸ್ಟ್ ರೂಪಿಸಿ ಮುನ್ನಡೆಯಲು ಗಣ್ಯರ ಮಾರ್ಗದರ್ಶನದಂತೆ ನಿರ್ಧರಿಸಲಾಯಿತು.

ಟ್ರಸ್ಟ್‌ಗೆ 'ಅತಿಕಾರ' ನಾಮಕರಣ

ಯೋಜನೆಗಾಗಿ ರಾಮಾಯಣ ಕಾಲದ ಭತ್ತದ ತಳಿಯಾದ 'ಅತಿಕಾರ' ಹೆಸರಿನಲ್ಲಿ ಟ್ರಸ್ಟ್ ರೂಪಿಸಲು ಉದ್ದೇಶಿಸಲಾಗಿದೆ. ಬೆಳ್ಳೂರು ಶ್ರೀ ಮಹಾವಿಷ್ಣು ದೇವಾಲಯದಲ್ಲಿ ಬುಧವಾರ ಸಂಜೆ ನಡೆದ ಸಮಾಲೋಚನಾ ಸಭೆಯಲ್ಲಿ ಉದ್ಯಮಿ ಮಧುಸೂಧನ ಆಯರ್ ಅಧ್ಯಕ್ಷತೆ ವಹಿಸಿದ್ದರು. ಪ್ರಗತಿಪರ ಕೃಷಿಕ, ಸಾಮಾಜಿಕ ಮುಂದಾಳು ಕಲ್ಲಗ ಚಂದ್ರಶೇಖರ ರಾವ್ ಮಾರ್ಗದರ್ಶನವಿತ್ತರು. ಪತ್ರಕರ್ತ ಎಂ.ನಾ.ಚಂಬಲ್ತಿಮಾರ್ ಯೋಜನೆಗಳ ಪರಿಕಲ್ಪನೆ, ಟ್ರಸ್ಟ್ ರಚನೆಯ ಕಾರ್ಯವೈಖರಿ ಕುರಿತು ಮಾತನಾಡಿದರು. ಪದ್ಮಶ್ರೀ ಸತ್ಯನಾರಾಯಣ ಬೆಳೇರಿ, ನಿವೃತ್ತ ಅಧ್ಯಾಪಕ ಕುಂಞಿರಾಮ ಮಣಿಯಾಣಿ, ಕವಿ, ಲೇಖಕ ದಯಾನಂದ ರೈ ಕಳ್ವಾಜೆ ಉಪಸ್ಥಿತರಿದ್ದು ಅಭಿಪ್ರಾಯ ಮಂಡಿಸಿದರು.



> **ದೇಣಿಗೆ ಬೀಜಾಂಕುರ**
>
> **ಯೋಜನೆ ಸಾಕಾರಕ್ಕಾಗಿ ಬೆಳೇರಿ ಪರಿಸರದಲ್ಲೇ ವಿಶಾಲ ಸ್ಥಳ ಅವಶ್ಯವಾಗಿದ್ದು, ಅದರ ಪರಿಶೀಲನೆ ನಡೆದಿದೆ. ಶೀಘ್ರವೇ ಅದರ ಖರೀದಿಯಾಗಿ ಅಲ್ಲಿ ಟ್ರಸ್ಟ್ ಉದ್ಘಾಟನೆ ಸಹಿತ ತಳಿಗಳ ಅಧ್ಯಯನ – ಸಂರಕ್ಷಣಾ ಕೇಂದ್ರಕ್ಕೆ ಶಿಲಾನ್ಯಾಸವಾಗಲಿದೆ. ಬೆಳೇರಿಯವರ ಭತ್ತದ ತಳಿ ಇರಿಸುವ ಸ್ಥಳ ಕಂಡು ಮರುಗಿ ಅದಕ್ಕೊಂದು ಯೋಗ್ಯ ವ್ಯವಸ್ಥೆಗಳಾಗಬೇಕೆಂದು ಬಯಸಿ ಉದ್ಯಮಿ, ಧಾರ್ಮಿಕ ಮುಂದಾಳು ಮಧುಸೂಧನ ಆಯರ್ ಅವರು ಪ್ರಥಮವಾಗಿ 4 ಲಕ್ಷ ರೂ.ಗಳ ದೇಣಿಗೆ ನೀಡುವಲ್ಲಿಂದ ಈ ಯೋಜನೆಗೆ ಬೀಜಾಂಕುರವಾಯಿತು.**

ಸ್ವಯಂ ಗಣತಿ: ಕರಾವಳಿಯಲ್ಲಿ ಸಿಕ್ಕಿದೆ ಅಭೂತಪೂರ್ವ ಸ್ಪಂದನೆ

ಉಡುಪಿ: ಕೇಂದ್ರ ಸರ್ಕಾರವು ದೇಶದಲ್ಲಿಯೇ ಮೊದಲ ಬಾರಿಗೆ ಪರಿಚಯಿಸಿರುವ 'ಡಿಜಿಟಲ್ ಜನಗಣತಿ' ಅಥವಾ 'ಸ್ವಯಂ ಗಣತಿ' ಪ್ರಕ್ರಿಯೆಗೆ ಕರಾವಳಿ ಜಿಲ್ಲೆಗಳಲ್ಲಿ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗುತ್ತಿದೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಾರ್ವಜನಿಕರು ತಾವಾಗಿಯೇ ಮುಂದೆ ಬಂದು ತಮ್ಮ ಮಾಹಿತಿಯನ್ನು ದಾಖಲಿಸುತ್ತಿರುವುದು ಈ ಬಾರಿಯ ಜನಗಣತಿಯ ವಿಶೇಷತೆಯಾಗಿದೆ.

ಕರಾವಳಿಯ ಬಹುತೇಕ ಗ್ರಾಮ ಪಂಚಾಯತ್‌ಗಳು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿವೆ. ಸ್ಮಾರ್ಟ್‌ಫೋನ್ ಬಳಸಲು ಬಾರದ ಹಿರಿಯ ನಾಗರಿಕರು ಮತ್ತು ಗ್ರಾಮೀಣ ಭಾಗದ ಜನರಿಗೆ ನೆರವಾಗಲು ಗ್ರಾಮ ಪಂಚಾಯತ್ ಕಚೇರಿಗಳಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ.

ಏನಿದು ಸ್ವಯಂ ಗಣತಿ?

ಈ ವ್ಯವಸ್ಥೆಯು ನಾಗರಿಕರಿಗೆ ತಮ್ಮ ಮಾಹಿತಿಯನ್ನು ತಾವೇ ಅಧಿಕೃತವಾಗಿ ಸಲ್ಲಿಸುವ ಹಕ್ಕನ್ನು ನೀಡುತ್ತದೆ. ಈ ಹಿಂದೆ ಗಣತಿದಾರರು ಮನೆಗೆ ಬಂದಾಗ ಸಮಯದ ಅಭಾವದಿಂದಲೋ ಅಥವಾ ಸಂವಹನದ ಕೊರತೆಯಿಂದಲೋ ತಪ್ಪು ಮಾಹಿತಿಗಳು ದಾಖಲಾಗುವ ಸಾಧ್ಯತೆ ಇರುತ್ತಿತ್ತು. ಅಂತಹ ತಾಂತ್ರಿಕ ಎಡವಟ್ಟುಗಳನ್ನು ಹೋಗಲಾಡಿಸಿ, ದತ್ತಾಂಶ ಸಂಗ್ರಹಣೆಯಲ್ಲಿ ನೂರಕ್ಕೆ ನೂರರಷ್ಟು ನಿಖರತೆಯನ್ನು ಸಾಧಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಸರಳ ಪ್ರಕ್ರಿಯೆ ಹೀಗಿದೆ

ಈ ಡಿಜಿಟಲ್ ಗಣತಿಯ ಪ್ರಕ್ರಿಯೆಯು ಅತ್ಯಂತ ಸರಳವಾಗಿದ್ದು, ಸಾಮಾನ್ಯ ನಾಗರಿಕರೂ ತಮ್ಮ ಮೊಬೈಲ್ ಅಥವಾ ಕಂಪ್ಯೂಟರ್ ಮೂಲಕ ಇದನ್ನು ಸುಲಭವಾಗಿ ಪೂರೈಸಬಹುದಾಗಿದೆ. ಮೊದಲಿಗೆ ಕೇಂದ್ರ ಸರ್ಕಾರದ ಅಧಿಕೃತ ಜನಗಣತಿ ಪೋರ್ಟಲ್‌ಗೆ ಭೇಟಿ ನೀಡಿ, ಮೊಬೈಲ್ ಸಂಖ್ಯೆಯ ಮೂಲಕ ನೋಂದಾಯಿಸಿಕೊಳ್ಳಬೇಕು. ಆನಂತರ ಪೋರ್ಟಲ್‌ನಲ್ಲಿ ಕೇಳಲಾಗುವ ಕುಟುಂಬದ ಸದಸ್ಯರ ವಯಸ್ಸು, ಶಿಕ್ಷಣ, ವೃತ್ತಿ ಮತ್ತು ಮನೆಯಲ್ಲಿ ಲಭ್ಯವಿರುವ ಮೂಲಸೌಕರ್ಯಗಳ ಕುರಿತಾದ ಸರಳ ಪ್ರಶ್ನೆಗಳಿಗೆ ನಿಖರವಾದ ಉತ್ತರಗಳನ್ನು ಭರ್ತಿ ಮಾಡಬೇಕು.

ಈ ಹಂತದಲ್ಲಿ ಮಾಹಿತಿಯನ್ನು ಮರುಪರಿಶೀಲಿಸಿ ದೃಢೀಕರಿಸಿದ ತಕ್ಷಣ, ಸಿಸ್ಟಮ್ ಒಂದು ವಿಶಿಷ್ಟವಾದ 'ರೆಫರೆನ್ಸ್ ಸಂಖ್ಯೆ'ಯನ್ನು ನೀಡುತ್ತದೆ. ಮುಂದಿನ ದಿನಗಳಲ್ಲಿ ಗಣತಿದಾರರು ಭೌತಿಕವಾಗಿ ನಿಮ್ಮ ಮನೆಗೆ ಭೇಟಿ ನೀಡಿದಾಗ, ಅವರಿಗೆ ಕೇವಲ ಈ ಸಂಖ್ಯೆಯನ್ನು ತೋರಿಸಿದರೆ ಗಣತಿ ಮುಕ್ತಾಯಗೊಳ್ಳುತ್ತದೆ.

ಗೋರಿಗುಡ್ಡ ಸೂಟರ್‌ಪೇಟೆ ಪ್ರದೇಶಗಳಲ್ಲಿ ಸ್ವಲ್ಪಮಟ್ಟಿಗೆ ನೀರಿನ ಸಮಸ್ಯೆ

ಉತ್ತಮ ಪ್ರೆಶರ್‌ನೊಂದಿಗೆ ಭರಪೂರ ನೀರು

ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್

▸ **ಹರೀಶ ಕುಲ್ಕುಂದ**

ದಿಗಂತ ವಾಟರ್ ಚೆಕ್

ಮಂಗಳೂರು: ನಗರದ ಮಧ್ಯೆ ಜನವಸತಿ ಪ್ರದೇಶಗಳಿಗೆ ಸರಿಸಮಾನಾಗಿ ವಾಣಿಜ್ಯ ಕಟ್ಟಡ, ಫ್ಲ್ಯಾಟ್‌ಗಳನ್ನು ಹೊಂದಿರುವ ಫಳ್ನೀರ್‌ನ ಒಂದೆರಡು ಕಡೆ ನೀರಿನ ಸಮಸ್ಯೆ ಹೊರತು ಪಡಿಸಿದರೆ ಇಡೀ ವಾರ್ಡ್‌ನಲ್ಲಿ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿದೆ.

ಅತ್ತಾವರ ನ್ಯೂರೋಡ್, ಬಿಷಪ್ ಕಂಪೌಂಡ್, ಅತ್ತಾವರ, ಜೋಸೆಫ್ ನಗರ, ಮರಿಯಾ ನಗರ, ಜೆಪ್ಪು ಸೆಮಿನರಿ ಪ್ರದೇಶ, ಪೆರಾರ್ ಕಾಲನಿ, ವೆಲೆನ್ಸಿಯಾ, ಗೋರಿಗುಡ್ಡ, ನೆಹರೂ ರಸ್ತೆ, ಸೂಟರ್‌ಪೇಟೆ ಎರಡನೇ ಕ್ರಾಸ್ ಪ್ರದೇಶದಲ್ಲಿ ವ್ಯಾಪಿಸಿರುವ ಫಳ್ನೀರ್ ವಾರ್ಡ್ ಬಹುತೇಕ ಸಮತಟ್ಟಾದ ಪ್ರದೇಶಗಳನ್ನು ಹೊಂದಿರುವ ಕಾರಣ ಇಲ್ಲಿಗೆ ಸರಾಗವಾಗಿ ನೀರು ಸರಬರಾಜು ಆಗುತ್ತಿದೆ.

ಈ ವಾರ್ಡ್‌ಗೆ ಪಡೀಲು ಟ್ಯಾಂಕ್ ಹಾಗೂ ಬೆಂದೂರು ಟ್ಯಾಂಕ್‌ನಿಂದ ನೀರು ಬರುತ್ತಿದೆ. ವಾರ್ಡ್‌ನ ಬಹುತೇಕ ಕಡೆ ಬೆಳಗ್ಗೆ 5ರಿಂದ 11 ಗಂಟೆವರೆಗೆ ನೀರು ಪೂರೈಕೆ ಮಾಡಲಾಗುತ್ತಿದೆ. ಉತ್ತಮ ಪ್ರೆಶರ್ ಇರುವ ಕಾರಣ ನೀರಿನ ತೊಟ್ಟಿಗಳು ಬಹುಬೇಗ ತುಂಬುತ್ತವೆ. ತುಂಬೆಯಿಂದ ನೀರು ಪೂರೈಕೆ ಸ್ಥಗಿತಗೊಂಡಾಗ, ಪೈಪ್‌ಲೈನ್ ಒಡೆದರೆ, ವಿದ್ಯುತ್ ನಿಲುಗಡೆ ಆದಾಗ ಹಾಗೂ ಇತರ ತಾಂತ್ರಿಕ ತೊಂದರೆ ಇದ್ದಾಗ ಮಾತ್ರ ಈ ವಾರ್ಡ್‌ಗೆ ನೀರು ಪೂರೈಕೆ ನಿಲ್ಲುತ್ತದೆ.

ಗೋರಿಗುಡ್ಡ ಹಾಗೂ ಸೂಟರ್‌ಪೇಟೆ ಪ್ರದೇಶಗಳಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ನೀರಿನ ಸಮಸ್ಯೆ ಇದೆ. ಇಲ್ಲಿಗೆ ಬೆಂದೂರು ಟ್ಯಾಂಕ್‌ನಿಂದ ಕೆಲವೊಮ್ಮೆ ಎರಡು ದಿನಕ್ಕೊಮ್ಮೆ ನೀರು ಒದಗಿಸಲಾಗುತ್ತದೆ ಎನ್ನುತ್ತಾರೆ ಸ್ಥಳೀಯರು.

ಈ ವಾರ್ಡ್‌ನಲ್ಲಿ ಪ್ರಸ್ತುತ ಬೇಸಿಗೆಯಲ್ಲಿ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಟ್ಯಾಂಕರ್ ನೀರು ಒದಗಿಸುವ ಅನಿವಾರ್ಯತೆ ಇದುವರೆಗೆ ಕಂಡುಬಂದಿಲ್ಲ. ಗೋರಿಗುಡ್ಡದಲ್ಲಿ ಬೋರ್‌ವೆಲ್ ಇದ್ದು, ಇದರ ನೀರು ಬಳಕೆ ಮಾಡುತ್ತಿಲ್ಲ. ಈ ವಾರ್ಡ್‌ನಲ್ಲಿ ಸರಕಾರಿ ಬಾವಿ ಇಲ್ಲ.

ಫಳ್ನೀರ್ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಪೈಪ್‌ಲೈನ್ ಬಹುತೇಕ ಪೂರ್ಣಗೊಂಡಿದೆ. ಆದರೆ, ಕೆಲವು ಕಡೆಗಳಲ್ಲಿ ರಸ್ತೆ ಅಗೆದು ಸಮರ್ಪಕವಾಗಿ ಗುಂಡಿ ಮುಚ್ಚಲಿಲ್ಲ. ಗೋರಿಗುಡ್ಡದಲ್ಲೂ ಇದೇ ರೀತಿ ಅಗೆದ ಗುಂಡಿ ಮುಚ್ಚದೆ ಬಿಡಲಾಗಿತ್ತು. ಈ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ ಬಳಿಕ ಇದೀಗ ಗುಂಡಿ ಮುಚ್ಚಲಾಗಿದೆ. ಸೂಟರ್‌ಪೇಟೆಯಲ್ಲಿ ಹೊಸ ಬೃಹತ್ ಟ್ಯಾಂಕ್ ನಿರ್ಮಾಣಗೊಂಡಿದೆ.




ಜಲಸಿರಿ ಯೋಜನೆಯಡಿ ಸೂಟರ್‌ಪೇಟೆಯಲ್ಲಿ ಬೃಹತ್ ನೀರಿನ ಟ್ಯಾಂಕ್ ನಿರ್ಮಾಣಗೊಂಡಿದೆ

ಮಳೆಗಾಲದಲ್ಲಿ ಕೃತಕ ನೆರೆ

ಜೋಸೆಫ್‌ನಗರದಲ್ಲಿ ತೋಡು ಸಮಸ್ಯೆ ಇದೆ. ಮಳೆಗಾಲದಲ್ಲಿ ನಂದಿಗುಡ್ಡ ಸ್ಮಶಾನದೊಳಗೆ ನೀರು ನುಗ್ಗಿ ಜೋಸೆಫ್‌ನಗರ ತೋಡಿಗೆ ಹರಿದು ಇಲ್ಲಿನ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗುತ್ತಿದೆ. ಕೃತಕ ನೆರೆಯಿಂದ ಸ್ಥಳೀಯರು ತೊಂದರೆ ಅನುಭವಿಸುತ್ತಿದ್ದಾರೆ. ಮಳೆ ನೀರು ಸರಾಗವಾಗಿ ಹರಿಯುವಂತೆ ತೋಡು ನಿರ್ಮಿಸಲು ಸ್ಥಳೀಯ ಖಾಸಗಿ ಜಾಗ ಬಿಟ್ಟುಕೊಡಲು ಜಾಗದ ಮಾಲಕರು ಒಪ್ಪುತ್ತಿಲ್ಲ. ಇದರಿಂದ ಸಮಸ್ಯೆ ಉಂಟಾಗಿದೆ ಎನ್ನುತ್ತಾರೆ ಸ್ಥಳೀಯರು.

100 ಮನೆಗೆ ಡ್ರೈನೇಜ್ ಇಲ್ಲ

ಗೋರಿಗುಡ್ಡ ಪ್ರದೇಶದಲ್ಲಿ ಒಂದು ಭಾಗಕ್ಕೆ ಡ್ರೈನೇಜ್ ಸಂಪರ್ಕ ಆಗಿಲ್ಲ. ಇಲ್ಲಿ 100 ಮನೆಗಳಿವೆ. ಆದರೂ, ಇದುವರೆಗೆ ಒಳಚರಂಡಿ ಜಾಲ ಇಲ್ಲಿಗೆ ಆಗಿಲ್ಲ. ಇಲ್ಲಿನ ತೋಡಿನಲ್ಲಿ ಡ್ರೈನೇಜ್ ನೀರು ಹರಿಯುತ್ತಿದೆ. ಹೊಸ ಡ್ರೈನೇಜ್ ಪೈಪ್‌ಲೈನ್ ನಿರ್ಮಿಸಲು ಸರ್ವೆ ಆಗಿದೆ. ಆದರೆ, ಸ್ಥಳೀಯರು ಜಾಗ ಬಿಟ್ಟುಕೊಡದ ಕಾರಣ ಪೈಪ್‌ಲೈನ್ ನಿರ್ಮಾಣ ಕಾರ್ಯ ವಿಳಂಬವಾಗಿದೆ. ಇಲ್ಲಿ ಮಂಗಳೂರು ಮಹಾನಗರ ಪಾಲಿಕೆ ಸ್ಥಳೀಯರನ್ನು ವಿಶ್ವಾಸಕ್ಕೆ ಪಡೆದು, ಭೂಸ್ವಾಧೀನ ನಡೆಸಿ ಡ್ರೈನೇಜ್ ಪೈಪ್‌ಲೈನ್ ಅಳವಡಿಸಬೇಕಿದೆ.

> **ಫಳ್ನೀರ್ ವಾರ್ಡ್‌ಗೆ ಮನಪಾ ಪೈಪ್‌ಲೈನ್ ಮೂಲಕ ಪ್ರತಿದಿನ ಉತ್ತಮ ಪ್ರೆಶರ್‌ನೊಂದಿಗೆ ಅಗತ್ಯ ಇರುವಷ್ಟು ಪ್ರಮಾಣದಲ್ಲಿ ನೀರಿನ ಪೂರೈಕೆ ಆಗುತ್ತಿದೆ. ಈ ಬೇಸಿಗೆಯಲ್ಲಿ ಇದುವರೆಗೆ ನೀರಿನ ಸಮಸ್ಯೆ ಕಂಡುಬಂದಿಲ್ಲ. ಜೋಸೆಫ್ ನಗರದಲ್ಲಿ ಖಾಸಗಿ ಜಾಗದ ಸಮಸ್ಯೆಯಿಂದ ಮಳೆಗಾಲದಲ್ಲಿ ಕೃತಕ ನೆರೆ ಉಂಟಾಗುತ್ತಿದೆ. ವಾರ್ಡ್ ನ ಬಹುತೇಕ ಕಡೆ ರಸ್ತೆಗಳು ಕಾಂಕ್ರೀಟೀಕರಣಗೊಂಡಿವೆ. ಗೋರಿಗುಡ್ಡ ರಸ್ತೆ ಅಭಿವೃದ್ಧಿ ಬಾಕಿ ಇದ್ದು, ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆಯಡಿ 3 ಕೋಟಿ ರೂ. ವೆಚ್ಚದಲ್ಲಿ ಈ ರಸ್ತೆ ಶೀಘ್ರ ಅಭಿವೃದ್ಧಿಯಾಗಲಿದೆ. ಜೆರೋಸಾದಿಂದ ರೋಯಲ್ ಪಾರ್ಕ್ ವರೆಗಿನ ರಸ್ತೆ 2 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟೀಕರಣ ಆಗಲಿದೆ.**
>
> 
>
> ■ **ಜೆಸಿಂತಾ ವಿಜಯ ಅಲ್ಫ್ರೆಡ್**
> **ಫಳ್ನೀರ್ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್**

ಮುಂದಿನ ವಾರ್ಡ್ -40
ಕೋರ್ಟ್ ಪರಿಸರದ ಸ್ಥಿತಿಗತಿ


ಸ್ಥಗಿತಗೊಂಡಿದ್ದ ಮಂಗಳೂರು ಸೆಂಟ್ರಲ್–ಸುಬ್ರಹ್ಮಣ್ಯ ರೈಲು ಸೇವೆಗಳು ಪುನರಾರಂಭ

ಹಳಿಗೇರಿದ ಮಂಗಳೂರು–ಸುಬ್ರಹ್ಮಣ್ಯ ರೈಲು

ಸುಬ್ರಹ್ಮಣ್ಯ: ನೆಟ್ಟಣ ಸುಬ್ರಹ್ಮಣ್ಯ ರೋಡ್, ಎಡಮಂಗಲ ಹಾಗೂ ನರಿಮೊಗರು ವಿಭಾಗಗಳ ನಡುವೆ ಹಳಿ ಮತ್ತು ವಿದ್ಯುತ್ ನಿರ್ವಹಣಾ ಕಾಮಗಾರಿಗಳಿಗಾಗಿ ಮೊದಲು ರದ್ದು ಮಾಡಿದ ಹಾಗೂ ಮರುನಿಗದಿಗೊಳಿಸಲಾಗಿದ್ದ ರೈಲು ಸೇವೆಗಳು ಮರು ಆರಂಭಗೊಂಡಿದೆ.

ರೈಲು ಸಂಖ್ಯೆ 56629 ಮಂಗಳೂರು ಸೆಂಟ್ರಲ್ –ಸುಬ್ರಹ್ಮಣ್ಯ ರೋಡ್ ಪ್ಯಾಸೆಂಜರ್ ಹಾಗೂ ರೈಲು ಸಂಖ್ಯೆ 56630 ಸುಬ್ರಹ್ಮಣ್ಯ ರೋಡ್–ಮಂಗಳೂರು ಸೆಂಟ್ರಲ್ ಪ್ಯಾಸೆಂಜರ್ ರೈಲುಗಳನ್ನು ಜೂನ್10ರಿಂದ ಜೂ.21ರ ತನಕ ರದ್ದುಪಡಿಸಲಾಗಿತ್ತು. ಇದೀಗ ಈ ರೈಲುಗಳನ್ನು ಮತ್ತೆ ಆರಂಭಿಸಲಾಗಿದೆ. ನಿಗದಿತ ಸಮಯದಲ್ಲಿ ರೈಲು ಸಂಚರಿಸಲಿದೆ.

ರೈಲು ಸಂಖ್ಯೆ 56229 ಮಂಗಳೂರು ಸೆಂಟ್ರಲ್–ಸುಬ್ರಹ್ಮಣ್ಯ ರೋಡ್ ಪ್ಯಾಸೆಂಜರ್ ರೈಲು ಏ.21ರಿಂದ ಜೂ.9ರ ತನಕ 55 ನಿಮಿಷಗಳ ನಿಯಂತ್ರಣ ಇರಲಿದೆ ಎಂದು ಮೊದಲು ತಿಳಿಸಲಾಗಿತ್ತು. ಇದೀಗ ಇದರಲ್ಲಿ ಪರಿಷ್ಕರಣೆ ಮಾಡಲಾಗಿದೆ. ಏ.16ರಿಂದ ಜೂ.4ರ ತನಕ ಈ ರೈಲು ಮಾರ್ಗಮಧ್ಯೆ 35 ನಿಮಿಷಗಳ ಕಾಲ ಮಾತ್ರ ನಿಯಂತ್ರಣಕ್ಕೆ ಒಳಪಡಲಿದೆ. ಜೂ.5ರಿಂದ ಜೂ.9ರ ತನಕ ಉಳಿದ ದಿನಗಳಲ್ಲಿ ರೈಲು ತನ್ನ ಸಾಮಾನ್ಯ ವೇಳಾಪಟ್ಟಿಯಂತೆ ಸಂಚರಿಸಲಿದೆ. ಇದಲ್ಲದೆ, ರೈಲು ಸಂಖ್ಯೆ 56630 ಸುಬ್ರಹ್ಮಣ್ಯ ರೋಡ್–ಮಂಗಳೂರು ಸೆಂಟ್ರಲ್ ಪ್ಯಾಸೆಂಜರ್ ರೈಲು 15 ನಿಮಿಷ ಮರುನಿಗದಿ ಮಾಡುವ ದಿನಾಂಕಗಳಲ್ಲಿಯೂ ಪರಿಷ್ಕರಣೆ ಮಾಡಲಾಗಿದೆ. ಪರಿಷ್ಕೃತ ವೇಳಾಪಟ್ಟಿಯಂತೆ, ಏ.16, 18, 21, 23, 25, 28, 30, ಮೇ 2, 5, 7, 9, 12, 14, 16, 19, 21, 23, 26, 28, 30 ಹಾಗೂ ಜೂ.2, 4ರಂದು 15 ನಿಮಿಷ ಮರುನಿಗದಿಗೊಳಿಸಿ ಸಂಚರಿಸಲಿದೆ. ಜೂ.6 ಮತ್ತು 9ರಂದು ರೈಲು ತನ್ನ ಸಾಮಾನ್ಯ ವೇಳಾಪಟ್ಟಿಯಂತೆ ಸಂಚರಿಸಲಿದೆ ಎಂದು ಸಾರ್ವಜನಿಕ ಸಂಪರ್ಕ ಅಧಿಕಾರಿ ಗಿರೀಶ ಧರ್ಮರಾಜ ಕಲಗೊಂಡ ತಿಳಿಸಿದ್ದಾರೆ.



ಮಂಗಳೂರು
ರಾಷ್ಟ್ರ ಜಾಗೃತಿಯ ದೈನಿಕ
ಶುಕ್ರವಾರ, 17 ಏಪ್ರಿಲ್ 2026
ಸಂಪುಟ 48, ಸಂಚಿಕೆ 29 ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಉಕ್ರೇನ್ ಮೇಲೆ ರಷ್ಯಾ ದಾಳಿ: 16 ಸಾವು | ೦೭
ಶಾಂತಿ ಮಾತುಕತೆ ಇನ್ನೂ ಅನಿಶ್ಚಿತ | ೦೭
ರಾಜ್ಯಸಭಾ ಸದಸ್ಯರಾಗಿ ನಿತಿನ್ ಪ್ರಮಾಣ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಅಮಾವಾಸ್ಯೆ, ನಕ್ಷತ್ರ: ರೇವತಿ

ದಿನದ ಮಾತು

ಬರೇ ಬಯಕೆಗಳಿಂದ ಕಾರ್ಯಗಳು ಸಿದ್ಧಿಸುವುದಿಲ್ಲ. ಅವು ಪ್ರಯತ್ನದಿಂದ ಮಾತ್ರ ಸಿದ್ಧಿಸುತ್ತವೆ.
▲ ಲಾಮೋತ್ಸೆ

ಅಮೆರಿಕದ ದ್ವಂದ್ವ ನಿಲುವೇ ಬಿಕ್ಕಟ್ಟುಗಳಿಗೆ ಕಾರಣ

ಲೇಖನ
• ಸುಬ್ರಹ್ಮಣ್ಯ ಎನ್.
• ಪುಟ ೬

ಕಿರುಸುದ್ದಿ

ಭೀಕರ ಅಪಘಾತ: ಎಂಟು ಮಂದಿ ಸಾವು

• **ರಾಯಚೂರು:** ಬುಲೆರೋ ಹಾಗೂ ಫ್ಲೈಯಾಶ್ ಟ್ಯಾಂಕರ್ ಮುಖಾಮುಖಿ ಡಿಕ್ಕಿಯಾಗಿ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ತೆರಳುತ್ತಿದ್ದ ಹಾಸನ, ಚಿಕ್ಕಮಗಳೂರು ಮೂಲದ ಎಂಟು ಜನರು ಸ್ಥಳದಲ್ಲೇ ಮೃತಪಟ್ಟು, ಇತರೆ ಎಂಟು ಜನ ಗಂಭೀರ ಗಾಯಗೊಂಡ ಘಟನೆ ಬುಧವಾರ ನಸುಕಿನ ಜಾವ ಸಂಭವಿಸಿದೆ. ಈ ಘಟನೆ ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಮಂತ್ರಾಲಯ ಬಳಿಯ ಚಿಲಕನಡೋಣ ಬಳಿ ಸಂಭವಿಸಿದೆ. ಘಟನೆ ಸಂಬಂಧ ತೀವ್ರ ಸಂತಾಪ ಸೂಚಿಸಿರುವ ಪ್ರಧಾನಿ ಮೋದಿಯವರು, ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ರೂ. ಪರಿಹಾರ ಘೋಷಿಸಿದ್ದಾರೆ.

• ಪುಟ ೫

ಮಧ್ಯಪ್ರಾಚ್ಯಕ್ಕೆ ಅಮೆರಿಕದ ಹೆಚ್ಚುವರಿ ಸೈನ್ಯ ರವಾನೆ
• ಪುಟ ೭

ಹಿಜ್ಬೊಲ್ಲಾ ಡ್ರೋನ್ ತಡೆದ ಇಸ್ರೇಲ್ ಮಿಸೈಲ್ ದೋಣಿ
• ಪುಟ ೭

ಉದ್ವಿಗ್ನತೆಯಿಂದ ಎಲ್ಲಾ ರಾಷ್ಟ್ರಗಳ ಮೇಲೆ ಪರಿಣಾಮ
• ಪುಟ ೭

ಮುಸಲ್ಮಾನ ಸ್ತ್ರೀಯರಿಗೆ ಸಮಾನ ಹಕ್ಕಿಗೆ ಮನವಿ
• ಪುಟ ೭

ಮಹಿಳಾ ಕಲ್ಯಾಣಕ್ಕೆ ವಿಜಯ್ ಆದ್ಯತೆ
• ಪುಟ ೭

ಧರ್ಮಾಧಾರಿತ ಮೀಸಲಾತಿ ಅಸಾಂವಿಧಾನಿಕ: ಶಾ
• ಪುಟ ೭

ತೃತೀಯ ಭಾಷೆಗೆ ಗ್ರೇಡ್: ಹೈಕೋರ್ಟ್ ತಡೆ
• ಪುಟ ೫

ಪೂರೈಕೆ ಕುಸಿತ: ಕಾಫಿ ಬೆಲೆ ಮತ್ತೆ ಏರಿಕೆ
• ಪುಟ ೫

ಕ್ಷೇತ್ರ ಮರುವಿಂಗಡಣೆಯಲ್ಲಿ ಯಾವುದೇ ರಾಜ್ಯಕ್ಕೆ ಅನ್ಯಾಯವಾಗಲ್ಲ
ಮೀಸಲಾತಿ ವಿರೋಧಿಗಳನ್ನು ಮಹಿಳೆಯರು ಕ್ಷಮಿಸಲ್ಲ: ಮೋದಿ

ರಾಜ್ಯಗಳಿಗಿಲ್ಲ ತಾರತಮ್ಯ

• **ಹೊಸದಿಲ್ಲಿ:** ಯಾವುದೇ ರಾಜ್ಯ– ದೊಡ್ಡದಾಗಲಿ ಸಣ್ಣದಾಗಲಿ, ಉತ್ತರವಾಗಲಿ ದಕ್ಷಿಣವಾಗಲಿ, ಪೂರ್ವವಾಗಲಿ ಪಶ್ಚಿಮವಾಗಲಿ– ಮಹಿಳಾ ಮೀಸಲು ಕಾಯ್ದೆಯ ಜಾರಿಗೆ ಸಂಬಂಧಿಸಿದ ಕ್ಷೇತ್ರಗಳ ಮರು ವಿಂಗಡಣೆ (ಡಿಲಿಮಿಟೇಶನ್) ಪ್ರಕ್ರಿಯೆಯಲ್ಲಿ ಭೇದಭಾವಕ್ಕೆ ಒಳಪಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಸ್ಪಷ್ಟಪಡಿಸಿದ್ದಾರೆ.

2029ರಲ್ಲಿ ಮಹಿಳಾ ಮೀಸಲಾತಿ ಜಾರಿಗೆ ತರುವುದನ್ನು ಅವರು ದೃಢವಾಗಿ ಬೆಂಬಲಿಸಿ, ಈ ಕ್ರಮಕ್ಕೆ ವಿರೋಧಿಸುವವರನ್ನು ದೇಶದ ಮಹಿಳೆಯರು ಕ್ಷಮಿಸುವುದಿಲ್ಲ ಎಂದು ಎಚ್ಚರಿಸಿದರು.



ಲೋಕಸಭೆಯಲ್ಲಿ ಮಹಿಳಾ ಮೀಸಲು ಕಾಯ್ದೆಗೆ ತಿದ್ದುಪಡಿ ಮಾಡಲು ಮತ್ತು ಡಿಲಿಮಿಟೇಶನ್ ಆಯೋಗವನ್ನು ಸ್ಥಾಪಿಸಲು ತರಲಾದ ಮೂರು ಮಸೂದೆಗಳ ಕುರಿತು ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಮೋದಿಯವರು, ಯಾವುದೇ ರಾಜಕೀಯ ಪಕ್ಷ ಈ ಕಾಯ್ದೆಗೆ ವಿರೋಧಿಸಿದರೆ, ಅದರಿಂದ ತಮಗೆ ರಾಜಕೀಯ ಲಾಭವಾಗುವುದು ಸಹಜ ಎಂದು ಹೇಳಿದರು. ಈ ಕ್ರಮದಲ್ಲಿ ಮೋದಿಗೆ ರಾಜಕೀಯ ಸ್ವಾರ್ಥ ಇದೆ ಎಂದು ಕೆಲವರು ಭಾವಿಸುತ್ತಾರೆ. ನೀವು ಇದಕ್ಕೆ ವಿರೋಧಿಸಿದರೆ, ನನಗೆ ರಾಜಕೀಯ ಲಾಭವಾಗುವುದು ಸಹಜ. ಆದರೆ ನೀವು ಜೊತೆಯಾಗಿದ್ದರೆ, ಯಾರಿಗೂ ರಾಜಕೀಯ ಲಾಭವಾಗುವುದಿಲ್ಲ. ನಮಗೆ ಕ್ರೆಡಿಟ್ ಬೇಡ ಎಂದು ಅವರು ಹೇಳಿದರು.

ಕೆಲವು ರಾಜ್ಯಗಳು, ವಿಶೇಷವಾಗಿ ದಕ್ಷಿಣ ಮತ್ತು ಪೂರ್ವ ಭಾಗದ ರಾಜ್ಯಗಳು, ಡಿಲಿಮಿಟೇಶನ್ ಪ್ರಕ್ರಿಯೆಯ ಬಗ್ಗೆ ಹೊಂದಿರುವ ಆತಂಕಗಳನ್ನು ನಿವಾರಿಸಲು ಯಾವುದೇ ರಾಜ್ಯಕ್ಕೂ ಅನ್ಯಾಯವಾಗುವುದಿಲ್ಲ ಮತ್ತು ಯಾರಿಗೂ ಭೇದಭಾವ ಇರಲ್ಲ ಎಂದರು. ➡ಪುಟ ೪

ಮಹಿಳಾ ಮೀಸಲು: ಸಮಾನ ಪ್ರತಿನಿಧಿತ್ವದ ದಿಕ್ಕಿನಲ್ಲಿ ದಿಟ್ಟ ಹೆಜ್ಜೆ

ಸಂಪಾದಕೀಯ • ಪುಟ ೬



ಇಂದು ಸಂಜೆ 4 ಗಂಟೆಗೆ ಮತಕ್ಕೆ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಸೇರಿದಂತೆ ಒಟ್ಟು ಮೂರು ಪ್ರಮುಖ ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಿದ್ದು, ಸದನದಲ್ಲಿ ಈ ಮಸೂದೆಗಳ ಚರ್ಚೆಗೆ 15 ಗಂಟೆ ಸಮಯ ಮೀಸಲಿರಿಸಲಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ. ಸದಸ್ಯರು ಹೆಚ್ಚಿನ ಸಮಯಕ್ಕೆ ಒತ್ತಾಯಿಸಿದಲ್ಲಿ, ಸ್ಪೀಕರ್ ಅವಧಿಯನ್ನು 18 ಗಂಟೆಗಳವರೆಗೆ ವಿಸ್ತರಿಸುವ ಸಾಧ್ಯತೆಯೂ ಇದೆ ಎಂದರು. ಸದನದ ಕಲಾಪ ಮಧ್ಯರಾತ್ರಿವರೆಗೂ ಮುಂದುವರಿಯುವ ಸಾಧ್ಯತೆ ಇದೆ. ಶುಕ್ರವಾರ ಸಂಜೆ 4 ಗಂಟೆಗೆ ಮಸೂದೆಗಳ ಅಂಗೀಕಾರಕ್ಕಾಗಿ ಮತದಾನ ನಡೆಯಲಿದೆ ಎಂದು ಅವರು ಸ್ಪಷ್ಟಪಡಿಸಿದರು. ಈ ವಿಶೇಷ ಅಧಿವೇಶನದಲ್ಲಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ, ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಗೆ ಸಂಬಂಧಿಸಿದ ಕಾಯ್ದೆ ಸೇರಿದಂತೆ ಮೂರು ಮಸೂದೆಗಳನ್ನು ಮಂಡಿಸಲಾಗಿದೆ. ➡ಪುಟ ೪

ಮಸೂದೆಗಳ ಕುರಿತ ಚರ್ಚೆಗೆ 15 ಗಂಟೆ ನಿಗದಿ

> ಶಾಸಕಾಂಗಗಳಲ್ಲಿ ಮೀಸಲಾತಿ ಮಹಿಳೆಯರ ಹಕ್ಕು ಮತ್ತು ಅದು ಯಾರು ನೀಡುವ ಉಡುಗೊರೆಯಲ್ಲ. ಈ ಹಕ್ಕುಗಳನ್ನು ನೀಡಲು ಈ ಹಿಂದೆ ವಿರೋಧಿಸಿದವರು ಅದರ ಪರಿಣಾಮಗಳನ್ನು ಎದುರಿಸಿದ್ದಾರೆ. ಈ ಕಾಯ್ದೆಯನ್ನು ವಿರೋಧಿಸುವ ರಾಜಕೀಯ ಪಕ್ಷಗಳನ್ನು ಮಹಿಳೆಯರು ಕ್ಷಮಿಸುವುದಿಲ್ಲ.
> ■ ನರೇಂದ್ರ ಮೋದಿ, ಪ್ರಧಾನಿ

ತಿದ್ದುಪಡಿಗಳು ಮತ್ತು ಮಹಿಳಾ ಮೀಸಲಾತಿ

ಲೋಕಸಭೆಯು ಗುರುವಾರ ಮೂರು ನಿರ್ದಿಷ್ಟ ಮಸೂದೆಗಳ ಬಗ್ಗೆ ಚರ್ಚೆ ನಡೆಸಿತು: ಸಂವಿಧಾನದ (131ನೇ ತಿದ್ದುಪಡಿ) ಮಸೂದೆ 2026, ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳ (ತಿದ್ದುಪಡಿ) ಮಸೂದೆ 2026, ಮತ್ತು ಮರುವಿಂಗಡಣೆ ಮಸೂದೆ 2026. ಈ ಪ್ರಸ್ತಾವನೆಗಳ ಅನ್ವಯ ಲೋಕಸಭೆಯ ಒಟ್ಟು ಬಲವನ್ನು 815 ಸ್ಥಾನಗಳಿಗೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಇದರಲ್ಲಿ ಒಟ್ಟು 272 ಸ್ಥಾನಗಳನ್ನು ಅಂದರೆ ಸದನದ ಶೇ.33ರಷ್ಟನ್ನು ಮಹಿಳೆಯರಿಗೆ ಮೀಸಲಿಡಲಾಗುವುದು.

ಒಕ್ಕೂಟ ವ್ಯವಸ್ಥೆಯ ಮೇಲೆ ದಾಳಿ: ವಿಪಕ್ಷ
• ಪುಟ ೪

---

598 ಗ್ರಾಪಂಗಳಲ್ಲಿದೆ ಕುಡಿಯುವ ನೀರಿನ ಸಮಸ್ಯೆ

ಎಚ್ಚರಿಕೆ ವಹಿಸಲು ಡಿಸಿಗಳಿಗೆ ಸಿಎಂ ಸೂಚನೆ



• **ಬೆಂಗಳೂರು:** ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹುದಾದ 213 ತಾಲೂಕುಗಳನ್ನು ಹಾಗೂ 2410 ಗ್ರಾಮ ಪಂಚಾಯತ್‌ಗಳನ್ನು ಗುರುತಿಸಲಾಗಿದೆ. ಪ್ರಸ್ತುತ 114 ತಾಲೂಕುಗಳ 598 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದ್ದು, ಜಿಲ್ಲಾಧಿಕಾರಿಗಳು ಯಾವುದೇ ತೊಂದರೆ ಆಗದಂತೆ ಎಚ್ಚರ ವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.



ಗುರುವಾರ ವಿಧಾನಸೌಧ ಸಭಾಂಗಣದಲ್ಲಿ ನಡೆದ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿನ ಕುಡಿಯುವ ನೀರು ಪೂರೈಕೆ ಕುರಿತು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಸೂಚನೆ ನೀಡಿದರು. 137 ಗ್ರಾಮಗಳಿಗೆ ಒಟ್ಟು 129 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. 585 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯ ಲಾಗಿದ್ದು, ಇದರ ಮೂಲಕ 515 ಗ್ರಾಮಗಳಿಗೆ ನೀರು ಪೂರೈಕೆ ಮಾಡಲಾಗುತ್ತಿರುವ ಬಗ್ಗೆ ಮುಖ್ಯಮಂತ್ರಿಗಳು ಮಾಹಿತಿ ಪಡೆದರು. ➡ಪುಟ ೪

ಗ್ರಾಮಗಳನ್ನು ಗುರುತಿಸಿ

ಕಲಬುರಗಿ ಜಿಲ್ಲೆಯ 147 ಗ್ರಾಮ ಪಂಚಾಯತ್, ಬಾಗಲಕೋಟೆ 114, ಬೆಳಗಾವಿಯ 127, ಚಿಕ್ಕಮಗಳೂರಿನ 115, ಹಾವೇರಿಯ 138, ಮಂಡ್ಯ 130, ತುಮಕೂರಿನ 141 ಹಾಗೂ ಉತ್ತರಕನ್ನಡ ಜಿಲ್ಲೆಯ 125 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದೆಂದು ಗುರುತಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಅನುದಾನದ ಕೊರತೆಯಿಲ್ಲ

ಸಾರ್ವಜನಿಕರಿಗೆ ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕುಡಿಯುವ ನೀರು ಪೂರೈಕೆಯನ್ನು ಖಾತ್ರಿಪಡಿಸಲು ಯಾವುದೇ ಅನುದಾನದ ಕೊರತೆಯಿಲ್ಲ. ಜಿಲ್ಲಾಧಿಕಾರಿಗಳ ವರದಿ ಆಧಾರದಲ್ಲಿ ಅಗತ್ಯ ಅನುದಾನವನ್ನು ಒದಗಿಸಲು ಹಣಕಾಸು ಇಲಾಖೆಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದರು.

ರೈತರಿಗೆ ರಸಗೊಬ್ಬರ ಲಭ್ಯತೆ ಖಾತ್ರಿಪಡಿಸಿ
• ಪುಟ ೫

24ಕ್ಕೆ ವಿಶೇಷ ಸಂಪುಟ ಸಭೆ ನಡೆಸಲು ನಿರ್ಧಾರ

ಒಳಮೀಸಲಾತಿ ವರದಿ ಅಧ್ಯಯನಕ್ಕಾಗಿ ಸಮಿತಿ

• **ಬೆಂಗಳೂರು:** ಒಳಮೀಸಲಾತಿ ಜಾರಿಗೆ ಸಂಬಂಧಪಟ್ಟಂತೆ ವರದಿ ಅಧ್ಯಯನಕ್ಕೆ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ತಾಂತ್ರಿಕ ಸಮಿತಿ ರಚನೆ ಮಾಡಲು ಸಚಿವ ಸಂಪುಟ ನಿರ್ಧರಿಸಿದ್ದು, ಈ ಸಂಬಂಧ ಏ.24 ರಂದು ವಿಶೇಷ ಸಂಪುಟ ಸಭೆ ನಡೆಸಲು ತೀರ್ಮಾನ ಕೈಗೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ತೀರ್ಮಾನ ಕೈಗೊಳ್ಳಲಾಗಿದ್ದು, ಒಳಮೀಸಲಾತಿ ಜಾರಿಗೆ ಎದುರಾಗಿರುವ ಕೆಲವು ತಾಂತ್ರಿಕ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಏ.24ರ ಒಳಗೆ ವರದಿ ಸಲ್ಲಿಸಲು ಮುಖ್ಯಕಾರ್ಯದರ್ಶಿಗೆ ಸೂಚಿಸಲಾಗಿದೆ.

ಅಲ್ಲದೇ, ಕಳೆದ ಅಧಿವೇಶನದಲ್ಲಿ ಮಂಡನೆಯಾಗಿದ್ದ ರೋಹಿತ್ ವೇಮುಲಾ ವಿಧೇಯಕಕ್ಕೆ ಗುರುವಾರ ನಡೆದ ಸಂಪುಟದಲ್ಲಿ ಅನುಮೋದನೆ ನೀಡಲಾಗಿದ್ದು, ಇದು ಕಾಯ್ದೆಯಾಗಿ ಜಾರಿಯಾಗಲಿದೆ ಎಂದು ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು. ಬಾಗಲಕೋಟೆ ಜಿಲ್ಲೆಯ ಇಳಕಲ್ ನಗರಸಭೆ, ಹುನಗುಂದ ಪುರಸಭೆ ಮತ್ತು ಕೊಪ್ಪಳ ಜಿಲ್ಲೆಯ ಯಲಬುರ್ಗಾ ಪಟ್ಟಣ ಪಂಚಾಯಿತಿ, ಕಲಬುರಗಿ ಜಿಲ್ಲೆಯ ಉದನೂರು, ನಾಗನಹಳ್ಳಿ ಗ್ರಾಮ ಮತ್ತು ಮಾಲಗತ್ತಿ ಗ್ರಾಮದ ವ್ಯಾಪ್ತಿಯಲ್ಲಿ ನಾಗರಿಕ ಸೌಲಭ್ಯಕ್ಕೆ ಮೀಸಲಿರಿಸಿರುವ ನಿವೇಶನಗಳನ್ನು ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಕಾಂಗ್ರೆಸ್ ಭವನ ಟ್ರಸ್ಟ್ ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸಂಪುಟದಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ➡ಪುಟ ೪



ಜೆಜೆಎಂ 2.0 ಅನುಷ್ಠಾನಕ್ಕೆ ಒಡಂಬಡಿಕೆ ಮಾಡಲು ಅಸ್ತು

ಜಲ್ ಜೀವನ್ ಮಿಷನ್ ವಿಸ್ತರಿತ ಹಂತದಲ್ಲಿ ಪುನರ್ ರಚಿತ ಜಲ ಜೀವನ್ ಮಿಷನ್ 2.0 ಅನ್ನು ಅನುಷ್ಠಾನಿಸಲು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ತಿಳಿವಳಿಕೆ ಒಡಂಬಡಿಕೆ ಮಾಡಿಕೊಳ್ಳಲು ಸಚಿವ ಸಂಪುಟ ಸಮ್ಮತಿಸಿದೆ ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು. ➡ಪುಟ ೪

ನಾಸಿಕ್ ಟಿಸಿಎಸ್ ಎಚ್‌ಆರ್ ಮ್ಯಾನೇಜರ್ ವಿರುದ್ಧ ತೀವ್ರ ತನಿಖೆ

ನಿದಾಗೆ ಉಗ್ರ ವೈದ್ಯೆ ಶಾಹೀನ್ ಸಂಪರ್ಕ

• **ಹೊಸದಿಲ್ಲಿ:** ನಾಸಿಕ್ ಟಿಸಿಎಸ್ ಬಿಪಿಒ ಘಟಕದಲ್ಲಿ ನಡೆದ ಲೈಂಗಿಕ ಕಿರುಕುಳ ಮತ್ತು ಬಲವಂತದ ಮತಾಂತರ ಪ್ರಕರಣದ ಪ್ರಮುಖ ಆರೋಪಿ ಎಚ್‌ಆರ್ ಮ್ಯಾನೇಜರ್ ನಿದಾ ಖಾನ್‌ಗೂ ಕೆಂಪು ಕೋಟೆ ಕಾರು ಸ್ಫೋಟ ಹಿಂದಿನ ವೈಟ್ ಕಾಲರ್ ಭಯೋತ್ಪಾದಕಿ ಡಾ.ಶಾಹೀನ್ ಶಾಹಿದ್‌ಗೂ ಸಂಪರ್ಕವಿತ್ತೆಂಬ ಬಗ್ಗೆ ಭಾರೀ ಚರ್ಚೆ ನಡೆಯುತ್ತಿದೆ.



ಕೆಲವು ಸಾಮಾಜಿಕ ಜಾಲತಾಣ ಪೋಸ್ಟ್‌ಗಳ ಪ್ರಕಾರ, ನಿದಾ ಖಾನ್ ಮತ್ತು ಡಾ.ಶಾಹೀನ್ ಶಾಹಿದ್ ದಿಲ್ಲಿಯಲ್ಲಿ ಹಲವು ಬಾರಿ ಭೇಟಿಯಾಗಿದ್ದರು. ಕೆಂಪು ಕೋಟೆ ಸಮೀಪದಲ್ಲಿ ಸಂಭವಿಸಿದ ಆತ್ಮಾಹುತಿ ಕಾರು ಬಾಂಬ್ ಸ್ಫೋಟವು ರಾಷ್ಟ್ರೀಯ ಭದ್ರತೆಗೆ ಅಪಾಯಕಾರಿ ಆಗಿತ್ತು. ನಾಸಿಕ್ ಪ್ರಕರಣವು ಉದ್ಯೋಗ ಸ್ಥಳದಲ್ಲಿನ ಲೈಂಗಿಕ ಕಿರುಕುಳ, ಅತ್ಯಾಚಾರ, ಬಲವಂತದ ಮತಾಂತರಕ್ಕೆ ಯತ್ನಿಸಿದ ಆರೋಪವಿದೆ. ➡ಪುಟ ೪

ಟಿಸಿಎಸ್ ನಾಸಿಕ್ ಘಟಕ ಸ್ಥಗಿತ

ಲೈಂಗಿಕ ದೌರ್ಜನ್ಯ, ಕಿರುಕುಳ ಮತ್ತು ಬಲವಂತದ ಮತಾಂತರ ಆರೋಪಗಳನ್ನು ಒಳಗೊಂಡಂತೆ ಪ್ರಕರಣದಲ್ಲಿ ಈಗಾಗಲೇ 9 ಎಫ್‌ಐಆರ್‌ಗಳು ದಾಖಲಾಗಿದ್ದು, 6 ಬಂಧನಗಳೂ ನಡೆದಿರುವ ಹಿನ್ನೆಲೆಯಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ತನ್ನ ನಾಸಿಕ್ ಬಿಪಿಒ ಘಟಕದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಕಂಪನಿ ಎಲ್ಲಾ ಸಿಬ್ಬಂದಿಯನ್ನು ವರ್ಕ್ ಫ್ರಮ್ ಹೋಮ್ ವ್ಯವಸ್ಥೆಗೆ ವರ್ಗಾಯಿಸಿದ್ದು, ತನಿಖೆ ನಡೆಯುತ್ತಿರುವ ನಡುವೆಯೇ ಈ ಕ್ರಮ ಕೈಗೊಳ್ಳಲಾಗಿದೆ.

ಬಲವಂತದ ಮತಾಂತರ ಭಯೋತ್ಪಾದನೆಗೆ ಸಮ? • ಪುಟ ೭

ಪಾಕ್‌ನಲ್ಲಿ ಲಷ್ಕರೆ ಸಂಸ್ಥಾಪಕ, ಉಗ್ರಗಾಮಿ ಹಮ್ಜಾಗೆ ಗುಂಡು

• **ಲಾಹೋರ್:** ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಸೇರಿ ದೇಶದ ಹಲವೆಡೆ ಭಯೋತ್ಪಾದಕ ದಾಳಿ ಹಿಂದಿನ ರೂವಾರಿ, ಲಷ್ಕರ್ –ಎ– ತೈಬಾ (ಎಲ್‌ಇಟಿ) ಉಗ್ರ ಸಂಘಟನೆಯ ಉಗ್ರ ಹಾಗೂ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬನಾದ ಅಮೀರ್ ಹಮ್ಜಾನ ಮೇಲೆ ಮಂಗಳವಾರ ತಡರಾತ್ರಿ ಲಾಹೋರ್‌ನಲ್ಲಿ ಅಪರಿಚಿತ ಬಂದೂಕುಧಾರಿಗಳು ಗುಂಡಿನ ದಾಳಿ ನಡೆಸಿದ್ದು, ಗಂಭೀರ ಸ್ಥಿತಿಯಲ್ಲಿದ್ದಾನೆ ಎಂದು ವರದಿಯಾಗಿದೆ.



ಕಳೆದೊಂದು ವರ್ಷದಲ್ಲಿ ಇದು ಎರಡನೇ ಬಾರಿಗೆ ಅಪರಿಚಿತರು ಹಮ್ಜಾ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ಪಾಕಿಸ್ತಾನದ ಖಾಸಗಿ ಸುದ್ದಿವಾಹಿನಿಯೊಂದರ ಕಚೇರಿ ಹೊರಭಾಗದಲ್ಲಿ ಈ ಘಟನೆ ನಡೆದಿದೆ. ➡ಪುಟ ೪

ದಿಲ್ಲಿಗೆ ಸಿಎಂ, ಡಿಸಿಎಂ, ಪಕ್ಷದ ವರಿಷ್ಠರ ಭೇಟಿ?

• **ಬೆಂಗಳೂರು:** ಉಪ ಚುನಾವಣೆಯ ಕಾವು ಮುಗಿಯುತ್ತಿದಂತೆ ಸಂಪುಟ ವಿಸ್ತರಣೆ ಕೂಗು ಜೋರಾಗಿರುವ ನಡುವೆಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಜಂಟಿಯಾಗಿ ದಿಲ್ಲಿಗೆ ತೆರಳುತ್ತಿರುವುದು ಕುತೂಹಲ ಮೂಡಿಸಿದೆ. ಶುಕ್ರವಾರ ದಿಲ್ಲಿಯ ಖಾಸಗಿ ಹೋಟೆಲ್‌ನಲ್ಲಿ ರಾಜತಾಂತ್ರಿಕರ ಜತೆ ಸಮಾಲೋಚನೆ ನಡೆಸುವ ಬ್ರಿಡ್ಜ್ ಟು ಬೆಂಗಳೂರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಬ್ಬರು ನಾಯಕರು ಒಂದೇ ವಿಶೇಷ ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾರೆ. ಸಂಜೆ 5.30ಕ್ಕೆ ಕಾರ್ಯಕ್ರಮ ನಿಗದಿಯಾಗಿದ್ದು, ಮಧ್ಯಾಹ್ನ 3.30ಕ್ಕೆ ದಿಲ್ಲಿಗೆ ತಲುಪಲಿದ್ದಾರೆ. ➡ಪುಟ ೪



ಮಕ್ಕಳಿಗೆ ಕನ್ನಡ, ಇಂಗ್ಲಿಷ್ ಕಲಿಕೆ ಅನುಭವ ನೀಡುವ ಉದ್ದೇಶ

ಬಾಲಚೇತನ ಹೆಸರಲ್ಲಿ ಪಠ್ಯಪುಸ್ತಕ

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ಮಕ್ಕಳಿಗೆ ಮಾತೃಭಾಷೆ(ಕನ್ನಡ) ಮತ್ತು ಇಂಗ್ಲಿಷ್ ಎರಡರ ಮೂಲಕ ಕಲಿಕೆ ಅನುಭವ ನೀಡುವ ಉದ್ದೇಶದಿಂದ ಪೂರ್ವಪ್ರಾಥಮಿಕ ಹಂತದಲ್ಲಿ ಈ ವರ್ಷದಿಂದಲೇ ಬಾಲಚೇತನ ಎಂಬ ಹೆಸರಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಠ್ಯಪುಸ್ತಕಗಳನ್ನು ಪರಿಚಯಿಸಿದ್ದು, ಈ ಮೂಲಕ ಸರ್ಕಾರಿ ಶಾಲೆಗಳತ್ತ ಆಕರ್ಷಣೆ ಹೆಚ್ಚಿಸುವ ಸದುದ್ದೇಶ ಹೊಂದಿದೆ.

ರಾಜ್ಯ ಸರ್ಕಾರವು ಪೂರ್ವಪ್ರಾಥಮಿಕ ಹಂತವಾದ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗೆ ದ್ವಿಭಾಷಾ ನೀತಿ ಶಿಕ್ಷಣವನ್ನು 2026–27ನೇ ಶೈಕ್ಷಣಿಕ ವರ್ಷದಿಂದ ಈ ವ್ಯವಸ್ಥೆ ಜಾರಿಗೆ ಬಂದಿದ್ದು, ರಾಜ್ಯ ಸರ್ಕಾರಿ ಶಾಲೆಗಳ ಎಲ್‌ಕೆಜಿ, ಯುಕೆಜಿ ಮಕ್ಕಳಿಗೆ ದ್ವಿಭಾಷಾ(ಕನ್ನಡ ಮತ್ತು ಇಂಗ್ಲಿಷ್) ಪಠ್ಯಕ್ರಮ ಈಗ ಪ್ರಮುಖವಾಗಿ ಪರಿಚಯವಾಗಿದೆ. 4 ರಿಂದ 6 ವರ್ಷ ವಯಸ್ಸಿನ ಮಕ್ಕಳ ಸಾಮಾನ್ಯ ಮಾನಸಿಕ ಬೆಳವಣಿಗೆಗೆ ಅನುಗುಣವಾಗಿ ಈ ಪಠ್ಯಕ್ರಮ ಆಧಾರಿತ ಅಭ್ಯಾಸ ಪುಸ್ತಕವನ್ನು ಪೂರ್ವ ಪ್ರಾಥಮಿಕ ಹಂತದ ಕಲಿಕೆಗಾಗಿ ವಿನ್ಯಾಸಗೊಳಿಸಲಾಗಿದ್ದು, ಇವುಗಳಲ್ಲಿ ಅಕ್ಷರ ಮತ್ತು ಪದಗಳನ್ನು ಗುರುತಿಸುವಿಕೆ, ಉಚ್ಚಾರಣೆ ಮತ್ತು ಬರವಣಿಗೆ, ಮೂಲ ಸಂಖ್ಯಾಜ್ಞಾನ ಹಾಗೂ ಸುತ್ತಲಿನ ಪರಿಸರದ ಅರಿವನ್ನು ಮೂಡಿಸಲು ಅರ್ಥಪೂರ್ಣ ಹಾಗೂ ಸರಳ ಚಟುವಟಿಕೆಗಳನ್ನು ಅಳವಡಿಸಲಾಗಿದೆ. ➡ಪುಟ ೪



ಪಠ್ಯಪುಸ್ತಕದಲ್ಲಿನ ವಿಶೇಷತೆ

ಮಕ್ಕಳಿಗೆ ಪಠ್ಯ ತೆರೆದ ಕೂಡಲೇ ಆಕರ್ಷಣೆವಾಗುವಂತೆ ವಿವಿಧ ಚಿತ್ರಗಳ ಜತೆಗೆ ಇಷ್ಟದ ಆಹಾರ ಪದಾರ್ಥದ ಒಂದು ಚಿತ್ರವನ್ನು ಸಂಗ್ರಹಿಸಿ ಅಂಟಿಸೋಣ, ಚಿತ್ರದಲ್ಲಿರುವ ಆಹಾರವಲ್ಲದೆ ನಿನಗೆ ಇಷ್ಟವಾದ ಆಹಾರ ಯಾವುದು?, ಮನೆಯಲ್ಲಿ ಒಣ–ಹಸಿ ಕಸಗಳನ್ನು ಪತ್ಯೇಕ ಡಬ್ಬದಲ್ಲಿ ಹಾಕಲು ಪ್ರಯತ್ನಿಸು, ಆಟವಾಡುವ ಹಾಗೂ ಹೊರ ಸಂಚಾರದ ಸಮಯದಲ್ಲಿ ಎಚ್ಚರವಹಿಸಬೇಕಾದ ಕ್ರಮಗಳ ಕುರಿತು ಹಿರಿಯರಿಂದ ತಿಳಿದುಕೊಳ್ಳಿ. ➡ಪುಟ ೪

ಕಾಂಗ್ರೆಸ್‌ನಿಂದ ಇಡೀ ಮುಸ್ಲಿಂ ಸಮುದಾಯ ದೂರವಾಗುತ್ತೆ!



• **ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರದ ಬೆಳವಣಿಗೆ ಹಿನ್ನೆಲೆಯಲ್ಲಿ ಸಚಿವ ಜಮೀರ್ ಅಹಮ್ಮದ್ ತಲೆದಂಡವಾದರೆ, ರಾಜ್ಯದಲ್ಲಿನ ಇಡೀ ಮುಸ್ಲಿಂ ಸಮುದಾಯ ಕಾಂಗ್ರೆಸ್‌ನಿಂದ ದೂರವಾಗುತ್ತದೆ. ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 20–30 ಕ್ಷೇತ್ರಗಳನ್ನು ಗೆಲ್ಲುವುದೂ ಕಷ್ಟವಾದೀತು ಎಂದು ವಿಶ್ವ ಮುಸ್ಲಿಂ ಪರಿಷತ್ ಎಚ್ಚರಿಸಿದೆ.

ಮುಸ್ಲಿಂ ನಾಯಕರ ತಲೆದಂಡ ಹಿನ್ನೆಲೆ ವಿಶ್ವ ಮುಸ್ಲಿಂ ಪರಿಷತ್ ಎಚ್ಚರಿಕೆ

ಗುರುವಾರ ಸುದ್ದಿಗೋಷ್ಠಿಯಲ್ಲಿ ಪರಿಷತ್ತಿನ ಸಂಸ್ಥಾಪಕ ರಾಜ್ಯಾಧ್ಯಕ್ಷ ಸುಭಾನ್ ಖಾನ್ ಮಾತನಾಡಿ, ಈಗಾಗಲೇ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷ ಸ್ಥಾನದಿಂದ ಕೆ.ಅಬ್ದುಲ್ ಜಬ್ಬಾರ್, ದಕ್ಷಿಣ ಕ್ಷೇತ್ರಕ್ಕೆ ಸಂಬಂಧವೇ ಇಲ್ಲದ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ನಸೀರ್ ಅಹಮ್ಮದ್ ತಲೆದಂಡವಾಗಿದೆ. ➡ಪುಟ ೪

> ಮುಸ್ಲಿಂ ಮುಖಂಡರ ಮೇಲೆ ಕಾಂಗ್ರೆಸ್ ಕ್ರಮ ಕೈಗೊಳ್ಳುತ್ತಿರುವುದು ಬೇಸರವಾಗಿದ್ದು, ನಮಗೆ ಕಾಂಗ್ರೆಸ್ ಹೊರತುಪಡಿಸಿ ಬೇರೆ ಆಯ್ಕೆಗಳಿವೆ. ಸಮುದಾಯದ ಹಿತಾಸಕ್ತಿ ಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಶೀಘ್ರ ಸಭೆಗಳನ್ನು ನಡೆಸಿ ಮುಂದಿನ ಕ್ರಮಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.
> ■ ಮುಫ್ತಿ ಇಫ್ತಿಖಾರ್ ಅಹ್ಮದ್ ಖಾಸ್ಮೀ, ಜಮಿಯತ್ ಉಲಮಾ ಕರ್ನಾಟಕ ಅಧ್ಯಕ್ಷ

ಬಾಲಚೇತನ ಹೆಸರಲ್ಲಿ ಪಠ್ಯಪುಸ್ತಕ

ಪುಟ ೩ ➜ ಭಾಷೆ-1(ಕನ್ನಡ), ಭಾಷೆ-2(ಇಂಗ್ಲಿಷ್) ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ ಪ್ರತ್ಯೇಕ ಚಟುವಟಿಕೆಗಳ ಪುಸ್ತಕಗಳನ್ನು ವಿನೂತನ ರೀತಿಯಲ್ಲಿ ಹೊರತರಲಾಗಿದೆ. ಈ ಅಭ್ಯಾಸ ಪುಸ್ತಕಗಳು ವಿಭಿನ್ನ ರೀತಿಯ ಕಲಿಕಾ ಅನುಭವಗಳನ್ನು ಮಕ್ಕಳಿಗೆ ಒದಗಿಸುವ ಉದ್ದೇಶದಿಂದ ಹಲವು ಬಗೆಯ ವೈವಿಧ್ಯಮಯ ಚಟುವಟಿಕೆಗಳನ್ನು ಹೊಂದಿದ್ದು, ಸೃಜನಶೀಲ ಆಟ ಅಥವಾ ರಚನಾತ್ಮಕ ಕಲಿಕೆ, ವಿಮರ್ಶಾತ್ಮಕ ಚಿಂತನೆ ಮತ್ತು ಸಮಸ್ಯೆ-ಪರಿಹರಿಸುವ ಸಾಮರ್ಥ್ಯಗಳನ್ನು ಬೆಳೆಸುವಂತಿವೆ. ಕಥೆಗಳು, ಪ್ರಾಸಗೀತೆಗಳು, ಹಾಡುಗಳು, ಸುತ್ತಮುತ್ತಲಿನ ವಸ್ತು, ಸಸ್ಯ ಮತ್ತು ಪ್ರಾಣಿಗಳನ್ನು ಗುರುತಿಸುವುದು. ಕಲೆ ಮತ್ತು ಕರಕುಶಲ ಚಟುವಟಿಕೆಗಳು, ಚಿತ್ರ ಬರೆಯುವುದು. ಬಣ್ಣ ತುಂಬುವುದು, ಆಟಿಕೆಗಳ ಬಳಕೆ, ಆಟ ಮತ್ತು ಚಟುವಟಿಕೆ-ಆಧಾರಿತ ಕಲಿಕಾ-ಬೋಧನಾ ವಿಧಾನವನ್ನು ಅಭಿವೃದ್ಧಿಪಡಿಸಲು ಕಾರಣವಾಗುವಂತಿವೆ. ಅಭ್ಯಾಸ ಪುಸ್ತಕಗಳಲ್ಲಿರುವ ಚಟುವಟಿಕೆಗಳು ಶ್ರೇಣೀಕೃತವಾಗಿದೆ. ಜತೆಗೆ ಪ್ರತಿ ಪುಸ್ತಕದ ಪ್ರತಿ ಪುಟಗಳಲ್ಲೂ ಪೋಷಕರ ಹಾಗೂ ಶಿಕ್ಷಕರ ಸಹಿ ಮತ್ತು ದಿನಾಂಕವನ್ನು ಕಡ್ಡಾಯಗೊಳಿಸಲಾಗಿದೆ.

ಪಠ್ಯಪುಸ್ತಕದಲ್ಲಿನ ವಿಶೇಷತೆ

ಪುಟ ೩ ➜ ಹೀಗೆ ಕಲಿಕೆ ಜತೆಗೆ ಪಠ್ಯೇತರ ಹಾಗೂ ಉತ್ತಮ ಹವ್ಯಾಸಗಳನ್ನು ಪ್ರತಿ ಪುಟದಲ್ಲೂ ಪುಸ್ತಕದ ಅಡಿಭಾಗದಲ್ಲಿ ಸೂಚನೆಯಲ್ಲಿ ತಿಳಿಸಲಾಗಿದೆ.

ಶಿಕ್ಷಕರಿಗೆ ವಿಶೇಷ ತರಬೇತಿ: ರಾಜ್ಯದಲ್ಲಿ ದ್ವಿಭಾಷಾ ಶಿಕ್ಷಣ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಹಿನ್ನೆಲೆಯಲ್ಲಿ ಶಿಕ್ಷಕರಿಗೆ ವ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಸರ್ಕಾರ ಈಗಾಗಲೇ ಆರಂಭಿಸಿದೆ. ಶಾಲಾ ಶಿಕ್ಷಕರಿಗೆ ದ್ವಿಭಾಷಾ ಬೋಧನೆ ಬಗ್ಗೆ ತರಬೇತಿ ನಡೆಸುತ್ತಿದ್ದು, ಆಯಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳ ನೆರವಿನಿಂದ ಶಿಕ್ಷಕರಿಗೆ ದ್ವಿಭಾಷಾ ಬೋಧನೆಯ ಬಗ್ಗೆ ತರಬೇತಿ ನಡೆಯುತ್ತಿದೆ.

ರಾಜ್ಯಗಳಿಗಿಲ್ಲ ತಾರತಮ್ಯ

ಪುಟ ೩ ➜ "ಈ ಸದನದಿಂದ ನಾನು ಬಹಳ ಜವಾಬ್ದಾರಿಯಿಂದ ಹೇಳಲು ಬಯಸುತ್ತೇನೆ- ದಕ್ಷಿಣವಾಗಲಿ, ಉತ್ತರವಾಗಲಿ, ಪೂರ್ವವಾಗಲಿ, ಪಶ್ಚಿಮವಾಗಲಿ, ಸಣ್ಣ ರಾಜ್ಯಗಳಾಗಲಿ ದೊಡ್ಡ ರಾಜ್ಯಗಳಾಗಲಿ- ಈ ನಿರ್ಧಾರ ಪ್ರಕ್ರಿಯೆಯಲ್ಲಿ ಯಾವುದೇ ರಾಜ್ಯದ ವಿರುದ್ಧ ಭೇದಭಾವ ನಡೆಯುವುದಿಲ್ಲ ಎಂದು ಅವರು ಹೇಳಿದರು. ಲೋಕಸಭೆಯ ಸ್ಥಾನಗಳ ಪ್ರಮಾಣದಲ್ಲಿ ಯಾವುದೇ ರಾಜ್ಯಕ್ಕೂ ಕಡಿತವಾಗುವುದಿಲ್ಲ. ಆ ಪ್ರಮಾಣದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ, ಹೆಚ್ಚಳವೂ ಅದೇ ಪ್ರಮಾಣದಲ್ಲಿ ಆಗುತ್ತದೆ ಎಂದು ಅವರು ಹೇಳಿದರು. ಮಹಿಳಾ ಮೀಸಲಾತಿ ಎಂದರೆ ಮಹಿಳೆಯರಿಗೆ ನೀಡಲಾಗುತ್ತಿರುವ ದಾನವಲ್ಲ, ಅದು ಅವರ ಹಕ್ಕು ಎಂದರು.

ಶ್ರೇಯಸ್ಸನ್ನು ವಿಪಕ್ಷಗಳೊಂದಿಗೆ ಹಂಚಿಕೊಳ್ಳಲು ಸಿದ್ಧ: ಮೀಸಲಾತಿ ಕಾಯ್ದೆಯನ್ನು 2029ರಲ್ಲಿ ಜಾರಿಗೆ ತರಲು ಯೋಜಿಸಲಾಗಿದೆ. ಸಮಯದ ಅಭಾವದಿಂದಾಗಿ 2024ರ ವೇಳೆಗೆ ಈ ಸುಧಾರಣೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ, ಆದರೆ, ಇನ್ನು ಮುಂದೆ ವಿಳಂಬ ಮಾಡಬಾರದು ಎಂದು ಪ್ರಧಾನಿ ಒತ್ತಿ ಹೇಳಿದರು. ಆಡಳಿತ ಪಕ್ಷ ಯಾವುದೇ ಸ್ವಹಿತಕ್ಕೆ ಈ ಕಾಯ್ದೆ ಜಾರಿ ಮಾಡುತ್ತಿಲ್ಲ, ರಾಷ್ಟ್ರೀಯ ಹಿತಾಸಕ್ತಿಯ ಈ ಸುಧಾರಣೆಯ ಶ್ರೇಯಸ್ಸನ್ನು ವಿರೋಧ ಪಕ್ಷಗಳೊಂದಿಗೆ ಹಂಚಿಕೊಳ್ಳಲು ಸಿದ್ಧ ಎಂದರು.

ಇಂದು ಸಂಜೆ 4 ಗಂಟೆಗೆ ಮತಕ್ಕೆ

ಪುಟ ೩ ➜ ಈ ಕ್ರಮಗಳನ್ನು ಜಾರಿಗೆ ತರಲು 131ನೇ ಸಂವಿಧಾನ



ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ. ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಪುನರ್‌ವಿಂಗಡಣೆ ಆಯೋಗ ಸ್ಥಾಪನೆಗೆ ಸಂಬಂಧಿಸಿದ ಈ ಮಸೂದೆಗಳ ಮೇಲೆ ಶುಕ್ರವಾರ ಸಂಜೆ 4 ಗಂಟೆಗೆ ಲೋಕಸಭೆಯಲ್ಲಿ ಮತದಾನ ನಡೆಯಲಿದೆ ಎಂದು ಸ್ಪೀಕರ್ ಓಂ ಬಿರ್ಲಾ ತಿಳಿಸಿದ್ದಾರೆ.

ಒಕ್ಕೂಟ ವ್ಯವಸ್ಥೆ ಮೇಲೆ ದಾಳಿ: ವಿಪಕ್ಷ

ದಕ್ಷಿಣ ಭಾರತದ ರಾಜ್ಯಗಳಾದ ತಮಿಳುನಾಡು(ಡಿಎಂಕೆ) ಮತ್ತು ಕೇರಳದ ನಾಯಕರು, ಜನಸಂಖ್ಯೆ ಆಧಾರಿತ ಕ್ಷೇತ್ರ ಮರುವಿಂಗಡಣೆಯು ದಕ್ಷಿಣದ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯವನ್ನು ಕುಗ್ಗಿಸುತ್ತದೆ ಮತ್ತು ಉತ್ತರದ ರಾಜ್ಯಗಳಿಗೆ ಹೆಚ್ಚಿನ ಲಾಭ ಮಾಡಿಕೊಡುತ್ತದೆ ಎಂದು ದೂರಿದ್ದಾರೆ. ಇದನ್ನು ಒಕ್ಕೂಟ ವ್ಯವಸ್ಥೆಯ ಮೇಲಿನ ದಾಳಿ ಎಂದು ಕೆ.ಸಿ. ವೇಣುಗೋಪಾಲ್ ಬಣ್ಣಿಸಿದ್ದಾರೆ. ವಿರೋಧ ಪಕ್ಷಗಳು ಮಹಿಳಾ ಮೀಸಲಾತಿಯನ್ನು ಕ್ಷೇತ್ರ ಮರುವಿಂಗಡಣೆಯೊಂದಿಗೆ ಜೋಡಿಸುವುದನ್ನು ವಿರೋಧಿಸಿವೆ. ಮಹಿಳಾ ಮೀಸಲಾತಿಯನ್ನು ಈಗಿರುವ 543 ಲೋಕಸಭಾ ಸ್ಥಾನಗಳಲ್ಲೇ ತಕ್ಷಣವೇ ಜಾರಿಗೆ ತರಬೇಕು ಎಂಬುದು ವಿರೋಧ ಪಕ್ಷಗಳ ಮುಖ್ಯ ಬೇಡಿಕೆಯಾಗಿದೆ.

ಒಳಮೀಸಲಾತಿ ವರದಿ ಅಧ್ಯಯನಕ್ಕಾಗಿ ಸಮಿತಿ

ಪುಟ ೩ ➜ ಅಲ್ಲದೇ, ಕಲಬುರಗಿ ಜಿಲ್ಲೆ ಹಾಗರಗಾ ಗ್ರಾಮದ ಸರ್ವೆ ನಂ. 215ರಲ್ಲಿ ಲಭ್ಯವಿರುವ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ 2 ಎಕರೆ ಸಿ.ಎ. ನಿವೇಶನವನ್ನು ಶೈಕ್ಷಣಿಕ ಹಾಗೂ ಸಾರ್ವಜನಿಕ ಸೇವಾ ಭವನವನ್ನು ನಿರ್ಮಿಸಲು ಮಂಜೂರು ಮಾಡಲು ಒಪ್ಪಿಗೆ ನೀಡಿದೆ ಎಂದರು. ರಾಜ್ಯದ ವಿವಿಧ ಕೇಂದ್ರ ಕಾರಾಗ್ರಹಗಳಲ್ಲಿರುವ 25 ಜೀವಾವಧಿ ಶಿಕ್ಷಾ ಬಂಧಿಗಳನ್ನು ಸನ್ನಡತೆ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ ಎಂದರು.

ಜಿಜಿಎಂ 2.0 ಅನುಷ್ಠಾನಕ್ಕೆ ಒಡಂಬಡಿಕೆ ಮಾಡಲು ಅಸ್ತು

ಪುಟ ೩ ➜ ಸಂಜೀವಿ-ಕೆಎಸ್‌ಆರ್‌ಎಲ್‌ಪಿಎಸ್ ಅಭಿಯಾನದಲ್ಲಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಿಗೆ (ಜಿಪಿಎಲ್‌ಎಫ್) ಡಿಜಿಟಲ್ ಕಾರ್ಯವ್ಯವಸ್ಥೆ ಬಲಪಡಿಸುವ ಉದ್ದೇಶದಿಂದ ಆಲ್ ಇನ್ ವನ್ ಡೆಸ್ಕ್‌ಟಾಪ್ ಮಲ್ಟಿಫಂಕ್ಷನ್ ಪ್ರಿಂಟರ್ಸ್ ಮತ್ತು ಯುಪಿಎಸ್‌ಗಳನ್ನು 25 ಕೋಟಿ ರೂ. ಮೊತ್ತದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಪಾಕ್‌ನಲ್ಲಿ ಲಷ್ಕರೆ ಸಂಸ್ಥಾಪಕ ಉಗ್ರ ಹಮ್ಜಾಗೆ ಗುಂಡು

ಪುಟ ೩ ➜ ದಾಳಿ ನಡೆಸಿದವರು ಬಹಳ ಸಮೀಪದಿಂದ ಗುಂಡಿನ ದಾಳಿ ನಡೆಸಿ ಸ್ಥಳದಿಂದ ಪರಾರಿಯಾಗಿದ್ದಾರೆ. ಗಾಯಗೊಂಡ ಹಮ್ಜಾನನ್ನು ತಕ್ಷಣ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ನಡೆಯುತ್ತಿದೆ. ಇದಕ್ಕೂ ಮುನ್ನ ಕಳೆದ ವರ್ಷದ ಮೇ ತಿಂಗಳಲ್ಲಿ ಲಾಹೋರಿನಲ್ಲಿರುವ ಅವರ ನಿವಾಸದ ಹೊರಗೆ ಅಪರಿಚಿತರು ಗುಂಡಿನ ದಾಳಿ ನಡೆಸಿದ್ದರು. ಆ ದಾಳಿಯಿಂದ ಬದುಕುಳಿದಿದ್ದ. ನಂತರ ಅವರ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ವರದಿಯಾಗಿದ್ದರೂ, ಅಧಿಕಾರಿಗಳು ಯಾವುದೇ ಅಧಿಕೃತ ಹೇಳಿಕೆ ನೀಡಿರಲಿಲ್ಲ. 1959ರ ಮೇ 10ರಂದು ಪಾಕ್‌ನ ಪಂಜಾಬ್ ಪ್ರಾಂತ್ಯದ ಗುಜ್ರಾನ್‌ವಾಲಾದಲ್ಲಿ ಜನಿಸಿದ್ದ ಹಮ್ಜಾ, ಅಫ್ಘಾನ್ ಜಿಹಾದ್ ಸೇರಿಕೊಂಡಿದ್ದ. ಅಲ್ಲಿಂದ 1985-86ರ ಅವಧಿಯಲ್ಲಿ ಹಾಫಿಜ್ ಸಯೀದ್ ಜತೆಗೂಡಿ ಲಷ್ಕರೆ ಉಗ್ರ ಸಂಘಟನೆ ಸ್ಥಾಪಿಸಿದ್ದ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಪಾಕಿಸ್ತಾನದಲ್ಲಿರುವ ಭಯೋತ್ಪಾದಕ ನೆಲೆಗಳಿಗೆ ನಮ್ಮ ಸರಕಾರ ಆಪರೇಷನ್ ಸಿಂಧೂರ ಮಾಡಿದೆ.ಆದರೆ ಕಾಂಗ್ರೆಸ್ ಪಾಕಿಸ್ತಾನದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ – ಮೋದಿ

– ಅವರದು ತಾಳ, ಇವರದು ಮೇಳ. ಈ ತಾಳ ಮೇಳವನ್ನು ತಡೆಯದೆ ಹೋದರೆ ಮುಂದೆ ದೇಶದ ಪರಿಸ್ಥಿತಿ ಅಲ್ಲೋಲ ಕಲ್ಲೋಲ!

ದಿನ ಭವಿಷ್ಯ

ಮೇಷ
ಮನೆಯಲ್ಲಿ ಶಾಂತ, ಸೌಹಾರ್ದ ವಾತಾವರಣ. ಹಣದ ವಿಚಾರದಲ್ಲಿ ಪೂರಕ ಬೆಳವಣಿಗೆ. ವೃತ್ತಿಯಲ್ಲಿ ಸ್ವಲ್ಪ ಸಮಸ್ಯೆ ಕಾಣಿಸಿಕೊಳ್ಳಬಹುದು.

ವೃಷಭ
ನಿಮ್ಮ ವ್ಯವಹಾರ ವಿಸ್ತರಿಸುವುದು ನಿಮ್ಮ ಮುಖ್ಯ ಗುರಿ. ಅದೃಷ್ಟ ನಿಮ್ಮ ಜತೆಗಿದೆ. ಉದ್ಯೋಗ ಬದಲಾವಣೆಗೆ ಕಾಲ ಪಕ್ವವಾಗಿದೆ. ಧನಪ್ರಾಪ್ತಿ.

ಮಿಥುನ
ಪ್ರಗತಿಗೆ ಪೂರಕ ವಾತಾವರಣ. ಕೆಲಸದಲ್ಲಿ ಅತ್ಯುತ್ಸಾಹ ತೋರುವಿರಿ. ಮನೆಯಲ್ಲಿ ಹಿರಿಯರ ಆರೋಗ್ಯ ಸಮಸ್ಯೆ. ಕಾಳಜಿ ವಹಿಸಿರಿ.

ಕಟಕ
ಇಂದು ಹಣದ ವಿಚಾರದಲ್ಲಿ ಪ್ರಗತಿ ಕಾಣದು. ಮುಂದಿನ ದಿನಗಳಲ್ಲಿ ಪರಿಸ್ಥಿತಿ ಸುಧಾರಣೆ. ಕೌಟುಂಬಿಕ ಒತ್ತಡ ಶಮನ.

ಸಿಂಹ
ಬಾಕಿ ಇರುವ ಕಾರ್ಯ ಮುಗಿಸಲು ಗಮನ ಕೊಡಿ. ವೃತ್ತಿಯಲ್ಲಿ ಒತ್ತಡ ಹೆಚ್ಚು . ಕೆಲವರ ಅವಕೃಪೆಗೆ ತುತ್ತಾಗುವಿರಿ.

ಕನ್ಯಾ
ಒತ್ತಡದ ಬದುಕಿಂದ ದೂರವಾಗಿ ಪ್ರವಾಸ ಹೊರಡಲು ಸಕಾಲ. ಮನೆಯವರ ಇಚ್ಛೆ ಅರಿತು ವ್ಯವಹರಿಸಿ.

ತುಲಾ
ಹೆಚ್ಚು ಭಾವುಕರಾಗಿ ವರ್ತಿಸುವಿರಿ. ಇತರರ ಜತೆಗಿನ ವ್ಯವಹಾರದಲ್ಲಿ ಅದು ಪ್ರತಿಫಲಿಸಲಿದೆ. ಅನಾರೋಗ್ಯದ ಸಂಕೇತ ಕಂಡರೆ ವೈದ್ಯರನ್ನು ಕಾಣಿ.

ವೃಶ್ಚಿಕ
ಮಹತ್ತರ ತೀರ್ಮಾನ ಇಂದು ತಾಳದಿರಿ. ಅದು ಸೂಕ್ತ ಫಲ ನೀಡದು. ಆತ್ಮೀಯರೇ ವಿರೋಧ ಸೂಚಿಸುವರು. ಹೊಂದಾಣಿಕೆ ಒಳಿತು.

ಧನು
ಆರ್ಥಿಕವಾಗಿ ನಿಮಗೆ ಮಹತ್ವದ ದಿನ. ಧನಲಾಭ. ಅನ್ಯರ ಜತೆ ಹೊಂದಿಕೊಳ್ಳಲು ಕಲಿಯಿರಿ. ಹಠಮಾರಿ ಧೋರಣೆ ಬಿಟ್ಟುಬಿಡಿ.

ಮಕರ
ಇತರರ ನೆರವು ಬೇಡವೆಂಬ ಮನಸ್ಥಿತಿ ನಿಮ್ಮದು. ಆದರೆ ಎಲ್ಲರನ್ನು ದೂರ ಮಾಡಬೇಡಿ. ನಿಮ್ಮ ತಪ್ಪು ಒಪ್ಪಿಕೊಳ್ಳಲು ಮುಜುಗರ ಬೇಕಾಗಿಲ್ಲ.

ಕುಂಭ
ಕುಟುಂಬ ಸದಸ್ಯರ ಜತೆ ಹೊಂದಾಣಿಕೆ ಇರಲಿ. ಜಗಳಕ್ಕೆ ಆಸ್ಪದ ನೀಡಬೇಡಿ. ಪ್ರಯಾಣ ಸಾಧ್ಯತೆಯಿದೆ. ಖರ್ಚು ಇಂದು ಹೆಚ್ಚಲಿದೆ.

ಮೀನ
ಮನೆಯಲ್ಲಿ ಸಂಬಂಧ ಕೆಡಲು ಆಸ್ಪದ ಕೊಡಬೇಡಿ. ಹೊಟ್ಟೆ ಕೆಡುವ ಸಾಧ್ಯತೆ. ಸಾತ್ವಿಕ ಆಹಾರ ಸೇವಿಸಿ. ಆರ್ಥಿಕ ಪರಿಸ್ಥಿತಿ ಉತ್ತಮ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 3,8,2,7

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಿಬಿಐ ಮನವಿ

ಜೀವಾವಧಿ ಶಿಕ್ಷೆ ನೀಡಿ

• **ಬೆಂಗಳೂರು:** ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಅಪರಾಧಿಗಳಾಗಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಮಂದಿ ಆರೋಪಿಗಳಿಗೆ ಕ್ಷಮಾದಾನವಿಲ್ಲದ ಜೀವನ ಪರ್ಯಂತ ಶಿಕ್ಷೆ ವಿಧಿಸುವಂತೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಗುರುವಾರ ಸಿಬಿಐ ಮನವಿ ಮಾಡಿತು.



ಪ್ರಕರಣದಲ್ಲಿ 16 ಮಂದಿಯನ್ನು ಕೊಲೆ ಪ್ರಕರಣದಲ್ಲಿ ದೋಷಿಗಳು ಎಂದು ನಿರ್ಧರಿಸಿದ್ದು, ಗುರುವಾರ ಶಿಕ್ಷೆಯ ಪ್ರಮಾಣ ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ ಖುದ್ದು ಅಪರಾಧಿಗಳು ಮತ್ತು ಅವರ ಪರ ವಕೀಲರ ವಾದವನ್ನು ನ್ಯಾಯಾಧೀಶರಾದ ಸಂತೋಷ್ ಗಜಾನನ್ ಭಟ್ ಅವರು ಸುದೀರ್ಘವಾಗಿ ಆಲಿಸಿ, ಶುಕ್ರವಾರ ತೀರ್ಪು ಪ್ರಕಟಿಸುವುದಾಗಿ ಹೇಳಿದರು.

ಸಿಬಿಐ ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸುವಂತೆ ಕೋರುವುದಿಲ್ಲ. ಬದಲಿಗೆ ಕ್ಷಮಾದಾನವಿಲ್ಲದ ಜೀವನ ಪರ್ಯಂತ ಶಿಕ್ಷೆ ವಿಧಿಸಬೇಕು ಎಂದು ಕೋರಿದರು. ಸಂತ್ರಸ್ತನಾದ ಯೋಗೀಶ್ ಗೌಡನ ಕಣ್ಣಿಗೆ ಖಾರದಪುಡಿ ಎರಚಿ, ತಪ್ಪಿಸಿಕೊಳ್ಳಲು ಅವಕಾಶ ನೀಡದೇ ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ಇದೊಂದು ವಿರಳಾತಿ ವಿರಳ ಪ್ರಕರಣವಾಗಿದ್ದು, ಸಿಬಿಐ ತನಿಖೆ ಆರಂಭಿಸಿದ ಬಳಿಕ ಪಿತೂರಿ ಬಯಲಾಗಿದೆ. ಪೊಲೀಸ್ ಅಧಿಕಾರಿಗಳು ಮತ್ತು ಇಡೀ ವ್ಯವಸ್ಥೆಯನ್ನು ದುರ್ಬಳಕೆ ಮಾಡಲಾಗಿದೆ. ನ್ಯಾಯಾಂಗಕ್ಕೆ ವಂಚಿಸಿರುವುದನ್ನು ಗಂಭೀರವಾಗಿ ಪರಿಗಣಿಸಿ ಗರಿಷ್ಠ ಶಿಕ್ಷೆ ವಿಧಿಸಬೇಕು ಎಂದು ಕೋರಿದರು. ವಿನಯ್ ಕುಲಕರ್ಣಿ ಪ್ರತಿನಿಧಿಸಿದ್ದ ಹಿರಿಯ ವಕೀಲ ಎಂ.ಎಸ್. ಶ್ಯಾಮ್ ಸುಂದರ್ ಅವರು ವಿನಯ್ ಕುಲಕರ್ಣಿ ಜನರ ವಿಶ್ವಾಸಗಳಿಸಿ ಗೆದ್ದಿದ್ದಾರೆ. ಮೂವರು ಮಕ್ಕಳಿದ್ದು, 3,500ಕ್ಕೂ ಅಧಿಕ ಆಕಳು, ಎಮ್ಮೆ ಸಾಕಿದ್ದು ಅವುಗಳನ್ನು ನೋಡಿಕೊಳ್ಳಬೇಕಿದೆ. ರಾಜಕೀಯ ಕಾರಣಕ್ಕಾಗಿ ಅವರನ್ನು ಕೃತ್ಯದಲ್ಲಿ ಸಿಲುಕಿಸಲಾಗಿದೆ. ಕಡಿಮೆ ಶಿಕ್ಷೆ ವಿಧಿಸಬೇಕು ಎಂದು ಕೋರಿದರು.

ನ್ಯಾಯಾಲಯದ ಸೂಚನೆಯಂತೆ ಪೀಠದ ಮುಂದೆ ಹಾಜರಾದ ವಿನಯ್ ಕುಲಕರ್ಣಿ 27 ವರ್ಷದಿಂದ ರಾಜಕೀಯದಲ್ಲಿದ್ದೇನೆ. ನನ್ನ ಜೀವನದಲ್ಲಿ ಯಾರಿಗೂ ಅನ್ಯಾಯ ಮಾಡಿಲ್ಲ. ರಾಜಕೀಯ ಪ್ರತೀಕಾರಕ್ಕಾಗಿ ಈ ಕೆಲಸ ಮಾಡಿದ್ದಾರೆ. ಮೂವರು ಮಕ್ಕಳಿದ್ದು, ಅವರು ಮದುವೆಗೆ ಬಂದಿದ್ದಾರೆ. ಮೂರು ಬಾರಿ ಶಾಸಕನಾಗಿದ್ದೇನೆ. ಎರಡು ಬಾರಿ ಸಂಸತ್ ಚುನಾವಣೆಯಲ್ಲಿ ನಿಂತು ಸೋತಿದ್ದೇನೆ. ಒಮ್ಮೆ ಸಚಿವನಾಗಿದ್ದೇನೆ. ನನಗೆ ಕಡಿಮೆ ಶಿಕ್ಷೆ ವಿಧಿಸಬೇಕು ಎಂದು ಮನವಿ ಮಾಡಿದರು.

3,500 ಹಸು/ಎಮ್ಮೆ ಇವೆ. ಅವುಗಳನ್ನು ನೋಡಬೇಕಿದೆ. ಈ ಪ್ರಕರಣದಿಂದಾಗಿ ನನ್ನ ಕ್ಷೇತ್ರದ ಜನರಿಗೂ ಅನ್ಯಾಯವಾಗಿದೆ. ಹೀಗಾಗಿ, ವಿನಾಯಿತಿ ತೋರಬೇಕು ಎಂದರು. ಎಲ್ಲಾ ಅಪರಾಧಿಗಳು ನ್ಯಾಯಾಲಯದ ಮುಂದೆ ತಮ್ಮ ಪರಿಸ್ಥಿತಿಗಳನ್ನು ವಿವರಿಸಿ, ಕಡಿಮೆ ಶಿಕ್ಷೆ ವಿಧಿಸಬೇಕು ಎಂದು ಮನವಿ ಮಾಡಿದರು. ಈ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಎಲ್ಲ ಅಪರಾಧಿಗಳಿಗೆ ಶುಕ್ರವಾರ ಮಧ್ಯಾಹ್ನದ ವೇಳೆಗೆ ನ್ಯಾಯಾಧೀಶರು ಪ್ರತಿಯೊಬ್ಬರ ಪಾತ್ರಕ್ಕೆ ಅನುಗುಣವಾಗಿ ಶಿಕ್ಷೆಯನ್ನು ಪ್ರಕಟಿಸಲಿದ್ದಾರೆ.

ಪೀಠದ ಮುಂದೆ ಅಪರಾಧಿಗಳ ಮನವಿ

- ಎ-4, ಎ-14: ಆಟೋ ಮತ್ತು ಕಾರ್ ಚಾಲಕರು; ವಯಸ್ಸಾದ ತಂದೆ-ತಾಯಿಯನ್ನು ಸಾಕುವ ಜವಾಬ್ದಾರಿ ನಮ್ಮ ಮೇಲಿದೆ.
- ಎ-5: ರಿಯಲ್ ಎಸ್ಟೇಟ್ ಉದ್ಯೋಗಿ; ಅನಾರೋಗ್ಯದಿಂದ ಬಳಲುತ್ತಿರುವ ತಂದೆ-ತಾಯಿಯನ್ನು ನೋಡಿಕೊಳ್ಳಬೇಕು.
- ಎ-9, ಎ-10, ಎ-11: ಪೋಷಕರಿಲ್ಲದ ಅನಾಥರು ಅಥವಾ ವಯಸ್ಸಾದ ತಾಯಿ ಮಾತ್ರ ಇರುವವರು; ಸಣ್ಣ ಮಕ್ಕಳ ಭವಿಷ್ಯಕ್ಕಾಗಿ ಶಿಕ್ಷೆ ಕಡಿಮೆ ಮಾಡಿ.
- ಎ-6, ಎ-12, ಎ-18: ಕೃಷಿಕರು, ಟೈಲರ್ ಮತ್ತು ಗುತ್ತಿಗೆದಾರರು; ಇವರಿಗೆ 4 ರಿಂದ 7 ವರ್ಷದ ಪುಟ್ಟ ಮಕ್ಕಳಿದ್ದಾರೆ ಹಾಗೂ ಹೆಣ್ಣು ಮಕ್ಕಳ ಮದುವೆಯ ಜವಾಬ್ದಾರಿಯಿದೆ.
- ಎ-13: ಹೃದಯ ಶಸ್ತ್ರಚಿಕಿತ್ಸೆಯಾಗಿ ಸ್ಟಂಟ್ ಅಳವಡಿಸಲಾಗಿದೆ; ತೀವ್ರ ಅನಾರೋಗ್ಯವಿದೆ.
- ಎ-16: ದಂಪತಿಗಳಿಬ್ಬರೂ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದಾರೆ; ಇತ್ತೀಚೆಗಷ್ಟೇ ಮೊಮ್ಮಗನ ಸಾವಿನ ನೋವಿನಲ್ಲಿದ್ದಾರೆ.
- ಎ-7: ಆಟೋ ಚಾಲಕ; ತೀವ್ರ ಕಣ್ಣಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ.
- ಎ-19 (ಟಿಂಗರಿಕರ್): ಈವರೆಗೆ ಯಾವುದೇ ಕೆಟ್ಟ ದಾಖಲೆಗಳಿಲ್ಲ (ಬ್ಲ್ಯಾಕ್ ಮಾರ್ಕ್); ಈ ಹಿಂದೆ ನಗದು ಪ್ರಶಸ್ತಿ ಕೂಡ ಲಭಿಸಿದೆ.
- ಎ-8: ತಂದೆ-ತಾಯಿ ಯಾರೂ ಇಲ್ಲ, ನಾನೊಬ್ಬನೇ ದುಡಿಯುವವನು.

ನಿದಾಗೆ ಉಗ್ರ ವೈದ್ಯೆ ಶಾಹೀನ್ ಸಂಪರ್ಕ

ಪುಟ ೩ ➜ ಅಲ್ಲದೆ ಲೈಂಗಿಕ ಕಿರುಕುಳದ ವಿರುದ್ಧ ಮಹಿಳಾ ಉದ್ಯೋಗಿಗಳು ನೀಡಿದ್ದ ದೂರುಗಳನ್ನು ಎಚ್‌ಆರ್ ಮತ್ತು ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ (ಪೋಶ್) ಸಮಿತಿ ಸದಸ್ಯೆಯಾಗಿದ್ದ ನಿದಾ ಖಾನ್ ಕಡೆಗಣಿಸಿದ್ದು, ಇವುಗಳಿಗೆಲ್ಲಾ ಬೆಂಬಲವಾಗಿ ನಿಂತಿದ್ದಳು. ಟಿಸಿಎಸ್‌ನ ಉನ್ನತ ಅಧಿಕಾರಿಗಳ ಗಮನಕ್ಕೆ ಬರದಂತೆ ನೋಡಿಕೊಂಡಿದ್ದಳು. ನಿದಾ ಖಾನ್, ಡಾ.ಶಾಹೀನ್ ಶಾಹಿದ್ ನಡುವಿನ ನೇರ ಸಂಪರ್ಕದ ಕುರಿತು ಅಧಿಕಾರಿಗಳು ಅಧಿಕೃತ ಹೇಳಿಕೆಗಳನ್ನು ನೀಡಿಲ್ಲ. ಉದ್ಯೋಗ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ ತಡೆಯಬೇಕಾದ ಸಿಬ್ಬಂದಿಯೇ ಲೈಂಗಿಕ ದೌರ್ಜನ್ಯ, ಬಲವಂತದ ಮತಾಂತರ ನಡೆಸಲು ಪ್ರೇರೇಪಿಸುತ್ತಿದ್ದಳು ಎಂಬ ಆಘಾತಕಾರಿ ಮಾಹಿತಿ ಮಹಿಳಾ ಪೊಲೀಸರ ಕಾರ್ಯಾಚರಣೆಯಲ್ಲಿ ತಿಳಿದುಬಂದಿತ್ತು.

ಡಾ.ಶಾಹೀನ್ ಯಾರು?: 2025ರ ದಿಲ್ಲಿ(ಕೆಂಪು ಕೋಟೆ) ಆತ್ಮಾಹುತಿ ಬಾಂಬ್ ಸ್ಫೋಟ ಪ್ರಕರಣದಿಂದ ಬೆಳಕಿಗೆ ಬಂದ ವೈಟ್ ಕಾಲರ್ (ವೈದ್ಯಕೀಯ) ಭಯೋತ್ಪಾದನಾ ಜಾಲದ ಪ್ರಮುಖ ಆರೋಪಿಯಾಗಿದ್ದಳು. ಜೈಶ್-ಎ-ಮೊಹಮ್ಮದ್(ಜೆಇಎಂ) ನಂತಹ ಉಗ್ರ ಸಂಘಟನೆಗಳೊಂದಿಗೆ ಸಂಪರ್ಕದಲ್ಲಿದ್ದ ಡಾ.ಶಾಹೀನ್, ವೈಟ್ ಕಾಲರ್ ಉಗ್ರ ಸಂಚಿನ ಸಂಘಟಕಿಯಾಗಿದ್ದಳು.

ಉತ್ತರಪ್ರದೇಶದ ಗಾಜಿಯಾಬಾದ್‌ನ ಅಲ್-ಫಲಾ ವಿಶ್ವವಿದ್ಯಾಲಯ, ದಿಲ್ಲಿ ಮತ್ತು ಜಮ್ಮು ಕಾಶ್ಮೀರದ ವಿವಿದೆಡೆಯ ವೈದ್ಯಕೀಯ ವೃತ್ತಿಪರರನ್ನು ಸೇರಿಸಿ ತಂಡವನ್ನು ರಚಿಸಿಕೊಂಡಿದ್ದಳು ಎಂದು ದಿಲ್ಲಿ ಪೊಲೀಸ್ ಮತ್ತು ಎನ್‌ಐಎ ತನಿಖೆಯಲ್ಲಿ ತಿಳಿದುಬಂದಿದೆ. ಭಾರತದಲ್ಲಿ ಜೆಇಎಂ ಮಹಿಳಾ ಘಟಕ ಸ್ಥಾಪಿಸುವುದೇ ಈಕೆಯ ಗುರಿಯಾಗಿತ್ತು.

ಕಂಪನಿಗಷ್ಟೇ ಸೀಮಿತವಲ್ಲ?: ಕೆಲವು ಮೂಲಗಳ ಪ್ರಕಾರ, ಇದು ನಾಸಿಕ್‌ನಲ್ಲಿ ಟಿಸಿಎಸ್ ಅಥವಾ ಕಂಪನಿಗಷ್ಟೇ ಸೀಮಿತವಾಗಿರದೆ, ಇನ್ನಷ್ಟು ದೊಡ್ಡ ಸಂಪರ್ಕಜಾಲವೆಂಬ ಮಾಹಿತಿಯಿದೆ. ಕೇವಲ ನಾಸಿಕ್ ಮಾತ್ರವಲ್ಲದೆ, ಹಲವು ನಗರಗಳಲ್ಲಿ ಒಂದು ದೊಡ್ಡ ಸಂಪರ್ಕಜಾಲವಾಗಿ ಸೇರಿಕೊಂಡು ಹಿಂದು ಮಹಿಳೆಯರು ಅಥವಾ ಮಹಿಳಾ ಉದ್ಯೋಗಿಗಳನ್ನು ಇಸ್ಲಾಂಗೆ ಬಲವಂತದ ಮತಾಂತರ ನಡೆಸಲು ದೊಡ್ಡ ಜಾಲ ನಡೆಸುತ್ತಿದ್ದಾರೆಂಬ ಸಂಶಯ ವ್ಯಕ್ತವಾಗಿದೆ.

ನಿದಾ ಎಲ್ಲಿದ್ದಾಳೆ

ಆರೋಪಿ ನಿದಾ ಖಾನ್‌ಗಾಗಿ ಪೊಲೀಸರು ಭಿವಂಡಿ ಸಹಿತ ಹಲವು ಸ್ಥಳಗಳಲ್ಲಿ ಹುಡುಕಾಟ ನಡೆಸುತ್ತಿದ್ದಾರೆ. ನಿದಾ ಬಂಧಿಸಿದರೆ ಹಲವು ಪ್ರಶ್ನೆಗಳಿಗೆ ಉತ್ತರ ಸಿಗಬಹುದೆಂಬ ನಂಬಿಕೆ ಯಲ್ಲಿ ಪೊಲೀಸರಿದ್ದಾರೆ.

ದಿಲ್ಲಿಗೆ ಸಿಎಂ, ಡಿಸಿಎಂ, ಪಕ್ಷದ ವರಿಷ್ಠರ ಭೇಟಿ?

ಪುಟ ೩ ➜ ಈ ಅವಧಿಯಲ್ಲಿ ಪಕ್ಷದ ವರಿಷ್ಠರ ಭೇಟಿಯಾಗುವ ಸಾಧ್ಯತೆ ಇದೆ. ಸಂಪುಟ ವಿಸ್ತರಣೆ ಮಾಡಬೇಕೆಂದು ಒತ್ತಾಯಿಸುತ್ತಿರುವ ಸಚಿವ ಸ್ಥಾನದ ಆಕ್ಷಾಂಕಿಗಳ ಒತ್ತಡವನ್ನು ಹೈಕಮಾಂಡ್ ಗಮನಿಸಿದ್ದು, ಇತ್ತೀಚೆಗೆ ನಡೆದ ದಾವಣಗೆರೆ ಉಪಚುನಾವಣೆಯಲ್ಲಿ ಉಂಟಾದ ಬಂಡಾಯದ ಬಗ್ಗೆ ವರದಿ ಕೇಳುವ ಸಾಧ್ಯತೆ ಇರುವುದರಿಂದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಬಳಿ ವಿವರ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆಂದು ಮಾಹಿತಿ ಇದೆ. ದಾವಣಗೆರೆ ಉಪಚುನಾವಣೆಯಲ್ಲಿ ಹಿನ್ನಡೆಯಾದರೆ ಜಮೀರ್ ತಲೆದಂಡ ಎಂದು ಹೇಳಲಾಗುತ್ತಿದ್ದು, ಚುನಾವಣೆ ಪೂರ್ವ, ಚುನಾವಣೆ ಸಂದರ್ಭದಲ್ಲಿ ಸಚಿವ ಜಮೀರ್ ಅವರ ಕಾರ್ಯವೈಖರಿ ಹೈಕಮಾಂಡ್‌ಗೆ ಅಸಮಾಧಾನ ತಂದಿದೆ.

ಕಾಂಗ್ರೆಸ್‌ನಿಂದ ಇಡೀ ಮುಸ್ಲಿಂ ಸಮುದಾಯ ದೂರವಾಗುತ್ತೆ!

ಪುಟ ೩ ➜ ಈಗಲಾದರೂ ಕಾಂಗ್ರೆಸ್ ತನ್ನ ತಪ್ಪು ಸರಿಪಡಿಸಿಕೊಳ್ಳದಿದ್ದರೆ, ಮುಸ್ಲಿಂ ಸಮುದಾಯ ಪಾಠ ಕಲಿಸುವ ಕೆಲಸ ಮಾಡುತ್ತದೆ ಎಂದರು. ಮುಸ್ಲಿಂ ನಾಯಕರಿಗೆ ತೊಂದರೆ ನೀಡಿದರೆ ಸಮುದಾಯದವರು ಕಾಂಗ್ರೆಸ್ಸಿಂದ ದೂರ ಸರಿದು, ಪ್ರಾದೇಶಿಕ ಪಕ್ಷ ಹುಟ್ಟು ಹಾಕುತ್ತೇವೆ. ಮುಸ್ಲಿಂ ಸೇರಿದಂತೆ ಅಹಿಂದ ವರ್ಗದ ಎಲ್ಲಾ ಜಾತಿ, ಸಮುದಾಯ ಒಟ್ಟುಗೂಡಿದರೆ, ಕಾಂಗ್ರೆಸ್, ಬಿಜೆಪಿಯಂತಹ ರಾಷ್ಟ್ರೀಯ ಪಕ್ಷ ಅಥವಾ ಜೆಡಿಎಸ್‌ನಂತಹ ಪ್ರಾದೇಶಿಕ ಪಕ್ಷದಂತಹ ಪರ್ಯಾಯ ಶಕ್ತಿಯ ಉದಯವಾಗಲಿದೆ. ಕಾಂಗ್ರೆಸ್ಸಿನಲ್ಲಿ ಜಮೀರ್ ಅಹಮ್ಮದ್ ತಲೆದಂಡವಾದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ನೆಲ ಕಚ್ಚಲಿದೆ. ಕೆ.ಅಬ್ದುಲ್‌ಜಬ್ಬಾರ್‌ಗೆ ಏನಾದರೂ ತೊಂದರೆಯಾದರೆ ದಾವಣಗೆರೆ ನಗರ, ಜಿಲ್ಲೆಯಲ್ಲಷ್ಟೇ ಅಲ್ಲ, ಎಲ್ಲಾ ಕಡೆ ಕಾಂಗ್ರೆಸ್ ಸರ್ವನಾಶವಾಗುತ್ತದೆ. ದಾವಣಗೆರೆ ದಕ್ಷಿಣದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ವಿರುದ್ಧ ಅಬ್ದುಲ್ ಜಬ್ಬಾರ್ ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆಂದು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೇ ತೆಗೆದು ಹಾಕಿದ್ದು ಖಂಡನೀಯ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಮುಸ್ಲಿಂ ನಾಯಕರ ವಿರುದ್ಧ ಕಾಂಗ್ರೆಸ್ ಕ್ರಮ ಕೈಗೊಂಡರೆ, ವಿಶ್ವ ಮುಸ್ಲಿಂ ಪರಿಷತ್ತನ್ನು ರಾಜಕೀಯ ಪಕ್ಷವಾಗಿ ಮಾಡುತ್ತೇವೆ. ಜಮೀರ್ ಅಹಮದ್ ಅವರನ್ನೇ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಮಾಡಿ, ಲಕ್ಷಾಂತರ ಜನರನ್ನು ಸೇರಿಸಿ ಸಮಾವೇಶ ಮಾಡುತ್ತೇವೆ. ಕಾಂಗ್ರೆಸ್ ಅಲ್ಪಸಂಖ್ಯಾತರನ್ನು ಕಡೆಗಣಿಸಿದರೆ, ರಾಜಕೀಯವಾಗಿ ಮುಗಿಸಲು ಹೊರಟರೆ ಕೈಕಟ್ಟಿಕೊಂಡು ಕೂರುವ ಸ್ಥಿತಿ ತಂದುಕೊಳ್ಳುತ್ತದೆ. ಮುಸಲ್ಮಾನರ ಸ್ವಾಭಿಮಾನ ಕೆಣಕಿದ ಕಾಂಗ್ರೆಸ್ ಪಕ್ಷ ದಾವಣಗೆರೆ ದಕ್ಷಿಣದಲ್ಲಿ ನೂರಕ್ಕೆ ನೂರರಷ್ಟು ಸೋಲನುಭವಿಸಲಿದೆ ಎಂದು ಅವರು ತಿಳಿಸಿದರು.

ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ನನ್ನ 40 ವರ್ಷದ ಸ್ನೇಹಿತ ಸಾದಿಕ್ ಪೈಲ್ವಾನ್ ಅವರ ನಾಮಪತ್ರ ಭರ್ತಿ ಮಾಡಿ, ಉಮೇದುವಾರಿಕೆ ಹಾಕಿಸಿದ್ದೇ ನಾನು. ಸಾದಿಕ್‌ಗೆ ನಾಮಪತ್ರ ಸಲ್ಲಿಸಲು ಕೆ.ಅಬ್ದುಲ್ ಜಬ್ಬಾರ್, ನಸೀರ್ ಅಹಮ್ಮದ್, ಜಮೀರ್ ಅಹಮ್ಮದ್ ಯಾರೂ ಹೇಳಿಲ್ಲ. ಆದರೂ ಚುನಾವಣೆ ಫಲಿತಾಂಶ ಬರುವ ಮುನ್ನವೇ ಕಾಂಗ್ರೆಸ್ ಅಲ್ಪಸಂಖ್ಯಾತ ಮುಖಂಡರನ್ನು ಗುರಿಯಾಗಿಸಿಕೊಂಡು, ಕ್ರಮ ಕೈಗೊಳ್ಳುತ್ತಿರುವುದು ಸರಿಯಲ್ಲ. ಇದರಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕೈವಾಡವಿದೆ ಎಂದು ಅವರು ಆರೋಪಿಸಿದರು.

ನನ್ನ ಗೆಳೆಯ ಸಾದಿಕ್ ಪೈಲ್ವಾನ್ ಕಾಂಗ್ರೆಸ್ಸಿನಲ್ಲಿ ದುಡಿದರೂ ತನ್ನನ್ನು ಗುರುತಿಸಲಲ್ಲವೆಂದು ಬೇಸರ ತೋಡಿಕೊಂಡಿದ್ದ ಕಾರಣ ನನ್ನದೇ ಹಣದಲ್ಲಿ ಠೇವಣಿ ಕಟ್ಟಿ ನಾಮಪತ್ರ ಸಲ್ಲಿಸಲು ಹೇಳಿದ್ದೆ. ಆದರೆ ಆತ ಇದ್ದಕ್ಕಿದ್ದಂತೆ ಯು ಟರ್ನ್ ಹೊಡೆತ್ತಾನೆಂದು ನಾನಂತೂ ಅಂದುಕೊಂಡಿರಲಿಲ್ಲ. ಚುನಾವಣಾ ಕಣದಲ್ಲಿ ಉಳಿಯುವುದು, ಬಿಡುವುದು ಅವನ ಇಷ್ಟ.

ಸಾದಿಕ್ ಪೈಲ್ವಾನ್‌ಗೆ ನಾಮಪತ್ರ ಸಲ್ಲಿಸಲು, ಹಿಂದಕ್ಕೆ ಪಡೆಯದಂತೆ ಹೇಳಿದ್ದು ನಾನೇ ಹೊರತು ಅಬ್ದುಲ್ ಜಬ್ಬಾರ್, ಜಮೀರ್ ಅಹಮ್ಮದ್, ನಸೀರ್ ಅಹಮ್ಮದ್ ಅಲ್ಲ. ಉಪ ಚುನಾವಣೆಗೆ ಇಡೀ ಕ್ಯಾಬಿನೆಟ್ ದಾವಣಗೆರೆಗೆ ಬಂದು ಠಿಕಾಣಿ ಹೂಡಿತ್ತು. ಇಲ್ಲಿಯೇ ಇದ್ದವರು ಒಂದು ಸಲ ಅಬ್ದುಲ್ ಜಬ್ಬಾರ್ ಮನೆಗೆ ಭೇಟಿ ನೀಡಬೇಕಿತ್ತು. ಸಾದಿಕ್ ಮನೆಯಲ್ಲಿ ಊಟ ಮಾಡಿದ ಸಿಎಂ ಸಿದ್ದರಾಮಯ್ಯ ಕೂಡ ಅಬ್ದುಲ್ ಜಬ್ಬಾರ್ ಮನೆಗೆ ಹೋಗಲಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ಪರಿಷತ್ ಮುಖಂಡರಾದ ಪರ್ವೇಜ್, ಮಂಜುನಾಥ, ಅಲ್ಲಾಭಕ್ಷಿ ಸುದ್ದಿಗೋಷ್ಠಿಯಲ್ಲಿದ್ದರು.

ಸಿಎಂ ರೇವಂತ್ ಜಿಡಿಪಿ ಮಾದರಿ ಹಾಸ್ಯಾಸ್ಪದ

ಪುಟ ೧ ➜ ಸಂವಿಧಾನಾತ್ಮಕ ಕರ್ತವ್ಯವೂ ಆಗಿದೆ' ಎಂದು ಹೇಳಿದರು. ಸರ್ಕಾರ ಮಂಡಿಸಿರುವ ಹೊಸ ಪ್ರಸ್ತಾವನೆಯಿಂದ ಎಲ್ಲಾ ರಾಜ್ಯಗಳಿಗೆ ಹೆಚ್ಚಿನ ಸ್ಥಾನಗಳು ಸಿಗಲಿದ್ದು, 'ಒಂದು ಮತಕ್ಕೆ ಒಂದು ಮೌಲ್ಯ' ಎಂಬ ಮೂಲತತ್ತ್ವದ ಆಧಾರದ ಮೇಲೆ ಪ್ರತಿನಿಧಿತ್ವ ಹೆಚ್ಚುತ್ತದೆ ಎಂದು ವಾದಿಸಿದರು.



ಇದಕ್ಕೆ ವಿರುದ್ಧವಾಗಿ ಕಾಂಗ್ರೆಸ್ ಮೂರು ಪರ್ಯಾಯಗಳನ್ನು ಮುಂದಿಟ್ಟಿದ್ದು ಈಗಿನ 543 ಸ್ಥಾನಗಳನ್ನು ಹಾಗೆಯೇ ಉಳಿಸಿಕೊಳ್ಳುವುದು, ಜನಸಂಖ್ಯೆ ಮತ್ತು ರಾಜ್ಯದ ಜಿಎಸ್‌ಡಿಪಿ ಆಧಾರಿತ ಸಂಯೋಜಿತ ಮಾದರಿ ಹಾಗೂ ಯೂರೋಪಿನ ಮಾದರಿಯ ಅನುಪಾತೀಯ ವಿಧಾನ ಇವುಗಳನ್ನು ಸೂರ್ಯ ತಿರಸ್ಕರಿಸಿದರು.

'ಜಿಎಸ್‌ಡಿಪಿ ಆಧಾರದ ಮೇಲೆ ಮತದ ಮೌಲ್ಯ ನಿರ್ಧರಿಸಿದರೆ ಶ್ರೀಮಂತರಿಗೆ ಹೆಚ್ಚು ಮೌಲ್ಯ ಸಿಗುತ್ತದೆ. ಹಾಗಾದರೆ ಮುಕೇಶ್ ಅಂಬಾನಿ ಅವರಿಗೆ ಲಕ್ಷ ಮತಗಳ ಮೌಲ್ಯ, ಸಾಮಾನ್ಯ ಜನರಿಗೆ ಒಂದೇ ಮತ ಎಂಬ ಪರಿಸ್ಥಿತಿ ಬರಬಹುದು," ಎಂದು ವ್ಯಂಗ್ಯವಾಡಿದರು. ಹಾಗೆಯೇ, ಜಿಎಸ್‌ಡಿಪಿ ಏರಿಳಿತದ ಮೇಲೆ ಕ್ಷೇತ್ರಗಳ ಸಂಖ್ಯೆಯನ್ನು ನಿರ್ಧರಿಸುವುದು ಪ್ರಾಯೋಗಿಕವಲ್ಲ ಎಂದು ಅವರು ಹೇಳಿದರು. 'ಒಂದು ವರ್ಷ ಮಳೆ ಚೆನ್ನಾಗಿದ್ದರೆ ಹೆಚ್ಚುವರಿ ಸ್ಥಾನ, ಮುಂದಿನ ವರ್ಷ ಕುಸಿತವಾದರೆ ಕಡಿತ, ಇದು ಸಾಧ್ಯವೇ?' ಎಂದು ಪ್ರಶ್ನಿಸಿದರು. ನಾನು ಹೆಮ್ಮೆಯ ಕನ್ನಡಿಗನಾಗಿ ರೇವಂತ್ ರೆಡ್ಡಿ ಅವರ ಈ ಪ್ರಸ್ತಾಪವನ್ನು ತಿರಸ್ಕರಿಸುತ್ತೇನೆ ಎಂದೂ ಹೇಳಿದರು.

ಈ ಮಸೂದೆಗಳ ಕುರಿತು ಕಾಂಗ್ರೆಸ್ ಸಂಸದರ ಆಕ್ಷೇಪಗಳನ್ನು ತೇಜಸ್ವಿ ಸೂರ್ಯ ತಿರಸ್ಕರಿಸಿದರು. ಹಾಗೆಯೇ, ಆಂಧ್ರ ಪ್ರದೇಶವನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ಇಬ್ಭಾಗ ಮಾಡಿದ ಕಾಂಗ್ರೆಸ್ ಈಗ ಮೊಸಳೆ ಕಣ್ಣೀರು ಸುರಿಸುತ್ತಿದೆ. ಆಗ ಆಂಧ್ರ ಪ್ರದೇಶವನ್ನು ಕಾಂಗ್ರೆಸ್, ಬ್ರಿಟಿಷರು ಭಾರತ ವನ್ನು ಇಬ್ಭಾಗ ಮಾಡಿದ್ದಕ್ಕಿಂತ ಕೆಟ್ಟದಾಗಿತ್ತು ಎಂದು ಆರೋಪಿಸಿದರು.

ಕಾಂಗ್ರೆಸ್ ತುಕ್ಡೆ ತುಕ್ಡೆ ಗ್ಯಾಂಗ್ ಜತೆಯಲ್ಲಿದ್ದರೆ, ಡಿಎಂಕೆ ಪ್ರತ್ಯೇಕತಾವಾದದ ಬಗ್ಗೆ ಮಾತನಾಡುತ್ತದೆ. ಆದರೆ, ನಾವು ಇದನ್ನು ಬಲವಾಗಿ ತಿರಸ್ಕರಿಸುತ್ತೇವೆ ಎಂದೂ ಹೇಳಿದರು. ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗುತ್ತದೆ ಎಂಬ ಭಯವನ್ನು ತಳ್ಳಿಹಾಕಿದ ಸೂರ್ಯ, 'ಇದು ತಪ್ಪು ಪ್ರಚಾರ. ದಕ್ಷಿಣ ಭಾರತಕ್ಕೆ ಇದಕ್ಕಿಂತ ಉತ್ತಮ ಒಪ್ಪಂದ ಬೇರೊಂದಿಲ್ಲ' ಎಂದು ಸ್ಪಷ್ಟಪಡಿಸಿದರು. ಈ ವೇಳೆ ಕೇಂದ್ರ ಸರ್ಕಾರ ಕಳೆದ ಹತ್ತು ವರ್ಷಗಳಲ್ಲಿ ದಕ್ಷಿಣ ರಾಜ್ಯಗಳಿಗೆ ನೀಡಿದ ನೆರವು ಶೇ.250ಕ್ಕೂ ಹೆಚ್ಚಾಗಿದೆ ಎಂದು ಹೇಳಿದ ಅವರು, ವಿರೋಧ ಪಕ್ಷಗಳ ಟೀಕೆಗಳನ್ನು ತಳ್ಳಿಹಾಕಿದರು.

ಹೈಕಮಾಂಡ್ ಭೇಟಿಯಾದ ಹಿರಿಯ ಶಾಸಕರ ನಿಯೋಗ

• **ಬೆಂಗಳೂರು:** ಸಚಿವ ಸಂಪುಟ ಪುನರ್ ರಚನೆ ಸಂಬಂಧ ಹೈಕಮಾಂಡ್ ಮೇಲೆ ಒತ್ತಡ ಹೇರಲು ಹೊಸದಿಲ್ಲಿಯಲ್ಲಿ ಬೀಡುಬಿಟ್ಟಿರುವ ಕಾಂಗ್ರೆಸ್‌ನ ಹಿರಿಯ ಶಾಸಕರ ನಿಯೋಗ ಗುರುವಾರ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿದ್ದಾರೆ. ಹೊಸದಿಲ್ಲಿಯಲ್ಲಿ ಬೀಡುಬಿಟ್ಟಿರುವ ಶಾಸಕರಾದ ಟಿ.ಬಿ.ಜಯಚಂದ್ರ, ಅಶೋಕ್ ಪಟ್ಟಣ್, ಕೆ. ಷಡಕ್ಷರಿ, ಜಿ.ಟಿ.ಪಾಟೀಲ್, ಬಿ.ಜಿ.ಶಾಂತನಗೌಡ, ಪುಟ್ಟರಂಗಶೆಟ್ಟಿ, ಹಂಪನಗೌಡ ಬಾದರ್ಲಿ, ಬಿ.ಶಿವಣ್ಣ, ಮಹಂತೇಶ್ ಕೌಜಲಗಿ, ಯಶವಂತರಾಯಗೌಡ ಪಾಟೀಲ್, ಸಿ.ಎಸ್.ನಾಡಗೌಡ ಸೇರಿದಂತೆ ಹಲವರು ಗುರವಾರ ಬೆಳಗ್ಗೆ ರಣದೀಪ್ ಸಿಂಗ್ ಸುರ್ಜೇವಾಲರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಸಚಿವ ಸಂಪುಟ ಪುನರ್ ರಚನೆಯಾಗಬೇಕು. ತಮಗೆ ಅವಕಾಶ ನೀಡಬೇಕು ಎಂಬುದು ಈ ಶಾಸಕರ ಬೇಡಿಕೆಯಾಗಿದೆ. ಅದೇ ಸಮಯದಲ್ಲಿ ರಾಜ್ಯದಲ್ಲಿನ ನಾಯಕತ್ವ ಬದಲಾವಣೆಯಲ್ಲಿನ ಗೊಂದಲಗಳನ್ನು ಬಗೆಹರಿಸುವಂತೆ ಹಿರಿಯ ಶಾಸಕರು ಮನವಿ ಮಾಡಿದ್ದಾರೆ. ಕಳೆದ ಭಾನುವಾರದಿಂದಲೂ ದಿಲ್ಲಿಯಲ್ಲೇ ಬೀಡುಬಿಟ್ಟಿರುವ ಶಾಸಕರು ಸೋಮವಾರ ಎಐಸಿಸಿಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದರು. ಅನಂತರ ರಾಹುಲ್ ಗಾಂಧಿ ಸೇರಿದಂತೆ ಬೇರೆ ಯಾವ ನಾಯಕರೂ 5 ದಿನಗಳಾದರೂ ಲಭ್ಯವಾಗಿರಲಿಲ್ಲ. ಶಾಸಕರ ಒತ್ತಡಕ್ಕೆ ಮಣಿದು ರಣದೀಪ್ ಸಿಂಗ್ ಸುರ್ಜೇವಾಲ ಭೇಟಿಗೆ ಸಮಯ ನೀಡಿತ್ತು. ಕೆ.ಸಿ. ವೇಣುಗೋಪಾಲ್ ಕೇರಳದಿಂದ ದಿಲ್ಲಿಗೆ ಮರಳಿದ್ದರೂ ಕೂಡ ಹಿರಿಯ ಶಾಸಕರ ನಿಯೋಗಕ್ಕೆ ಸಮಯ ನೀಡಲು ಹಿಂದೇಟು ಹಾಕಿದ್ದರು.

598 ಗ್ರಾಪಂಗಳಲ್ಲಿದೆ ಕುಡಿವ ನೀರಿನ ಸಮಸ್ಯೆ

ಪುಟ ೩ ➜ ಈ ವರ್ಷ ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆಗಸ್ಟ್‌ನಲ್ಲಿ ವಾಡಿಕೆ ಮಳೆಯಾಗುವ ಸಾಧ್ಯತೆಯಿದ್ದು, ಸೆಪ್ಟೆಂಬರ್‌ನಲ್ಲಿ ಮಳೆ ಕಡಿಮೆ ನಿರೀಕ್ಷಿಸಲಾಗಿದೆ. ರಾಜ್ಯದ ಐದು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 26 ಜಿಲ್ಲೆಗಳಲ್ಲಿ ಮುಂಗಾರು ಕೊರತೆ ನಿರೀಕ್ಷಿಸಲಾಗಿದ್ದು, ಕುಡಿಯುವ ನೀರಿಗೆ ತೊಂದರೆ ಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಸೂಚಿಸಿದರು.

ತೊಂದರೆಯಾದರೆ ಡಿಸಿಗಳೇ ಹೊಣೆ: ಕುಡಿಯುವ ನೀರಿಗೆ ತೊಂದರೆಯಾದರೆ ಆಯಾ ಡಿಸಿಗಳೇ ಇದಕ್ಕೆ ಹೊಣೆಯಾಗುತ್ತಾರೆ. ಕಂದಾಯ, ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದು ಸಿಎಂ ಸೂಚಿಸಿದರು. ಈ ಬಾರಿ ಏಪ್ರಿಲ್-ಜೂನ್ ಅವಧಿಯಲ್ಲಿ ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿ ದಿನಗಳು ಕಂಡುಬರುವ ಸಾಧ್ಯತೆಯಿದೆ. ಇಂತಹ ಸಂದರ್ಭದಲ್ಲಿ ಯಾವ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಹವಾಮಾನ ಇಲಾಖೆಯ ಮುನ್ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳು ಸೂಚನೆಗಳನ್ನು ನೀಡಬೇಕು ಎಂದರು.

22 ಕೊಳವೆ ಬಾವಿಗಳು ಬಾಡಿಗೆಗೆ: ಪ್ರಸ್ತುತ 27 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, 95 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು ಗುರುತಿಸಲಾಗಿದೆ. ಒಟ್ಟು 145 ವಾರ್ಡ್‌ಗಳಿಗೆ 57 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದ್ದು, ಬಾಡಿಗೆಗೆ 22 ಕೊಳವೆ ಬಾವಿಗಳನ್ನು ಪಡೆಯಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಟ್ಯಾಂಕರ್ ನೀರು ಪೂರೈಕೆ ಮಾಡಬೇಕು. ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯುವುದಕ್ಕೆ ಆದ್ಯತೆ ನೀಡಬೇಕು. ಅಗತ್ಯ ಸಂದರ್ಭದಲ್ಲಿ ಕೊಳವೆ ಬಾವಿ ಕೊರೆಯ ಬಹುದಾಗಿದೆ ಎಂದು ಮುಖ್ಯಮಂತ್ರಿಗಳು ಸೂಚಿಸಿದರು.

ಪ್ರಸ್ತುತ 321.93 ಟಿಎಂಸಿ ನೀರು ಲಭ್ಯ: ರಾಜ್ಯದ ಪ್ರಮುಖ 14 ಜಲಾಶಯಗಳಲ್ಲಿ ಪ್ರಸ್ತುತ 321.93 ಟಿಎಂಸಿ ನೀರು ಲಭ್ಯವಿದ್ದು, ಇದು ಒಟ್ಟು ಸಾಮರ್ಥ್ಯದ ಶೇ.36 ರಷ್ಟಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 330.35 ಟಿಎಂಸಿ ನೀರು ಲಭ್ಯವಿತ್ತು. ಪ್ರಸ್ತುತ ಕುಡಿಯುವ ನೀರಿಗೆ ಸಾಕಷ್ಟು ನೀರು ಜಲಾಶಯಗಳಲ್ಲಿ ಲಭ್ಯವಿದೆ. ಕುಡಿಯುವ ನೀರಿಗಾಗಿ ಜಲಾಶಯಗಳಲ್ಲಿ ನೀರಿನ ಲಭ್ಯತೆಯನ್ನು ಖಾತ್ರಿಪಡಿಸಿ ಮಳೆಗಾಲ ವಿಳಂಬವಾಗಿ ಆರಂಭ ವಾಗುವ ಸಾಧ್ಯತೆಯಿರುವುದರಿಂದ ಜುಲೈ ಮಧ್ಯದವರೆಗೂ ಕುಡಿಯುವ ನೀರಿಗಾಗಿ ಜಲಾಶಯಗಳಲ್ಲಿ ನೀರಿನ ಲಭ್ಯತೆ ಖಾತ್ರಿಪಡಿಸಬೇಕು.

ರೈತರಿಗೆ ರಸಗೊಬ್ಬರ ಲಭ್ಯತೆ ಖಾತ್ರಿಪಡಿಸಿ



ಮಧ್ಯಪ್ರಾಚ್ಯ ಯುದ್ಧ ಪರಿಸ್ಥಿತಿಯಿಂದಾಗಿ ಈ ಬಾರಿ ರಸಗೊಬ್ಬರ ಪೂರೈಕೆಯಲ್ಲಿ ಅಡಚಣೆ ಉಂಟಾಗುವ ಸಾಧ್ಯತೆಯಿದೆ. ವ್ಯಾಪಾರಿಗಳು ರಸಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ದಾಸ್ತಾನು ಇರಿಸುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು. ರೈತರಿಗೆ ಸೂಕ್ತ ಸಮಯದಲ್ಲಿ ರಸಗೊಬ್ಬರ ಲಭ್ಯತೆಯನ್ನು ಖಾತ್ರಿಪಡಿಸಲು ಕ್ರಮ ಕೈಗೊಳ್ಳಬೇಕು. ಯೂರಿಯಾ, ಡಿಎಪಿ ಸರಿಯಾಗಿ ವಿತರಣೆಯಾಗುವಂತೆ ನೋಡಿಕೊಳ್ಳಬೇಕು. ಬೇರೆ ರಾಜ್ಯಗಳಿಗೆ ರಸಗೊಬ್ಬರ ಸಾಗಾಟ ಮಾಡುವುದನ್ನು ನಿಯಂತ್ರಿಸಬೇಕು. ಇದಕ್ಕಾಗಿ ಚೆಕ್ ಪೋಸ್ಟ್‌ಗಳಲ್ಲಿ ತಪಾಸಣೆಯನ್ನು ಬಿಗಿಗೊಳಿಸಬೇಕು ಎಂದು ಮುಖ್ಯಮಂತ್ರಿ ಅವರು ಸೂಚನೆ ನೀಡಿದರು. ಅರ್ಹ ರೈತರಿಗೆ ರಸಗೊಬ್ಬರ ಕೊರತೆಯಾಗದಂತೆ ಎಚ್ಚರಿಕೆ ವಹಿಸಬೇಕು. ಹಾವೇರಿ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಕಳೆದ ವರ್ಷಕ್ಕಿಂತ ಹೆಚ್ಚಿನ ಪ್ರಮಾಣದ ರಸಗೊಬ್ಬರ ಮಾರಾಟವಾಗಿದ್ದು, ಇದಕ್ಕೆ ಕಾರಣವೇನು? ರಸಗೊಬ್ಬರ ಮಾರಾಟದ ಮೇಲೆ ನಿರಂತರ ನಿಗಾವಹಿಸಿ, ಅರ್ಹ ರೈತರಿಗೆ ರಸಗೊಬ್ಬರ ಕೊರತೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ದಕ್ಷಿಣದ ಸ್ಥಾನ 195ಕ್ಕೆ ಏರಿಕೆ

ಪುಟ ೧ ➜ ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯ ಶೇಕಡಾವಾರು ಪ್ರಮಾಣವೂ 23.76ರಿಂದ 23.87ಕ್ಕೆ, ಅಂದರೆ ಸುಮಾರು ಶೇ.24ಕ್ಕೆ ಏರಿಕೆ ಯಾಗಲಿದೆ ಎಂದು ವಿವರಿಸಿದರು. ರಾಜ್ಯವಾರು ವಿವರಗಳನ್ನು ನೀಡಿದ ಶಾ, ಕರ್ನಾಟಕದಲ್ಲಿ ಲೋಕಸಭೆ ಸ್ಥಾನಗಳು 28ರಿಂದ 42ಕ್ಕೆ, ಆಂಧ್ರ



ಪ್ರದೇಶದಲ್ಲಿ 25ರಿಂದ 38ಕ್ಕೆ, ತೆಲಂಗಾಣದಲ್ಲಿ 17ರಿಂದ 26ಕ್ಕೆ, ತ.ನಾಡಿನಲ್ಲಿ 39ರಿಂದ 59ಕ್ಕೆ ಹಾಗೂ ಕೇರಳದಲ್ಲಿ 20ರಿಂದ 30ಕ್ಕೆ ಏರಿಕೆಯಾಗಲಿದೆ ಎಂದರು. ಲೋಕಸಭೆಯ ಒಟ್ಟು ಸ್ಥಾನಗಳನ್ನು ಗರಿಷ್ಠ 850ರವರೆಗೆ ಹೆಚ್ಚಿಸುವ ಅವಕಾಶ ಮಸೂದೆಯಲ್ಲಿ ಉಲ್ಲೇಖವಾಗಿದ್ದರೂ, ವಾಸ್ತವಿಕವಾಗಿ 816 ಸ್ಥಾನಗಳಲ್ಲೇ ನಿಗದಿಯಾಗಲಿದೆ ಎಂದು ಶಾ ಸ್ಪಷ್ಟಪಡಿಸಿದರು.

ಇದು ಇಂದಿನ ಸಂಖ್ಯೆಯಿಗಿಂತ ಶೇ.50ರಷ್ಟು ಹೆಚ್ಚಳವಾಗಿದೆ. ಮಹಿಳಾ ಮೀಸಲಾತಿ ಕುರಿತು ಮಾತನಾಡಿದ ಶಾ, ಶೇ.33 ಮೀಸಲಾತಿ 2029ರ ಲೋಕಸಭೆ ಚುನಾವಣೆಯಿಂದ ಮಾತ್ರ ಜಾರಿಗೆ ಬರುತ್ತದೆ ಎಂದು ಹೇಳಿದರು. ಅದರವರೆಗೆ ನಡೆಯುವ ಎಲ್ಲಾ ಚುನಾವಣೆಗಳು ಇಂದಿನ ವ್ಯವಸ್ಥೆಯಲ್ಲೇ ನಡೆಯಲಿವೆ. 2027ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯೂ ಇದೇ ವ್ಯವಸ್ಥೆಯಡಿ ನಡೆಯಲಿದೆ ಎಂದರು. ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರನ್ನು ಉದ್ದೇಶಿಸಿ ಮಾತನಾಡಿದ ಶಾ, ಉತ್ತರ ಪ್ರದೇಶದಲ್ಲಿ ಗೆಲುವಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ ಎಂದು ವ್ಯಂಗ್ಯವಾಡಿದರು. ಜಾತಿ ಜನಗಣತಿ ಕುರಿತ ಬೇಡಿಕೆ ಬಗ್ಗೆ ಪ್ರತಿಕ್ರಿಯಿಸಿದ ಶಾ, ಸರ್ಕಾರ ಈಗಾಗಲೇ ಜಾತಿಗಣತಿ ನಡೆಸಲು ನಿರ್ಧಾರ ಕೈಗೊಂಡಿದೆ ಎಂದರು.


ಎಚ್‌ಡಿಕೆ ಬೆದರಿಕೆ ಆರೋಪ: ಮಧ್ಯಸ್ಥಿಕೆಗೆ ನ್ಯಾ.ಓಕಾ ನೇಮಕ

• **ಬೆಂಗಳೂರು:** ಲೋಕಾಯುಕ್ತ ಎಡಿಜಿಪಿ ಎಂ.ಚಂದ್ರಶೇಖರ್ ಮತ್ತು ಅವರ ಕುಟುಂಬಕ್ಕೆ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಬೆದರಿಕೆ ಹಾಕಿರುವ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣವನ್ನು, ಸಂಧಾನದ ಮೂಲಕ ಇತ್ಯರ್ಥಪಡಿಸಲು ಮಧ್ಯಸ್ಥಿಕೆದಾರರನ್ನಾಗಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎಸ್.ಓಕಾ ಅವರನ್ನು ಹೈಕೋರ್ಟ್ ಗುರುವಾರ ನೇಮಿಸಿದೆ.

ಲೋಕಾಯುಕ್ತ ಎಡಿಜಿಪಿ ಮತ್ತು ಎಸ್‌ಐಟಿ ಮುಖ್ಯಸ್ಥ ಎಂ.ಚಂದ್ರಶೇಖರ್ ಅವರಿಗೆ ಬೆದರಿಕೆ ಹಾಕಿದ ಆರೋಪದ ಪ್ರಕರಣದಲ್ಲಿ ತಮ್ಮ ವಿರುದ್ಧ ಸಂಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು ಎಂದು ಕೋರಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ಸುರೇಶ್ ಬಾಬು ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾ. ಎಸ್.ಸುನೀಲ್ ದತ್ ಯಾದವ್ ಅವರ ಏಕಸದಸ್ಯ ಪೀಠ ನಡೆ ಸಿತು. ಕಳೆದ ಬಾರಿ ನಡೆದ ವಿಚಾರಣೆಯಲ್ಲಿ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಆಗಿದ್ದ ನ್ಯಾ. ಎ.ಎಸ್. ಓಕಾ ಅವರನ್ನು ಮಧ್ಯಸ್ಥಿಕೆದಾರರನ್ನಾಗಿ ನೇಮಿಸುವುದಾಗಿ ಹೇಳಲಾಗಿತ್ತು. ಇದಕ್ಕೆ ಉಭಯ ಪಕ್ಷಕಾರರು ಒಪ್ಪಿಗೆ ಸೂಚಿಸಿದ್ದಾರೆ. ಹೀಗಾಗಿ, ನ್ಯಾ. ಓಕಾ ಅವರನ್ನು ಮಧ್ಯಸ್ಥಿಕೆದಾರರನ್ನಾಗಿ ನೇಮಿಸಲಾಗಿದೆ. ಗೌರವಧನ ಮತ್ತು ವೆಚ್ಚದ ಕುರಿತು ಪಕ್ಷಕಾರರು ನಿರ್ಧರಿಸಿಕೊಳ್ಳಬಹುದು. ಮಧ್ಯಸ್ಥಿಕೆ ಸ್ಥಳ ಮತ್ತು ಇತರೆ ವಿಚಾರಗಳನ್ನು ಆದೇಶದಲ್ಲಿ ಉಲ್ಲೇಖಿಸಲಾಗುವುದು ಎಂದು ಪೀಠ ಆದೇಶಿಸಿತು.

ಈ ನಡುವೆ ಕುಮಾರಸ್ವಾಮಿ ಪರ ಹಿರಿಯ ವಕೀಲ ಹಸ್ಮತ್ ಪಾಷಾ ಅವರು ಮಧ್ಯಸ್ಥಿಕೆದಾರರು ಉಭಯ ಪಕ್ಷಕಾರರನ್ನು ಪ್ರತ್ಯೇಕವಾಗಿ ಸಂಪರ್ಕಿಸಿ, ಚರ್ಚಿಸಬೇಕು ಎಂದರು. ಇದಕ್ಕೆ ಪೀಠವು ಮಧ್ಯಸ್ಥಿಕೆದಾರರು ಎಲ್ಲವನ್ನೂ ನಿಭಾಯಿಸಲಿದ್ದಾರೆ. ಏತಕ್ಕಾಗಿ ಈ ಪ್ರಕರಣವನ್ನು ಅವರಿಗೆ ಕಳುಹಿಸಲಾಗಿದೆ ಎಂಬುದು ಗೊತ್ತಿರುತ್ತದೆ. ಸ್ಥಳವನ್ನು ಅವರು ನಿಗದಿ ಮಾಡುತ್ತಾರೆ. ಇದು ಮತ್ತೆ ಇಲ್ಲಿಗೆ ಬರುವುದಿಲ್ಲ ಎಂಬ ವಿಶ್ವಾಸ ಹೊಂದೋಣ ಎಂದಿತು.

ಅಹವಾಲು ಸ್ವೀಕಾರ



ಗೃಹ ಕಚೇರಿ ಕೃಷ್ಣದಲ್ಲಿ ಗುರುವಾರ ಸಿಎಂ ಸಿದ್ದರಾಮಯ್ಯ ಅವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ತೃತೀಯ ಭಾಷೆಗೆ ಗ್ರೇಡ್: ಹೈ ತಡೆ

• **ಬೆಂಗಳೂರು:** ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷಾ ವಿಷಯಗಳಿಗೆ ಗ್ರೇಡ್ ನೀಡುವ ಸರ್ಕಾರದ ನಿರ್ಧಾರಕ್ಕೆ ಹೈಕೋರ್ಟ್ ತಡೆ ನೀಡಿದ್ದು, ಅಂಕಗಳನ್ನೇ ನೀಡುವಂತೆ ರಾಜ್ಯ ಸರ್ಕಾರಕ್ಕೆ ಮಹತ್ವದ ನಿರ್ದೇಶನ ನೀಡಿದೆ.



ಸರ್ಕಾರದ ಇತ್ತೀಚಿನ ನಿರ್ಧಾರವನ್ನು ಪ್ರಶ್ನಿಸಿ ಸಹನಾ ಆರ್. ನಾಯ್ಕ್ ಸೇರಿದಂತೆ ಮೂವರು ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ಈ ಆದೇಶ ಹೊರಡಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಆರ್.ವಿ. ನಾಯ್ಕ್, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯು 2024-25ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ, ತೃತೀಯ ಭಾಷೆಗಳಿಗೆ 80 ಅಂಕಗಳ ಲಿಖಿತ ಪರೀಕ್ಷೆ ಮತ್ತು 20 ಅಂಕಗಳ ಆಂತರಿಕ ಮೌಲ್ಯಮಾಪನ ಅಂಕಗಳನ್ನು ನೀಡಬೇಕು. ಆದರೆ, ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲೇ ಸರ್ಕಾರವು ಅಂಕಗಳ ಬದಲಿಗೆ ಗ್ರೇಡ್ ನೀಡಲು ಮುಂದಾಗಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಮುಂದುವರಿದು, ಯುಪಿಎಸ್‌ಸಿ ಸೇರಿದಂತೆ ಕೇಂದ್ರ ಸರ್ಕಾರದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗ್ರೇಡ್‌ಗಳನ್ನು ಪರಿಗಣಿಸದೆ ಅಂಕಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಸರ್ಕಾರದ ಈ ಹಠಾತ್ ಬದಲಾವಣೆಯಿಂದಾಗಿ ರಾಜ್ಯದ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಉದ್ಯೋಗ ಮತ್ತು ಉನ್ನತ ಶಿಕ್ಷಣದ ಸಮಯದಲ್ಲಿ ತೊಂದರೆಯಾಗಲಿದೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಹಳೆಯ ಮಾರ್ಗಸೂಚಿ ಅನುಸರಿಸಿ

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಉತ್ತರಿಸಿ, ಗ್ರೇಡಿಂಗ್ ವ್ಯವಸ್ಥೆಯ ಬಗ್ಗೆ ಸದ್ಯ ಕರಡು ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಿದರು. ವಾದ-ಪ್ರತಿವಾದಗಳನ್ನು ಆಲಿಸಿದ ಪೀಠವು, ಚಾಲ್ತಿಯಲ್ಲಿರುವ ನಿಯಮಗಳು ಮತ್ತು ಹಳೆಯ ಮಾರ್ಗಸೂಚಿಗಳನ್ನೇ ಅನುಸರಿಸಬೇಕು ಎಂದು ಸ್ಪಷ್ಟಪಡಿಸಿತು.

ಕಿರುಸುದ್ದಿ

ಯೋಗೇಶಗೌಡ ಸಾವಿಗೆ ನ್ಯಾಯ ಸಿಕ್ಕಿದೆ: ಅಕ್ಕಮಹಾದೇವಿ

• **ಹುಬ್ಬಳ್ಳಿ:** ನನ್ನ ಸಹೋದರನ(ಯೋಗೇಶಗೌಡ) ಸಾವಿಗೆ ಕೊನೆಗೂ ನ್ಯಾಯ ಸಿಕ್ಕಿದೆ. ಅವನ ಹತ್ಯೆ ಮಾಡಿದ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆಯಾಗಬೇಕು ಎಂದು ಯೋಗೇಶಗೌಡ ಅವರ ಸಹೋದರಿ ಅಕ್ಕಮಹಾದೇವಿ ಆಗ್ರಹಿಸಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ತಾಯಿ ನ್ಯಾಯಾಲಯ ಮೊರೆ ಹೋದರು. ಬಸವರಾಜ ಕೊರವರ ಸೇರಿದಂತೆ ಅನೇಕರು ಸಹಕಾರ ನೀಡಿದ್ದಾರೆ. ಆತನನ್ನು ಮೋಸದಿಂದ ಕೊಲೆ ಮಾಡಿದರು. ಅವಾಗಲೇ ಆತನ ಸಾವಿಗೆ ನ್ಯಾಯ ದೊರೆಯಬೇಕಿತ್ತು ಎಂದರು. ಕೊಲೆ ಮಾಡಿಸಿದ ವ್ಯಕ್ತಿಗೆ ಅಧಿಕಾರವಿದೆ ಎಂಬ ದರ್ಪದಲ್ಲಿದ್ದ. ದೇವರು ಹಾಗೂ ಕಾನೂನು ನಮ್ಮ ಕೈ ಹಿಡಿದಿದೆ. ನ್ಯಾಯ ದೊರಕಿದ್ದು ಸಂತಸ ತರಿಸಿದೆ. ನಮ್ಮ ಸಹೋದರನ ಆತ್ಮಕ್ಕೆ ಶಾಂತಿ ಸಿಕ್ಕಿದೆ. ಬಸವರಾಜ ಮುತಗಿ ಅವಾಗಲೇ ಸ್ವಲ್ಪ ಮಾಹಿತಿ ನೀಡಿದ್ದರೆ ನನ್ನ ಸಹೋದರ ಸಾಯುತ್ತಿರಲಿಲ್ಲ. ಈಗ ನಮ್ಮ ಕುಟುಂಬ ನೆಮ್ಮದಿಯಿಂದ ಇರುತ್ತಿದ್ದು, ಆದರೆ, ಹಲವು ವರ್ಷಗಳ ಬಳಿಕ ನಮ್ಮ ಸಹೋದರನಿಗೆ ನ್ಯಾಯ ದೊರೆತಿದೆ ಎಂದು ಹೇಳಿದರು. ನಮಗೆ ಯಾರ ಜೀವ ಬೆದರಿಕೆ ಇಲ್ಲ. ಹಿಂದೆ ನನ್ನ ಸಹೋದರನಿಗೆ ಹಾಗೂ ಕುಟುಂಬಕ್ಕೆ ಜೀವ ಬೆದರಿಕೆ ಇತ್ತು. ಧೈರ್ಯದಿಂದ ಹೋರಾಟ ಮಾಡಿದ್ದರಿಂದ ನ್ಯಾಯ ದೊರೆತಿದೆ. ನ್ಯಾಯಾಲಯದ ಮೇಲೆ ನಂಬಿಕೆ ಇಟ್ಟಿದ್ದರಿಂದ ನ್ಯಾಯ ಸಿಕ್ಕಿದೆ ಎಂದರು.

ಹೃದಯಾಘಾತದಿಂದ ನ್ಯಾಯಾಧೀಶೆ ಸಾವು

• **ಮಧುಗಿರಿ:** ತಾಲೂಕಿನ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಕಾಂತಮ್ಮ(43) ಅವರು ಹೃದಯಾಘಾತದಿಂದ ಗುರುವಾರ ಬೆಳಗಿನ ಜಾವ ವಸತಿ ಗೃಹದಲ್ಲಿ ಮೃತಪಟ್ಟಿದ್ದಾರೆ. ಪಟ್ಟಣದ ಪಿಡಬ್ಲ್ಯೂಡಿ ಕ್ವಾಟ್ರಸ್‌ನಲ್ಲಿ ಉಪ ವಿಭಾಗ ಅಧಿಕಾರಿಗಳ ನಿವಾಸದ ಮನೆಯಲ್ಲಿ ವಾಸವಾಗಿದ್ದರು.



ಇವರಿಗೆ ಮೊದಲಿನಿಂದಲೂ ಲೋ ಬಿಪಿ ಮತ್ತು ಆರೋಗ್ಯ ಸಮಸ್ಯೆ ಇತ್ತು ಎಂದು ತಿಳಿದು ಬಂದಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಅಂಚೆದೊಡ್ಡಿ ಗ್ರಾಮದವರು. ಅವಿವಾಹಿತರಾಗಿದ್ದ 2025 ಜೂನ್ ತಿಂಗಳಲ್ಲಿ ಮಧುಗಿರಿ ಪಟ್ಟಣದ ಹೆಚ್ಚುವರಿ ಸಿವಿಲ್ ಜಡ್ಜ್ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡಿದ್ದರು. ವಸತಿ ಗೃಹಕ್ಕೆ ಮಧುಗಿರಿಯ ನ್ಯಾಯಾಧೀಶರು ಹಾಗೂ ವಕೀಲರ ಸಂಘದ ಅಧ್ಯಕ್ಷ ಪಿ.ಸಿ. ಕೃಷ್ಣಾ ಭೇಟಿ ನೀಡಿ ಅಂತಿಮ ದರ್ಶನ ಪಡೆದರು.

ಸಾಕಾನೆ ದಾಳಿ: ಕಾವಾಡಿಗ ರಾಜುಗೆ ಗಾಯ

• **ಹಾಸನ:** ತಾಲೂಕಿನ ಬಿಕ್ಕೋಡಿನಲ್ಲಿರುವ ಹತ್ತಾರಿಕೆ ಆನೆ ಬಿಡಾರದಲ್ಲಿ ಗುರುವಾರ ಬೆಳಗ್ಗೆ ಆಹಾರ ನೀಡುತ್ತಿದ್ದ ಕಾವಾಡಿಗ ರಾಜು ಮೇಲೆ ಸಾಕಾನೆ ಸುಗ್ರೀವ ದಾಳಿ ಮಾಡಿದ್ದು ಗಂಭೀರ ಗಾಯಗೊಂಡಿದ್ದಾರೆ. ಆಹಾರ ನೀಡುತ್ತಿದ್ದ ಕಾವಾಡಿಗ ರಾಜು ಅವರ ಎಡಬದಿಯ ಹೊಟ್ಟೆಗೆ ಏಕಾಏಕಿ ಕೋರೆಯಿಂದ ತಿವಿದು ಇದರಿಂದ ಕರುಳು ಹೊರಕ್ಕೆ ಬಂದಿದ್ದು, ಬೇಲೂರು ತಾಲೂಕು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು. ಹೆಚ್ಚಿನ ಹಾಸನದ ಹಿಮ್ಸ್ ಆಸ್ಪತ್ರೆಗೆ ರವಾನಿಸಲಾಯಿತು. ಗಂಭೀರ ಗಾಯಗೊಂಡಿರುವ ಅವರನ್ನು ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ಹಿಮ್ಸ್‌ನ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಾಜು ಅವರನ್ನು ಡಿಸಿಎಫ್ ಸೌರಭ್‌ಕುಮಾರ್ ಭೇಟಿ ನೀಡಿ ಗಾಯಾಳು ಆರೋಗ್ಯ ವಿಚಾರಿಸಿದರು.

ಕಾಡುಗಳ ನಾಶದಿಂದ ಜಾಗತಿಕ ತಾಪಮಾನ ಏರಿಕೆ: ಈಶ್ವರ ಖಂಡ್ರೆ

ಪರಿಸರ ರಕ್ಷಣೆ ಎಲ್ಲರ ಹೊಣೆ

• **ಬೆಂಗಳೂರು:** ಕರ್ನಾಟಕವು ಜಾಗತಿಕ ಜೀವ ವೈವಿಧ್ಯತೆಯ ಅದ್ಭುತ ತಾಣವಾದ ಪಶ್ಚಿಮ ಘಟ್ಟಗಳನ್ನು ಹೊಂದಿದ್ದು, ಹಲವು ಬಗೆಯ ವಿಶಿಷ್ಟ ಸಸ್ಯ ಸಂಕುಲ, ಪ್ರಾಣಿ ಸಂಕುಲ, ಪಕ್ಷಿ ಸಂಕುಲ ಹಾಗೂ ಕೀಟ ಸಂಕುಲಗಳ ತಾಣವಾದ ಈ ಸಮೃದ್ಧ ಕಾನನವನ್ನು ಸಂರಕ್ಷಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟ ಆಯೋಜಿಸಿದ್ದ ಜಾಗತಿಕ ಸುಸ್ಥಿರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಶೃಂಗಸಭೆ 2026ರ ಪೂರ್ವಭಾವಿ ಸಭೆ ಉದ್ದೇಶಿಸಿ ಮಾತನಾಡಿದ ಅವರು, ನಾವಿಂದು, ಜಾಗತಿಕ ತಾಪಮಾನ ಏರಿಕೆ ಹಾಗೂ ಹವಾಮಾನ ಬದಲಾವಣೆಯ ಪರಿಣಾಮಗಳ ಕಾಲಘಟ್ಟದಲ್ಲಿ ನಿಂತಿದ್ದು, ಈ ಸಂದರ್ಭದಲ್ಲಿ ಸುಸ್ಥಿರ ಅಭಿವೃದ್ಧಿ, ಹವಾಮಾನ ಚೇತರಿಕೆ ಮತ್ತು ಸಮಗ್ರ ಪ್ರಗತಿಯ ಕಾರ್ಯತಂತ್ರಕ್ಕೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಾಲಕ ಶಕ್ತಿಯಾಗಿದೆ ಎಂದರು.

ಹಲವು ಜೀವ ನದಿಗಳ ಮೂಲವೇ ಪಶ್ಚಿಮ ಘಟ್ಟವಾಗಿದ್ದು, ಮಳೆಯ ಮಾರುತಗಳನ್ನು ತಡೆದು ದೇಶಾದ್ಯಂತ ವ್ಯಾಪಕವಾಗಿ ಮಳೆ ಸುರಿಸುವಂತೆ ಮಾಡುವ ಪಶ್ಚಿಮ ಘಟ್ಟಗಳನ್ನು ಉದ್ದಿಮೆದಾರರು ಕೇವಲ ಒಂದು ಸಂಪನ್ಮೂಲವಾಗಿ ನೋಡದೆ, ಭವಿಷ್ಯದ ಪೀಳಿಗೆಯ ಜೀವನಾಡಿಯಾಗಿ ನೋಡ ಬೇಕು ಎಂದು ಹೇಳಿದರು.

ಜೀವನವೂ ಇರಬೇಕು, ಜೀವನೋಪಾಯವೂ ಇರಬೇಕು. ಪ್ರಕೃತಿಯೂ ಉಳಿಯಬೇಕು, ಜೀವನವೂ ನಡೆಯಬೇಕು. ಅಭಿವೃದ್ಧಿಯೂ ಆಗಬೇಕು. ಹಸಿರು ಉಳಿಸಿಕೊಂಡು, ಬೆಳೆಸಿಕೊಂಡು ಅಭಿವೃದ್ಧಿ ಸಾಧಿಸುವುದೇ ಸುಸ್ಥಿರತೆಯ ಮಂತ್ರ. ಇದು ಇಂದಿನ ಅಗತ್ಯ ಮತ್ತು ಅನಿವಾರ್ಯ. ಈ ಹಾದಿಯಲ್ಲಿ ನಡೆಯಲು ಸರ್ಕಾರ ಬದ್ಧವಾಗಿದೆ. ಇದಕ್ಕೆ ಉದ್ದಿಮೆಗಳ ಸಹಕಾರ ನೀಡಬೇಕು ಎಂದರು.



ಬೆಂಗಳೂರು ಕಾಂಕ್ರೀಟ್ ಕಾಡು

ಬೆಂಗಳೂರು ನಗರ ಒಂದು ಕಾಲದಲ್ಲಿ ನಿವೃತ್ತರ ಸ್ವರ್ಗ, ಹವಾ ನಿಯಂತ್ರಿತ ನಗರ ಎಂಬ ಖ್ಯಾತಿ ಪಡೆದಿತ್ತು. ಇಂದು ಬೆಂಗಳೂರು ಕೂಡ ಕಾಂಕ್ರೀಟ್ ಕಾಡಾಗುತ್ತಿದ್ದು, ತಾಪಮಾನದ ಏರಿಕೆಯ ಅನುಭವ ಆಗುತ್ತಿದೆ. ಬೆಂಗಳೂರು ನಗರದಲ್ಲಿ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದು, ಧೂಳು, ಹೊಗೆಯಿಂದಾಗಿ ವಾಯುಗುಣಮಟ್ಟವೂ ಕುಸಿಯುತ್ತಿದೆ. ಈ ನಿಟ್ಟಿನಲ್ಲಿ ಬೆಂಗಳೂರು ನಗರ ದೆಹಲಿಯಂತೆ ಮತ್ತೊಂದು ಗ್ಯಾಸ್ ಚೇಂಬರ್ ಆಗದಂತೆ ತಡೆಯಲು ಈಗಿನಿಂದಲೇ ಕ್ರಮ ವಹಿಸುವುದು ಅತ್ಯಗತ್ಯ ಎಂದು ಸಚಿವ ಖಂಡ್ರೆ ಹೇಳಿದರು.

ಅರಣ್ಯೀಕರಣ, ಕ್ಷೀಣಿಸಿದ ಅರಣ್ಯಗಳ ಮರು ಸ್ಥಾಪನೆ ಮತ್ತು ನಗರ ಹಸಿರು ಹೊದಿಕೆ ಹೆಚ್ಚಳದಂತಹ ಉಪಕ್ರಮಗಳಲ್ಲಿ ಕೈಗಾರಿಕೋದ್ಯಮಿಗಳು ಸಕ್ರಿಯವಾಗಿ ಭಾಗವಹಿಸಿದರೆ, ಅದು ಮುಂದಿನ ಪೀಳಿಗೆಗೆ ಶುದ್ಧ ಗಾಳಿಯ, ನಿರ್ಮಲ ಪರಿಸರದ, ಸುಗಮ ಜೀವನವನ್ನು ಖಾತ್ರಿ ಪಡಿಸುತ್ತವೆ. ಸಾರ್ವಜನಿಕರು, ತಮ್ಮ ಮನೆಯ ಸೌಂದರ್ಯಕ್ಕೆ ಅಡ್ಡಿ ಯಾಗುತ್ತದೆ, ಮನೆಯ ಮುಂದೆ ಎಲೆ ಉದುರುತ್ತದೆ ಎಂದು ಮರ, ಗಿಡ ಕಡಿಯದೆ, ಹಸಿರು ಉಳಿಸಬೇಕು. ಇಲ್ಲವಾದರೆ ಮುಂದೆ ಉಸಿರಾಟಕ್ಕೂ ಕಷ್ಟ ಪಡಬೇಕಾಗುತ್ತದೆ ಎಂದು ಹೇಳಿದರು.

ವೇಳೆ ಅರಣ್ಯ ಇಲಾಖೆ 10 ಸಾವಿರ ಸಸಿಗಳನ್ನು ನೀಡುತ್ತಿದ್ದು, ಅವುಗಳನ್ನು ನೆಟ್ಟು ಬೆಳೆಸುವ ಜವಾಬ್ದಾರಿ ವಹಿಸಿಕೊಳ್ಳುವುದಾಗಿ ಎಫ್‌ಕೆಸಿಸಿಐ ಸಿಎಸ್‌ಆರ್ ಮತ್ತು ಸುಸ್ಥಿರತೆ ಸಮಿತಿ ಅಧ್ಯಕ್ಷ ಕೆ. ಕೀರ್ತನ್ ಕುಮಾರ್ ತಿಳಿಸಿದರು. ಕಾರ್ಯಕ್ರಮದಲ್ಲಿ ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಸೇರಿದಂತೆ ಇನ್ನಿತರರಿದ್ದರು.

ಮಹಿಳೆಯರಿಗೆ ಸಮಾನ ಅವಕಾಶ: ಛಲವಾದಿ

• **ಬೆಂಗಳೂರು:** ಮಹಿಳಾ ಮೀಸಲಾತಿ ಮಸೂದೆಗಾಗಿ ಸಂಸತ್ತಿನ ವಿಶೇಷ ಅಧಿವೇಶನ ನಡೆಯುತ್ತಿದ್ದು, ಮಹಿಳೆಯರಿಗೂ ಕಾನೂನು ರಚನೆಗೆ ಸಮಾನ ಅವಕಾಶ ಸಿಗಲಿದೆ. ಇದಕ್ಕೆ ವಿರೋಧಪಕ್ಷ ಕಾಂಗ್ರೆಸ್ ಬೆಂಬಲ ನೀಡಲಿದೆ ಎಂಬ ವಿಶ್ವಾಸವಿದೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಹೇಳಿದರು.



ಬಿಜೆಪಿ ಕಚೇರಿಯಲ್ಲಿ ಗುರುವಾರ ಮಾಧ್ಯಮಗಳ ಜತೆ ಮಾತನಾಡಿ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶದಲ್ಲಿ ಸರ್ವರಿಗೂ ಸಮಾನ ಹಕ್ಕು ಇರಬೇಕು, ಸಮಾನ ಅವಕಾಶ ಸಿಗಬೇಕು ಎಂದು ಬಯಸಿದ್ದರು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂದೂ ಹೇಳಿದ್ದರು. ಇದೀಗ ಪ್ರಧಾನಿ ನರೇಂದ್ರ ಮೋದಿ ಅವರು ಬಾಬಾಸಾಹೇಬರ ಚಿಂತನೆಗೆ ಶಕ್ತಿ ಕೊಟ್ಟಿದ್ದಾರೆ ಎಂದರು.

ಈ ಹಿಂದೆ ಮಹಿಳೆಯರಿಗೆ ಅವಕಾಶ, ಅಧಿಕಾರ ಮತ್ತು ಸಮಾನ ಹಕ್ಕು ಕೊಡುವಲ್ಲಿ ಬಾಯಿ ಮಾತಿನ ಭಾಷಣ ಇತ್ತೇ ಹೊರತು ಹೃದಯವಂತಿಕೆ ಇರಲಿಲ್ಲ. ಆದರೆ ಇಂದು ನಾರಿ ಶಕ್ತಿ ಹೆಸರಿನಲ್ಲಿ ಪ್ರಧಾನಿಯವರು ಸಂಸತ್ತಿನ ವಿಶೇಷ ಅಧಿವೇಶನ ಕರೆದು ಮಸೂದೆ ಮಂಡಿಸುತ್ತಿದ್ದಾರೆ. ಇನ್ನು ಮುಂದೆ ಹೆಣ್ಣು ಮಕ್ಕಳಿಗೆ ಎಲ್ಲ ರೀತಿಯ ಅವಕಾಶಗಳ ದೊರೆಯಲಿವೆ. ನಾರೀಶಕ್ತಿ ಮಸೂದೆ ಮೂಲಕ ಕಾನೂನು ರಚನೆಯಲ್ಲೂ ಮಹಿಳೆಯರಿಗೆ ಸಮಾನ ಅವಕಾಶ ಸಿಗಲಿದೆ ಎಂದರು.

ಸುವರ್ಣಾಕ್ಷರದಲ್ಲಿ ಬರೆದಿಡುವ ದಿನ: ಭಾರತಿ ಶೆಟ್ಟಿ

• **ಬೆಂಗಳೂರು:** ಮಹಿಳಾ ಮೀಸಲಾತಿ ಜಾರಿಯು ನಮಗೆಲ್ಲ ಸಂತಸ ತಂದಿದೆ. ನಾವು ಈ ದಿನವನ್ನು ಸುವರ್ಣಾಕ್ಷರದಲ್ಲಿ ಬರೆದಿಡಬೇಕು ಎಂದು ವಿಧಾನಪರಿಷತ್ ಸದಸ್ಯೆ



ಭಾರತಿ ಶೆಟ್ಟಿ ತಿಳಿಸಿದ್ದಾರೆ. ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನರೇಂದ್ರ ಮೋದಿಜೀ ಅವರ ಪ್ರಯತ್ನದಿಂದ ಮಸೂದೆ ಅನುಮೋದನೆ ಪಡೆದಿದೆ. ಇದು ಅತ್ಯಂತ ಸಂತೋಷ ತಂದಿದೆ. 19 ವರ್ಷದ ಬಳಿಕ ಸಂತಸ, ಖುಷಿ, ನ್ಯಾಯ ಲಭಿಸಿದೆ ಎಂದು ಹೇಳಿದರು. ಮೋದಿಜೀ ಅವರ ಕಾಲದಲ್ಲಿ ಮಹಿಳೆಯರ ಆಡಳಿತಾತ್ಮಕ ಸಬಲೀಕರಣ ನಡೆದಿದೆ. ಅದು ಉತ್ತುಂಗಕ್ಕೆ ಏರಿದೆ. ಬೇಟಿ ಬಚಾವೋ, ಬೇಟಿ ಪಢಾವೋ, ಲಕ್ಪತಿ ಸೇರಿ ಇದೀಗ ಮೀಸಲಾತಿಯ ಅವಕಾಶ ನೀಡಿದ್ದಾರೆ. ಮಹಿಳೆಯರಿಗೆ ರಕ್ಷಣಾ ಕ್ಷೇತ್ರದಲ್ಲೂ ಅವಕಾಶ ಕೊಟ್ಟಿದ್ದಾರೆ ಎಂದು ಪ್ರಶಂಸಿಸಿದರು.

ರಾಯರ ದರ್ಶನಕ್ಕೆ ತೆರಳಿದ್ದ ಭಕ್ತರ ದುರ್ಮರಣ | ಹಲವರಿಗೆ ಗಾಯ

ಭೀಕರ ಅಪಘಾತ: 8 ಮಂದಿ ಸಾವು

• **ರಾಯಚೂರು:** ಬುಲೆರೋ ಹಾಗೂ ಫ್ಲೈಯಾಶ್ ಟ್ಯಾಂಕರ್ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ತೆರಳುತ್ತಿದ್ದ ಹಾಸನ, ಚಿಕ್ಕಮಗಳೂರು ಮೂಲದ ಎಂಟು ಜನರು ಸ್ಥಳದಲ್ಲೇ ಮೃತಪಟ್ಟು, ಎಂಟು ಜನ ಗಂಭೀರ ಗಾಯಗೊಂಡ ಘಟನೆ ಬುಧವಾರ ನಸುಕಿನ ಜಾವ ಸಂಭವಿಸಿದೆ.

ಈ ಘಟನೆ ಆಂಧ್ರದ ಕರ್ನೂಲ್ ಜಿಲ್ಲೆಯ ಮಂತ್ರಾಲಯ ಬಳಿಯ ಚಿಲಕನಡೋಣ ಬಳಿ ಬುಧವಾರ ನಸುಕಿನ ಜಾವ ನಾಲ್ಕು ಗಂಟೆ ಸಮಯದಲ್ಲಿ ಸಂಭವಿಸಿದೆ. ಮೃತರಲ್ಲಿ ಐವರು ಮಹಿಳೆಯರು, ಇಬ್ಬರು ಪುರುಷರು, ಮೂರು ವರ್ಷದ ಒಂದು ಮಗು ಸೇರಿ ಒಟ್ಟು ಎಂಟು ಜನ ಸೇರಿದ್ದಾರೆ. ಮೃತರನ್ನು ಹಾಸನ ಜಿಲ್ಲೆ ಬೇಲೂರು ತಾಲೂಕಿನ ಶೆಟ್ಟಿಗೆರೆಯ ಸುನೀಲ(27), ಲೋಲಾಕ್ಷಿ(38), ಕುಮಾರ್(51), ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲೂಕಿನ ಉಡೇವು ಗ್ರಾಮದವರಾದ ಮೀನಾಕ್ಷಮ್ಮ(54), ಪುಟ್ಟಮ್ಮ(60), ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ನೇಹರು ನಗರದ ಎಸ್.ಕೆ.ವೀಣಾ(25) ಇವರ ಮಗಳು ನಿಶಿತಾ(3) ಹಾಗೂ ಜಯಮ್ಮ ಎಂದು ಗುರುತಿಸಲಾಗಿದೆ.

ಗಂಭಿರವಾಗಿ ಗಾಯಗೊಂಡಿರುವ ಒಂಬತ್ತು ಜನರನ್ನು ಕರ್ನೂಲ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇವರಲ್ಲಿ ನಾಲ್ವರ ಸ್ಥಿತಿ ಗಂಭಿರವಾಗಿದೆ. ಗಾಯಗೊಂಡಿರುವ ಇನ್ನು ನಾಲ್ವರಿಗೆ ಯಮ್ಮಿಗನೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.



ಬುಲೆರೋ ವಾಹನದಲ್ಲಿ ಒಂದೇ ಕುಟುಂಬಕ್ಕೆ ಸೇರಿದ 21 ಜನರು ಮಂತ್ರಾಲಯ ಮಠಕ್ಕೆ ಆಗಮಿಸುತ್ತಿದ್ದರು. ಮಂತ್ರಾಲಯ ಇನ್ನೂ 7 ಕಿಮೀ ದೂರದಲ್ಲಿರುವಾಗ ಚಿಲಕನಡೋಣ ಗ್ರಾಮದ ಬಳಿಯಲ್ಲಿ ಈ ದುರ್ಘಟನೆ ಸಂಭವಿಸಿದೆ. ಘಟನೆ ಬಳಿಕ ಟ್ಯಾಂಕರ್ ಚಾಲಕನನ್ನ ಮಂತ್ರಾಲಯ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಘಟನಾ ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳ ತಂಡ ಹಾಗೂ ಆರ್‌ಟಿಒ ಅಧಿಕಾರಿಗಳ ತಂಡ ಭೇಟಿ ತನಿಖೆ ಕೈಗೊಂಡಿದೆ. ಅತೀ ವೇಗದಿಂದ ವಾಹನ ಚಾಲನೆಯಿಂದ ನಿಯಂತ್ರ ತಪ್ಪಿದ ಹಿನ್ನೆಲೆ ಈ ಅಪಘಾತಕ್ಕೆ ಕಾರಣ ಎಂದು ಪೊಲೀಸರು ಅಂದಾಜಿಸಿದ್ದಾರೆ. ಮಂತ್ರಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಮುಂದಿನ ನಿರ್ಧಾರದ ಬಗ್ಗೆ ಶೀಘ್ರವೇ ಸಭೆ: ಜಮಿಯತ್ ಉಲಮಾ

ಕೈ ವರ್ತನೆಗೆ ಮುಸ್ಲಿಂ ನಾಯಕರ ಬೇಸರ

• **ಬೆಂಗಳೂರು:** ಮುಸ್ಲಿಂ ಮುಖಂಡರ ಮೇಲೆ ಕಾಂಗ್ರೆಸ್ ಪಕ್ಷ ಕ್ರಮ ಕೈಗೊಳ್ಳುತ್ತಿರುವುದು ಬೇಸರವಾಗಿದ್ದು, ನಮಗೆ ಕಾಂಗ್ರೆಸ್ ಹೊರತುಪಡಿಸಿ ಬೇರೆ ಆಯ್ಕೆಗಳಿವೆ. ಸಮುದಾಯದ ಹಿತಾಸಕ್ತಿಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಶೀಘ್ರದಲ್ಲೇ ಸಭೆಗಳನ್ನು ನಡೆಸಿ ಮುಂದಿನ ಕ್ರಮಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಜಮಿಯತ್ ಉಲಮಾ ಎಚ್ಚರಿಕೆ ನೀಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಮಿಯತ್ ಉಲಮಾ ಕರ್ನಾಟಕ ಅಧ್ಯಕ್ಷ ಮುಫ್ತಿ ಇಫ್ತಿಖಾರ್ ಅಹ್ಮದ್ ಖಾಸ್ಮೀ ಮಾ.20ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಲಾಗಿತ್ತು. ಅದೇ ದಿನ ರಾತ್ರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಶಾಸಕ ರಿಜ್ವಾನ್ ಅರ್ಷದ್ ಅವರ ನಿವಾಸದಲ್ಲಿ ಭೇಟಿಯಾಗಿ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಅವಕಾಶ ನೀಡುವಂತೆ ಒತ್ತಾಯಿಸಲಾಗಿತ್ತು ಎಂದು ತಿಳಿಸಿದರು.

ಹಿಂದಿನ ಶಾಸಕ ದಿ.ಶಾಮನೂರು ಶಿವಶಂಕರಪ್ಪ ತಮ್ಮ ಕೊನೆಯ ಚುನಾವಣೆಯಾಗಿ ಘೋಷಿಸಿ, ಮುಂದಿನ ಬಾರಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಅವಕಾಶ ನೀಡುವ ಭರವಸೆ ನೀಡಿದ್ದ ಹಿನ್ನೆಲೆಯಲ್ಲಿ ಈ ಬೇಡಿಕೆ ಇಟ್ಟಿದ್ದೆವು. ದಾವಣಗೆರೆ ಉತ್ತರ ಮತ್ತು ದಕ್ಷಿಣ ಕ್ಷೇತ್ರಗಳಲ್ಲಿ ಅಲ್ಪಸಂಖ್ಯಾತ ಮತದಾರರ ಪ್ರಮಾಣ ಹೆಚ್ಚಿರುವುದರಿಂದ ಕನಿಷ್ಠ ಒಂದು ಕ್ಷೇತ್ರದಲ್ಲಿ ಅವಕಾಶ ನೀಡುವುದು ನ್ಯಾಯಸಮ್ಮತವಾಗುತ್ತಿತ್ತು. ಆದರೆ, ನಂತರ ಕಾಂಗ್ರೆಸ್ ಪಕ್ಷವು ಶಾಮನೂರು ಕುಟುಂಬದ ಅಭ್ಯರ್ಥಿಯನ್ನು ಘೋಷಿಸಿದ ಹಿನ್ನೆಲೆಯಲ್ಲಿ ಸಮುದಾಯದಲ್ಲಿ ನಿರಾಶೆ ಮತ್ತು ಆಘಾತ ಉಂಟಾಗಿದೆ. ಪದೇಪದೇ ಮನವಿಗಳು ನಿರ್ಲಕ್ಷ್ಯವಾಗುತ್ತಿವೆ ಎಂಬ ಅಭಿಪ್ರಾಯ ಸಮುದಾಯದಲ್ಲಿ ಬಲವಾಗುತ್ತಿದೆ ಎಂದು ಖಾಸ್ಮೀ ವಿವರಿಸಿದರು.

ಕಾಂಗ್ರೆಸ್‌ನಿಂದ ಸಮುದಾಯಕ್ಕೆ ನಕಾರಾತ್ಮಕ ಸಂದೇಶ

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿದ್ದ ನಸೀರ್ ಅಹ್ಮದ್ ಅವರನ್ನು ಹುದ್ದೆಯಿಂದ ತೆಗೆದುಹಾಕಿರುವುದು ಮತ್ತು ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅಬ್ದುಲ್ ಜಬ್ಬಾರ್ ಅವರ ರಾಜೀನಾಮೆ ಸಮುದಾಯಕ್ಕೆ ನಕಾರಾತ್ಮಕ ಸಂದೇಶ ನೀಡಿದೆ. ಈ ಕ್ರಮಗಳು ಅಲ್ಪಸಂಖ್ಯಾತರ ಮೇಲಿನ ನಿರ್ಲಕ್ಷ್ಯವನ್ನು ತೋರಿಸುತ್ತವೆ. ಹಾಗೇ, 2024ರ ಲೋಕಸಭಾ ಚುನಾವಣೆಯಲ್ಲಿ ಬಿ.ವೈ. ರಾಘವೇಂದ್ರ ಅವರಿಗೆ ಬೆಂಬಲ ನೀಡಿದ ಆರೋಪ ಸೇರಿದಂತೆ ಕೆಲವು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳದಿರುವುದರ ಬಗ್ಗೆ ಕಾಂಗ್ರೆಸ್ ನಾಯಕತ್ವವನ್ನು ಪ್ರಶ್ನಿಸಲಾಗಿದೆ. ಕಾಂಗ್ರೆಸ್ ಪಕ್ಷವು ನಮ್ಮ ಬೆಂಬಲವನ್ನು ಲಘುವಾಗಿ ತೆಗೆದುಕೊಳ್ಳುತ್ತಿದೆ ಎಂಬ ಭಾವನೆ ಸಮುದಾಯದಲ್ಲಿ ಹೆಚ್ಚುತ್ತಿದೆ, ಮುಂದುವರೆದರೆ ನಮಗೆ ಕಾಂಗ್ರೆಸ್ ಹೊರತುಪಡಿಸಿ ಬೇರೆ ಆಯ್ಕೆಗಳಿವೆ ಎಂದರು.

ಏಪ್ರಿಲ್‌ನಲ್ಲಿ 52, ಮೇನಲ್ಲಿ 62 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಳ

114 ಗ್ರಾಮಗಳಲ್ಲಿ ನೀರಿನ ಅಭಾವ ಸಾಧ್ಯತೆ

▶ **ಜಗದೀಶ ಎಂ.ಗಾಣಿಗೇರ**

ದಿಗಂತ ವಿಶೇಷ

• **ಬಾಗಲಕೋಟೆ:** ತ್ರಿವೇಣಿ ನದಿಗಳು ಹರಿದು ಹೋಗಿರುವ ಬಾಗಲಕೋಟೆ ಜಿಲ್ಲೆಯಲ್ಲಿ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಲಿದ್ದು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ 114 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದೆ.

ಕಳೆದ ಒಂದು ವಾರದಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಭಾರೀ ಬಿಸಿಲಿನ ತಾಪ ಹೆಚ್ಚಾಗಿದೆ. ನದಿಯಲ್ಲಿ ಅಲ್ಲಲ್ಲಿ ಸಂಗ್ರಹವಾಗಿರುವ ನೀರು ಕೂಡ ಬಿಸಿಲಿನ ಹೊಡೆತಕ್ಕೆ ಆವಿಯಾಗುವಂತಹ ಸ್ಥಿತಿ ಬಂದಿದ್ದು ಅಷ್ಟೊಂದು ಬಿಸಿಲು ಜಿಲ್ಲೆಯಲ್ಲಿದೆ. ಬಿಸಿಲಿನ ತಾಪ ಹೆಚ್ಚು ಒಂದು ಕಡೆಯಾದರೆ ಇನ್ನೊಂದೆಡೆ ಕೆಲವೊಂದು ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉಂಟಾಗಿದೆ.

ಜಿಲ್ಲೆಯಲ್ಲಿ ಏಪ್ರಿಲ್ ತಿಂಗಳಲ್ಲಿ 52 ಗ್ರಾಮ ಮೇ ತಿಂಗಳಲ್ಲಿ 62 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದೆ. ನೀರಿನ ಸಮಸ್ಯೆಯಾಗುವುದನ್ನು ತಪ್ಪಿಸಲು ಈಗಾಗಲೇ ಜಿಲ್ಲಾಡಳಿತ 111 ಖಾಸಗಿ ಕೊಳವೆ ಬಾವಿಗಳನ್ನು ಗುರುತಿಸಿದೆ. ಗುಳೇದಗುಡ್ಡ ತಾಲೂಕಿನ ಚಿಮ್ಮಲಗಿ, ಇಳಕಲ್ ತಾಲೂಕಿನ ಚಿಕ್ಕ ಕೊಡಗಲಿ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆ ಉಂಟಾಗಿದ್ದು ಖಾಸಗಿ ಬೋರವೆಲ್ ಮೂಲಕ ನೀರು ಪೂರೈಸಲಾಗುತ್ತಿದೆ. ಬಾದಾಮಿ ತಾಲೂಕಿನಲ್ಲಿ 12, ಗುಳೇದಗುಡ್ಡ ತಾಲೂಕಿನ 4, ಬಾಗಲಕೋಟೆ 2,ಬೀಳಗಿ 7, ಹುನಗುಂದ 4, ಇಳಕಲ್ 5, ಜಮಖಂಡಿ 6, ಮುಧೋಳ 4, ರಬಕವಿ-ಬನಹಟ್ಟಿ ತಾಲೂಕಿನ 8 ಗ್ರಾಮಗಳಲ್ಲಿ ಏಪ್ರಿಲ್ ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸಬಹುದು ಎಂದು ಜಿಲ್ಲಾಡಳಿತ ಅಂದಾಜಿಸಿದೆ.



ಪ್ರಸಕ್ತ ಸಾಲಿನ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದಾದ ಗ್ರಾಮಗಳಿಗೆ ಮುಂಜಾಗ್ರತೆ ಕ್ರಮವಾಗಿ 206 ಕಾಮಗಾರಿಗಳಿಗೆ 611.89 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ಜಿಲ್ಲಾಡಳಿತ ತಯಾರಿಸಿದೆ. ಏ.10ರಂದು ಮಲಪ್ರಭಾ ನದಿಗೆ 1 ಟಿಎಂಸಿ ನೀರನ್ನು ಬಿಡುಗಡೆಗೊಳಿಸಲಾಗಿದೆ. ಏ.15ರಂದು ಶಿವಯೋಗ ಮಂದಿರದ ಬ್ಯಾರೇಜ್‌ಗೆ ತಲುಪಿದ್ದು, ಇನ್ನು 15 ಬ್ಯಾರೇಜ್ ದಾಟಿ ಹಡಗಲಿ ಬ್ಯಾರೇಜ್‌ಗೆ ತಲುಪಲು ಬಾಕಿ ಇರುತ್ತದೆ.

ನೀರು ಬಿಡುಗಡೆಯಿಂದ ಎಲ್ಲ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳು ಚಾಲ್ತಿಯಲ್ಲಿರುತ್ತವೆ. ಚಿಕ್ಕಪಡಸಲಗಿ ಬ್ಯಾರೇಜ್ ಅಡಿಯಲ್ಲಿ 3 ಎಂವಿಎಸ್ ಯೋಜನೆಗಳಿದ್ದು, 27 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಸದಸ್ಯದ ಪರಿಸ್ಥಿತಿಯಲ್ಲಿ ಚಿಕ್ಕಪಡಸಲಗಿ ಬ್ಯಾರೇಜ್‌ನಿಂದ ಏಪ್ರಿಲ್ ಅಂತ್ಯದವರೆಗೆ ಮಾತ್ರ ನೀರು ಸರಬರಾಜು ಮಾಡಬಹುದಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ 196 ಗ್ರಾಮ ಪಂಚಾಯತಿಗಳಿದ್ದು, 597 ಹಳ್ಳಿ ಹಾಗೂ 1006 ಜನವಸತಿಗಳಿವೆ. 39 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಮೂಲಕ ಒಟ್ಟು 402 ಹಳ್ಳಿಗಳಿಗೆ ನೀರು ಪೂರೈಕೆ ಮಾಡಲಾಗುತ್ತಿದೆ.

■ **ಶಶಿಧರ ಕುರೇರ,** ಜಿಪಂ ಸಿಇಒ

ಪೂರೈಕೆ ಕುಸಿತ: ಕಾಫಿ ಬೆಲೆ ಮತ್ತೆ ಏರಿಕೆ

• **ಮಡಿಕೇರಿ:** ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಬ್ರೆಜಿಲ್‌ನಿಂದ ಕಾಫಿ ಸರಬರಾಜು ಕುಸಿತಗೊಂಡಿರುವುದರಿಂದ ಈ ವಾರದಲ್ಲಿ ಕಾಫಿ ಧಾರಣೆ ಮತ್ತೆ ಏರಿಕೆ ಕಂಡಿದೆ. ಇದು ಭಾರತದ ಕಾಫಿ ಉದ್ಯಮದ ಮೇಲೂ ಪರಿಣಾಮ ಬೀರಿದ್ದು, ದೇಶ ಕಾಫಿ ಮಾರುಕಟ್ಟೆಗಳಲ್ಲೂ ಬೆಲೆ ಏರಿಕೆಯ ಲಕ್ಷಣಗಳು ಗೋಚರಿಸಿದೆ.



ಮಾ. ಕೊನೆಯ ವಾರದಿಂದ ನಿಂತ ನೀರಿನಂತಾಗಿದ್ದ ಕಾಫಿ ಮಾರುಕಟ್ಟೆಯಲ್ಲಿ ಇದೀಗ ಸಂಚಲನ ಸೃಷ್ಟಿಯಾಗಿದ್ದು, ಏ.15ರಿಂದ ಕಾಫಿ ವಹಿವಾಟು ಪುನರಾರಂಭಗೊಂಡಿದೆ. ಪರಿಣಾಮವಾಗಿ 50 ಕೆಜಿ ಅರೇಬಿಕಾ ಪಾರ್ಚ್‌ಮೆಂಟ್ ಕಾಫಿ ದರ ಇದೀಗ 23,500ರೂ.ಗಳಿಗೆ ಏರಿಕೆಯಾಗಿದ್ದು, ರೋಬಸ್ಟಾ ಪಾರ್ಚ್‌ಮೆಂಟ್ ದರ 12,400ರೂ.ಗಳಿಗೆ ಜಿಗಿದಿದೆ. ಅರೇಬಿಕಾ ಚೆರಿ 23,500 ರೂ.ಗಳಷ್ಟಿದ್ದು, ರೋಬಸ್ಟಾ ಚೆರಿ 18,100ರೂ.ಗಳಿಗೆ ಮಾರಾಟವಾಗಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.

ಬ್ರೆಜಿಲ್ ರಫ್ತು ಕುಸಿತ: ಬುಧವಾರ ಕಾಫಿ ಬೆಲೆಗಳು ಏರಿಕೆಯಾಗಿದ್ದು, ರೋಬಸ್ಟಾ ಸುಮಾರು ಸುಮಾರು ಒಂದೂವರೆ ವಾರಗಳ ಗರಿಷ್ಠ ಮಟ್ಟ ತಲುಪಿತು. ಬ್ರೆಜಿಲ್‌ನಿಂದ ಸರಬರಾಜು ಕಡಿಮೆಯಾಗುತ್ತಿರುವ ಲಕ್ಷಣಗಳ ನಡುವೆ ಕಾಫಿ ಬೆಲೆಗಳು ಏರಿಕೆಯಾಗಿದ್ದು, ವರದಿಗಳ ಪ್ರಕಾರ ಬ್ರೆಜಿಲ್‌ನ ಮಾರ್ಚ್ ಹಸಿರು ಕಾಫಿ ರಫ್ತು ವರ್ಷದಿಂದ ವರ್ಷಕ್ಕೆ ಶೇ.10ರಷ್ಟು ಕುಸಿದು 2.65 ಮಿಲಿಯನ್ ಬ್ಯಾಗ್‌ಗಳಿಗೆ ಇಳಿದಿವೆ. ಕಳೆದ ಬುಧವಾರ ಬ್ರೆಜಿಲ್ ವಾಣಿಜ್ಯ ಸಚಿವಾಲಯದ ವರದಿ ಪ್ರಕಾರ, ಮಾರ್ಚ್ ಕಾಫಿ ರಫ್ತುಗಳು ಶೇ.31ರಷ್ಟು ಕುಸಿದು 151,000 ಮೆಟ್ರಿಕ್ ಟನ್‌ಗೆ ಇಳಿದಿವೆ. ರೋಬಸ್ಟಾ ಸಂಗ್ರಹಗಳು 1.25 ವರ್ಷದ ಕನಿಷ್ಠ ಮಟ್ಟವಾದ 3,891 ಲಾಟ್‌ಗಳಿಗೆ ಇಳಿದಿರುವುದರಿಂದ ಪ್ರಸ್ತುತ ಸರಬರಾಜಿನ ಕೊರತೆಯೂ ರೋಬಸ್ಟಾ ಬೆಲೆ ಏರಿಕೆಗೆ ಕಾರಣ ಎನ್ನಲಾಗಿದೆ.

ಬ್ರೆಜಿಲ್‌ನಲ್ಲಿ ಸರಾಸರಿಗಿಂತ ಕಡಿಮೆ ಮಳೆಯಾಗಿರುವುದರಿಂದ ಕಾಫಿ ಉತ್ಪಾದನೆಗೆ ಹಾನಿಯಾಗುವ ಸಾಧ್ಯತೆ ಇದೆ. ಇದರಿಂದ ಬೆಲೆಗಳು ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ. ಅಲ್ಲಿನ ವರದಿ ಪ್ರಕಾರ, ಬ್ರೆಜಿಲ್‌ನ ಅತಿ ದೊಡ್ಡ ಅರೇಬಿಕಾ ಬೆಳೆ ಪ್ರದೇಶವಾದ ಮಿನಾಸ್ ಜೆರೈಸ್‌ನಲ್ಲಿ ಕಳೆದ ವಾರ ಕೇವಲ 4.2 ಮಿಮೀ ಮಳೆಯಾಗಿದ್ದು, ಇದು ಸಾಮಾನ್ಯ ಸರಾಸರಿಯ ಕೇವಲ ಶೇ.20 ಮಾತ್ರ ಎಂದು ಹೇಳಲಾಗಿದೆ. ಬ್ರೆಜಿಲ್‌ನಲ್ಲಿ ಕಾಫಿ ಉತ್ಪಾದನೆ ಹಾಗೂ ಹವಾಮಾನ ವೈಪರೀತ್ಯ ಉಂಟಾದರೆ ಇಡೀ ಜಾಗತಿಕ ಮಟ್ಟದಲ್ಲಿ ಕಾಫಿ ಬೆಲೆಯಲ್ಲಿ ಏರಿಳಿತಗಳಾಗುವುದು ಸಹಜವಾಗಿದ್ದು, ಇದೀಗ ಅಲ್ಲಿನ ಕಾಫಿ ಸರಬರಾಜು ಕುಸಿತವಾಗಿರುವುದರಿಂದ ಭಾರತದ ಅದರಲ್ಲೂ ದಕ್ಷಿಣ ಭಾರತದ ಕರ್ನಾಟಕದ ಬೆಳೆಗಾರರಿಗೆ ಬಂಪರ್ ಬೆಲೆ ಸಿಗುವ ನಿರೀಕ್ಷೆಯಿದೆ.

ಸಂಪಾದಕೀಯ

ಮಹಿಳಾ ಮೀಸಲು: ಸಮಾನ ಪ್ರತಿನಿಧಿತ್ವದ ದಿಕ್ಕಿನಲ್ಲಿ ದಿಟ್ಟ ಹೆಜ್ಜೆ

ಲೋಕಸಭೆಯಲ್ಲಿ ಮಂಡನೆಯಾದ ಮಹಿಳಾ ಮೀಸಲು ಕಾಯ್ದೆ ತಿದ್ದುಪಡಿ ಹಾಗೂ ಲೋಕಸಭೆ ಕ್ಷೇತ್ರಗಳ ಪುನರ್‌ವಿಂಗಡಣೆ ಪ್ಯಾನಲ್ ಸ್ಥಾಪನೆಗೆ ಸಂಬಂಧಿಸಿದ ಮೂರು ಮಸೂದೆಗಳು ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಹತ್ವದ ಘಟ್ಟವನ್ನು ಸೂಚಿಸುತ್ತವೆ. ಮಹಿಳೆಯರಿಗೆ ಶೇ.33 ಮೀಸಲಾತಿ ಒದಗಿಸುವ ಮೂಲಕ ರಾಜಕೀಯ ಕ್ಷೇತ್ರದಲ್ಲಿ ಸಮಾನ ಅವಕಾಶ ಕಲ್ಪಿಸುವುದು ಕೇಂದ್ರ ಸರ್ಕಾರದ ದೂರದೃಷ್ಟಿಯ ನಿರ್ಧಾರವೆಂದೇ ಹೇಳಬೇಕು.



ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿವರೆಗೆ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಪ್ರಮಾಣ ಕಡಿಮೆಯಾಗಿಯೇ ಉಳಿದಿರುವುದು ವಾಸ್ತವ. ಈ ಹಿನ್ನೆಲೆಯಲ್ಲಿ ಮೀಸಲಾತಿ ಕೇವಲ ನೀತಿ ಘೋಷಣೆ ಆಗದೆ, ಪರಿಣಾಮಕಾರಿ ಜಾರಿಗೆ ಬರಬೇಕಾದ ಅಗತ್ಯವಿದೆ. ಅದಕ್ಕಾಗಿ ಜನಗಣತಿ ಹಾಗೂ ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಯನ್ನು ಅನಿವಾರ್ಯವಾಗಿ ಜೋಡಿಸಿರುವುದು ಸೂಕ್ತವಾದ ಆಡಳಿತಾತ್ಮಕ ಕ್ರಮ. ಕ್ಷೇತ್ರಗಳ ಪುನರ್ ರಚನೆ ಮೂಲಕ ಸಮಾನ ಜನಸಂಖ್ಯೆಗೆ ಸಮಾನ ಪ್ರತಿನಿಧಿತ್ವ ದೊರಕುವಂತೆ ಮಾಡುವುದು ಪ್ರಜಾಪ್ರಭುತ್ವದ ಮೂಲ ಸಿದ್ಧಾಂತವೇ ಆಗಿದೆ.

ಕ್ಷೇತ್ರ ಪುನರ್‌ವಿಂಗಡಣೆ ಮೂಲಕ ಲೋಕಸಭೆ ಸ್ಥಾನಗಳ ಹೆಚ್ಚಳವೂ ಸಾಧ್ಯವಾಗಲಿದೆ. ಇದರಿಂದ ದೇಶದ ವಿವಿಧ ಭಾಗಗಳಿಗೆ, ವಿಶೇಷವಾಗಿ ಜನಸಂಖ್ಯೆ ಹೆಚ್ಚುತ್ತಿರುವ ಪ್ರದೇಶಗಳಿಗೆ, ಹೆಚ್ಚಿನ ಪ್ರತಿನಿಧಿತ್ವ ದೊರೆಯಲಿದೆ. ಜೊತೆಗೆ ಮಹಿಳೆಯರಿಗೆ ಹೊಸ ಅವಕಾಶಗಳು ಸೃಷ್ಟಿಯಾಗಲಿದ್ದು, ರಾಜಕೀಯದಲ್ಲಿ ಅವರ ಪಾತ್ರ ಮತ್ತಷ್ಟು ಬಲಿಷ್ಠವಾಗಲಿದೆ.

ದಕ್ಷಿಣ ರಾಜ್ಯಗಳ ಆತಂಕಗಳನ್ನೂ ನಿರ್ಲಕ್ಷಿಸದೇ, ಸಮತೋಲನ ಕಾಪಾಡುವ ರೀತಿಯಲ್ಲಿ ಈ ಪ್ರಕ್ರಿಯೆ ಮುಂದುವರಿಯಲಿದೆ ಎಂಬ ವಿಶ್ವಾಸವಿದೆ. ಕೇಂದ್ರ ಸರ್ಕಾರವು ಸಮಗ್ರ ಅಭಿವೃದ್ಧಿ ಮತ್ತು ಸಮಾನತೆ ಎಂಬ ದ್ವಿಕೋನ ಉದ್ದೇಶಗಳನ್ನು ಹೊಂದಿ ಈ ಮಸೂದೆಗಳನ್ನು ಮುಂದಿಟ್ಟಿದೆ.

ಈಗಾಗಲೇ ಪ್ರಧಾನ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗುವುದಿಲ್ಲ ಎಂದಿದ್ದಾರೆ. ಜತೆಗೆ, ಎಲ್ಲರ ಒತ್ತಾಯದಂತೆ ಜನಸಂಖ್ಯೆ ಆಧರಿತವಾಗಿ ಪುನರ್‌ವಿಂಗಡಣೆ ಮಾಡದೇ, ಶೇ.50ರ ಆಧಾರದಲ್ಲಿ ಹೆಚ್ಚಳ ಮಾಡಲಾಗುತ್ತಿದೆ. ಇದರಿಂದ ಎಲ್ಲ ರಾಜ್ಯಗಳಿಗೂ ಸಮಾನ ನ್ಯಾಯ ಸಿಗಲಿದೆ. ಕರ್ನಾಟಕದಲ್ಲೂ 42 ಸ್ಥಾನಗಳಿಗೆ ಏರಿಕೆಯಾಗಲಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಅಭಯ ನೀಡಿರುವುದರಿಂದ ಈ ಮಸೂದೆಗಳ ಬಗ್ಗೆ ರಾಜಕೀಯವಾಗಿ ಯೋಚನೆ ಮಾಡದೆ, ಮಹಿಳೆಯರ ಹಿತದೃಷ್ಟಿಯಿಂದ ಯೋಚಿಸಿ ಮುಂದಡಿ ಇಡಬೇಕಾಗಿದೆ. ಈಗಾಗಲೇ ಹಿಂದೆ ಒಂದಿಲ್ಲೊಂದು ಕಾರಣಗಳಿಂದಾಗಿ ಈ ಮಹಿಳಾ ಮಸೂದೆ ಜಾರಿಯಾಗದೇ ಉಳಿದಿತ್ತು. ಈಗ ಐತಿಹಾಸಿಕ ನಿರ್ಧಾರ ತೆಗೆದುಕೊಳ್ಳುವ ಸಮಯ ಬಂದಿರುವುದರಿಂದ ಈಗಲಾದರೂ ಅತ್ತ ಹೆಜ್ಜೆ ಇಡಬೇಕಾಗಿದೆ. ಒಟ್ಟಿನಲ್ಲಿ, ಮಹಿಳಾ ಮೀಸಲು ಮತ್ತು ಡಿಲಿಮಿಟೇಷನ್ ಮಸೂದೆಗಳು ಕೇವಲ ಕಾನೂನು ಬದಲಾವಣೆಗಳಲ್ಲ; ಅವು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ದೇಶವನ್ನು ಮುಂದಕ್ಕೆ ಕೊಂಡೊಯ್ಯುವ ದಿಟ್ಟ ಹೆಜ್ಜೆಗಳಾಗಿವೆ. ಭಾರತದ ಪ್ರಜಾಪ್ರಭುತ್ವವನ್ನು ಮತ್ತಷ್ಟು ಒಳಗೊಂಡ ಮತ್ತು ಸಮತೋಲನಯುತವಾಗಿಸುವ ಈ ಪ್ರಯತ್ನ ಸ್ವಾಗತಾರ್ಹ.

ಅಮೆರಿಕದ ದ್ವಂದ್ವ ನಿಲುವೇ ಬಿಕ್ಕಟ್ಟುಗಳಿಗೆ ಕಾರಣ

▸ಸುಬ್ರಹ್ಮಣ್ಯ ಎನ್.

ಪಾಕಿಸ್ತಾನದಲ್ಲಿ ನಡೆದ ಇರಾನ್ – ಅಮೆರಿಕ ಶಾಂತಿ ಮಾತುಕತೆ ಮುರಿದುಬಿದ್ದಿದೆ. ಇರಾನ್ ಮತ್ತು ಅಮೆರಿಕಗಳು ಒಮ್ಮತಕ್ಕೆ ಬರಲು ವಿಫಲಗೊಂಡಿವೆ. ಇದು ದುರದೃಷ್ಟಕರ ನಿಜ. ಆದರೆ ಆಶ್ಚರ್ಯಕರವಲ್ಲ. ಮಾತುಕತೆಯು ಮುರಿದು ಬೀಳುವುದೆಂಬ ಸಂಕೇತ ಆರಂಭದಿಂದಲೇ ಇತ್ತು. ಏಕೆಂದರೆ ಸಂಧಾನ ಪ್ರಕ್ರಿಯೆ ಏರ್ಪಟ್ಟಿದ್ದೇ ಅವಸರದಲ್ಲಿ. ಅಮೆರಿಕವು ಯುದ್ಧ ನಿಲ್ಲಿಸುವುದಕ್ಕಿಂತಲೂ ಮುಖ್ಯವಾಗಿ ತನ್ನ ಮುಖವುಳಿಸಿಕೊಳ್ಳಲು ಈ ಮಾತುಕತೆಗೆ ಮುಂದಾಗಿತ್ತು. ನರೇಟಿವ್ ಕದನದಲ್ಲಿ ಇರಾನ್ ಮೇಲುಗೈ ಸಾಧಿಸುತ್ತಿರುವುದನ್ನು ಕಂಡ ಟ್ರಂಪ್ ಅದಕ್ಕಾಗಿ ಶಾಂತಿ ಮಾತುಕತೆಯ ನಾಟಕವಾಡಿದ್ದರು. ತನ್ನ ಧಣಿಯಾದ ಅಮೆರಿಕದ ಅಪ್ಪಣೆಯಂತೆ ಪಾಕಿಸ್ತಾನವು ಮಾತುಕತೆ ಏರ್ಪಡಿಸಲು ಮುಂದಾಗಿತ್ತು.

ಇಲ್ಲೀಗ ಮುಖ್ಯ ವಿಷಯವಿರುವುದು ಮಾತುಕತೆ ಮುರಿದು ಬಿದ್ದಿರುವುದಲ್ಲ. ವಿಶ್ವದಲ್ಲಿ 'ಜಿಹಾದ್ ಫ್ಯಾಕ್ಟರಿ' ಎಂದು ಕರೆಯಲ್ಪಡುವ ದೇಶವೊಂದು ಶಾಂತಿ ಮಾತುಕತೆಗೆ ತಾಣವಾದುದೇ ಅತ್ಯಂತ ದೊಡ್ಡ ವ್ಯಂಗ್ಯ. ಶಾಂತಿ ಮಾತುಕತೆ ನಡೆದ ಸಮಯ ಸಂದರ್ಭವಂತೂ ಇನ್ನೂ ವಿಪರ್ಯಾಸದ್ದು. ಏಕೆಂದರೆ ಕೆಲವೇ ದಿನಗಳ ಮೊದಲು ಪಾಕಿಸ್ತಾನದ ವಿದೇಶಾಂಗ ಸಚಿವ ಖ್ವಾಜಾ ಆಸೀಫ್ ರವರು, 'ಇಸ್ರೇಲ್ ಮನುಕುಲಕ್ಕೆ ಒಂದು ಶಾಪ ಹಾಗೂ ಕ್ಯಾನ್ಸರ್" ಎಂದು ಬಣ್ಣಿಸಿದ್ದರು. ಅದಕ್ಕೂ ಮುನ್ನ ಇದೇ ಆಸೀಫ್ ಕೊಲ್ಕತ್ತಾ ನಗರದ ಮೇಲೆ ಬಾಂಬ್ ಹಾಕುವುದಾಗಿ ಬೆದರಿಸಿದ್ದರು.

ಇದು ಖ್ವಾಜಾ ಆಸೀಫ್ ಒಬ್ಬರದೇ ಮನಸ್ಥಿತಿಯಲ್ಲ. ಪಾಕಿಸ್ತಾನದ ಎಲ್ಲರ ಮನಸ್ಥಿತಿಯೂ ಅಂತಹುದೇ. ಹಿಂದೊಮ್ಮೆ ಪಾಕಿಸ್ತಾನದ ವಿದೇಶಾಂಗ ಸಚಿವರಲ್ಲಿ ದೇವರಲ್ಲಿ ನಿಮ್ಮ ಮೆಚ್ಚಿನ ಕೋರಿಕೆ ಯಾವುದು ಎಂದು ಕೇಳಿದಾಗ ಆತ " ದೇವರು ನನ್ನ ಕೋರಿಕೆ ಈಡೇರಿಸುವುದಾದರೆ, ನಾನು ನನ್ನ ಎರಡು ಕೈಗಳಲ್ಲಿ ಎರಡು ಪರಮಾಣು ಬಾಂಬ್‌ಗಳನ್ನು ನೀಡುವಂತೆ ಕೋರುತ್ತೇನೆ. ಅದರಲ್ಲಿ ಒಂದನ್ನು ಮುಂಬೈ ಮೇಲೆ ಹಾಗೂ ಇನ್ನೊಂದನ್ನು ದಿಲ್ಲಿ ಮೇಲೆ ಹಾಕುತ್ತೇನೆ" ಎಂದು ನುಡಿದಿದ್ದ.

ಪಾಶ್ಚಿಮಾತ್ಯ ದೇಶಗಳು, ಅದರಲ್ಲಿಯೂ ಮುಖ್ಯವಾಗಿ ಅಮೆರಿಕವು ಪಾಕಿಸ್ತಾನದ ಮುಖಂಡರ ಇಂತಹ ಹೇಳಿಕೆಗಳನ್ನೆಲ್ಲಾ ಪರಿಗಣನೆಗೆ ತೆಗೆದುಕೊಳ್ಳದಿರುವುದು ಪರಮಾಶ್ಚರ್ಯ. ಏಕೆಂದರೆ ಇವೇನು ಯಾವುದೋ ಭಯೋತ್ಪಾದಕ ಸಂಘಟನೆಗಳ ಮಾತುಗಳಲ್ಲ. ಪಾಕಿಸ್ತಾನದ ರಾಜಕೀಯ ಮುಖಂಡರಿಂದ, ಸರಕಾರದಿಂದ ಬರುವ ಹೇಳಿಕೆಗಳಿವು. ಇಂಥ ಹೇಳಿಕೆ ನೀಡುವುದರಲ್ಲಿ ಅವರಿಗೆ ಯಾವುದೇ ಮುಜುಗರವೂ, ಹಿಂಜರಿಕೆಯೂ ಇಲ್ಲ. ಹಾಗಿದ್ದರೆ ಪಾಕಿಸ್ತಾನದಲ್ಲಿ ಮುಖ್ಯವಾಹಿನಿಯಲ್ಲಿ ಇರುವವರಾದರೂ ಯಾರು? ಇಲ್ಲಿ ನಿಮಗೆ ಯಾವುದೇ ಭೇದವೇ ಕಾಣುವುದಿಲ್ಲ. ಮುಖ್ಯವಾಹಿನಿ ಮತ್ತು ಭಯೋತ್ಪಾದನೆಯ ಹಾದಿ ತುಳಿದವರು ಎಲ್ಲರೂ ಒಂದೇ ಆಗಿದ್ದಾರೆ.

ಹಾಗಿದ್ದರೆ, ಪಾಕಿಸ್ತಾನದ ಜಿಹಾದಿ ಅಸ್ಮಿತೆಯು 'ಉದಾರವಾದಿ' (ಲಿಬರಲ್) ಪಾಶ್ಚಿಮಾತ್ಯ ದೇಶಗಳಿಗೆ ಸಮ್ಮತವಾದುದಾದರೂ ಹೇಗೆ?



ಇದಕ್ಕೆ ಉತ್ತರ ಪಾಕಿಸ್ತಾನ ಬೆಳೆದು ಬಂದ ರೀತಿಯಲ್ಲಿದೆ. 1947ರಲ್ಲಿ ಪಾಕಿಸ್ತಾನವು ರೂಪುಗೊಂಡುದೇ ಇಸ್ಲಾಮಿಕ್ ಮೂಲಭೂತವಾದಿ ಮಾನಸಿಕತೆ ಮತ್ತು ಬ್ರಿಟಿಷ್ – ಅಮೆರಿಕನ್ ಭೌರಾಜಕೀಯ ಚಿತಾವಣೆಯಿಂದ. ಮೇಲ್ನೋಟಕ್ಕೆ ಪಾಕಿಸ್ತಾನವು ಆಧುನಿಕವೂ, ಮೂಲಭೂತವಾದವೂ ಜತೆಯಾಗಿ ಮಿಶ್ರಣಗೊಂಡಂತಿತ್ತು. ಈ ವೈರುಧ್ಯವನ್ನು ಪರಿಹರಿಸಿಕೊಳ್ಳುವ ಬದಲಿಗೆ ಪಾಕಿಸ್ತಾನವು ಅದನ್ನೇ ಸಾಂಸ್ಥಿಕಗೊಳಿಸುತ್ತಾ ಬಂತು. ಹೊರಗಿನಿಂದ ಆಧುನಿಕವಾಗಿ ಕಂಡರೂ ಒಳಗಿನಿಂದ ಪಾಕಿಸ್ತಾನವು ಹೆಚ್ಚು ಮೂಲಭೂತವಾದಿ ಯಾಗಿ ಮತ್ತು ಆಕ್ರಮಣಕಾರಿಯಾಗಿ ಬೆಳೆಯುತ್ತಾ ಬಂತು.

ಪಾಕಿಸ್ತಾನದ ಈ ದ್ವಂದ್ವ ನೀತಿಯನ್ನು ಪಾಶ್ಚಿಮಾತ್ಯ ದೇಶಗಳು ಅದರಲ್ಲೂ ಮುಖ್ಯವಾಗಿ ಅಮೆರಿಕವು ಲಾಗಾಯ್ತಿನಿಂದಲೂ ಬೆಂಬಲಿಸುತ್ತಾ ಬಂದಿದೆ. ಖ್ಯಾತ ಲೇಖಕ ಬ್ರೂಸ್ ರೀಡೆಲ್ ಬರೆಯುತ್ತಾರೆ " ಪ್ರಜಾಪ್ರಭುತ್ವದ ಚಾಂಪ್ಯನ್ ಎಂದು ಕರೆಸಿಕೊಳ್ಳುವ ಅಮೆರಿಕವು ನಿರಂತರವಾಗಿ ಪಾಕಿಸ್ತಾನದ ಸರ್ವಾಧಿಕಾರಿಗಳನ್ನು ಬೆಂಬಲಿಸಿಕೊಂಡು ಬಂದಿದೆ. ಪಾಕಿಸ್ತಾನವು ಭಾರತದ ವಿರುದ್ಧ ಯುದ್ಧ ಸಾರಿದರೂ , ಒಳಗಿನಿಂದ ಜಿಹಾದ್ ಮಾನಸಿಕತೆಯನ್ನು ಬೆಳೆಸಿಕೊಳ್ಳುತ್ತಾ ಬಂದರೂ ಅಮೆರಿಕವು ಪಾಕಿಸ್ತಾನದ ಬೆಂಬಲಕ್ಕೇ ನಿಂತಿದೆ. ಆಯೂಬ್‌ಖಾನ್‌ನಿಂದ ಹಿಡಿದು ಜಿಯಾ ಉಲ್ ಹಕ್, ಮುಷರಫ್ ತನಕ ಎಲ್ಲಾ ನಿರಂಕುಶಾಧಿಕಾರಿಗಳು ಅಮೆರಿಕದ ಬೆಂಬಲ ಪಡೆಯುತ್ತಾ ಬಂದಿದ್ದಾರೆ. ಕೆನಡಿ ಪಾಕಿಸ್ತಾನದ ಆಯೂಬ್ ಖಾನ್‌ಗೇ ಡಿನ್ನರ್ ಪಾರ್ಟಿ ಏರ್ಪಡಿಸಿದ್ದರು. ಪಾಕಿಸ್ತಾನವು ಸಾವಿರಾರು ಬಾಂಗ್ಲಾದೇಶೀಯರನ್ನು ಅಮಾನುಷವಾಗಿ ಹತ್ಯೆಗೈದಾಗ ರಿಚರ್ಡ್ ನಿಕ್ಸನ್ ಕಣ್ಣು ಮುಚ್ಚಿ ಕೂತಿದ್ದರು. ಜಿಯಾ ಉಲ್ ಹಕ್ ಭಯೋತ್ಪಾದಕ ಸಂಘಟನೆಗಳನ್ನು ಬೆಳೆಸಿದರೂ ರೊನಾಲ್ಡ್ ರೇಗನ್ ಅವರಿಗೆ ಬೆಂಬಲವಾಗಿ ನಿಂತಿದ್ದರು. ಮುಷರಫ್ ತಾಲಿಬಾನ್ ಬೆಳೆಸಿದಾಗ ಜಾರ್ಜ್ ಬುಶ್ ಕಂಡೂ ಕಾಣದಂತೆ ಕೂತರು. ಅದೇ ತಾಲಿಬಾನ್ ಬಳಿಕ ಅಮೆರಿಕನ್ನರನ್ನೇ ಕೊಲ್ಲತೊಡಗಿತು"

ಇಂತಿರುವಾಗ ಡೊನಾಲ್ಡ್ ಟ್ರಂಪ್‌ರವರು ಪಾಕಿಸ್ತಾನಿ ಸೇನಾ ಮುಖಂಡ ಅಸೀಮ್ ಮುನೀರ್‌ನನ್ನು 'ನನ್ನ ಮೆಚ್ಚಿನ ಫೀಲ್ಡ್ ಮಾರ್ಷಲ್' ಎಂದು ಕರೆಯುವುದು ಅಚ್ಚರಿ ತರುವುದಿಲ್ಲ. ಇವೆಲ್ಲ ಪಾಕಿಸ್ತಾನದ ಆಡಳಿತದಲ್ಲಿ

> ವಿಶ್ವದಲ್ಲಿ 'ಜಿಹಾದ್ ಫ್ಯಾಕ್ಟರಿ' ಎಂದು ಕರೆಯಲ್ಪಡುವ ದೇಶವೊಂದು ಶಾಂತಿ ಮಾತುಕತೆಗೆ ತಾಣವಾದುದೇ ಅತ್ಯಂತ ದೊಡ್ಡ ವ್ಯಂಗ್ಯ.

ಒಂದು ನಂಬಿಕೆಯನ್ನು ಗಟ್ಟಿಗೊಳಿಸಿದೆ. ತಾವು ಎಷ್ಟೇ ಭಯೋತ್ಪಾದಕ ಕೃತ್ಯಗಳಿಗೆ ಬೆಂಬಲ ನೀಡಿದರೂ, ಎಷ್ಟೇ ಜಿಹಾದಿ ಮಾನಸಿಕತೆಯನ್ನು ಪ್ರಕಟಿಸಿದರೂ ಪಾಶ್ಚಿಮಾತ್ಯ ಜಗತ್ತು ತಮ್ಮನ್ನು ಒಪ್ಪಿಕೊಳ್ಳುತ್ತದೆ ಎಂಬುದಾಗಿ.

ಹಾಗಾಗಿ ಉದಾರವಾದಿ ಪಾಕಿಸ್ತಾನಿಯರು ಕೂಡಾ ಕಾಲಕ್ರಮೇಣ ಉಗ್ರವಾದಿ ಮಾನಸಿಕತೆ ಬೆಳೆಸಿಕೊಂಡರು. ಮಹಮ್ಮದ್ ಅಲಿ ಜಿನ್ನಾ ಕೂಡಾ ಒಂದು ಕಾಲದಲ್ಲಿ ಹಿಂದು–ಮುಸ್ಲಿಂ ಏಕತೆಯ ಸರದಾರ ಎಂದು ಬಣ್ಣಿಸಲ್ಪಟ್ಟಿದ್ದ. ಆದರೆ ಹಿಂದುಗಳನ್ನು ಪಾಕಿಸ್ತಾನದಲ್ಲಿ ಉಳಿಸಿಕೊಳ್ಳಲು ಆತ ಪಟ್ಟ ಪ್ರಯತ್ನವು ಆತನ ಕಾರ್ಯತಂತ್ರದ ಒಂದು ಭಾಗವಾಗಿತ್ತೇ ಹೊರತು ಪ್ರಾಮಾಣಿಕವಾದುದಾಗಿರಲಿಲ್ಲ. ಭಾರತದಲ್ಲಿರುವ ಮುಸ್ಲಿಮರಿಗೆ ಸುರಕ್ಷೆ ಒದಗಿಸುವುದು ಆತನ ಈ ನಡೆಯ ಹಿಂದಿನ ಉದ್ದೇಶವಾಗಿತ್ತು.

ಪಾಕಿಸ್ತಾನದ ಆಡಳಿತಗಾರರೆಲ್ಲ ಜಿಹಾದಿ ಆಯಾಮವನ್ನು ಬೆಂಬಲಿಸಿಕೊಂಡೇ ಬಂದವರು. ಜುಲ್ಫಿಕರ್ ಅಲಿ ಭುಟ್ಟೋ ಕೂಡಾ ತಮ್ಮ ಸಮಾಜವಾದಿ ಸಿದ್ಧಾಂತದ ಜತೆಗೇ ಪಾಕಿಸ್ತಾನದ ಇಸ್ಲಾಮೀಕರಣವನ್ನು ಬಲಗೊಳಿಸಿದ್ದರು. ಬೆನಜೀರ್ ಭುಟ್ಟೋ ಲಿಬರಲ್ ನಾಯಕಿ ಎಂಬ ಮುಖವಾಡ ಹಾಕಿಕೊಂಡಿದ್ದರೂ ಕಾಶ್ಮೀರಕ್ಕೆ ಸಂಬಂಧಿಸಿ ಜಿಹಾದನ್ನು ಪ್ರೋತ್ಸಾಹಿಸಿದ್ದರು ಹಾಗೂ ತಾಲಿಬಾನ್ ಬೆಳೆಯಲೂ ಅವರೇ ಕಾರಣರಾಗಿದ್ದರು. ನವಾಜ್ ಶರೀಫ್ ಆಡಳಿತದ ಅವಧಿಯಲ್ಲಿ ಮುಂಬೈ ಸ್ಫೋಟಗಳು ಮತ್ತು ಕಾರ್ಗಿಲ್ ಆತಿಕ್ರಮಣ ನಡೆದಿತ್ತು.ಪಾಕಿಸ್ತಾನದ ಈಗಿನ ಸೇನಾ ಮುಖ್ಯಸ್ಥ ಮುನೀರ್ ಕೂಡಾ ಇದೇ ರೀತಿಯ ಮಾನಸಿಕತೆಯವನು.

ಪಾಕಿಸ್ತಾನವು ಜಿಹಾದಿ ಫ್ಯಾಕ್ಟರಿಯಾಗಿರುವುದರ ಜತೆಗೆ ಪಾಶ್ಚಿಮಾತ್ಯ ದೇಶಗಳ ಮಿತ್ರನೂ ಆಗಿರುವುದು ಭಾರತದ ಪಾಲಿಗೆ ಎರಡಲಗಿನ ಕತ್ತಿಯಂತಾಗಿದೆ. ಭಾರತವು ಪಾಶ್ಚಿಮಾತ್ಯ ದೇಶಗಳ ಸ್ನೇಹವುಳಿಸಿಕೊಂಡೇ ಇತ್ತ ಪಾಕಿಸ್ತಾನದ ವಿರುದ್ಧ ಹೋರಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪಾಕಿಸ್ತಾನವನ್ನು ಭಾರತವು ದುರ್ಬಲಗೊಳಿಸಲು ಯತ್ನಿಸಿದರೂ ಅಮೆರಿಕ ಅದನ್ನು ಮತ್ತೆ ಬಲಗೊಳಿಸುವ ಯತ್ನಕ್ಕೆ ಕೈಹಾಕುತ್ತದೆ.

ಇವೆಲ್ಲದರ ಹಿನ್ನೆಲೆಯಲ್ಲಿ ನೋಡುವಾಗ, ಪಾಕಿಸ್ತಾನದಲ್ಲಿ ನಡೆದ ಇರಾನ್ –ಅಮೆರಿಕ ಶಾಂತಿ ಮಾತುಕತೆ ಮುರಿದುಬೀಳುವುದು ಅನಿವಾರ್ಯವಾಗಿತ್ತು. ಆದರೆ ಈ ಮಾತುಕತೆಯ ವೈಫಲ್ಯದ ನಿಜವಾದ ಕಾರಣ ಬೇರೆಡೆಯಲ್ಲಿದೆ. ಮುಖ್ಯವಾಗಿ ಅಮೆರಿಕದ ದ್ವಂದ್ವ ನಿಲುವು ಇದಕ್ಕೆ ಕಾರಣ. ಅಮೆರಿಕದ ಮಾತಿನಲ್ಲೊಂದು ಹಾಗೂ ಕೃತಿಯಲ್ಲೊಂದು ವರ್ತನೆಯು ಸಮಸ್ಯೆ ಪರಿಹಾರವಾಗಲು ಅವಕಾಶ ನೀಡುವುದಿಲ್ಲ. ಈ ವರ್ತನೆಯನ್ನು ನಿಲ್ಲಿಸದ ಹೊರತು ಅಮೆರಿಕವು ಸ್ವಂತ ಗೋಲು ಹೊಡೆಯುತ್ತಲೇ ಇರಬೇಕಾಗುತ್ತದೆ. ಪಾಕಿಸ್ತಾನವು ಪದೇಪದೇ ಅದರ ಲಾಭ ಪಡೆಯುತ್ತಲೇ ಇರುತ್ತದೆ. ಅಂತಿಮವಾಗಿ ಇದು ಪಾಶ್ಚಿಮಾತ್ಯ ದೇಶಗಳ ಮತ್ತು ಅಮೆರಿಕದ ವಿಶ್ವಾಸಾರ್ಹತೆಗೇ ಕುಂದು ತರಲಿದೆ.

ಮಹಿಳಾ ಸಬಲೀಕರಣದತ್ತ ದೃಷ್ಟಿ–ವಿಕಸಿತ ಭಾರತಕ್ಕೆ ನಾರೀಶಕ್ತಿ

▸ಶುಭಾ ಹೆಗಡೆ ಗಿರಣಿಮನೆ

ಭಾರತವು ಅಭಿವೃದ್ಧಿ ಪಥದಲ್ಲಿ ವೇಗವಾಗಿ ಸಾಗುತ್ತಿದೆ. ಈ ಕಾಲಘಟ್ಟದಲ್ಲಿ ಮಹಿಳೆಯರ ಸಬಲೀಕರಣವು ಕೇವಲ ಒಂದು ಸಾಮಾಜಿಕ ವಿಚಾರವಲ್ಲ, ಅದು ರಾಷ್ಟ್ರ ನಿರ್ಮಾಣದ ಆಧಾರಕ್ಕೂ ಮೂಲವಾಗಿದೆ. ಇಂಥಹ ಸಂದರ್ಭದಲ್ಲಿ ಮಹಿಳಾ ಮೀಸಲಾತಿ ಅಧಿನಿಯಮ (Women's Reservation Act) ಒಂದು ಐತಿಹಾಸಿಕ ಹಜ್ಜೆಯನ್ನು ಇಡುತ್ತಿದೆ. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು, ಸಮಾನ ಅವಕಾಶಗಳನ್ನು ಒದಗಿಸುವುದು ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶ ಈ ಅಧಿನಿಯಮದಲ್ಲಿದೆ.

ನಮ್ಮ ಸಂವಿಧಾನದಲ್ಲಿ ಸಮಾನತೆ ಎನ್ನುವ ತತ್ತ್ವವನ್ನು ಘೋಷಿಸಿದ್ದರೂ ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಕಡಿಮೆಯಲ್ಲೆ ಉಳಿದಿತ್ತು. 2019ರ ಚುನಾವಣೆಯ ನಂತರವೂ ಸಹ ಕೇವಲ ಸುಮಾರು 14% ರಷ್ಟು ಮಾತ್ರವಿತ್ತು. ಇದು ರಾಜ್ಯ ವಿಧಾನಸಭೆಗಳಲ್ಲೂ ಹೆಚ್ಚಿನ ಬದಲಾವಣೆ ಏನೂ ಆಗಿರಲಿಲ್ಲ. ಹಾಗಿರುವಾಗ ಈ ಸ್ಥಿತಿ ಬದಲಿಸಿ ಹೊಸ ನಿಯಮ ತರುವುದು ಅವಶ್ಯವಾಗಿತ್ತು. ಈ ನಿಟ್ಟಿನಲ್ಲಿ 2023ರಲ್ಲಿ 'ನಾರೀಶಕ್ತಿ ವಂದನ ಅಧಿನಿಯಮ'ವು ಸಂಸತ್ತಿನಲ್ಲಿ ಅಂಗೀಕಾರವಾಯಿತು. ಪರಿಣಾಮ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಗೆ ಈ ಮಹಿಳಾ ಮೀಸಲಾತಿ ಅಧಿನಿಯಮ ಪ್ರಕಾರ 33% (1/3)ರಷ್ಟು ಸ್ಥಾನಕ್ಕೆ ಮಹಿಳೆಯರು ಇರುತ್ತಾರೆ. ಇದರಿಂದ ಮಹಿಳೆ ಆಡಳಿತಕ್ಕೆ ಬಂದರೆ ಒಂದು ಸಮತೋಲನವನ್ನು ತರಲು ಪ್ರಯತ್ನಿಸಿದಂತಾಗುತ್ತದೆ.

ಈ ಪ್ರಯತ್ನವು ದೇಶದ ಅಭಿವೃದ್ಧಿ, ಭ್ರಷ್ಟಾಚಾರ, ಕುಟುಂಬ ರಾಜಕಾರಣ, ಸ್ಥಳೀಯ ಅನೇಕ ಸಮಸ್ಯೆಗಳ ಕಡೆ ಸೂಕ್ಷ್ಮವಾಗಿ ಗಮನಿಸುವಿಕೆ ಹೀಗೆ ಅನೇಕ ರೀತಿಯ ಬದಲಾವಣೆಯ ಪರಿಣಾಮ ಬೀರುತ್ತದೆ. ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಭಾಷಣವೊಂದರಲ್ಲಿ "ನಾರೀಶಕ್ತಿಯು ದೇಶದ ಅಭಿವೃದ್ಧಿಗೆ ಮೂಲಶಕ್ತಿ. ಮಹಿಳೆಯು ಮುಂದಾದರೆ ಭಾರತವು ವಿಕಸಿತ ರಾಷ್ಟ್ರವಾಗುವುದು ಖಚಿತ" ಎಂದರು. ಇನ್ನೊಂದು ವಿಶೇಷವೆಂದರೆ ಈ ಮಸೂದೆಗೆ ಅಂಕಿತ ಹಾಕಿದವರು ಸಹ ರಾಷ್ಟ್ರಪತಿ ದ್ರೌಪದಿ ಮುರ್ಮು ಮಹಿಳೆಯೇ ಎನ್ನುವುದು ಹೆಮ್ಮೆ ಪಡುವಂಥಹ ಸಂಗತಿ. ಹಾಗಾದರೆ ಮಹಿಳೆಯರು ರಾಜಕೀಯದಲ್ಲಿ ಹೆಚ್ಚಿನದಾಗಿ ಪಾಲ್ಗೊಂಡರೆ ಆಗುವ ಪರಿಣಾಮಗಳೇನು? ಎಂದು ನೋಡಬೇಕಾಗುತ್ತದೆ.

ಮಹಿಳಾ ಮೀಸಲಾತಿ ಅಧಿನಿಯಮ

ನಾರಿ ಶಕ್ತಿಯಿಂದಾಗುವ ಪರಿಣಾಮಗಳು: ನಮ್ಮಲ್ಲಿ ಮಹಿಳೆ ಎಂದರೆ ಕೇವಲ ಕುಟುಂಬ ನಿರ್ವಹಣೆಗೆ ಮಾತ್ರ ಎನ್ನುವ ಕಾಲವೊಂದಿತ್ತು. ಹಾಗಂತ ಹೊರಜಗತ್ತಿಗೆ ಮಹಿಳೆ ಕಾಣಿಸಿಕೊಂಡೇ ಇಲ್ಲ ಅಂತಲ್ಲ. ಆದರೆ ಪ್ರಮಾಣ ಕಡಿಮೆ ಇತ್ತು. ಆದರೂ ರಾಜಕೀಯದಂಥಹ ಕ್ಷೇತ್ರದಲ್ಲಿ ಮಹಿಳೆಯ ಸ್ಥಾನವು ಮಾನಸಿಕವಾಗಿಯೂ ಹಿಂದೆ ಇತ್ತು ಹಾಗೂ ಸಂವಿಧಾನಿಕವಾಗಿಯೂ ಶೇಕಡಾವಾರು ಕಮ್ಮಿಯೇ ಇತ್ತು. ಈಗ ಜಾರಿಗೊಳ್ಳುತ್ತಿರುವ ಹೊಸ ಅಧಿನಿಯಮವು ಇಷ್ಟು ದಿನದ ಸಮಾನತೆ ಎನ್ನುವ ಕೂಗಿಗೂ ಸಹ ಒಂದು ಹೊಸ ಅಧ್ಯಾಯ ನೀಡುತ್ತದೆ. ಮಹಿಳೆಯರಲ್ಲಿ ಐದು ಆಡಳಿತಾತ್ಮಕ ಗುಣಗಳನ್ನು ಕಾಣಬಹುದು. ಶಿಸ್ತು, ಭ್ರಷ್ಟಾಚಾರ ನಿರ್ಮೂಲನೆ, ಅಭಿವೃದ್ಧಿ, ನೀತಿ ನಿರೂಪಣೆ, ಆಡಳಿತ ಇವೇ ಆ ಪಂಚಸೂತ್ರಗಳು.

ಶಿಸ್ತು: ಆಕೆ ತನಗೆ ನೀಡಿದ ಜವಬ್ದಾರಿಯನ್ನು ಶಿಸ್ತಿನಿಂದ ಪಾಲಿಸುವುದು ಹುಟ್ಟುಗುಣ. ಅಂಥಹ ಶಿಸ್ತು ರಾಜಕೀಯದಲ್ಲಿ, ಆಡಳಿತದಲ್ಲಿ ಬೇಕಾಗಿದೆ. ಮಹಿಳೆಯರು ಆ ಶಿಸ್ತನ್ನು ಪಾಲಿಸಬಲ್ಲರು.

ಭ್ರಷ್ಟಾಚಾರ ನಿರ್ಮೂಲನೆ: ಭಾರತದಲ್ಲಿ ಭ್ರಷ್ಟಚಾರ ಎನ್ನುವುದು ನಿತ್ಯ ಊಟ ಮಾಡುವ ಅನ್ನದಷ್ಟೇ ಪಥ್ಯವಾಗಿಬಿಟ್ಟಿದೆ. ದೇಶದ ಭವಿಷ್ಯ ನಿರ್ಮಾಣಕ್ಕೆ ಭ್ರಷ್ಟಾಚಾರ ದೊಡ್ಡ ತೊಡಕು. ಅಂತಹ ಭ್ರಷ್ಟಾಚಾರವನ್ನು ಮಹಿಳೆ ಹತ್ತಿಕ್ಕಬಲ್ಲಳು.

ಅಭಿವೃದ್ಧಿ: ಮಹಿಳೆಗೆ ಸೂಕ್ಷ್ಮದೃಷ್ಟಿತ್ವವಿದೆ. ಯಾವ ಸಮಸ್ಯೆಯನ್ನು ಯಾವ ರೀತಿಯಲ್ಲಿ ಬಗೆ ಹರಿಸಬೇಕು ಎನ್ನುವ ಜಾಣ್ಮೆ ಮತ್ತು ತಾಳ್ಮೆ ಆಕೆಯ ಕೆಲಸಕ್ಕೆ ಪೂರಕವಾಗಿರುತ್ತದೆ.

ನೀತಿ ನಿರೂಪಣೆ: ಒಂದು ಕೆಲಸವನ್ನು ಕೈಗೆತ್ತಿಕೊಂಡರೆ ಆ ಕೆಲಸ ನಿಯತ್ತಾಗಿ ಮುಗಿಸಲು ಬೇಕಿರುವ ನಿಯಮ, ನೀತಿ, ಕಾನೂನನ್ನು ಅಚ್ಚುಕಟ್ಟಾಗಿ ಪಾಲಿಸಬಲ್ಲಳು.



ಆಡಳಿತ: ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಆಡಳಿತಗಾರನೂ ಸೇವಕನಾಗಿ ಕೆಲಸ ಮಾಡಬೇಕು. ಕಾಯಕವೇ ಕೈಲಾಸ ಎಂದುಕೊಂಡ ಮಹಿಳೆ ಅಧಿಕಾರ ಸಿಕ್ಕರೆ ಆಕೆಯ ಕ್ಷಮತೆಯನ್ನು ಒರೆಗೆ ಹಚ್ಚಿ ಕೆಲಸವನ್ನು ಮಾಡುತ್ತಾಳೆ.

ಇಂಥಹ ಐದು ನಿಯಮವನ್ನು ಪಾಲಿಸುವ ಮಹಿಳೆಗೆ ರಾಜಕೀಯದಲ್ಲಿ ಹೆಚ್ಚಿನ ಅವಕಾಶ ಸಿಗುತ್ತಿರುವುದು ಸ್ವಾಗತಾರ್ಹ. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ 33% ಮೀಸಲಾತಿ ಈಗಾಗಲೇ ನೀಡಲಾಗಿದೆ. ಕೆಲವು ರಾಜ್ಯಗಳಂತು 50%ವರೆಗೂ ಮೀಸಲಾತಿ ಹೆಚ್ಚಿಸಿವೆ. ಇದರ ಪರಿಣಾಮ ಗ್ರಾಮೀಣ ಮಟ್ಟದಲ್ಲಿ ಗಮನಾರ್ಹವಾಗಿ ಬದಲಾವಣೆಯನ್ನು ಕಾಣಬಹುದು. ಅಧ್ಯಯನಗಳ ಪ್ರಕಾರ ಗ್ರಾಮ ಪಂಚಾಯತಿಗಳಲ್ಲಿ ಶಿಕ್ಷಣ, ಆರೋಗ್ಯ, ಮತ್ತು ಕುಡಿಯುವ ನೀರಿನಂತಹ ಮೂಲಭೂತ ಸೌಲಭ್ಯಗಳ ಮೇಲೆ ಹೆಚ್ಚಿನ ಗಮನ ಹರಿಸಿರುವುದು ಕಂಡು ಬರುತ್ತದೆ.

ಮಹಿಳೆಯರ ಶಿಕ್ಷಣ: ಭಾರತವು ಸ್ವತಂತ್ರ ಬಂದ ನಂತರ 1951ರಲ್ಲಿ ಮಹಿಳಾ ಸಾಕ್ಷರತೆ ಕೇವಲ 8.9%ರಷ್ಟು ಇತ್ತು. ಕಾಲವು ಬದಲಾಗುತ್ತ ಸಾಗಿದಂತೆ ಮಹಿಳೆಯರಿಗೆ ಶಿಕ್ಷಣದ ಒತ್ತು ಹೆಚ್ಚಿದೆ. 2011ರ ಜನಗಣತಿಯ ಅಂಕಿ ಅಂಶ ನೋಡಿದರೆ ಸುಮಾರು 65%ರಷ್ಟು ಹೆಚ್ಚಿದೆ. ಇತ್ತೀಚಿನ ಅಂದಾಜಿನ ಪ್ರಕಾರ 70% ದಾಟಿದೆ ಎಂದು ಹೇಳಲಾಗುತ್ತಿದೆ. ವಿದ್ಯಾಭ್ಯಾಸದಲ್ಲಿ ಈ ಮಟ್ಟದಲ್ಲಿ ಬದಲಾವಣೆ ಆದರೂ ಸಹ ರಾಜಕೀಯದಲ್ಲಿ ಮಾತ್ರ ಪಾಲ್ಗೊಳ್ಳುವಿಕೆ ಬಹಳ ಕಡಿಮೆ ಇದೆ. ಮಹಿಳೆಯರಿಗೆ ರಾಜಕೀಯಕ್ಕೆ ಬನ್ನಿ ಎಂದು ಕರೆದರೆ ಬರಲಾಗದು. ಸಂವಿಧಾನದಲ್ಲೂ ತಿದ್ದುಪಡಿಯಾಗಬೇಕು. ಆ ಮೂಲಕ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಶಿಕ್ಷಣ ಬೇಕು. ಈ ಜಾಗೃತಿ ಮೂಡಿಸುವ ವ್ಯಕ್ತಿ ಮಹಿಳೆಯೇ ಆಗಿದ್ದರೆ! ಹೌದು, ಇದು ಒಂದು ರೀತಿಯ ಸರಪಳಿಯ ಕೊಂಡಿಯಂತೆ ಒಂದಕ್ಕೊಂದು ಅಂಟಿಕೊಂಡಿದೆ. ಹಾಗಾಗಿ ಇದನ್ನು ಸರಿದೂಗಿಸಲು ಮಹಿಳಾ ಮೀಸಲಾತಿ ಅಧಿನಿಯಮ ಜಾರಿಗೆ ಬರುವುದು ಅಗತ್ಯವಾಗಿದೆ. ಈ ನಿಯಮದಿಂದ ಮಹಿಳೆಯರಿಗೆ ರಾಜಕೀಯದಲ್ಲಿ ಅವಕಾಶ ಸಿಕ್ಕರೆ ಕೇವಲ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಮಾತ್ರವಲ್ಲ, ಸಮಾಜದ ಹಿತಕ್ಕಾಗಿ ಕೆಲಸ ಮಾಡುವ ಸಾಮರ್ಥ್ಯವನ್ನು ತೋರಿಸುತ್ತಾರೆ.

ಈ ಮೀಸಲಾತಿ ಮಹಿಳೆ ಮತ್ತು ಮಕ್ಕಳ ಸಮಸ್ಯೆಗೆ ಪರಿಹಾರವಾಗಬಲ್ಲದೇ: ಹೆಣ್ಣಿನ ನೋವು ಹೆಣ್ಣಿಗೆ ತಿಳಿಯುವುದು, ಮಗುವಿನ ನೋವು ತಾಯಿಗೆ ತಿಳಿಯುವುದು ಎನ್ನುವಂಥಹ ಸಂಗತಿ ಎಲ್ಲರಿಗೂ ಗೊತ್ತಿರುವಂಥದ್ದೆ. ಹಾಗಿರುವಾಗ ಮಹಿಳೆ ಶಾಸಕಿಯಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯನ್ನು, ಶಿಕ್ಷಣ ಖಾತೆಯನ್ನು, ಸಾಮಾಜಿಕ ಭದ್ರತೆಯ ವಿಷಯವಾಗಿ, ಆರ್ಥಿಕ ಕ್ಷೇತ್ರದಲ್ಲಿ ಹೀಗೆ ಪ್ರಮುಖ ಕ್ಷೇತ್ರದಲ್ಲಿದ್ದರೆ ಅಭಿವೃದ್ಧಿಯ ಸಮಗ್ರ ದೃಷ್ಟಿಕೋನವನ್ನು ಇಟ್ಟುಕೊಂಡು ಪ್ರತಿಬಿಂಬಿಸುತ್ತಾರೆ. ಅಲ್ಲದೇ ಮಹಿಳೆಯರ ರಾಜಕೀಯ ಪ್ರವೇಶ ಹೆಚ್ಚಾಗುವುದರಿಂದ ಸ್ವಯಂಸಹಾಯ ಸಂಘಗಳಲ್ಲಿ ಗಣನೀಯ ಪ್ರೋತ್ಸಾಹ, ಮಹಿಳಾ ಉದ್ಯಮಶೀಲತೆಯ ಮೂಲಕ ಗ್ರಾಮೀಣ ಆರ್ಥಿಕತೆ ಬಲಪಡಿಸುವಿಕೆ, ಮಕ್ಕಳ ಮೇಲಿನ ಮಾನಸಿಕ ಒತ್ತಡ ನಿರ್ವಹಣೆಗೆ ಬೇಕಾಗುವ ಕ್ರಮ, ಮಹಿಳೆ ಮತ್ತು ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಬಗ್ಗೆ ಗಮನ ಹೀಗೆ ಅತೀ ಹತ್ತಿರದಿಂದ ಬಲ್ಲವರಾಗಿ ಅದಕ್ಕೆ ಬೇಕಾಗುವ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುವ ಕೆಲಸ ಮಹಿಳೆಯು ಮಾಡುತ್ತಾಳೆ.

ನ್ಯಾಯ ಮತ್ತು ಧರ್ಮ: ಶಿಕ್ಷಣ, ಆರೋಗ್ಯ, ಆರ್ಥಿಕ ಸ್ವಾವಲಂಬನೆ ಹಾಗೂ ಸಾಮಾಜಿಕ ಗೌರವವನ್ನು ಸಮಗ್ರವಾಗಿ ನೋಡಿದರೆ ಈ ಅಧಿನಿಯಮವು ಜಾರಿಗೆ ಬರುತ್ತಿರುವುದು ಅಭಿವೃದ್ಧಿ ದಿಕ್ಕಿಗೆ ಕೊಂಡೊಯ್ಯುವ ಮತ್ತೊಂದು ಮೈಲುಗಲ್ಲಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಮಹಿಳೆ ನಿರ್ಧಾರ ಮಾಡುವ ಸ್ಥಾನದಲ್ಲಿದ್ದಾಗ ಸಮಾಜದ ಎಲ್ಲ ವರ್ಗಗಳಿಗೂ ಧ್ವನಿಯಾಗುವ ಮತ್ತು ನ್ಯಾಯ ಕೊಡಿಸುವ ಅವಕಾಶಗಳು ಹೆಚ್ಚಿದೆ. ಇಂದಿನ ಕಾಲದಲ್ಲಿ ತಂತ್ರಜ್ಞಾನ, ವಿಜ್ಞಾನ, ಕ್ರೀಡೆ, ಸೇನೆ ಹೀಗೆ ಎಲ್ಲ ಕ್ಷೇತ್ರದಲ್ಲೂ ಇದ್ದಾರೆ ಎಂದು ನಾವು ಹೆಮ್ಮೆ ಪಡುತ್ತೇವೆ. ಆದರೆ ರಾಜಕೀಯ ಬಲವು ಮಹಿಳೆಗೆ ಸಿಕ್ಕರೆ ಈ ಎಲ್ಲ ಕ್ಷೇತ್ರದಲ್ಲಿರುವ ಮಹಿಳೆಯರಿಗೆ ಸಿಗುವ ಬಲವು ಬೇರೆಯದೇ ಆಗಿರುತ್ತದೆ. ಇದಕ್ಕೆ ಗ್ರಾಮ ಪಂಚಾಯ್ತಿಗಳಲ್ಲಿ ಆದ ಬದಲಾವಣೆಯೇ ನಾವು ಗಮನಿಸಬಹುದು. ಇದರೊಟ್ಟಿಗೆ ಮಹಿಳಾ ಮೀಸಲಾತಿ ಅಧಿನಿಯಮವು ಸಮಾಜದಲ್ಲಿರುವ ಅನೇಕ ಅಂತರವನ್ನು ತೊಡೆದು ಹಾಕಲು ಸಹ ಸಹಾಯ ಮಾಡುತ್ತದೆ.

"ವಿಕಸಿತ ಭಾರತ" ಎನ್ನುವ ಕನಸನ್ನು ಸಂಪೂರ್ಣವಾಗಿ ಸಾಕಾರಗೊಳಿಸಲು "ನಾರಿ ಶಕ್ತಿ"ಯ ಪಾತ್ರ ಬಹಳ ದೊಡ್ಡದಾಗಿದೆ. ದೇಶದಲ್ಲಿ ಸಮಾನತೆ, ನ್ಯಾಯ, ಅಭಿವೃದ್ಧಿ ಸಾಧಿಸಲು ಈ ಅಧಿನಿಯಮವು ಪೂರಕವಾಗುತ್ತದೆ. ಮಹಿಳಾ ಮೀಸಲಾತಿ ಅಧಿನಿಯಮವು ನಮ್ಮ ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಇನ್ನಷ್ಟು ಸಮಾನತೆ, ಭದ್ರತೆ, ಮತ್ತು ಭದ್ರತೆಯತ್ತ ಕೊಂಡೊಯ್ಯುವ ಮಹತ್ತರ ಹೆಜ್ಜೆ. ರಾಷ್ಟ್ರವೊಂದು ಇದ್ದರೆ ಸಾಲದು. ಅಲ್ಲಿ ಸರ್ವತೋಮುಖ ಅಭಿವೃದ್ಧಿಯಾದರೆ ಮಾತ್ರ ಜಗತ್ತಿಗೆ ವಿಶ್ವಗುರು ರಾಷ್ಟ್ರವಾಗಬಲ್ಲದು. ಈ ನಿಟ್ಟಿನಲ್ಲಿ ನಾರಿ ಶಕ್ತಿಶಾಲಿಯಾದಾಗ ಮಾತ್ರ ಭಾರತವು ನಿಜವಾದ ಅರ್ಥದಲ್ಲಿ ವಿಕಸಿತ ರಾಷ್ಟ್ರವಾಗಲು ಸಾಧ್ಯ.

ಹಣಕ್ಕಾಗಿ ಮನುಷ್ಯರಲ್ಲ

ಉತ್ತಮಾಃ ಧನಮಾರ್ಜಯುಃ ಧನಮಾರ್ಗಾತಿಶೋತ್ತಮಾನ್ ।
ಮನುಷ್ಯಾಣಾಂ ಕೃತೇ ವಿತ್ತಂ ನ ವಿತ್ತಸ್ಯ ಕೃತೇ ತು ತೇ॥ -ಸುಭಾಷಿತ ಶತಕಂ

ಉತ್ತಮ ಜನರು ಹಣವನ್ನು ಗಳಿಸಬಲ್ಲರು. ಆದರೆ ಹಣ ಉತ್ತಮರನ್ನು ಕೊಳ್ಳಲಾರದು. ಮನುಷ್ಯರಿಗಾಗಿ ಹಣ, ಹಣಕ್ಕಾಗಿ ಮನುಷ್ಯರಲ್ಲ –ಎಂಬುದು ಶ್ಲೋಕಾರ್ಥ.

ಸುಖಮಯ ಜೀವನವನ್ನು ಸಾಗಿಸುವುದಕ್ಕೆ ಬೇಕಾದ ಕೆಲವೇ ಮುಖ್ಯ ಅಂಶಗಳಲ್ಲಿ ಪ್ರಧಾನವಾದದ್ದು ಹಣ. ಹಣವೊಂದಿದ್ದರೆ ಬಹುತೇಕ ಕಾರ್ಯ ಸಾಧಿಸಿದಂತೆ. ಹಣ ಎಲ್ಲ ಗುಣಗಳ ಆಗರ. ಈ ಕಾರಣಕ್ಕಾಗಿಯೇ "ಸರ್ವೇ ಗುಣಾಃ ಕಾಂಚನಮಾಶ್ರಯಂತಿ" ಎಂಬ ಸೂಕ್ತಿ ಹೊರಟಿದೆ.



ಹಣಕ್ಕಾಗಿ ಹಪಹಪಿಸುವವರಿರುವಂತೆ ಹಣವನ್ನು ಸಂಪೂರ್ಣ ತಿರಸ್ಕರಿಸುವವರಿದ್ದಾರೆ. ಆದರೆ ಇಂಥವರ ಸಂಖ್ಯೆ ತೀರಾ ವಿರಳ.

ಹಣವಿಲ್ಲದೇ ಜೀವನ ನಿರ್ವಹಣೆ ಅಸಾಧ್ಯ. ಬದುಕನ್ನು ಶ್ರೀಮಂತಗೊಳಿಸುವ ಹಣವನ್ನು ದುಡಿಮೆಯಿಂದ ಸಂಪಾದಿಸಬಹುದು. ಉತ್ತಮ ಗುಣಸಂಪನ್ನತೆಯುಳ್ಳವರು, ಪರಿಶ್ರಮಿಗಳು ಹಣವನ್ನು ಗಳಿಸಬಲ್ಲರು. ಮೈಮುರಿದು ದುಡಿದರೆ ಸಂಪತ್ತು ಬಂದೇಬರುತ್ತದೆ. ಬಂದ ಸಂಪತ್ತನ್ನು ನೋಡಿ ಮೈಮರೆಯದೇ ಸರಿಯಾಗಿ ವಿನಿಯೋಗಿಸಿಕೊಂಡಾಗ ಸಾರ್ಥಕತೆ ಪಡೆಯುತ್ತದೆ. ಶ್ರಮವನ್ನು ಆರಾಧಿಸುವ ಉತ್ತಮರಾದ ಯಾರೂ ಕೂಡ ಸಂಪತ್ತಿನ ಅಧೀನರಾಗಲು ಸಾಧ್ಯ. ಸಂಪತ್ತನ್ನು ಗಳಿಸಲು ಸಾಧ್ಯ. ಆದರೆ ಹಣ ಉತ್ತಮರನ್ನು ಕೊಂಡುಕೊಳ್ಳಲಾರದು.

ಈ ಮಾತಿಗೆ ಅಪವಾದವೆಂಬಂತೆ ಹಣದಿಂದ ಜನರನ್ನು ಕೊಂಡುಕೊಳ್ಳುವ ಕೆಟ್ಟ ಚಾಳಿಯನ್ನು ಈಗೀಗ ಕಾಣಬಹುದು. ರಾಜಕೀಯದಲ್ಲಂತೂ ಇದು ಸಾಮಾನ್ಯವೆನಿಸಿದೆ. ಚೀಲ ಚೀಲ ಹಣ ಕೊಟ್ಟು ಶಾಸಕರನ್ನು ಖರೀದಿಸಿ ಅಧಿಕಾರ ಗದ್ದುಗೆ ಏರಿದವರು ಇದ್ದಾರೆ. ನ್ಯಾಯವನ್ನು ಕೊಂಡುಕೊಳ್ಳುವವರಿದ್ದಾರೆ. ಇದೇ ಚಾಳಿಯು ಈಗ ಬಿಟ್ಟಿ ಭಾಗ್ಯವೆಂಬ ಹೆಸರಿನಿಂದ ಮುಂದುವರಿದಿದೆ. ಈ ಕರ್ಮದ ಹಿಂದೆ ಸ್ವಾರ್ಥ, ಅಧಿಕಾರವೇ ಹೊರತಾಗಿ ಲೋಕಕಲ್ಯಾಣದ ಯಾವ ಚಿಂತನೆಯೂ ಇಲ್ಲ.

ಮನುಷ್ಯನಿಗೆ ಮಾತ್ರ ಸಂಪತ್ತು, ಅಧಿಕಾರ, ಮಾನ್ಯತೆ... ಇತ್ಯಾದಿಗಳು ಬೇಕು. ಇದಕ್ಕಾಗಿ ಏನನ್ನೂ ಮಾಡುತ್ತಾರೆ. ದೇಶವನ್ನೇ ಮಾರುತ್ತಾರೆ. ಭೂಮಿಯನ್ನೂ ಬರಡು ಮಾಡುತ್ತಾರೆ. ಆಜನ್ಮ ವಿರೋಧಿಗಳೊಂದಿಗೂ ಕೈ ಜೋಡಿಸುತ್ತಾರೆ.

ಮನುಷ್ಯನಿಗೆ ತನ್ನ ಬದುಕನ್ನು ಚೆನ್ನಾಗಿ ನಿರ್ವಹಿಸುವಷ್ಟು ಸಂಪತ್ತು ಬೇಕು. ಅದಕ್ಕೂ ಹೆಚ್ಚಾಗಿ ಕೂಡಿಡುವ ಸಂಪತ್ತಿನಿಂದ ಏನು ಪ್ರಯೋಜನ? ಸಂಪತ್ತಿಗಾಗಿ ನಮ್ಮ ಬದುಕನ್ನು ಮೀಸಲಿರಿಸಬಾರದು. ಬಾಹ್ಯವಾದ ಯಾವ ಸಂಪತ್ತೂ ಶಾಶ್ವತವಲ್ಲ. ಸಂಪತ್ತು ಎಂದಿದ್ದರೂ ಚಂಚಲ. ಹೃದಯ ಸಂಪತ್ತು ಮಾತ್ರ ಶಾಶ್ವತ. ಸಂಪತ್ತಿರುವಷ್ಟು ದಿನ ಶ್ರೀಮಂತರ ಹಿಂದೆ ಸುತ್ತುವವರು ಸಂಪತ್ತು ಕರಗಿದ ಮೇಲೆ ದೂರ ಸರಿಯುತ್ತಾರೆ.

ಆದ್ದರಿಂದ ಹಣ ಮಾಡುವುದೇ ಗುರಿಯಾಗದೇ ಉತ್ತಮ ಜೀವನ ನಿರ್ವಹಣೆಗೆ ಮಣೆ ಹಾಕಬೇಕು. ಯಾವುದೇ ಇರಲಿ, ಒಂದು ಹಂತ ಮೀರಿದರೆ ಅಪಾಯ, ತೊಂದರೆ ತಪ್ಪಿದ್ದಲ್ಲ. ಹಣಕ್ಕಾಗಿಯೇ ಮನುಷ್ಯ ಜನ್ಮವಲ್ಲ ಎಂಬ ಎಚ್ಚರವಿದ್ದರೆ ಸಾಕು.

ದಶಕಗಳ ಕನಸಿಗೆ ರೂಪ ನೀಡಿದ ದೃಢ ರಾಜಕೀಯ ಇಚ್ಛಾಶಕ್ತಿ

▸ಶ್ರೀವಲ್ಲಿ



ಭಾರತದ ರಾಜಕೀಯ ವೇದಿಕೆಯಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಒದಗಿಸುವುದು ಇಂದಿನ ಅಗತ್ಯ. 2023ರ ಸೆಪ್ಟೆಂಬರ್ 28ರಂದು ಲೋಕಸಭೆಯಲ್ಲಿ ಮತ್ತು ಒಕ್ಟೋಬರ್ 21ರಂದು ರಾಜ್ಯಸಭೆಯಲ್ಲಿ ಅಂಗೀಕಾರಗೊಂಡ 'ನಾರಿ ಶಕ್ತಿ ವಂದನ್ ಅಧಿನಿಯಮ್' (106ನೇ ಸಾಂವಿಧಾನಿಕ ತಿದ್ದುಪಡಿ) ಈ ಗುರಿಯತ್ತ ಒಂದು ಮೈಲಿಗಲ್ಲು. ಮೋದಿ ಸರ್ಕಾರದ ನೇತೃತ್ವದಲ್ಲಿ ಜಾರಿಗೊಂಡ ಈ ಮಸೂದೆ, ಲೋಕಸಭೆ, ರಾಜ್ಯಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ 33 ಶೇಕಡಾ ಮೀಸಲಾತಿಯನ್ನು ಖಾತರಿಪಡಿಸುತ್ತದೆ. ಇದು ದೇಶದ ರಾಜಕೀಯ ಚೈತನ್ಯವನ್ನು ಹೆಚ್ಚಿಸುವ ದೊಡ್ಡ ಹೆಜ್ಜೆಯಾಗಿದೆ.

ಈ ಮಸೂದೆಯ ಇತಿಹಾಸವು ದೀರ್ಘಕಾಲದ ಹೋರಾಟದಿಂದ ಆರಂಭವಾಗುತ್ತದೆ. 1992ರಲ್ಲಿ 73ನೇ ಮತ್ತು 74ನೇ ಸಾಂವಿಧಾನಿಕ ತಿದ್ದುಪಡಿಗಳ ಮೂಲಕ ಗ್ರಾಮ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 33 ಶೇಕಡಾ ಮೀಸಲಾತಿಯನ್ನು ಜಾರಿಗೊಳಿಸಲಾಯಿತು. ಇದರಿಂದ ಲಕ್ಷಾಂತರ ಮಹಿಳೆಯರು ಗ್ರಾಮೀಣ ಮತ್ತು ನಗರ ಮಟ್ಟದಲ್ಲಿ ನಾಯಕತ್ವ ವಹಿಸಿದರು. ಆದರೆ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಹಕಾರೀ ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಕೇವಲ 14 ಶೇಕಡಾ ಇದ್ದು, ಇದು ಸಮಾನತೆಯ ಕೊರತೆಯನ್ನು ತೋರಿಸುತ್ತಿತ್ತು.

1996ರಲ್ಲಿ ಎನ್.ಡಿ.ಎ ಸರ್ಕಾರವು ಮೊದಲ ಬಾರಿಗೆ ಈ ಮಸೂದೆಯನ್ನು ಪರಿಚಯಿಸಿತು. ಆದರೆ ರಾಜ್ಯಸಭೆಯಲ್ಲಿ ಅಡ್ಡಿ ಬಂದಿತು. ಆದರೆ ವಿರೋಧ ಪಕ್ಷಗಳ ಧರ್ಮನಿರಪೇಕ್ಷತೆ ಮತ್ತು ಒಬಿಸಿ ಮೀಸಲಾತಿಯ ಬೇಡಿಕೆಗಳಿಂದ ಪರಿಚಯಿಸಿದರೂ, ಲೋಕಸಭೆಯಲ್ಲಿ ನಿಲ್ಲಿಸಲ್ಪಟ್ಟಿತು. ಈ ಹೋರಾಟದಲ್ಲಿ ಎನ್.ಡಿ.ಎ ಮತ್ತು ಬಿಜೆಪಿಯವರು ನಿರಂತರವಾಗಿ ಬೆಂಬಲ ನೀಡಿದರು. ಮೋದಿ ಸರ್ಕಾರ 2014ರಲ್ಲಿ ಅಧಿಕಾರಕ್ಕೆ ಬಂದ ನಂತರ, 2019ರಲ್ಲಿ ಲೋಕಸಭೆ ಚುನಾವಣಾ ಘೋಷಣಾ ಪತ್ರದಲ್ಲಿ ಈ ಮಸೂದೆಯನ್ನು ಪ್ರಮುಖ ಅಭಿಪ್ರಾಯವಾಗಿ ಘೋಷಿಸಿತು. ಕೊನೆಗೂ 2023ರಲ್ಲಿ ಐತಿಹಾಸಿಕ ಜಯ ಸಾಧಿಸಿತು.

ಮಹಿಳಾ ಅಭಿವೃದ್ಧಿಯ ಕೇಂದ್ರಬಿಂದು



ಈ ಮಸೂದೆಯ ಮಹತ್ವವು ಅಪಾರ. ಇದು ರಾಜಕೀಯದಲ್ಲಿ ಮಹಿಳೆಯರನ್ನು ಸಬಲೀಕರಿಸುತ್ತದೆ. ಇದರಿಂದ ಲಿಂಗ ಸಮಾನತೆ ಸಾಧ್ಯವಾಗುತ್ತದೆ. ಲೋಕಸಭೆಯ 543 ಸ್ಥಾನಗಳಲ್ಲಿ 181 ಸ್ಥಾನಗಳು ಮಹಿಳೆಯರಿಗೆ ಮೀಸಲಾಗುತ್ತವೆ. ಇದು ನೀತಿ ನಿರ್ಧಾರದಲ್ಲಿ ಮಹಿಳೆಯರ ಮತ್ತು ಕುಟುಂಬಗಳ ಸಮಸ್ಯೆಗಳಾದ ಶಿಕ್ಷಣ, ಆರೋಗ್ಯ, ಸುರಕ್ಷತೆ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕೆ ಆದ್ಯತೆ ನೀಡುತ್ತದೆ. ಉದಾಹರಣೆಗೆ, ಪಂಚಾಯಿತಿ ಮಟ್ಟದಲ್ಲಿ ಮಹಿಳಾ ನಾಯಕತ್ವದಿಂದ ರಸ್ತೆ, ನೀರು, ವಿದ್ಯುತ್ ಸೌಲಭ್ಯಗಳು ಹೆಚ್ಚಾದವು. ರಾಷ್ಟ್ರೀಯ ಮಟ್ಟದಲ್ಲಿ ಇದು ದೇಶದ ಅಭಿವೃದ್ಧಿಯನ್ನು ತೋರಿಸುತ್ತದೆ. ಸಂಯುಕ್ತರಾಷ್ಟ್ರ ಸಂಘದ ಲಿಂಗ ಸಮಾನತೆ ಗುರಿಗಳೊಂದಿಗೆ ಸಮನ್ವಯಗೊಳ್ಳುತ್ತದೆ.

ಮೋದಿ ಸರ್ಕಾರದ ಮಹಿಳಾ ಬೆಂಬಲದ ಸ್ಥಾನವು ಸ್ಪಷ್ಟ. 'ಬೇಟಿ ಬಚಾವ್ ಬೇಟಿ ಪಢಾವ್' ಯೋಜನೆಯಿಂದ ಲಕ್ಷಾಂತರ ಬಾಲಕಿಯರ ಉಳಿವು ಮತ್ತು ಶಿಕ್ಷಣ ಹೆಚ್ಚಾಯಿತು. 'ಉಜ್ವಲಾ' ಯೋಜನೆಯಿಂದ 10 ಕೋಟಿ ಮಹಿಳೆಯರಿಗೆ ಉಚಿತ ಗ್ಯಾಸ್ ಸೌಲಭ್ಯ ನೀಡಲಾಯಿತು. 'ಮುದ್ರಾ' ಯೋಜನೆಯಲ್ಲಿ 70 ಶೇಕಡಾ ಋಣಗಳು ಮಹಿಳೆ ಯರಿಗೆ ತಲುಪಿದವು. 'ಸುಷಾಸನ್" ಯೋಜನೆಯ ಮೂಲಕ 6 ಕೋಟಿ ಮಹಿಳೆಯರಿಗೆ ಜನ್ ಧನ್ ಖಾತೆ ಜಾರಿಗೊಳಿಸಲಾಯಿತು. 'ಪಿಂಕ್ ರೆವಲ್ಯೂಷನ್' ಮೂಲಕ ಕಿಸಾನ್ ಸಮ್ಮಾನ್ ನಿಧಿಯಲ್ಲಿ ಮಹಿಳಾ ರೈತೆ ಯರಿಗೆ ಆದ್ಯತೆ. ಇವೆಲ್ಲವೂ ಮಹಿಳಾ ಸಬಲೀಕರಣದ ದೀರ್ಘಕಾಲದ ಚಿಂತನೆಯನ್ನು ತೋರಿಸುತ್ತವೆ. ಪ್ರಧಾನಿ ಮೋದಿ 'ಮಹಿಳೆಯರು ದೇಶದ ಶಕ್ತಿ' ಎಂದು ಘೋಷಿಸಿ, ಈ ಮಸೂದೆಯನ್ನು 'ನಾರಿ ಶಕ್ತಿ' ಎಂದು ಕರೆದರು.

ಹೊಸ ಭಾರತದ ರೂಪುರೇಷೆ

ಇದು ಕೇವಲ ಮಹಿಳೆಯರ ಜಯವಲ್ಲ. ಇದು ದೃಢ ನಾಯಕತ್ವದ ಜಯ. ಸಮಾನತೆಯತ್ತ ಭಾರತ ಸಾಗುತ್ತಿರುವ ದಾರಿಯಲ್ಲಿ, ಈ ಮಸೂದೆ ಒಂದು ಮಹತ್ವದ ಮೈಲುಗಲ್ಲಾಗಿದ್ದು, ಮೋದಿ ಮಾದರಿಯ ಆಡಳಿತದ ಸ್ಪಷ್ಟ ಪ್ರತಿಬಿಂಬವಾಗಿದೆ. 40 ವರ್ಷಗಳಿಂದ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಕಾಯುತ್ತಿದ್ದರು. ದೇಶದ ನೀತಿ ನಿರೂಪಣೆಯಲ್ಲಿ ಭಾಗವಹಿಸಲು ಕಾಯುತ್ತಿದ್ದರು. ಈಗ ಅವರಿಗೆಲ್ಲ ಅವಕಾಶ ಸಿಗುವ ಸಂದರ್ಭ ಬಂದಿದೆ. ಪ್ರಧಾನಿ ನರೇಂದ್ರ ಮೋದಿಜಿ ಅವರ ಸರ್ಕಾರ ಮೂರು ಮಸೂದೆ ಮಂಡಿಸುವ ಮೂಲಕ ಭಾರತದ ಅಭಿವೃದ್ಧಿಯ ಪಯಣದಲ್ಲಿ ಹೊಸ ಅಧ್ಯಾಯವನ್ನು ಬರೆಯುವಂತೆ ಮಾಡಿದ್ದಾರೆ. ಮಹಿಳಾ ಮೀಸಲು ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ವಿಶ್ವಾಸಾರ್ಹ ಪ್ರಾತಿನಿಧ್ಯ ಸಾಧ್ಯವಾಗಲಿದೆ. ಇಂತಹ ಮಹತ್ವದ ಕ್ರಮಕ್ಕೆ ಮುಂದಾದ ಪ್ರಧಾನಿಯವರನ್ನು ದೇಶದ ಎಲ್ಲ ಮಹಿಳೆಯರ ಪರವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಈ ಮಸೂದೆಯು ರಾಜಕೀಯದಲ್ಲಿ ಮಹಿಳೆಯರು ಭಾಗವಹಿಸುವಿಕೆಯನ್ನು ಆಮೂಲಾಗ್ರವಾಗಿ ಬದಲಿಸಲಿದೆ. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಮಸೂದೆ ಮಂಡನೆ ಮಾಡಿದಾಗ ಸಮಾಜವಾದಿ ಪಕ್ಷ, ಆರ್‌ಜೆಡಿಯ ಮುಖಂಡರು ತಡೆ ಒಡ್ಡಿದ್ದರು.

ಈಗಲೂ ವಿರೋಧಪಕ್ಷ ಹೊಸ ವಾದದೊಂದಿಗೆ ಮಸೂದೆಗೆ ತಡೆ ಮಾಡಲು, ವಿರೋಧ ಮಾಡಲು ಮುಂದೆ ಬಂದಿದೆ. ಮಹಿಳಾ ಮೀಸಲಾತಿ ಮಸೂದೆಗೆ ಕ್ಷೇತ್ರ ಮರುವಿಂಗಡಣೆ ನೆಪವನ್ನು ವಿರೋಧಪಕ್ಷಗಳು ಒಡ್ಡುತ್ತಿವೆ. ಕಳೆದ ಮೂರು ದಿನಗಳಿಂದ ವಿರೋಧಪಕ್ಷದ ನಾಯಕರು ಈ ಮಸೂದೆ ಬಗ್ಗೆ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದಾರೆ. ಈ ಮಹಿಳಾ ಮೀಸಲು ಮಸೂದೆಯನ್ನು ವಿರೋಧಿಸಿದರೆ ವಿರೋಧ ಪಕ್ಷಗಳನ್ನು ಜನ ಎಂದೂ ಕ್ಷಮಿಸುವುದಿಲ್ಲ.

ಮಧ್ಯಪ್ರಾಚ್ಯಕ್ಕೆ ಅಮೆರಿಕದ ಹೆಚ್ಚುವರಿ ಸೈನ್ಯ ರವಾನೆ

• ವಾಷಿಂಗ್ಟನ್: ಇರಾನ್ ಜತೆಗಿನ ಎರಡು ವಾರಗಳ ಕದನ ವಿರಾಮವು ಏ.22ಕ್ಕೆ ಅಂತ್ಯಗೊಳ್ಳಲಿರುವ ಹಿನ್ನೆಲೆಯಲ್ಲಿ, ಅಮೆರಿಕ ಮಧ್ಯಪ್ರಾಚ್ಯಕ್ಕೆ 10,000ಕ್ಕೂ ಹೆಚ್ಚು ಹೆಚ್ಚುವರಿ ಸೈನಿಕರನ್ನು ನಿಯೋಜಿಸುತ್ತಿದೆ. ಯುಎಸ್ಎಸ್ ಜಾರ್ಜ್ ಎಚ್.ಡಬ್ಲ್ಯೂ. ಬುಷ್ ನೌಕೆಯಲ್ಲಿರುವ ಸುಮಾರು 6,000 ಸೈನಿಕರು ಮತ್ತು ಬಾಕ್ಸರ್ ಆಂಫಿಬಿಯಸ್ ರೆಡಿ ಗ್ರೂಪ್‌ನ 4,200 ನೌಕಾಪಡೆ ಮತ್ತು ಮರೀನ್ ಸಿಬ್ಬಂದಿ ಈ ತಿಂಗಳ ಅಂತ್ಯದ ವೇಳೆಗೆ ಈ ಪ್ರದೇಶವನ್ನು ತಲುಪಲಿದ್ದಾರೆ. ಇವರು ಇರಾನ್ ವಿರುದ್ಧದ ಕಾರ್ಯಾಚರಣೆಯಲ್ಲಿ ತೊಡಗಿರುವ 50,000 ಹಾಲಿ ಸಿಬ್ಬಂದಿಯನ್ನು ಸೇರಿಕೊಳ್ಳಲಿದ್ದಾರೆ.

ನೌಕಾ ದಿಗ್ಬಂಧನ ಮುಂದುವರಿಕೆ: ಇಸ್ಲಾಮಾಬಾದ್‌ನಲ್ಲಿ ನಡೆದ ಶಾಂತಿ ಮಾತುಕತೆ ವಿಫಲವಾದ ನಂತರ ಭಾನುವಾರ ಅಮೆರಿಕ ಇರಾನ್ ಬಂದರುಗಳ ಮೇಲೆ ಹೇರಿದ್ದ ನೌಕಾ ದಿಗ್ಬಂಧನ ಮುಂದುವರಿದಿದೆ. ದಿಗ್ಬಂಧನ ಜಾರಿಯಾದ 36 ಗಂಟೆಗಳ ಒಳಗೆ ಇರಾನ್‌ನ ಸಮುದ್ರ ವ್ಯಾಪಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ವರದಿ ಮಾಡಿದೆ.

ಇರಾನ್ ಸೇನೆಯ ಪ್ರತಿಕ್ರಿಯೆ: ಅಮೆರಿಕದ ಈ ದಿಗ್ಬಂಧನ, ವಾಣಿಜ್ಯ ಮತ್ತು ತೈಲ ಹಡಗುಗಳಿಗೆ ಅಭದ್ರತೆಯನ್ನು ಉಂಟುಮಾಡುತ್ತಿದೆ, ಎಂದು ಇರಾನ್ ಸೇನೆಯ ಕೇಂದ್ರ ಕಮಾಂಡ್ ಸೆಂಟರ್ ತಿಳಿಸಿದೆ. ದಿಗ್ಬಂಧನ ಮುಂದುವರಿದರೆ ಪರ್ಷಿಯನ್ ಕೊಲ್ಲಿ, ಓಮನ್ ಸಮುದ್ರ ಅಥವಾ ಕೆಂಪು ಸಮುದ್ರದಲ್ಲಿ ಯಾವುದೇ ರಫ್ತು ಅಥವಾ ಆಮದಿಗೆ ಅವಕಾಶ ನೀಡುವುದಿಲ್ಲ, ಎಂದು ಕಮಾಂಡ್ ಮುಖ್ಯಸ್ಥ ಅಲಿ ಅಬ್ದೊಲ್ಲಾಹಿ ಎಚ್ಚರಿಸಿದ್ದಾರೆ.

ಈ ಸಂಘರ್ಷ ಶೀಘ್ರದಲ್ಲೇ ಕೊನೆಗೊಳ್ಳಲಿದ್ದು, ಇದರಿಂದ ಅನಿಲ ಬೆಲೆಗಳು ಗಣನೀಯವಾಗಿ ಇಳಿಕೆಯಾಗಲಿವೆ, ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇರಾನ್ ಆರ್ಥಿಕತೆಯ ಶೇ.90ರಷ್ಟು ಭಾಗ ಸಮುದ್ರ ವ್ಯಾಪಾರದ ಮೇಲೆ ಅವಲಂಬಿತವಾಗಿದೆ.

ಹಿಜ್ಬೊಲ್ಲಾ ಡ್ರೋನ್ ತಡೆದ ಇಸ್ರೇಲ್ ಮಿಸೈಲ್ ದೋಣಿ



ಟೆಲ್ ಅವೀವ್: ದಕ್ಷಿಣ ಲೆಬನಾನ್‌ನಿಂದ ಇಸ್ರೇಲ್‌ನತ್ತ ಹಿಜ್ಬೊಲ್ಲಾ ಭಯೋತ್ಪಾದಕರು ಕಳುಹಿಸಿದ ಡ್ರೋನ್ ಅನ್ನು ಇಸ್ರೇಲ್ ನೌಕಾಪಡೆಯ ಕ್ಷಿಪಣಿ ದೋಣಿಯು ತಡೆಯುವಲ್ಲಿ ಯಶಸ್ವಿಯಾಗಿದೆ ಎಂದು ಇಸ್ರೇಲ್ ಸೇನೆ (ಐಡಿಎಫ್) ಗುರುವಾರ ಹೇಳಿದೆ. ಹಿಜ್ಬೊಲ್ಲಾ ಡ್ರೋನ್ ಹೊಡೆದುರುಳಿಸಿದ ವಿಡಿಯೋ ಫೂಟೇಜ್ ಅನ್ನು ಐಡಿಎಫ್ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದೆ. ಹಿಜ್ಬೊಲ್ಲಾ ಉಗ್ರ ಸಂಘಟನೆಯ ವಿರುದ್ಧ ಇಸ್ರೇಲ್ ಆಪರೇಷನ್ ರೋರಿಂಗ್ ಲಯನ್ ಆರಂಭಿಸಿದ ಬಳಿಕ ಇಸ್ರೇಲ್ ನೌಕಾಪಡೆಯ ಕ್ಷಿಪಣಿ ದೋಣಿಯು ಇಂತಹ 40ಕ್ಕೂ ಹೆಚ್ಚು ಕಾರ್ಯಾಚರಣೆಗಳನ್ನು ನಡೆಸಿದೆ. ದಕ್ಷಿಣ ಲೆಬನಾನ್‌ನ ಅರಣ್ಯ ಪ್ರದೇಶಗಳಲ್ಲಿ ತಲೆಮರೆಸಿಕೊಂಡಿದ್ದ ಹಿಜ್ಬೊಲ್ಲಾ ಉಗ್ರರನ್ನು ಇಸ್ರೇಲ್ ಸೇನೆ ವೈಮಾನಿಕ ದಾಳಿಯಲ್ಲಿ ಹೊಡೆದುರುಳಿಸಿದ ವಿಡಿಯೋ ಫೂಟೇಜ್ ಸಹ ಐಡಿಎಫ್ ಗುರುವಾರ ಬಿಡುಗಡೆಗೊಳಿಸಿದೆ. ಹಿಜ್ಬೊಲ್ಲಾ ಭೂಗತ ಶಸ್ತ್ರಾಸ್ತ್ರಗಾರ ವಶ: ದಕ್ಷಿಣ ಲೆಬನಾನ್‌ನಲ್ಲಿ ಹಿಜ್ಬೊಲ್ಲಾ ಉಗ್ರರನ್ನು ಸದೆಬಡಿದ ಇಸ್ರೇಲ್ ಸೇನೆಯ 769ನೇ ಬ್ರಿಗೇಡ್, ಹಿಜ್ಬೊಲ್ಲಾಗೆ ಸೇರಿದ ಭೂಗತ ಶಸ್ತ್ರಾಸ್ತ್ರಗಾರವನ್ನು ವಶಪಡಿಸಿಕೊಂಡಿದೆ. ಇವುಗಳಲ್ಲಿ ಕಲಾಶ್‌ನಿಕೋವ್ ರೈಫಲ್‌ಗಳು, ಟ್ಯಾಂಕ್ ನಿರೋಧಕ ಕ್ಷಿಪಣಿಗಳು, ಕ್ಷಿಪಣಿ-ಚಾಲಿತ ಗ್ರೆನೇಡ್ (ಆರ್‌ಪಿಜಿ) ಲಾಂಚರ್ಸ್ ಮತ್ತು ಮದ್ದುಗುಂಡುಗಳಿದ್ದವು ಎಂದು ಐಡಿಎಫ್ ತಿಳಿಸಿದೆ.

ಇರಾನ್ ಮೇಲೆ ಆರ್ಥಿಕ ಮತ್ತು ಸೈನಿಕ ಒತ್ತಡ


ಅಮೆರಿಕ ನೌಕಾಪಡೆಯು ಇರಾನ್ ಬಂದರುಗಳ ಮೇಲೆ ನಾಕಾಬಂದಿಯನ್ನು ಮುಂದುವರಿಸಿದ್ದು, ಹೊಸ ಆರ್ಥಿಕ ನಿರ್ಬಂಧಗಳನ್ನು ಜಾರಿಗೊಳಿಸುವುದಾಗಿ ಅಮೆರಿಕ ವಿತ್ತ ಕಾರ್ಯದರ್ಶಿ ಹೇಳಿದ್ದಾರೆ. ಇರಾನ್ ಜತೆ ವ್ಯಾಪಾರ ನಡೆಸುವ ದೇಶಗಳ ಮೇಲೂ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಈ ಕ್ರಮವನ್ನು ಹಣಕಾಸು ದಾಳಿಗೆ ಸಮಾನ ಎಂದು ವಿವರಿಸಲಾಗಿದೆ.

ಮೋದಿ-ಮ್ಯಾಕ್ರೊನ್ ಮಾತುಕತೆ

• ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರಾನ್ ದೂರವಾಣಿ ಮೂಲಕ ಮಾತುಕತೆ ನಡೆಸಿ, ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಬಗ್ಗೆ ಚರ್ಚಿಸಿದರು. ಈ ವೇಳೆ ಹಾರ್ಮುಜ್ ಜಲಸಂಧಿಯಲ್ಲಿ ನೌಕಾಯಾನದ ಸುರಕ್ಷತೆ ಹಾಗೂ ಸ್ವಾತಂತ್ರ್ಯವನ್ನು ಶೀಘ್ರ ಪುನಃಸ್ಥಾಪಿಸುವ ಅಗತ್ಯವಿದೆ ಎಂದು ಇಬ್ಬರು ನಾಯಕರು ಒತ್ತಿ ಹೇಳಿದರು. ಮ್ಯಾಕ್ರೊನ್ ಕರೆ ಮೂಲಕ ಮಾತುಕತೆ ಆರಂಭವಾಗಿದ್ದು ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡಲು ಪರಸ್ಪರ ಸಹಕಾರ ಮುಂದುವರಿಸುವುದಾಗಿ ಮೋದಿ ತಿಳಿಸಿದ್ದಾರೆ. ಫೆ.28ರಿಂದ ಆರಂಭವಾದ ಪಶ್ಚಿಮ ಏಷ್ಯಾ ಸಂಘರ್ಷಕ್ಕೆ ಇದೀಗ ಸುಮಾರು 50 ದಿನಗಳು ಕಳೆದಿವೆ. ಅಮೆರಿಕಾ-ಇಸ್ರೇಲ್ ದಾಳಿಗೆ ಪ್ರತಿಯಾಗಿ ಇರಾನ್ ಪ್ರತಿಕ್ರಿಯೆ ನೀಡಿದ ಬಳಿಕ ಉದ್ವಿಗ್ನತೆ ಹೆಚ್ಚಾಗಿದೆ. ಈ ನಡುವೆ ಹಾರ್ಮುಜ್ ಜಲಸಂಧಿಯಲ್ಲಿ ನೌಕಾಯಾನಕ್ಕೆ ಅಡಚಣೆ ಉಂಟಾಗಿರುವುದು ಜಾಗತಿಕ ತೈಲವಾಯು ಸರಬರಾಜಿನ ಮೇಲೆ ಪರಿಣಾಮ ಬೀರಿದೆ. ಭಾರತವು ಸಂವಾದ ಮತ್ತು ರಾಜತಾಂತ್ರಿಕ ಪರಿಹಾರವೇ ಸಮಸ್ಯೆಗೆ ಮಾರ್ಗವೆಂದು ಪುನರುಚ್ಚರಿಸಿದೆ.

2ನೇ ಸುತ್ತಿನ ಚರ್ಚೆ | ಟೆಹ್ರಾನ್‌ನಲ್ಲಿ ಪಾಕ್ ಸೇನಾ ಮುಖ್ಯಸ್ಥ

ಶಾಂತಿ ಮಾತುಕತೆ ಇನ್ನೂ ಅನಿಶ್ಚಿತ





• ದುಬೈ: ಮಧ್ಯಪ್ರಾಚ್ಯದಲ್ಲಿ ಮುಂದುವರಿದಿರುವ ಉದ್ವಿಗ್ನತೆ ಕಡಿಮೆ ಮಾಡಲು ಮತ್ತು ಅಮೆರಿಕ-ಇರಾನ್ ನಡುವೆ ಮತ್ತೊಮ್ಮೆ ಮಾತುಕತೆ ನಡೆಸುವ ದಾರಿಯನ್ನು ಸುಗಮಗೊಳಿಸಲು ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಗುರುವಾರ ಟೆಹ್ರಾನ್‌ನಲ್ಲಿ ಇರಾನಿನ ಅಧಿಕಾರಿಗಳನ್ನು ಭೇಟಿ ಮಾಡಿದ್ದಾರೆ. ಸುಮಾರು ಏಳು ವಾರಗಳಿಂದ ನಡೆಯುತ್ತಿರುವ ಯುದ್ಧದ ನಂತರ ಈ ಸಭೆ ಮಹತ್ವ ಪಡೆದುಕೊಂಡಿದೆ. ಪಾಕಿಸ್ತಾನವು ಮಧ್ಯವರ್ತಿಯಾಗಿ ಪಾತ್ರವಹಿಸುತ್ತಿದ್ದು, ಇಸ್ಲಾಮಾಬಾದ್‌ನಲ್ಲಿ ಹಿಂದಿನ ನೇರ ಮಾತುಕತೆಗಳಿಗೆ ಆತಿಥ್ಯ ವಹಿಸಿತ್ತು.

ಇಸ್ಲಾಮಾಬಾದ್‌ನಲ್ಲಿ ಮಾತುಕತೆ ಸಾಧ್ಯತೆ: ವೈಟ್ ಹೌಸ್ ಮಾಹಿತಿ ಪ್ರಕಾರ, ಮುಂದಿನ ಮಾತುಕತೆಗಳು ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ನಡೆಯುವ ಸಾಧ್ಯತೆ ಇದೆ. ಆದರೆ ಅಂತಿಮ ನಿರ್ಧಾರ ಇನ್ನೂ ಕೈಗೊಳ್ಳಲಾಗಿಲ್ಲ.

ಪಾಕಿಸ್ತಾನದ ರಾಜತಾಂತ್ರಿಕ ಚಟುವಟಿಕೆ: ಪಾಕಿಸ್ತಾನದ ಸೇನಾ ಮುಖ್ಯಸ್ಥರು ಇರಾನ್ ಸಂಸತ್ ಸ್ಪೀಕರ್‌ರನ್ನು ಭೇಟಿಯಾಗಿದ್ದಾರೆ. ಇದೇ ವೇಳೆ ಪಾಕಿಸ್ತಾನದ ಪ್ರಧಾನಮಂತ್ರಿ ಕತಾರ್‌ಗೆ ಭೇಟಿ ನೀಡಿ ಶಾಂತಿ ಪ್ರಕ್ರಿಯೆ ಕುರಿತ ಚರ್ಚೆ ನಡೆಸುತ್ತಿದ್ದಾರೆ. ಅವರು ನಂತರ ಟರ್ಕಿಗೆ ಭೇಟಿ ನೀಡಲಿದ್ದಾರೆ.

ನಿಗದಿಯಾಗದ ಎರಡನೇ ಸುತ್ತಿನ ಮಾತುಕತೆ ದಿನಾಂಕ

• ಇಸ್ಲಾಮಾಬಾದ್: ಅಮೆರಿಕ ಮತ್ತು ಇರಾನ್ ನಡುವಿನ ಎರಡನೇ ಸುತ್ತಿನ ಮಾತುಕತೆಗೆ ಯಾವುದೇ ದಿನಾಂಕಗಳನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ, ಎಂದು ಪಾಕಿಸ್ತಾನದ ವಿದೇಶಾಂಗ ಕಚೇರಿಯ ವಕ್ತಾರ ತಾಹಿರ್ ಅಂದ್ರಾಬಿ ಗುರುವಾರ ತಿಳಿಸಿದ್ದಾರೆ. ಮಾತುಕತೆಗಳು ಹೆಚ್ಚಿನ ವಿಶ್ವಾಸ ಮತ್ತು ಗೌಪ್ಯತೆಯೊಂದಿಗೆ ಮುಂದುವರಿಯುತ್ತಿವೆ, ಎಂದು ಅಂದ್ರಾಬಿ ತಿಳಿಸಿದ್ದಾರೆ. ನಿಯೋಗದ ರಚನೆ ಮತ್ತು ಸಮಯದ ವಿವರಗಳನ್ನು ನಿರ್ಧರಿಸುವುದು ಆಯಾ ದೇಶಗಳಿಗೆ ಬಿಟ್ಟ ವಿಚಾರ. ಈ ಚರ್ಚೆಗಳಲ್ಲಿ ಪರಮಾಣು ವಿಷಯವೂ ಸೇರಿದೆ. 21 ಗಂಟೆಗಳ ಕಾಲ ನಡೆದ ಇಸ್ಲಾಮಾಬಾದ್ ಮಾತುಕತೆಯ ನಂತರ, ಸಂದೇಶಗಳ ವಿನಿಮಯಕ್ಕೆ ಪಾಕಿಸ್ತಾನ ಮಧ್ಯಸ್ಥಿಕೆ ವಹಿಸುವುದನ್ನು ಮುಂದುವರಿಸಿದೆ. ಪ್ರಧಾನಿ ಶೆಹಬಾಜ್ ಷರೀಫ್ ಪ್ರಸ್ತುತ ಸೌದಿ ಅರೇಬಿಯಾ, ಕತಾರ್ ಮತ್ತು ಟರ್ಕಿ ಪ್ರವಾಸದಲ್ಲಿದ್ದಾರೆ. ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ನೇತೃತ್ವದ ನಿಯೋಗ ಟೆಹ್ರಾನ್‌ಗೆ ಭೇಟಿ ನೀಡಿ ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಘರ್ ಘಾಲಿಬಾಫ್ ಸೇರಿದಂತೆ ಪ್ರಮುಖ ಅಧಿಕಾರಿಗಳನ್ನು ಭೇಟಿ ಮಾಡಿದೆ. ಪ್ರಸ್ತುತ ಜಾರಿಯಲ್ಲಿರುವ ಎರಡು ವಾರಗಳ ಕದನ ವಿರಾಮವು ಏ.22ರಂದು ಮುಕ್ತಾಯಗೊಳ್ಳಲಿದೆ. ಕಳೆದ ವಾರಾಂತ್ಯದಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೆ ಅಂತ್ಯಗೊಂಡಿದ್ದವು.

ನೌಕಾ ನಾಕಾಬಂದಿ

ನೌಕಾ ನಾಕಾಬಂದಿಯನ್ನು ಜಾರಿಗೊಳಿಸಲು 10,000 ಕ್ಕೂ ಹೆಚ್ಚು ಸೈನಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಹಡಗುಗಳು ಬಂದರ್ ಬಿಡುವ ಮೊದಲಿಗೆ ಎಚ್ಚರಿಕೆ ನೀಡಲಾಗುತ್ತದೆ. ಇದುವರೆಗೆ ಯಾವುದೇ ಹಡಗನ್ನು ಬಲವಂತವಾಗಿ ತಡೆಯಲಿಲ್ಲ, 13 ಹಡಗುಗಳು ಹಿಂದಿರುಗಿವೆ ಎಂದು ಅಮೆರಿಕ ಹೇಳಿದೆ. ರಕ್ಷಣಾ ಕಾರ್ಯದರ್ಶಿಯ ಪ್ರಕಾರ, ಅಮೆರಿಕ ತನ್ನ ಒಟ್ಟು ನೌಕಾ ಶಕ್ತಿಯ 10% ಕ್ಕಿಂತ ಕಡಿಮೆ ಭಾಗವನ್ನು ಮಾತ್ರ ಬಳಸುತ್ತಿದೆ. ಮಧ್ಯಪ್ರಾಚ್ಯದಲ್ಲಿ 16 ಯುದ್ಧನೌಕೆಗಳು ನಿಯೋಜಿಸಲ್ಪಟ್ಟಿವೆ, ಇದರಲ್ಲಿ ಡಿಸ್ಟ್ರಾಯರ್‌ಗಳು, ಏರ್‌ಕ್ರಾಫ್ಟ್ ಕ್ಯಾರಿಯರ್ ಹಾಗೂ ಇತರ ನೌಕೆಗಳು ಸೇರಿವೆ.

ಇರಾನ್, ರಷ್ಯಾ ತೈಲ ಖರೀದಿಗೆ ಅಮೆರಿಕ ವಿನಾಯಿತಿ ವಿಸ್ತರಿಸಲ್ಲ

• ವಾಷಿಂಗ್ಟನ್: ಇರಾನ್ ಮತ್ತು ರಷ್ಯಾದಿಂದ ತೈಲ ಖರೀದಿಸಲು ನೀಡಿದ್ದ ತಾತ್ಕಾಲಿಕ ವಿನಾಯಿತಿಯನ್ನು ಯಾವುದೇ ಕಾರಣಕ್ಕೂ ಮುಂದುವರಿಸುವ ಯೋಜನೆಯಿಲ್ಲ ಎಂದು ಅಮೆರಿಕ ಟ್ರೆಷರಿ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ಬುಧವಾರ ಸ್ಪಷ್ಟವಾಗಿ ಹೇಳಿದ್ದಾರೆ. ಹಾರ್ಮುಜ್ ಜಲಸಂಧಿ ಕುರಿತಂತೆ ವಿಚಾರದಲ್ಲಿನ ಅನಿಶ್ಚಿತತೆ ಹಿನ್ನೆಲೆ ಕೇಂದ್ರ ಸರ್ಕಾರ ರಷ್ಯಾ ಕಚ್ಚಾ ತೈಲ ಖರೀದಿ ಮುಂದುವರಿಸಲಿದೆ. ರಷ್ಯಾ ಮತ್ತು ಇರಾನ್ ತೈಲ ಖರೀದಿಸಲು ನೀಡಿದ್ದ ಸಾಮಾನ್ಯ ಪರವಾನಗಿಯನ್ನು ನಾವು ಮರುನವೀಕರಿಸುವುದಿಲ್ಲ ಅಥವಾ ವಿಸ್ತರಿಸುವುದಿಲ್ಲ. ಮಾ.11ರವರೆಗೆ ತೈಲ ಹಡಗುಗಳಲ್ಲಿ ಲೋಡ್ ಮಾಡಲಾಗಿದ್ದ ತೈಲಕ್ಕೆ ಮಾತ್ರ ಈ ವಿನಾಯಿತಿ ಅನ್ವಯಿಸಿತ್ತು. ಆ ತೈಲ ಪ್ರಮಾಣ ಈಗಾಗಲೇ ಬಳಕೆಯಾಗಿವೆ ಎಂದು ಬೆಸ್ಸೆಂಟ್ ಹೇಳಿದ್ದಾರೆ.

ಇಸ್ರೇಲ್-ಲೆಬನಾನ್ ಮಧ್ಯೆ 10 ದಿನಗಳ ಕದನ ವಿರಾಮ: ಟ್ರಂಪ್

• ವಾಷಿಂಗ್ಟನ್: ಇಸ್ರೇಲ್-ಲೆಬನಾನ್ ಮಧ್ಯೆ 10 ದಿನಗಳ ಕಾಲ ತಾತ್ಕಾಲಿಕ ಕದನ ವಿರಾಮವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ರಾತ್ರಿ ಘೋಷಿಸಿದ್ದಾರೆ. ಟ್ರಂಪ್ ಹೇಳಿಕೆಯ ಪ್ರಕಾರ, ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಹಾಗೂ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗೆ ಉತ್ತಮ ಮಾತುಕತೆ ನಡೆದಿದ್ದು, ಶಾಂತಿ ಸ್ಥಾಪಿಸುವ ಉಭಯ ರಾಷ್ಟ್ರಗಳು 10 ದಿನಗಳ ಅಧಿಕೃತ ಯುದ್ಧ ವಿರಾಮಕ್ಕೆ ಒಪ್ಪಿಕೊಂಡಿವೆ. ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಹಾಗೂ ಇಸ್ರೇಲ್ ಪ್ರಧಾನಿ ಬಿಬಿ ನೆತನ್ಯಾಹು ಅವರೊಂದಿಗೆ ನಾನು ಉತ್ತಮ ಮಾತುಕತೆ ನಡೆಸಿದ್ದೇನೆ. ಈ ಇಬ್ಬರು ನಾಯಕರು ತಮ್ಮ ದೇಶಗಳ ನಡುವೆ ಶಾಂತಿ ನೆಲೆಗೊಳಿಸಲು ಗುರುವಾರದಿಂದ 10 ದಿನಗಳವರೆಗೆ ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದಾರೆ. 34 ವರ್ಷಗಳ ನಂತರ ಈ ಎರಡು ದೇಶಗಳು ವಾಷಿಂಗ್ಟನ್‌ನಲ್ಲಿ ಮೊದಲ ಬಾರಿಗೆ ನೇರ ಮಾತುಕತೆ ನಡೆಸಿವೆ. ನನ್ನ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಉಪಸ್ಥಿತಿಯಲ್ಲಿ ಈ ಮಾತುಕತೆ ನಡೆದಿದೆ. ವಿಶ್ವದೆಲ್ಲೆಡೆ 9 ಯುದ್ಧಗಳನ್ನು ನಿಲ್ಲಿಸಿದ ಗೌರವ ನನಗೆ ಸಿಕ್ಕಿದೆ, ಇದು ನನ್ನ 10ನೇ ಸಾಧನೆ ಎಂದು ಟ್ರಂಪ್ ಟ್ರುಥ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ.

ಉದ್ವಿಗ್ನತೆ ಜಾಗತಿಕ ಎಲ್ಲಾ ರಾಷ್ಟ್ರಗಳಿಗೆ ಪರಿಣಾಮ ಬೀರಿದೆ: ಪ್ರಧಾನಿ ಮೋದಿ



• ಹೊಸದಿಲ್ಲಿ: ಜಗತ್ತಿನ ಇಂದಿನ ಉದ್ವಿಗ್ನ ಸನ್ನಿವೇಶ ಎಲ್ಲಾ ರಾಷ್ಟ್ರಗಳ ಮೇಲೂ ಪರಿಣಾಮ ಬೀರಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಕಳವಳ ವ್ಯಕ್ತಪಡಿಸಿದ್ದಾರೆ. ಮಿಲಿಟರಿ ಸಂಘರ್ಷದಿಂದ ಯಾವುದೇ ಸಮಸ್ಯೆ ಬಗೆಹರಿಸಲಾಗದು, ಹಾಗಾಗಿ ಉಕ್ರೇನ್ ಮತ್ತು ಪಶ್ಚಿಮ ಏಷ್ಯಾದಲ್ಲಿ ಶಾಶ್ವತವಾಗಿ ಶಾಂತಿ ನೆಲೆಗೊಳಿಸಬೇಕೆಂಬ ಪ್ರಾಮಾಣಿಕ ಆಶಯವನ್ನು ಪ್ರಧಾನಿ ಮೋದಿ ಪುನರುಚ್ಚರಿಸಿ ವ್ಯಕ್ತಪಡಿಸಿದ್ದಾರೆ.

ಜಂಟಿ ಶ್ರಮ ಸಂಕಲ್ಪ: ಆಸ್ಟ್ರಿಯಾದ ಫೆಡರಲ್ ಚಾನ್ಸೆಲರ್ ಕ್ರಿಶ್ಚಿಯನ್ ಸ್ಟಾಕರ್ ಜತೆ ವಿಸ್ತೃತ ಮಾತುಕತೆ ನಂತರದಲ್ಲಿ ಪ್ರಧಾನಿ ಮೋದಿ ಜಾಗತಿಕ ಸನ್ನಿವೇಶ ಕುರಿತು ಈ ತೆರ ಬೇಗುದಿ ವ್ಯಕ್ತಪಡಿಸಿದರು. ವ್ಯಾಪಾರ, ರಕ್ಷಣೆ ಮತ್ತು ಮೂಲಸೌಕರ್ಯ ರಂಗಗಳಲ್ಲಿ ಭಾರತ-ಆಸ್ಟ್ರಿಯಾ ನಡುವಿನ ದ್ವಿಪಕ್ಷೀಯ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ವಿಚಾರವಾಗಿ ಪ್ರಧಾನಿ ಮೋದಿ ಮತ್ತು ಸ್ಟಾಕರ್ ಚರ್ಚಿಸಿದ್ದಾರೆ. ಉಕ್ರೇನ್ ಮತ್ತು ಪ.ಏಷ್ಯಾ ಸಂಘರ್ಷಗಳು ಜಾಗತಿಕ ಆರ್ಥಿಕತೆ ಮೇಲೆ ಬೀರಲಿರುವ ಪರಿಣಾಮಗಳ ಬಗ್ಗೆ ಚರ್ಚಿಸಿ, ಇದನ್ನೆದುರಿಸಲು ಜಂಟಿಯಾಗಿ ಶ್ರಮಿಸುವ ಸಂಕಲ್ಪವನ್ನು ಉಭಯ ನಾಯಕರು ತೊಟ್ಟಿದ್ದಾರೆ. ಆಸ್ಟ್ರಿಯನ್ ಚಾನ್ಸಲರ್ ಸ್ಟಾಕರ್ ತಮ್ಮ ನಾಲ್ಕು ದಿನಗಳ ಪ್ರವಾಸದ ನಿಮಿತ್ತ ಭಾರತಕ್ಕೆ ಬಂದಿಳಿದಿದ್ದಾರೆ. ಯುರೋಪ್ ಹೊರಗಿನ ಸ್ಟಾಕರ್ ಅವರ ಪ್ರಥಮ ಅಧಿಕೃತ ಪ್ರವಾಸ ಇದಾಗಿದೆ.

ಭಯೋತ್ಪಾದನೆ ನಿರ್ಮೂಲನೆ: ಇಡೀ ಜಗತ್ತಿಂದು ತೀರಾ ಗಂಭೀರ ಮತ್ತು ಉದ್ವಿಗ್ನ ಸನ್ನಿವೇಶದಲ್ಲಿದೆ. ಇದರ ಪರಿಣಾಮ ನಮ್ಮೆಲ್ಲರ ಮೇಲಾಗುತ್ತಿದೆ. ಇಂತಹ ಉದ್ವಿಗ್ನ ಜಾಗತಿಕ ಸನ್ನಿವೇಶದಲ್ಲಿ, ಮಿಲಿಟರಿ ಸಂಘರ್ಷದಿಂದ ಯಾವುದೇ ಸಮಸ್ಯೆಗಳು ಬಗೆಹರಿಯವು. ಉಕ್ರೇನ್‌ನಲ್ಲಾಗಲಿ, ಪ. ಏಷ್ಯಾದಲ್ಲಾಗಲಿ ಸ್ಥಿರ, ಸಹ್ಯ ಮತ್ತು ಶಾಶ್ವತವಾದ ಶಾಂತಿಯನ್ನು ನಾವು ಬೆಂಬಲಿಸುತ್ತೇವೆ ಎಂದು ಪ್ರಧಾನಿ ಮೋದಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬೆಳೆಯುತ್ತಿರುವ ಜಾಗತಿಕ ಸವಾಲುಗಳ ಎದುರಿಸಲು ಜಾಗತಿಕ ಸಂಸ್ಥೆಗಳ ಪುನರಚನೆ ಅತ್ಯವಶ್ಯವೆಂದು ನಾವು ಒಪ್ಪುತ್ತೇವೆ. ಭಯೋತ್ಪಾದನೆ ನಿರ್ಮೂಲನೆ ವಿಚಾರದಲ್ಲೂ ನಾವು ಸಮಾನ ಬದ್ಧತೆ ಹೊಂದಿದ್ದೇವೆ ಎಂದು ಪ್ರಧಾನಿ ಮೋದಿ ಗಮನ ಸೆಳೆದಿದ್ದಾರೆ. ಸ್ಟಾಕರ್ ಭೇಟಿ ತೀರಾ ಮಹತ್ವ ಪೂರ್ಣವೆಂದಿರುವ ಪ್ರಧಾನಿ ಮೋದಿ, ಭಾರತದ ರೈಲ್ವೆ, ಪರಿಶುದ್ಧ ಇಂಧನ ಉಪಕ್ರಮಗಳ ಸಹಿತ ದೇಶದ ಹಲವಾರು ಇಂಜಿನಿಯರಿಂಗ್ ಪ್ರಾಜೆಕ್ಟ್‌ಗಳಲ್ಲಿ ಆಸ್ಟ್ರಿಯನ್ ಕಂಪೆನಿಗಳು ತೊಡಗಿಸಿಕೊಂಡಿರುವುದನ್ನು ಉಲ್ಲೇಖಿಸಿದ್ದಾರೆ.

ಆರು ಒಪ್ಪಂದಗಳಿಗೆ ಸಹಿ: ಭಾರತ ಮತ್ತು ಆಸ್ಟ್ರಿಯಾ ಆರ್ಥಿಕತೆಗಳಲ್ಲಿ ಹೂಡಿಕೆ ಹೂಡಬಯಸುವ ಕಂಪೆನಿಗಳಿಗೆ ನೆರವಾಗಲು ಫಾಸ್ಟ್‌ಟ್ರ್ಯಾಕ್ ವ್ಯವಸ್ಥೆ ಸ್ಥಾಪನೆ, ಮಿಲಿಟರಿ ರಂಗದಲ್ಲಿ ಸಹಕಾರ ಸಹಿತ ಆರು ಒಪ್ಪಂದಗಳಿಗೆ ಪ್ರಧಾನಿ ಮೋದಿ ಮತ್ತು ಸ್ಟಾಕರ್ ಸಹಿ ಹಾಕಿದರು. ಜನವರಿಯಲ್ಲಿ ಸಹಿ ಹಾಕಿರುವ ಭಾರತ-ಇಯು ರಕ್ಷಣಾ ಮತ್ತು ಭದ್ರತಾ ಪಾಲುದಾರಿಕೆ ಒಡಂಬಡಿಕೆ ಆಧಾರದಲ್ಲಿ ಪರಸ್ಪರ ಸಹಕಾರ ವರ್ಧನೆಗೆ , ಮಿಲಿಟರಿ ಸಹಕಾರ ಕುರಿತ ಉದ್ದೇಶಪತ್ರವು ಸಾಂಸ್ಥಿಕ ಚೌಕಟ್ಟನ್ನು ಒದಗಿಸಲಿದೆ.

ಕಿರುಸುದ್ದಿ

ಮಕ್ಕಳ ಆನ್ಲೈನ್ ಭದ್ರತೆ ಜಾಲತಾಣಗಳ ಹೊಣೆ

• ಲಂಡನ್: ಸಾಮಾಜಿಕ ಜಾಲತಾಣ ಸಂಸ್ಥೆಗಳು ಮಕ್ಕಳ ಆನ್‌ಲೈನ್ ಭದ್ರತೆಯ ಹೊಣೆ ಹೊರಬೇಕೆಂದು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಕಠಿಣ ಸಂದೇಶ ನೀಡಿದ್ದಾರೆ. ಸಾಮಾಜಿಕ ಜಾಲತಾಣಗಳು ಮಕ್ಕಳಿಗೆ ತಮ್ಮನ್ನು ಹೇಗೆ ಕಾಣುತ್ತಾರೆ, ಅವರ ಸ್ನೇಹಿತ ವರ್ಗ ಮತ್ತು ಅವರ ಸುತ್ತಲಿನ ಜಗತ್ತನ್ನು ಹೇಗೆ ಅರ್ಥೈಸಿಕೊಳ್ಳುತ್ತಾರೆ ಎಂಬುದನ್ನು ರೂಪಿಸುತ್ತವೆ. ಇದರಲ್ಲಿ ನಿಜವಾದ ಅಪಾಯಗಳಿದ್ದಾಗ, ಅದನ್ನು ನಿರ್ಲಕ್ಷಿಸುವುದು ಆಯ್ಕೆಯೇ ಅಲ್ಲ ಎಂದು ಸ್ಟಾರ್ಮರ್ ಹೇಳಿದರು.

ಲಖನೌ ಅಗ್ನಿ ಅವಘಡಕ್ಕೆ ಬಾಲಕಿ, 2 ತಿಂಗಳ ಶಿಶು ಬಲಿ

• ಲಖನೌ: ನಗರದ ವಿಕಾಸ್ ನಗರ ಪ್ರದೇಶದ ಸೆಕ್ಟರ್ 11ರಲ್ಲಿ ನಿರ್ಮಿಸಲಾದ ತಾತ್ಕಾಲಿಕ ಗುಡಿಸಲು ವಸತಿಗಳಲ್ಲಿ ಸಂಭವಿಸಿದ ಭಾರೀ ಅಗ್ನಿ ಅವಘಡದಲ್ಲಿ ಒಬ್ಬ ಬಾಲಕಿ ಮತ್ತು ಆಕೆಯ 2 ತಿಂಗಳ ಸಹೋದರಿ ಮೃತಪಟ್ಟ ಹೃದಯ ವಿದ್ರಾವಕ ಘಟನೆ ಸಂಭವಿಸಿದೆ. ಅಗ್ನಿ ದುರಂತದಲ್ಲಿ ಸುಮಾರು 280ಕ್ಕೂ ಹೆಚ್ಚು ಗುಡಿಸಲುಗಳು ಸಂಪೂರ್ಣ ಸುಟ್ಟು ಭಸ್ಮವಾಗಿವೆ. ಸಾವಿರಕ್ಕೂ ಹೆಚ್ಚು ಮಂದಿ ದುರಂತದಿಂದ ನಿರಾಶ್ರಿತರಾಗಿದ್ದಾರೆ.

ಮುಸಲ್ಮಾನ ಸ್ತ್ರೀಯರಿಗೆ ಸಮಾನ ಹಕ್ಕಿಗೆ ಮನವಿ

• ಹೊಸದಿಲ್ಲಿ: ದೇಶದಲ್ಲಿ ಏಕಸಮಾನ ನಾಗರಿಕ ಸಂಹಿತೆ (ಏನಾಸಂ) ಜಾರಿಯು 'ಸಾಂವಿಧಾನಿಕ ಗುರಿ' ಎಂದು ಅಭಿಪ್ರಾಯಪಟ್ಟ ಸುಪ್ರೀಂಕೋರ್ಟ್, ಮುಸ್ಲಿಂ ವೈಯಕ್ತಿಕ ಕಾನೂನಿನ ಕೆಲವು ವಿಧಿಗಳು ಮಹಿಳೆಯರ ವಿರುದ್ಧ ಭೇದಭಾವ ನಡೆಸುತ್ತಿವೆ ಎಂಬ ಆರೋಪದಡಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆಗೊಳಪಡಿಸಲು ಗುರುವಾರ ಒಪ್ಪಿಗೆ ನೀಡಿದೆ. ಮುಖ್ಯ ನ್ಯಾ.ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿಗಳಾದ ಜೋಯ್ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಒಳಗೊಂಡ ಪೀಠ, ಅಲ್ಪಸಂಖ್ಯಾತ ವ್ಯವಹಾರಗಳ ಕೇಂದ್ರ ಸಚಿವಾಲಯದಿಂದ ಪ್ರತಿಕ್ರಿಯೆ ಕೇಳಿದೆ. ಈ ಅರ್ಜಿಯನ್ನು ಪೌಲೋಮಿ ಪವಿನಿ ಶುಕ್ಲಾ ಮತ್ತು ನ್ಯಾಯಕಾರಿ ಮಹಿಳಾ ಪ್ರತಿಷ್ಠಾನ ಸಲ್ಲಿಸಿವೆ.

ಅರ್ಜಿದಾರರ ಪರವಾಗಿ ವಕೀಲ ಪ್ರಶಾಂತ್ ಭೂಷಣ್ ವಾದ ಮಂಡಿಸಿ, 1937ರ ಶರಿಯತ್ ಅನ್ವಯ ಕಾನೂನಿನ ಕೆಲವು ವಿಧಿಗಳು ಮಹಿಳೆಯರಿಗೆ ಆಸ್ತಿ ಹಕ್ಕುಗಳಲ್ಲಿ ಸಮಾನತೆ ನೀಡುವುದಿಲ್ಲ ಎಂದು ಹೇಳಿದರು. ಮಹಿಳೆಯರಿಗೆ ಪುರುಷರಿಗಿಂತ ಅರ್ಧ ಅಥವಾ ಅದಕ್ಕಿಂತ ಕಡಿಮೆ ಪಾಲು ನೀಡುವುದು ಸ್ಪಷ್ಟವಾದ ಭೇದಭಾವ ಎಂದೂ ಅವರು ವಾದಿಸಿದರು. ಇದಲ್ಲದೆ, ವಾರಸತ್ವದ ವಿಷಯಗಳು ನಾಗರಿಕ ಸ್ವಭಾವದವಾಗಿದ್ದು, ಅವು ಧರ್ಮದ 'ಅತ್ಯಾವಶ್ಯಕ ಆಚರಣೆ'ಗಳಾಗುವುದಿಲ್ಲ ಎಂದು ಅವರು ತಿಳಿಸಿದರು. ಆದ್ದರಿಂದ, ಇವುಗಳಿಗೆ ಸಂವಿಧಾನದ ಕಲಂ 25 ಅಡಿಯಲ್ಲಿ ರಕ್ಷಣೆಯಿಲ್ಲ ಎಂದು ಹೇಳಿದರು. ಆದರೆ ನ್ಯಾಯಾಲಯವು ಈ ವಿಚಾರದಲ್ಲಿ ನ್ಯಾಯಾಂಗ ಅತಿಕ್ರಮಣದ ಬಗ್ಗೆ ಎಚ್ಚರಿಕೆ ವ್ಯಕ್ತಪಡಿಸಿದೆ.

ಉಕ್ರೇನ್ ಮೇಲೆ ರಷ್ಯಾ ದಾಳಿ: 16 ಮಂದಿ ಸಾವು

• ಕೀವ್: ಉಕ್ರೇನ್‌ನ ನಾಗರಿಕ ಪ್ರದೇಶಗಳ ಮೇಲೆ ರಷ್ಯಾ ಹಲವು ಗಂಟೆಗಳ ಕಾಲ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದ್ದು, ಕನಿಷ್ಠ 16 ಮಂದಿ ಬಲಿಯಾಗಿದ್ದಾರೆ. 80ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ದಾಳಿಗೆ ಭಯಭೀತರಾದ ಉಕ್ರೇನಿಯನ್ನರು ತಮ್ಮ ಮನೆಗಳಲ್ಲೇ ಅಡಗಿಕೊಂಡಿದ್ದರೆಂದು ವರದಿಯಾಗಿದೆ. ಸುಮಾರು 700 ಡ್ರೋನ್‌ಗಳು ಮತ್ತು ಡಜನ್‌ಗಟ್ಟಲೆ ಖಂಡಾಂತರ ಹಾಗೂ ಕ್ರೂಸ್ ಕ್ಷಿಪಣಿಗಳನ್ನು ರಷ್ಯಾ ಉಡಾಯಿಸಿದ್ದು, ಮುಖ್ಯವಾಗಿ ನಾಗರಿಕ ಪ್ರದೇಶಗಳನ್ನು ಗುರಿಯಾಗಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದು ಕಳೆದ ಎರಡು ವಾರಗಳಲ್ಲಿ ನಡೆದ ಅತಿ ದೊಡ್ಡ ವಾಯು ದಾಳಿ ಎನ್ನಲಾಗಿದೆ. ನಾಲ್ಕು ವರ್ಷಗಳ ಹಿಂದಿನಿಂದ ಉಕ್ರೇನ್ ಮೇಲೆ ದಂಡೆತ್ತಿ ಆಕ್ರಮಣಕಾರಿ ದಾಳಿ ಆರಂಭಿಸಿದಾಗಿನಿಂದಲೂ ರಷ್ಯಾ ನಾಗರಿಕ ಪ್ರದೇಶಗಳ ಮೇಲೆ ನಿರಂತರ ದಾಳಿ ನಡೆಸುತ್ತಲೇ ಬಂದಿದೆ ಎಂದು ಉಕ್ರೇನ್ ಅಧಿಕಾರಿಗಳು ಆರೋಪಿಸಿದ್ದಾರೆ. ವಿಶ್ವಸಂಸ್ಥೆಯ ಪ್ರಕಾರ, ಈ ದಾಳಿಗಳಲ್ಲಿ ಈಗಾಗಲೇ 15,000ಕ್ಕೂ ಹೆಚ್ಚು ಉಕ್ರೇನ್ ನಾಗರಿಕರು ಮೃತಪಟ್ಟಿದ್ದಾರೆ.

ದೇಶದ ವಾಯು ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್ಸ್ಕಿ, ಜರ್ಮನಿ, ನಾರ್ವೆ ಮತ್ತು ಇಟಲಿಗೆ 48 ಗಂಟೆಗಳ ಪ್ರವಾಸ ಕೈಗೊಂಡ ಸಮಯದಲ್ಲೇ ರಷ್ಯಾ ದಾಳಿ ನಡೆಸಿದೆ.

ರಾಜ್ಯಸಭಾ ಸದಸ್ಯರಾಗಿ ನಿತಿನ್ ಪ್ರಮಾಣ ವಚನ

• ಹೊಸದಿಲ್ಲಿ: ರಾಜ್ಯಸಭೆಗೆ ಹೊಸದಾಗಿ ಆಯ್ಕೆಯಾದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಕೇಂದ್ರ ಸಚಿವ ರಾಮನಾಥ್ ಠಾಕೂರ್, ಹಿರಿಯ ಕಾಂಗ್ರೆಸ್ ನಾಯಕ ಅಭಿಷೇಕ್ ಸಿಂಘ್ವಿ ಹಾಗೂ ಇತರ 13 ಸಂಸದರು ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು. ಉಪ ರಾಷ್ಟ್ರಪತಿ ಹಾಗೂ ರಾಜ್ಯಸಭೆಯ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ರಾಜ್ಯಸಭೆಯ 16 ಹೊಸ ಅಥವಾ ಮರು ಚುನಾಯಿತ ಸದಸ್ಯರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಹೊಸ ಸದಸ್ಯರು ಬಿಹಾರ, ಅಸ್ಸಾಂ, ಹರ್ಯಾಣ, ಹಿಮಾಚಲ ಪ್ರದೇಶ, ಮಹಾರಾಷ್ಟ್ರ, ಒಡಿಶ ಮತ್ತು ತೆಲಂಗಾಣಗಳನ್ನು ಪ್ರತಿನಿಧಿಸುತ್ತಿದ್ದಾರೆ. ಬಿಜೆಪಿಯ 8 ಸಂಸದರು, ಬಿಜೆಪಿ ಮಿತ್ರಪಕ್ಷಗಳ ಮೂವರು ಸಂಸದರು ಮತ್ತು ಕಾಂಗ್ರೆಸ್‌ನ 5 ಸಂಸದರು ಪ್ರಮಾಣವಚನ ಸ್ವೀಕರಿಸಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಬಿಹಾರ ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದ ನವೀನ್ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಇವರು ಪ್ರಚಂಡ ಕರತಾಡನ ಮಧ್ಯೆ ಹಿಂದಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಸಭೆಗೆ ಬಿಹಾರದಿಂದ ಪುನರಾಯ್ಕೆಯಾಗಿರುವ ಕೇಂದ್ರ ಸಚಿವ ರಾಮ್‌ನಾಥ್ ಠಾಕೂರ್ ಕೂಡ ನವೀನ್ ಜತೆ ಪ್ರಮಾಣ ವಚನ ಸ್ವೀಕರಿಸಿದರು. ಪ್ರಮಾಣವಚನ ಸ್ವೀಕರಿಸಿದ ಉಪೇಂದ್ರ ಕುಶ್ವಾರಾ (ಆರ್‌ಎಲ್‌ಎಂ), ಶಿವೇಶ್ ಕುಮಾರ್(ಬಿಜೆಪಿ) ಕೂಡ ಬಿಹಾರವನ್ನು ಪ್ರತಿನಿಧಿಸುವವರು. ತೆರಾಶ್ ಗೋವಲ್ಲಾ (ಬಿಜೆಪಿ) ಜೋಗನ್ ಮೋಹನ್ (ಬಿಜೆಪಿ), ಪ್ರಮೋದ್ ಬೋರೋ(ಯುಪಿಪಿ-ಎಲ್) ಅಸ್ಸಾಂ ಅನ್ನು ಪ್ರತಿನಿಧಿಸುತ್ತಿರುವ ರಾಜ್ಯಸಭಾ ಸಂಸದರು.

ಮಹಿಳಾ ಕಲ್ಯಾಣಕ್ಕೆ ವಿಜಯ್ ಆದ್ಯತೆ


• ಚೆನ್ನೈ: 60 ವರ್ಷದೊಳಗಿನ ಮಹಿಳೆಯರಿಗೆ ತಿಂಗಳಿಗೆ ರೂ.2500 ಆರ್ಥಿಕ ನೆರವು, ಮದುವೆಗೆ 8 ಗ್ರಾಂ. ಚಿನ್ನದ ಉಡುಗೊರೆ ಸಹಿತ ಮಹಿಳಾ ಕಲ್ಯಾಣಕ್ಕೆ ತುಂಬು ಆದ್ಯತೆಯಿರುವಂತಹ ಚುನಾವಣಾ ಪ್ರಣಾಳಿಕೆಯನ್ನು ತಮಿಳಗ ವೆಟ್ರಿ ಕಳಗಂ (ಟಿವಿಕೆ) ನಾಯಕ ದಳಪತಿ ವಿಜಯ್ ಗುರುವಾರ ಪ್ರಕಟಿಸಿದ್ದಾರೆ. ಬಡ ವಧುವಿಗೆ ಬಂಗಾರ ಜತೆ ಉತ್ತಮ ಗುಣಮಟ್ಟದ ರೇಷ್ಮೆ ಸೀರೆ, ಮಹಿಳಾ ನೇತೃತ್ವದ ಎಸ್‌ಎಚ್‌ಜಿಗಳಿಗೆ 5 ಲಕ್ಷ ರೂ.ವರೆಗೆ ಬಡ್ಡಿ ಮುಕ್ತ ಸಾಲ ಸೌಲಭ್ಯದ ಆಶ್ವಾಸನೆಯೂ ಪ್ರಣಾಳಿಕೆಯಲ್ಲಿದೆ. ಮಾತ್ರವಲ್ಲ, ಒಂದು ವೇಳೆ ಅಧಿಕಾರಕ್ಕೆ ಬಂದಲ್ಲಿ ಭ್ರಷ್ಟಾಚಾರ ಮುಕ್ತ ಉತ್ತಮ ಆಡಳಿತ ನೀಡುವ ಭರವಸೆಯನ್ನೂ ವಿಜಯ್ ನೀಡಿದ್ದಾರೆ.

ಶಿಕ್ಷಣಕ್ಕೆ ಆದ್ಯತೆ: ಪ್ರಣಾಳಿಕೆಯಲ್ಲಿ ಶಿಕ್ಷಣಕ್ಕೂ ಆದ್ಯತೆ ನೀಡಲಾಗಿದೆ. ಮಕ್ಕಳು ಅರ್ಧದಲ್ಲಿ ವ್ಯಾಸಂಗ ಬಿಡುವುದನ್ನು ತಪ್ಪಿಸಲು ಸರ್ಕಾರಿ ಶಾಲೆ ಅಥವಾ ರಾಜ್ಯ ಸರ್ಕಾರದ ಅನುದಾನಿತ ಶಾಲೆಗಳಲ್ಲಿ ಕಲಿಯುವ ಮಕ್ಕಳ ಪೋಷಕರಿಗೆ ವಾರ್ಷಿಕ 15 ಸಾವಿರ ರೂ. ಆರ್ಥಿಕ ನೆರವು ಘೋಷಿಸಲಾಗಿದೆ. ತಮಿಳುನಾಡಿನ ದಂತಕಥೆ ಕಾಮರಾಜರ್ ಹೆಸರಲ್ಲಿ 100 ವಿಶೇಷ ವಸತಿ ಶಾಲೆಗಳನ್ನು ತೆರೆಯಲಾಗುವುದು. ಉನ್ನತ ಶಿಕ್ಷಣಕ್ಕೆ 20 ಲಕ್ಷ ರೂ.ವರೆಗೆ ಸಾಲ ಸೌಲಭ್ಯ, ಎಐ ಖಾತೆ, ಎಐ ವಿವಿ ಮತ್ತು ಎಐ ನಗರ ನಿರ್ಮಾಣದ ಭರವಸೆಯನ್ನೂ ಪ್ರಣಾಳಿಕೆಯಲ್ಲಿ ಟಿವಿಕೆ ನೀಡಿದೆ.

ಮುಸಲ್ಮಾನ ಮಹಿಳೆಯರಿಗೆ ಧರ್ಮಾಧಾರಿತ ಮೀಸಲಾತಿ ಇಲ್ಲ: ಅಮಿತ್ ಶಾ

ಧರ್ಮಾಧಾರಿತ ಮೀಸಲಾತಿ ಅಸಾಂವಿಧಾನಿಕ

• ಹೊಸದಿಲ್ಲಿ : ಧರ್ಮದ ಆಧಾರದಲ್ಲಿ ಮುಸಲ್ಮಾನರಿಗೆ ಮೀಸಲಾತಿ ನೀಡುವುದಿಲ್ಲ. ಇಂತಹ ಮೀಸಲಾತಿ ಅಥವಾ ಕೋಟಾಗಳು ಅಸಾಂವಿಧಾನಿಕ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಈಗಾಗಲೆ ಪ್ರಗತಿಯಲ್ಲಿರುವ ಜನಗಣತಿಯೊಂದಿಗೆ ಜಾತಿ ಗಣತಿ ಮತ್ತು ಜನಸಂಖ್ಯಾ ಎಣಿಕೆಯನ್ನು ಮಾಡಲಾಗುವುದು ಎಂದು ಸಚಿವರು ಮಾಹಿತಿ ನೀಡಿದರು. ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿ ಮತ್ತು ಕ್ಷೇತ್ರ ಮರು ವಿಂಗಡಣೆ ಆಯೋಗ ರಚನೆಗಾಗಿ ಲೋಕಸಭೆಯಲ್ಲಿ ಮಂಡಿಸಲಾದ ಮೂರು ಮಸೂದೆಗಳ ಮಂಡನೆಗೆ ಮುನ್ನ ಬರೋಬ್ಬರಿ 40 ನಿಮಿಷ ಕಾಲ ತೀವ್ರತರ ಚರ್ಚೆ ನಡೆದಿದ್ದು, ಚರ್ಚೆ ವೇಳೆ ಸಚಿವ ಶಾ ಈ ರೀತಿ ಸ್ಪಷ್ಟವಾಗಿ ಅಭಿಮತ ವ್ಯಕ್ತಪಡಿಸಿದರು.



ಧರ್ಮಾಧಾರಿತ ಮೀಸಲಾತಿ ಇಲ್ಲ: ಮುಸಲ್ಮಾನ ಮಹಿಳೆಯರಿಗೆ ಧರ್ಮದ ಆಧಾರದಲ್ಲಿ ಮೀಸಲಾತಿ ನೀಡೋ ವಿಚಾರ ಇಲ್ಲವೇ ಇಲ್ಲ. ಧರ್ಮದ ಆಧಾರದಲ್ಲಿ ಮೀಸಲಾತಿಗೆ ನಮ್ಮ ಘನ ಸಂವಿಧಾನದಲ್ಲಿ ಅವಕಾಶ ಕೂಡ ಇಲ್ಲ. ಧರ್ಮದ ಆಧಾರದಲ್ಲಿ ಮುಸಲ್ಮಾನರಿಗೆ ಮೀಸಲಾತಿ ಕಲ್ಪಿಸಲಾಗದು ಎಂಬುದು ನಮ್ಮ ಸರಕಾರದ ಧೋರಣೆ. ಇಂತಹ ಮೀಸಲಾತಿ ಸಂವಿಧಾನಬಾಹಿರ ಎಂದು ಸಚಿವ ಶಾ, ಈ ವಿಚಾರದಲ್ಲಿ ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಮತ್ತು ಧರ್ಮೇಂದ್ರ ಯಾದವ್ ವಾದಕ್ಕೆ ತೀಕ್ಷ್ಣ ತಿರುಗೇಟು ನೀಡಿದರು.

ಸರಕಾರ ಈಗಾಗಲೆ ತೀರ್ಮಾನ ತಳೆದಿದೆ: ಜಾತಿ ಗಣತಿ ನಡೆಸಬೇಕೆಂಬ ಬೇಡಿಕೆಯನ್ನು ನಾವು ಮುಂದಿಡುತ್ತೇವೆಂದು ಸಮಾಜವಾದಿ ಪಕ್ಷದವರು ಹೇಳುತ್ತಾರೆ. ಆದರೆ ವಾಸ್ತವದಲ್ಲಿ ಜಾತಿಗಣತಿ ಬಗ್ಗೆ ನಮ್ಮ ಸರಕಾರ ಈಗಾಗಲೆ ತೀರ್ಮಾನ ಕೈಗೊಂಡಾಗಿದೆ. ಜನಸಂಖ್ಯಾ ಗಣತಿ ಜತೆ ಜಾತಿ ಗಣತಿ ನಡೆಸಲಾಗುವುದು. ಪ್ರಸಕ್ತ ಕುಟುಂಬಗಳು ಅಥವಾ ಮನೆಗಳ ಗಣತಿ ನಡೆದಿದೆ ಮತ್ತು ಮನೆಗಳಿಗೆ ಯಾವುದೇ ಜಾತಿ ಇಲ್ಲ. ಸಮಾಜವಾದಿ ಪಕ್ಷಕ್ಕೆ ಅದರದೇ ಮಾರ್ಗವಿದ್ದಲ್ಲಿ ಮನೆಗಳ ಅಥವಾ ಕುಟುಂಬಗಳ ಜಾತಿಯನ್ನು ತರ್ಕಿಸುವರು ಎಂದು ಸಚಿವ ಶಾ ಟೀಕಿಸಿದರು.

ನಮ್ಮದೇನೂ ಅಭ್ಯಂತರವಿಲ್ಲ: ಸಮಾಜವಾದಿ ಪಕ್ಷ ತನ್ನೆಲ್ಲಾ ಟಿಕೆಟ್‌ಗಳನ್ನು ಮುಸಲ್ಮಾನ ಮಹಿಳೆಯರಿಗೆ ಕೊಡುವುದಿದ್ದಲ್ಲಿ ನಮ್ಮದೇನೂ ಅಭ್ಯಂತರವಿಲ್ಲವೆಂದ ಸಚಿವರು , ಜನಸಂಖ್ಯಾ ಎಣಿಕೆ ಸಂದರ್ಭ ಜಾತಿ ಗಣತಿಗೂ ಅಗತ್ಯ ಪೂರಕ ನಿಯಮಾವಳಿಗಳನ್ನು ಗಣತಿ ಅಧಿಕಾರಿಗಳು ಪ್ರತ್ಯೇಕ ಜೋಡಿಸಿಕೊಂಡಿರುತ್ತಾರೆ. ವೈಯಕ್ತಿಕ ವಾಗಿ ತಾನು ಕೂಡ ಇದನ್ನು ಅಪೇಕ್ಷಿಸಿದ್ದೇನೆ. ಒಟ್ಟಿನಲ್ಲಿ ಜಾತಿ ಗಣತಿ ಜತೆ ಜನಗಣತಿ ನಡೆಯಲಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ ಎಂದರು. ಜನಗಣತಿ 2027ರಡಿ ಮನೆಗಳ ಗಣತಿ ಏ.1ರಿಂದಲೆ ಶುರುವಾಗಿದೆ. ಮುಂದಿನ ಜನಗಣತಿಯು ಜಾತಿ ಗಣತಿಯನ್ನೂ ಒಳಗೊಳ್ಳಬೇಕೆಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ, ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿ ಕಳೆದ ವರ್ಷ ಏಪ್ರಿಲ್ 30ರಂದು ನಿರ್ಧರಿಸಿತ್ತು. ಸ್ವಾತಂತ್ರ್ಯಾನಂತರ ನಡೆದಿರುವ ಒಂದೇ ಒಂದು ಜನಗಣತಿ ಕೂಡ ಜಾತಿ ಗಣತಿಯನ್ನು ಒಳಗೊಂಡಿಲ್ಲ.

ನಾಸಿಕ್ ಘಟನೆ ಹಿನ್ನೆಲೆಯಲ್ಲಿ ಕೋರಿಕೆ | ಸುಪ್ರೀಂಗೆ ಸಲ್ಲಿಕೆಯಾಗಿದೆ ಅರ್ಜಿ

ಬಲವಂತದ ಮತಾಂತರ ಭಯೋತ್ಪಾದನೆಗೆ ಸಮ?

• ಹೊಸದಿಲ್ಲಿ: ನಾಸಿಕ್‌ನ ಬಹುರಾಷ್ಟ್ರೀಯ ಕಂಪನಿಯಲ್ಲಿ ಹೊರಬಿದ್ದ ಧಾರ್ಮಿಕ ಮತಾಂತರ ಮತ್ತು ಲೈಂಗಿಕ ಕಿರುಕುಳ ಆರೋಪಗಳು ದೇಶವ್ಯಾಪಿ ಚರ್ಚೆಗೆ ಗ್ರಾಸವಾಗಿರುವಂತೆಯೇ, ಬಲವಂತ ಹಾಗೂ ಮೋಸದ ಧಾರ್ಮಿಕ ಮತಾಂತರವನ್ನು ನೇರವಾಗಿ ಭಯೋತ್ಪಾದಕ ಕೃತ್ಯವೆಂದು ಘೋಷಿಸುವಂತೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಟಿಸಿಎಸ್ ನಾಸಿಕ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಎಂಟು ಮಹಿಳೆಯರು ಲೈಂಗಿಕ ಕಿರುಕುಳದ ಜೊತೆಗೆ ಬಲವಂತ ಮತಾಂತರ ಆರೋಪ ಮಾಡಿರುವ ಘಟನೆ ಈ ಅರ್ಜಿಗೆ ನೆಲೆ ನೀಡಿದೆ. ಹಿರಿಯ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಸಲ್ಲಿಸಿರುವ ಅರ್ಜಿಯಲ್ಲಿ, 'ಮೋಸದ ಧಾರ್ಮಿಕ ಮತಾಂತರವು ಕೇವಲ ಧಾರ್ಮಿಕ ವಿಷಯವಲ್ಲ; ಅದು ರಾಷ್ಟ್ರದ ಪ್ರಭುತ್ವ, ಧರ್ಮನಿರಪೇಕ್ಷತೆ, ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಕ್ಕೆ ನೇರ ಸವಾಲು' ಎಂದು ಬಣ್ಣಿಸಲಾಗಿದೆ.

ಅರ್ಜಿಯ ಪ್ರಕಾರ, ಸಂಘಟಿತವಾಗಿ, ಒತ್ತಾಯಪೂರ್ವಕವಾಗಿ ನಡೆಯುವ ಮತಾಂತರ ಅಭಿಯಾನಗಳು ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 2023ರ ಸೆಕ್ಷನ್ 113 ಹಾಗೂ





ಉಗ್ರ ಕೃತ್ಯವೆಂದೇ ಪರಿಗಣಿಸಲು ಮನವಿ

ಯುಎಪಿಎ ಕಾಯ್ದೆಯ ಸೆಕ್ಷನ್ 15 ಅಡಿಯಲ್ಲಿ 'ಭಯೋತ್ಪಾದಕ ಕೃತ್ಯ'ಗಳ ವ್ಯಾಪ್ತಿಗೆ ಬರುತ್ತವೆ. ವಿದೇಶಿ ಶಕ್ತಿಗಳ ನೆರವಿನಿಂದ ನಡೆಯುವ ಈ ಸಂಚುಗಳು ದೇಶದ ಜನಸಾಂಖ್ಯಿಕ ಸಮತೋಲನವನ್ನೇ ಬದಲಿಸುವ ಉದ್ದೇಶ ಹೊಂದಿದ್ದು, ಏಕತೆ ಮತ್ತು ಭದ್ರತೆಗೆ ಗಂಭೀರ ಧಕ್ಕೆ ಉಂಟುಮಾಡುತ್ತವೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಇದಲ್ಲದೆ, ಧಾರ್ಮಿಕ ಮತಾಂತರ ಪ್ರಕರಣಗಳಿಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವಂತೆ ಹಾಗೂ ಇಂತಹ ಪ್ರಕರಣಗಳಲ್ಲಿ ಶಿಕ್ಷೆಯನ್ನು ಸತತ ಶಿಕ್ಷೆ ರೂಪದಲ್ಲಿ ವಿಧಿಸುವಂತೆ ಕೋರ್ಟ್‌ಗೆ ಮನವಿ ಮಾಡಲಾಗಿದೆ.

ಹಾಗೆಯೇ 'ಧರ್ಮ ಸ್ವಾತಂತ್ರ್ಯ ಎಂದರೆ ಬಲವಂತ, ಮೋಸ ಅಥವಾ ಒತ್ತಾಯದ ಮೂಲಕ ಮತಾಂತರಗೊಳಿಸುವ ಹಕ್ಕು ಅಲ್ಲ' ಎಂದು ಸ್ಪಷ್ಟಪಡಿಸಲಾಗಿದೆ. ಸಂವಿಧಾನದ 25ನೇ ವಿಧಿ ನೀಡಿರುವ ಧರ್ಮಾಚರಣೆಯ ಹಕ್ಕು ಸಾರ್ವಜನಿಕ ಸುವ್ಯವಸ್ಥೆ, ಆರೋಗ್ಯ ಮತ್ತು ನೈತಿಕತೆಗಳಿಗೆ ಒಳಪಟ್ಟಿದ್ದು, ಅದು ನಿರ್ಬಂಧರಹಿತವಲ್ಲ ಎಂದು ವಾದಿಸಲಾಗಿದೆ.

ದುರುದ್ದೇಶದ ' ಮತಾಂತರ ತಡೆಗೆ ಕಠಿಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಮತ್ತು ರಾಜ್ಯಗಳಿಗೆ ನಿರ್ದೇಶನ ನೀಡುವಂತೆ ಕೇಳಿಕೊಂಡಿರುವ ಈ ಅರ್ಜಿ, ಈಗ ಸುಪ್ರೀಂ ಕೋರ್ಟ್‌ನ ಮುಂದೆ ಮಹತ್ವದ ಸಂವಿಧಾನಾತ್ಮಕ ಚರ್ಚೆಗೆ ವೇದಿಕೆ ಸಿದ್ಧಪಡಿಸಿದೆ.

ಪ್ರಕಟಣೆ

ಬಂಟ್ವಾಳ ತಾಲೂಕು, ಕೊಯಿಲ ಗ್ರಾಮ ಮತ್ತು ಅಂಚೆ ವ್ಯಾಪ್ತಿಯ ಪಿಲ್ಕಾಜೆ ಎಂಬಲ್ಲಿ ಕದ ನಂಬ್ರ:2-48ರಲ್ಲಿ ವಾಸ್ತವಿಸಿ ಬರುವ ಮಧುಕರ ಎಸ್ ದೇವಾಡಿಗರವರ ಪತ್ನಿಯಾದ ಭವಾನಿ ರವರಿಗೆ ತನ್ನ ಪತಿ ಮಧುಕರ್ ಎಸ್. ದೇವಾಡಿಗರವರು ದಿನಾಂಕ:24.02.2025ರಂದು ದಸ್ತಾವೇಜು ನಂಬ್ರ: MGT-1-12381/2024-25 ರಂತೆ ಶೆಡ್ಯೂಲ್ ಜಮೀನಿನಲ್ಲಿ ವಿವರಿಸಿದ ಬಂಟ್ವಾಳ ತಾಲೂಕು ಬಂಟ್ವಾಳ ಕಸಬಾ ಸ.ನಂ.68/11 ಪೈಕಿ ತರಿ 0.40ಎಕ್ರೆ ಹಾಗೂ ಸ.ನಂ.68/11 ತರಿ 0.10ಎಕ್ರೆ ಕೃಷಿಯೇತರ ಜಮೀನು ಪುರಸಭೆ ಖಾತಾ ನಂ.: TMCVS:48/505-80/C (400 ಚ.ಮೀ. ವಿಸ್ತೀರ್ಣ) ಜಮೀನುಗಳನ್ನು ದಾನಪತ್ರದ ಪ್ರಕಾರ ನೀಡಿದ್ದು, ಸದ್ರಿ ಭವಾನಿರವರ ಪತಿ ಮಧುಕರ್ ಎಸ್ ದೇವಾಡಿಗರವರು ಮೂಲತಃ ರೋಹಿತಾಶ್ವಪೂಜಾರಿ ಎನ್ನುವವರಿಂದ ಬಂಟ್ವಾಳ ತಾಲೂಕು ಬಂಟ್ವಾಳ ಕಸಬಾ ಗ್ರಾಮದ ಸ.ನಂ.68/11 ತರಿ 0.50ಎಕ್ರೆ ಜಮೀನನ್ನು ಬಂಟ್ವಾಳ ಸ.ರಿ.ಆಫೀಸಿನ ದಸ್ತಾವೇಜು ನಂಬ್ರ: BNT-1-06444/2011-12ಆಗಿ ಸಿ.ಡಿ. ನಂಬ್ರ BNTD131ನೇದ್ದರಲ್ಲಿ ದಿನಾಂಕ:27-03-2012ರಂತೆ ಖಂಡಿತ ಕ್ರಯಕ್ಕೆ ಪಡಕೊಂಡಿರುತ್ತಾರೆ. ಪ್ರಸ್ತುತ ಭವಾನಿರವರು ಸದ್ರಿ ಜಮೀನುಗಳನ್ನು ಅಡಮಾನ ಮಾಡಿ ಬ್ಯಾಂಕ್ ಸಾಲ ಪಡೆಯುವರೇ ಅಥವಾ ಮಾರಾಟ ಮಾಡಲು ನಿರ್ಧರಿಸಿದ್ದು, ಆ ಬಗ್ಗೆ ತನ್ನ ಪತಿ ಮಧುಕರ್ ಎಸ್ ದೇವಾಡಿಗರವರು ಮೂಲತಃ ರೋಹಿತಾಶ್ವ ಪೂಜಾರಿ ಎನ್ನುವವರಿಂದ ಬಂಟ್ವಾಳ ತಾಲೂಕು ಬಂಟ್ವಾಳ ಕಸಬಾ ಗ್ರಾಮದ ಸ.ನಂ.68/11 ತರಿ 0.50ಎಕ್ರೆ ಜಮೀನನ್ನು ಬಂಟ್ವಾಳ ಸ.ರಿ.ಆಫೀಸಿನ ದಸ್ತಾವೇಜು ನಂಬ್ರ::BNT-1-06444/2011-12 ಆಗಿ ಸಿ.ಡಿ. ನಂಬರ BNTD131ನೇದ್ದರಲ್ಲಿ ದಿನಾಂಕ:27-03-2012ರಂತೆ ಖಂಡಿತ ಕ್ರಯಕ್ಕೆ ನೋಂದಣಿಯಾದ ಕ್ರಯಪತ್ರದ ಮೂಲಪ್ರತಿ ಕಳೆದು ಹೋಗಿರುವುದಾಗಿ ಸದ್ರಿಯವರು ತಿಳಿಸಿರುತ್ತಾರೆ. ಸದ್ರಿ ಕ್ರಯಪತ್ರದ ಮೂಲ ದಾಖಲೆಯನ್ನು ಯಾರಾದರೂ ಹೊಂದಿದವರಿದ್ದಲ್ಲಿ ಯಾ ಸದ್ರಿ ಜಮೀನಿನ ಮೇಲೆ ಋಣಭಾರ ಯಾ ಜವಾಬ್ದಾರಿಯನ್ನು ಹೊಂದಿದವರಿದ್ದಲ್ಲಿ ಹಾಗೂ ಸದ್ರಿ ಜಮಿನುಗಳನ್ನು ಮಾರಾಟ ಮಾಡುವ ವ ಬ್ಯಾಂಕಿಗೆ ಆಡವು ಹಾಕುವಲ್ಲಿ ಆಕ್ಷೇಪಣೆಗಳಿದ್ದಲ್ಲಿ ಆಧಾರಸಹಿತ ಆಕ್ಷೇಪಣಾದಾರರು ಲಿಖಿತ ರೂಪದಲ್ಲಿ ಈ ಕೆಳಗೆ ಸಹಿ ಮಾಡಿದವರ ವಿಳಾಸಕ್ಕೆ ಈ ಪ್ರಕಟಣೆಯ ಏಳು ದಿನಗಳ ಒಳಗಾಗಿ ತಿಳಿಸಬೇಕಾಗಿ ವಿನಂತಿ ಮಾಡಿರುತ್ತಾರೆ.

ಸಹಿ/- ಶ್ರೀಮತಿ ವಿನೋದ B.A., LL.B.
ವಕೀಲರು ಮತ್ತು ನೋಟರಿ, 1ನೇ ಮಹಡಿ ರಾಜರಾಜೇಶ್ವರಿ ಕಾಂಪ್ಲೆಕ್ಸ್ ಬಿ.ಸಿರೋಡ್ ಬಂಟ್ವಾಳ
ಮೊ:9964719365

ಸ್ಥಳ:ಬಂಟ್ವಾಳ
ದಿನಾಂಕ:15-04-2026

ಮಾನ್ಯ ಪ್ರಧಾನ ಸಿವಿಲ್ ಜಡ್ಜರ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಪುತ್ತೂರು, ದ.ಕ.

ಪಿ. & ಎಸ್.ಸಿ. 4/2026
ಪಿ. & ಎಸ್.ಸಿ. 5/2026

ಇವರೊಳಗೆ,

1. ವಸಂತಿ, 62 ವರ್ಷ, ಕೋಂ.ದಿ. ಬಾಲಕೃಷ್ಣ ಪ್ರಭು ವಾಸ-2-203, ಕೋಡಿಂಬಾಡಿ ಮನೆ ಕೋಡಿಂಬಾಡಿ ಗ್ರಾಮ, ಪುತ್ತೂರು ತಾಲೂಕು ದ.ಕ.
2. ಭಾರತಿ 59 ವರ್ಷ, ಕೋಂ.ದಿ. ಆನಂದ ನಾಯಕ್ ವಾಸ-ಸಿ-127, ಮುಗೇರಡ್ಕ ಮನೆ ಉರುವಾಲು ಗ್ರಾಮ, ಪುತ್ತೂರು ತಾಲೂಕು ದ.ಕ.
3. ಕಸ್ತೂರಿ 50 ವರ್ಷ, ಕೋಂ.ದಿ. ಮೋಹನ್ ನಾಯಕ್ ವಾಸ-3-96, ದಾರಂದಕುಕ್ಕು ಮನೆ ಬನ್ನೂರು ಗ್ರಾಮ, **ಪುತ್ತೂರು ತಾಲೂಕು, ದ.ಕ.**
4. ಡಿ. ನಿತಿನ್ ನಾಯಕ್ 20 ವರ್ಷ, ಕೋಂ.ದಿ. ಮೋಹನ್ ನಾಯಕ್ ವಾಸ-3-96, ದಾರಂದಕುಕ್ಕು ಮನೆ ಬನ್ನೂರು ಗ್ರಾಮ, ಪುತ್ತೂರು ತಾಲೂಕು, ದ.ಕ.
5. ಪುಷ್ಪಲತಾ 49 ವರ್ಷ, ಕೋಂ. ವಿಷ್ಣುಮೂರ್ತಿ ನಾಯಕ್ ವಾಸ-1-26/1 ಮೋನಡ್ಕ ಮನೆ ಕೊಡಿಂಬಾಡಿ ಗ್ರಾಮ, ಪುತ್ತೂರು ದ.ಕ.
6. ಸುರೇಶ್ ನಾಯಕ್ 40 ವರ್ಷ, ವಾಸ 1-26/1, ಮೋನಡ್ಕ ಮನೆ ಕೊಡಿಂಬಾಡಿ ಗ್ರಾಮ, ಪುತ್ತೂರು ದ.ಕ.

...ಅರ್ಜಿದಾರರು

ಮೇಲೆ ನಮೂದಿಸಿದ 1, 2 ಮತ್ತು 5,6ನೇಯವರು ದಿವಂಗತ ಶ್ರೀಮತಿ ಲೀಲಾವತಿ ಹಾಗೂ ದೇವಣ್ಣ ನಾಯಕ್‌ರವರ ಮಕ್ಕಳು, 3 ಮತ್ತು 4ನೇಯವರು ದಿ.ಮೋಹನ್ ನಾಯಕ್ ಇವರ ಪತ್ನಿ ಮತ್ತು ಮಗ)

ಮತ್ತು

ನಿಲ್ ...ಎದುರುದಾರರು

ಸಾರ್ವಜನಿಕ ನೋಟೀಸು

ಈ ಮೇಲಿನ ಪ್ರಕರಣದಲ್ಲಿ ಅರ್ಜಿದಾರರು ದಿವಂಗತ. ಶ್ರೀಮತಿ ಲೀಲಾವತಿ ಹಾಗೂ ದೇವಣ್ಣ ನಾಯಕ್‌ರವರಿಗೆ ಸಂಬಂಧಿಸಿದ ಪಿ.ಎಫ್. ಅಕೌಂಟ್ ನಂ. ಏಪಿ/ಒಐಖ/3316 ಮತ್ತು ಏಪಿ/ಒಐಖ/7205 ಕ್ಕೆ ಸಂಬಂಧಿಸಿದಂತೆ ಉತ್ತರಾಧಿಕಾರದ ಪತ್ರವನ್ನು ಕೋರಿ ಅರ್ಜಿ ಸಲ್ಲಿಸಿದ್ದು, ದಿವಂಗತ ಶ್ರೀಮತಿ ಲೀಲಾವತಿ ರವರು ದಿನಾಂಕ 26.10.2025 ರಂದು ಮತ್ತು ದೇವಣ್ಣ ನಾಯಕ್‌ರವರು ದಿನಾಂಕ: 04.09.2003ರಂದು ಮೃತಪಟ್ಟಿರುವುದರಿಂದ ಅವರಿಗೆ ಸಲ್ಲತಕ್ಕ ಉದ್ಯೋಗಿಗಳ ಭವಿಷ್ಯ ನಿಧಿಯನ್ನು ಅವರ ವಾರಿಸುದಾರರು ಪಡೆದುಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ ಎಂದು ಈ ಮೇಲಿನ ಮಾನ್ಯ ನ್ಯಾಯಾಲಯಕ್ಕೆ ಪ್ರೋಬೇಷನ್ ಹಾಗೂ ಸಕ್ಸೆಷನ್ ಕಾಯ್ದೆಯಡಿ ಉತ್ತರಾಧಿಕಾರದ ಪತ್ರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಯಾರಿಗಾದರೂ ತಕರಾರುಗಳಿದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ **ದಿನಾಂಕ 10.06.2026ರಂದು** ವೈಯಕ್ತಿಕವಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು.

ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ತಾರೀಕು 16ನೇ ಏಪ್ರಿಲ್ ತಿಂಗಳ 2026ರಂದು ಕೊಡಲಾಗಿದೆ.

(ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ)

ಸಹಿ/- ಶಿರಸ್ತೇದಾರ್
ಪ್ರಧಾನ ಸಿವಿಲ್ ಜಡ್ಜ್ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಪುತ್ತೂರು ದ.ಕ.

ಸಹಿ/- ರಾಜೇಶ್ ಎಂ.
ಅರ್ಜಿದಾರರ ಪರ ವಕೀಲರು

ಸಾರ್ವಜನಿಕ ನೋಟಿಸ್

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಆರ್.ಸಿ.ನಂ.ಬಿ-1134/ಕೆಎಆರ್/ಪಿಇಆರ್/100/5/9798/2021 ಸಂಖ್ಯೆ ಹೊಂದಿರುವ **ಮೆಸರ್ಸ್ ಸ್ಕೈ ವೇ ರಿಕ್ರೂಟರ್ಸ್** (ವಹಿವಾಟು ಸಮಾಪನೆ) ಕಂಪನಿಗೆ ಅನುಮತಿ ನೀಡಿದ ದಿನಾಂಕ: 13/09/2021 ಹಾಗೂ 18/03/2026ರವರೆಗೆ ಮಾನ್ಯತೆಯನ್ನು ಹೊಂದಿದೆ. ಮೇಲೆ ಹೇಳಿದ ವಹಿವಾಟನ್ನು ತಕ್ಷಣದಿಂದ ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ.

ಒಂದು ವೇಳೆ ನಮ್ಮ ವಿರುದ್ಧ ಯಾವುದೇ ದೂರುಗಳಿದ್ದಲ್ಲಿ, ಅದನ್ನು ಈ ನೋಟಿಸ್ ಪ್ರಕಟವಾದ ದಿನಾಂಕದಿಂದ 30 ದಿನಗಳ ಒಳಗಾಗಿ ತಿಳಿಸಬೇಕು ಹಾಗೂ ದೂರಿನ ಪ್ರತಿಗಳನ್ನು ಪ್ರೊಟೆಕ್ಟರ್ ಜನರಲ್ ಆಫ್ ಎಮಿಗ್ರೆಂಟ್ಸ್, ಓಇ & ಪಿಜಿಇ ವಿಭಾಗ, ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಕರ್ತವ್ಯಭವನ-3, ಸೆಂಟ್ರಲ್ ವಿಸ್ತಾ, ಜನಪಥ್ ರಸ್ತೆ, ನವದೆಹಲಿ-110001 ಇವರಿಗೆ ಕಳುಹಿಸಬೇಕು.

ಮೆಸರ್ಸ್ ಸ್ಕೈ ವೇ ರಿಕ್ರೂಟರ್ಸ್
ಶ್ರೀ ಸಂತೋಷ್ ಪೂಜಾರಿ (ಮಾಲೀಕರು)

ಸ್ಥಳ: ಮಂಗಳೂರು
ದಿನಾಂಕ: 16/04/2026

ಪ್ರಕಟಣೆ

ಬಂಟ್ವಾಳ ತಾಲೂಕು ಮಾಣಿ ಗ್ರಾಮದ ಸ ನಂ 55/1ರ ಬಾಬ್ತು ಆಸ್ತಿಯು ನಾನು ವಿಟ್ಲ ಸ .ರಿ ಕಛೇರಿಯ ದಸ್ತಾವೇಜು ನಂಬ್ರ 485/2002-03ನೇ ದಿನಾಂಕ 06-09-2002 ರಂತೆ ದಸ್ತಾವೇಜು ಹಾಜರುಪಡಿಸಿ, ದಿನಾಂಕ 11-09-2002 ರಂದು ನೋಂದಾವಣೆಯಾಗಿ ವಿಠಲ ಆಳ್ವ ಎಂಬವರಿಂದ ಕ್ರಯವರಿಸಿದ್ದು, ಸದ್ರಿ ಆಸ್ತಿಯ ಮೂಲ ಕ್ರಯ ಪತ್ರ ನನ್ನ ಮನೆಯಿಂದ ಬಂಟ್ವಾಳ ತಾಲೂಕು ಕಛೇರಿ ಮಾರ್ಗ ಮಧ್ಯೆ 07-04-2026 ರಂದು ಅಕಸ್ಮಿಕವಾಗಿ ನನ್ನಲ್ಲಿ ಕಳೆದು ಹೋಗಿರುತ್ತದೆ. ಅದನ್ನು ಎಲ್ಲಿಯೂ ಅಡಮಾನ ಮಾಡಿ ಸಾಲ ಪಡಕೊಂಡಿರುವುದಿಲ್ಲ. ಸದ್ರಿ ದಾಖಲೆಯು ಯಾರಿಗಾದರು ಸಿಕ್ಕಿದಲ್ಲಿ ಒಂದು ವಾರದೊಳಗಾಗಿ ಕೆಳಗಿನ ವಿಳಾಸಕ್ಕೆ ತಂದು ನೀಡುವರೇ ಈ ಮೂಲಕ ವಿನಂತಿಸುತ್ತೇನೆ. ಸದ್ರಿ ದಾಖಲೆ ಕಳೆದು ಹೋದ ಬಗ್ಗೆ ಈಗಾಗಲೇ ದೂರನ್ನು ಕೂಡ ನೀಡಲಾಗಿರುತ್ತದೆ ಎಂದು ಈ ಮೂಲಕ ತಿಳಿಸುತ್ತೇನೆ.

ಸಹಿ/-ಮಹಮ್ಮದ್ ರಫೀಕ್ ಬಿ
ಬಿನ್: ಬಿ ಹುಸೈನ್, ಕೊಡಾಜೆ ಮನೆ ಮಾಣಿ ಗ್ರಾಮ, ಬಂಟ್ವಾಳ ತಾಲೂಕು. ದ.ಕ.
ದಿನಾಂಕ: 16-04-2026

IN THE COURT OF THE ADDL CIVIL JUDGE AND J.M.F.C. KODAGU AT MADIKERI

Cr.M.C.No.16/2026

Petitioner :
Abdul Nasir KA
S/o Ahamad KE
Aged 42 years,
R/o Nariyandada Village, Cheyandande Post, Madikeri Taluk, Kodagu District.

Respondents :
V/s
1. The Birth and Death The Tahasildar, Madikeri Taluk, Kodagu District & 5 Others

PAPER PUBLICATION

WHEREAS the petitioner has filed the above petition under Section 13(3) of Births and Deaths Act to cause an entry of the Death of grandmother of the petitioner viz. Mariyamma Who died on 09.08.2021 at, Nariyandada Village, Cheyandande Post, Madikeri Taluk, Kodagu District. Who ever having any objection to the above petition may appear before the Hon'ble Prl. Civil Judge and JMFC at Madikeri Vide Cr.M.C. 16/2026 on **29/05/2026 at 11 A.M.** either personally or through advocate failing which the case will be heard proceed with accordance with law.

Dated 16th day of April, 2026 at Madikeri, Kodagu District, Karnataka State.

(By Order of the Court)
Sd/- Chief Ministerial Officer
Civil Judge and J.M.F.C. Madikeri

Sd/- T.D. Padma
Advocate

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮಂಗಳೂರು

ಸಂ: ಕೃಉಮಾಸ(ಮಂ) ಲೀ&ಲೈ/ಹಂಚಿಕೆ/ 05 /2025-26 ದಿ: 16.04.2026

ಲೀವ್ & ಲೈಸನ್ಸ್ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು ಪ್ರಕಟಣೆ

ಬೈಕಂಪಾಡಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ ಹಣ್ಣು ಮತ್ತು ತರಕಾರಿ ಮಾರುಕಟ್ಟೆಯ ಅಂಗಡಿಗಳು / ವಾಣಿಜ್ಯ ಸಂಕೀರ್ಣದ ಚಿಕ್ಕ ಮಳಿಗೆಗಳು/ ಮತ್ತು ತೂಕದ ಯಂತ್ರಗಳನ್ನು ಮಾಸಿಕ ಲೀವ್ & ಲೈಸನ್ಸ್ ಶುಲ್ಕ ಆಧಾರದಡಿ ಹಂಚಿಕೆ ಮಾಡಲು ಲೈಸನ್ಸ್ ಹೊಂದಿರುವ ಪೇಟೇ ಕಾರ್ಯಕರ್ತರಿಂದ ನಿಯಮ- 13 ರಡಿ ಹಾಗೂ ಸಾರ್ವಜನಿಕರಿಂದ ಚಿಕ್ಕ ಮಳಿಗೆಗಳಿಗೆ ನಿಯಮ -14 ರಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	ಅಂಗಡಿ ಸಂಖ್ಯೆ	ವಿಸ್ತೀರ್ಣ (ಚ.ಅಡಿ)	ಮಾಸಿಕ ಲೀವ್ & ಲೈಸನ್ಸ್ ಶುಲ್ಕ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಮೀಸಲಾತಿ
ಹೊಸದಾಗಿ ನಿರ್ಮಿಸಿರುವ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಸಂಕೀರ್ಣದ 40 ಸಂಖ್ಯೆ ಅಂಗಡಿಗಳು					
1.	01	549.72	14,786/-	30,000/-	ಸಾಮಾನ್ಯ
2.	02	549.72	14,786/-	30,000/-	ಸಾಮಾನ್ಯ
3.	03	549.72	14,786/-	30,000/-	ಸಾಮಾನ್ಯ
4.	04	549.72	14,786/-	30,000/-	ಸಾಮಾನ್ಯ
5.	05	549.72	14,786/-	30,000/-	ಸಾಮಾನ್ಯ
6.	06	549.72	14,786/-	30,000/-	ಎಫ್.ಪಿ.ಒ
7.	07	549.72	14,786/-	30,000/-	ಸಾಮಾನ್ಯ
8.	08	549.72	14,786/-	30,000/-	ಸಾಮಾನ್ಯ
9.	09	549.72	14,786/-	30,000/-	ಎಸ್.ಸಿ
10.	10	549.72	14,786/-	30,000/-	ಎಸ್.ಟಿ
11.	11	549.72	14,786/-	30,000/-	ಎಫ್.ಪಿ.ಒ
12.	12	549.72	14,786/-	30,000/-	ಸಾಮಾನ್ಯ
13.	13	549.72	14,786/-	30,000/-	ಸಾಮಾನ್ಯ
14.	14	549.72	14,786/-	30,000/-	ಸಾಮಾನ್ಯ
15.	15	549.72	14,786/-	30,000/-	ಸಾಮಾನ್ಯ
16.	16	549.72	14,786/-	30,000/-	ಸಾಮಾನ್ಯ
17.	17	549.72	14,786/-	30,000/-	ಸಾಮಾನ್ಯ
18.	18	549.72	14,786/-	30,000/-	ಸಾಮಾನ್ಯ
19.	19	549.72	14,786/-	30,000/-	ಸಾಮಾನ್ಯ
20.	20	549.72	14,786/-	30,000/-	ಎಸ್.ಸಿ
21.	21	549.72	14,786/-	30,000/-	ಸಾಮಾನ್ಯ
22.	22	549.72	14,786/-	30,000/-	ಎಫ್.ಪಿ.ಒ
23.	23	549.72	14,786/-	30,000/-	ಸಾಮಾನ್ಯ
24.	24	549.72	14,786/-	30,000/-	ಸಾಮಾನ್ಯ
25.	25	549.72	14,786/-	30,000/-	ಸಾಮಾನ್ಯ
26.	26	549.72	14,786/-	30,000/-	ಸಾಮಾನ್ಯ
27.	27	549.72	14,786/-	30,000/-	ಎಸ್.ಸಿ
28.	28	549.72	14,786/-	30,000/-	ಎಸ್.ಟಿ
29.	29	549.72	14,786/-	30,000/-	ಸಾಮಾನ್ಯ
30.	30	549.72	14,786/-	30,000/-	ಸಾಮಾನ್ಯ
31.	31	549.72	14,786/-	30,000/-	ಎಸ್.ಸಿ
32.	32	549.72	14,786/-	30,000/-	ಸಾಮಾನ್ಯ
33.	33	549.72	14,786/-	30,000/-	ಸಾಮಾನ್ಯ
34.	34	549.72	14,786/-	30,000/-	ಎಸ್.ಸಿ
35.	35	549.72	14,786/-	30,000/-	ಸಾಮಾನ್ಯ
36.	36	549.72	14,786/-	30,000/-	ಎಫ್.ಪಿ.ಒ
37.	37	549.72	14,786/-	30,000/-	ಸಾಮಾನ್ಯ
38.	38	549.72	14,786/-	30,000/-	ಸಾಮಾನ್ಯ
39.	39	549.72	14,786/-	30,000/-	ಎಸ್.ಸಿ
40.	40	549.72	14,786/-	30,000/-	ಎಸ್.ಟಿ
ನಿಯಮ 14 ರಡಿ ಟೆಂಡರ್ -ಕಂ -ಬಹಿರಂಗ ಹರಾಜಿನ ಮೂಲಕ ಹಂಚಿಕೆ ಮಾಡುವ ವಾಣಿಜ್ಯ ಸಂಕೀರ್ಣದ ಅಂಗಡಿಗಳ ವಿವರ					
ನೆಲ ಮಹಡಿ					
1	24	185.90	3,100	6,200	ಸಾಮಾನ್ಯ
2	34 ಬಿ	124.00	2,100	6,200	ಎಸ್.ಸಿ
ಒಂದನೇ ಮಹಡಿ					
3	109	185.90	3,100	6,200	ಸಾಮಾನ್ಯ
4	110	185.90	3,100	6,200	ಸಾಮಾನ್ಯ
5	111	185.90	3,100	6,200	ಎಫ್.ಪಿ.ಒ
6	112	185.90	3,100	6,200	ಸಾಮಾನ್ಯ
ಒಂದನೇ ಮಹಡಿಯ ಬಲ ಭಾಗದ ಹಾಲ್					
7		1380.00	22,376	44,752	ಸಾಮಾನ್ಯ
ಒಂದನೇ ಮಹಡಿಯ ಎಡ ಭಾಗದ ಹಾಲ್					
8		1509.10	24,500	49,000	ಎಸ್.ಸಿ
ಎರಡನೇ ಮಹಡಿ					
9	201	174.30	3,000	6,000	ಸಾಮಾನ್ಯ
10	202	174.30	3,000	6,000	ಎಫ್.ಪಿ.ಒ
11	203	290.50	5,000	10,000	ಸಾಮಾನ್ಯ
12	204	290.50	5,000	10,000	ಸಾಮಾನ್ಯ
13	205	185.90	3,100	6,200	ಎಸ್.ಸಿ
14	206	185.90	3,100	6,200	ಸಾಮಾನ್ಯ
15	207	174.30	3,000	6,000	ಸಾಮಾನ್ಯ
16	208	174.30	3,000	6,000	ಎಸ್.ಟಿ
17	209	174.30	3,000	6,000	ಸಾಮಾನ್ಯ
18	210	174.30	3,000	6,000	ಸಾಮಾನ್ಯ
19	211	174.30	3,000	6,000	ಎಸ್.ಸಿ
20	212	174.30	3,000	6,000	ಸಾಮಾನ್ಯ
21	ಸಭಾಂಗಣ-1	4576.70	74,217	1,48,434	ಸಾಮಾನ್ಯ
22	ಸಭಾಂಗಣ-2	2995.60	48,578	97,156	ಸಾಮಾನ್ಯ
1	ತೂಕದ ಯಂತ್ರ	40 ಮೆ.ಟ.	52,396	1,04,792	ಸಾಮಾನ್ಯ

ಷರತ್ತು ಮತ್ತು ನಿಬಂಧನೆಗಳು:-

1. ಹಂಚಿಕೆ ಪಡೆಯಲು ಇಚ್ಛಿಸುವ ಅರ್ಜಿದಾರರು ರೂ.200-00 ಅರ್ಜಿ ಶುಲ್ಕ ಪಾವತಿಸಿ IIIನೇ ನಮೂನೆಯ ಖಾಲಿ ಅರ್ಜಿಗಳನ್ನು ಹಾಗೂ 4ನೇ ನಮೂನೆಯ ಟೆಂಡರ್ ಫಾರಂಗಳನ್ನು ಪಡೆಯಲು ಕೊನೆಯ ದಿನಾಂಕ 18.5.2026 ಸಮಯ ಸಾಯಂಕಾಲ 5.30 ಗಂಟೆಯ ಒಳಗಾಗಿ
2. ನಿಗದಿತ ಮುಂಗಡ ಠೇವಣಿ ಡಿ.ಡಿ. ಯೊಂದಿಗೆ ಭರ್ತಿ ಮಾಡಿದ 3ನೇ ನಮೂನೆ ಹಾಗೂ 4ನೇ ನಮೂನೆ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 20.05.2026 ಸಮಯ ಸಾಯಂಕಾಲ 4.00 ಗಂಟೆ ಒಳಗಾಗಿ
3. ನಿಯಮ 14 ರ ಚಿಕ್ಕ ಮಳಿಗೆಗಳ (ವಾಣಿಜ್ಯ ಮಳಿಗೆ) ಅಂಗಡಿಗಳ ಬಹಿರಂಗ ಹರಾಜಿನ ಸ್ಥಳ ಹಾಗೂ ದಿನಾಂಕ ತಿಳಿಸಲಾಗುವುದು.
4. ಹೆಚ್ಚಿನ ಮಾಹಿತಿಗಾಗಿ ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯಾಲಯವನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು (ಮೊ:9964246495)

ಸಹಿ/- (ವಿ. ರಮೇಶ್) ಕಾರ್ಯದರ್ಶಿ
ಸಹಿ/- (ಆರ್. ಎಂ. ಕುಮಾರ ಸ್ವಾಮಿ) ಆಡಳಿತಾಧಿಕಾರಿ

DIPR/DK/MPL/83/26-27

ಕರ್ಣಾಟಕ ಬ್ಯಾಂಕ್ ಲಿ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ : ಮಂಗಳೂರು - 575 002. CIN :L85110KA1924PLC001128
ಇ-ಮೇಲ್: info@ktkbank.com ವೆಬ್‌ಸೈಟ್: https://www.karnatakabank.bank.in

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ
3ನೇ ಮಹಡಿ, ಕರ್ಣಾಟಕ ಬ್ಯಾಂಕ್ ಬಿಲ್ಡಿಂಗ್, ಕೊಡಿಯಾಲ್‌ಬೈಲ್, ಮಂಗಳೂರು - 575 003. ದೂರವಾಣಿ: 0824-2422811(Gen)/2427811 (CM) ಇ-ಮೇಲ್: mlr.arm@ktkbank.com

ಸ್ವಾಧೀನತೆಯ ನೋಟೀಸು (ಸ್ಥಿರಾಸ್ತಿಗೆ ಸಂಬಂಧಿಸಿದಂತೇ)

ಕರ್ಣಾಟಕ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಹಣಕಾಸು ಸಂಸ್ಥೆಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಅನುಷ್ಠಾನ ಅಧಿನಿಯಮ 2002 (SARFAESI ACT 2002) ರನ್ವಯ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002ರ ಪರಿಚ್ಛೇದ 13(12) ನಿಯಮ 3 ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿಕೊಂಡು ಸದರಿ ಕಾಯ್ದೆಯ ಸೆಕ್ಷನ್ 13(2)ರಂತೇ ತಗಾದೆ ನೋಟೀಸನ್ನು ಈ ಕೆಳಕಾಣಿಸಿದ ಸಾಲಗಾರರಿಗೆ / ಅಡಮಾನದಾರರಿಗೆ / ಸಹ-ಬಾಧ್ಯತೆದಾರರಿಗೆ / ಜಾಮೀನುದಾರರಿಗೆ ನೀಡಿದ್ದು, ತಗಾದೆ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ **60 ದಿನಗಳೊಳಗೆ** ಬಾಕಿಗಳನ್ನು ಮರುಪಾವತಿಸಲು ಸಾಲಗಾರರಿಗೆ ಸೂಚಿಸಲಾಗಿತ್ತು.

1) **ಶಾಖೆ:** ಮಂಗಳೂರು-ಉರ್ವಾಮಾರ್ಕೆಟ್, **ಸಾಲಗಾರರ / ಅಡಮಾನದಾರರ / ಜಾಮೀನುದಾರರ / ಸಹ-ಬಾಧ್ಯತೆದಾರರ ಹೆಸರು & ವಿಳಾಸ:** 1) **ಶ್ರೀ ಪವನ್ ಚೌಹಾಣ್**, ಶ್ರೀ ನೆಬುಲಾಲ್ ಚೌಹಾಣ್ ರವರ ಮಗ, 2) **ಶ್ರೀಮತಿ ಅನಿತಾ ದೇವಿ ಚೌಹಾಣ್**, ಶ್ರೀ ಪವನ್ ಚೌಹಾಣ್ ರವರ ಪತ್ನಿ, 3) **ಶ್ರೀಮತಿ ಸುನೀತಾ ಚೌಹಾಣ್**, ಶ್ರೀ ಜೈಪ್ರಕಾಶ್ ಚೌಹಾಣ್ ರವರ ಪತ್ನಿ, 4) **ಶ್ರೀ ಜುಗಲ್ ಚೌಹಾಣ್**, ಶ್ರೀ ಜೈಪ್ರಕಾಶ್ ಚೌಹಾಣ್ ರವರ ಮಗ, 5) **ಶ್ರೀಮತಿ ಜಸ್ಮಿತಾ ಚೌಹಾಣ್**, ಶ್ರೀ ಜೈಪ್ರಕಾಶ್ ಚೌಹಾಣ್ ರವರ ಮಗಳು, **ನಂ. 1 ರಿಂದ 5 ಇವರುಗಳ ವಿಳಾಸ:** ಡೋರ್ ನಂಬ್ರ 22-11-1518/2, ಚವನ್ ಕಂಪೌಂಡ್, ಮುಳಿಹಿತ್ಲು, ಹ್ಯೊಗೆಬಜಾರ್, ಬೋಳಾರ್, ಮಂಗಳೂರು, ದ.ಕ.ಜಿಲ್ಲೆ - 575 001. **ನಂ. 3, ಇವರ ಇನ್ನೊಂದು ವಿಳಾಸ:** ಎಚ್.ಆರ್.ಬಿ. ಶಾಪಿಂಗ್ ಕಾಂಪ್ಲೆಕ್ಸ್, ಹಂಪನಕಟ್ಟ, ಮಂಗಳೂರು, ದ.ಕ.ಜಿಲ್ಲೆ, ಮಂಗಳೂರು - 575 001. **ತಗಾದೆ ನೋಟೀಸು ದಿನಾಂಕ:** 30.01.2026, **ತಗಾದೆ ಮೊತ್ತ:** ರೂ. 29,35,292.09, **ಸಾಲದ ವಿವರ, ಖಾತೆ ಸಂಖ್ಯೆ, ಪ್ರಸಕ್ತ ಬಾಕಿ: ಟಿಎಲ್ ಖಾತೆ ಸಂಖ್ಯೆ 4877001600039601** ರಲ್ಲಿ **ರೂ. 29,91,037.87 (ರೂಪಾಯಿ ಇಪ್ಪತ್ತೊಂಭತ್ತು ಲಕ್ಷದ ತೊಂಭತ್ತೊಂದು ಸಾವಿರದ ಮೂವತ್ತೇಳು ಮತ್ತು ಪೈಸೆ ಎಂಭತ್ತೇಳು ಮಾತ್ರ)** ಮತ್ತು ದಿನಾಂಕ **30.03.2026** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳು.

ಸ್ಥಿರಾಸ್ತಿಯ ವಿವರಗಳು: 1) ಶ್ರೀ ನೆಬುಲಾಲ್ ಚೌಹಾಣ್ (ಮೃತ), 2) ಶ್ರೀ ಪವನ್ ಚೌಹಾಣ್ ಮತ್ತು 3) ಶ್ರೀ ಜೈಪ್ರಕಾಶ್ ಚೌಹಾಣ್ (ಮೃತ) ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ವಾಸಯೋಗ್ಯ ಆಸ್ತಿಯ ವಿಸ್ತೀರ್ಣ **8.00 ಸೆಂಟ್ಸ್, ಆರ್.ಎಸ್.ನಂಬ್ರ 262-1(ಪಿ), ಟಿ.ಎಸ್.ನಂ. 571 (ಪಿ), ಡೋರ್ ನಂಬ್ರ 22-11-1518/2** ಅದರೊಂದಿಗೆ ಅಲ್ಲಿರುವ ಕಟ್ಟಡ ಒಳಗೊಂಡಿದೆ. ಈ ಸ್ಥಿರಾಸ್ತಿಯು ಮಂಗಳೂರು - ತೋಟ ಗ್ರಾಮ, ಟಿಲ್ಲೇರಿ ರೋಡ್, ಮುಳಿಹಿತ್ಲು ಏರಿಯಾ, ಹ್ಯೊಗೆಬಜಾರ್, ಬೋಳಾರ್, ಮಂಗಳೂರು ತಾಲೂಕಿನಲ್ಲಿದ್ದು, ಮಂಗಳೂರು ನಗರ ಉಪ-ಜಿಲ್ಲಾ ನೋಂದಣಿಗೊಳಪಟ್ಟಿದೆ. **ಗಡಿರೇಖೆಗಳು: ಡೀಡ್‌ನ ಪ್ರಕಾರ & ವಾಸ್ತವ: ಪೂರ್ವ:** ಅದೇ ಟಿ.ಎಸ್.ನಂಬ್ರದ ಭಾಗ / ಸರ್ವೆ ಲೈನ್; **ಪಶ್ಚಿಮ:** ಸರ್ವೆ ಲೈನ್ / ಅದೇ ಟಿ.ಎಸ್.ನಂಬ್ರದ ಭಾಗ; **ಉತ್ತರ:** ಸರ್ವೆ ಲೈನ್; **ದಕ್ಷಿಣ:** 9 ಅಡಿ ಅಗಲದ ರಸ್ತೆ, ನೀರಿನ ಕಾಲುವೆ / ಅದೇ ಟಿ.ಎಸ್.ನಂಬ್ರದ ಭಾಗ.

2) **ಶಾಖೆ:** ಮಂಗಳೂರು-ಮಣ್ಣಗುಡ್ಡ, **ಸಾಲಗಾರರ / ಅಡಮಾನದಾರರ / ಜಾಮೀನುದಾರರ / ಸಹ-ಬಾಧ್ಯತೆದಾರರ ಹೆಸರು & ವಿಳಾಸ:** 1) **ಶ್ರೀ ಮೋನಪ್ಪ ಪೂಜಾರಿ,** ಶ್ರೀ ಬಾಬು ಪೂಜಾರಿಯವರ ಮಗ, **ವಿಳಾಸ:** #1-208 (ಎ), ಮೂರ್ಜೆ ಅತ್ತಾಜೆ ಮನೆ, ಪಿಲಾತ್ತಬೆಟ್ಟು, ಬಂಟ್ವಾಳ ತಾಲೂಕು, ದ.ಕ.ಜಿಲ್ಲೆ- 574 233. 2) **ಶ್ರೀ ಯೋಗೀಶ,** ಶ್ರೀ ಮೋನಪ್ಪ ಪೂಜಾರಿಯವರ ಮಗ, **ವಿಳಾಸ:** ನಂ. 414, ಡೋರ್ ನಂಬ್ರ 2-38/144, 4ನೇ ಮಹಡಿ, ವಿಶ್ವಾಸ್ ಸಾಮ್ರಾಟ್, ಕದ್ರಿ ಬಿ. ಗ್ರಾಮ, ವ್ಯಾಸನಗರ ರಸ್ತೆ, ದ.ಕ.ಜಿಲ್ಲೆ, ಮಂಗಳೂರು - 575 001. **ತಗಾದೆ ನೋಟೀಸು ದಿನಾಂಕ:** 28.07.2025, **ತಗಾದೆ ಮೊತ್ತ:** ರೂ. 9,94,265.21, **ಸಾಲದ ವಿವರ, ಖಾತೆ ಸಂಖ್ಯೆ, ಪ್ರಸಕ್ತ ಬಾಕಿ: ಟಿಎಲ್ ಖಾತೆ ಸಂಖ್ಯೆ 4797001600058501** ರಲ್ಲಿ **ರೂ. 11,14,445.21 (ರೂಪಾಯಿ ಹನ್ನೊಂದು ಲಕ್ಷದ ಹದಿನಾಲ್ಕು ಸಾವಿರದ ನಾಲ್ನೂರ ನಲ್ವತ್ತೈದು ಮತ್ತು ಪೈಸೆ ಇಪ್ಪತ್ತೊಂದು ಮಾತ್ರ)** ಮತ್ತು ದಿನಾಂಕ **07.04.2026** ರಿಂದ ಅನ್ವಯವಾಗುವ ಭವಿಷ್ಯದ ಬಡ್ಡಿ ಮತ್ತು ವೆಚ್ಚಗಳು.

ಸ್ಥಿರಾಸ್ತಿಯ ವಿವರಗಳು: ಶ್ರೀ ಮೋನಪ್ಪ ಪೂಜಾರಿ ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗಗಳ ಕೃಷಿಯೇತರ ಸ್ಥಿರಾಸ್ತಿಯ **ಸರ್ವೆ ನಂಬ್ರ 76/2** (ಆರ್‌ಟಿಸಿ ಯ ಪ್ರಕಾರ 76/2ಪಿ1), ವಿಸ್ತೀರ್ಣ **5 ಸೆಂಟ್ಸ್**, ಅದರೊಂದಿಗೆ ಅಲ್ಲಿರುವ ಕಟ್ಟಡವು **ಡೋರ್ ನಂಬ್ರ 1-208(ಎ)** ಹೊಂದಿದ್ದು, ಈ ಸ್ಥಿರಾಸ್ತಿಯು ಪಿಲಾತ್ತಬೆಟ್ಟು ಗ್ರಾಮ, ಬಂಟ್ವಾಳ ತಾಲೂಕಿನಲ್ಲಿದೆ ಮತ್ತು ದ.ಕ.ಜಿಲ್ಲೆ ಬಂಟ್ವಾಳ ತಾಲೂಕು ಉಪ-ಜಿಲ್ಲಾ ನೋಂದಣಿಯ ವ್ಯಾಪ್ತಿಯಲ್ಲಿದೆ. **ಗಡಿರೇಖೆಗಳು: ಡೀಡ್‌ನ ಪ್ರಕಾರ / ವಾಸ್ತವ: ಪೂರ್ವ:** ರಸ್ತೆ/ಅದೇ ಸರ್ವೆ ನಂಬ್ರದ ಉಳಿದ ಭಾಗ; **ಪಶ್ಚಿಮ:** ಅದೇ ಸರ್ವೆ ನಂಬ್ರದ ಉಳಿದ ಭಾಗ / ಅದೇ ಸರ್ವೆ ನಂಬ್ರದ ಉಳಿದ ಭಾಗ; **ಉತ್ತರ:** ಅದೇ ಸರ್ವೆ ನಂಬ್ರದ ಉಳಿದ ಭಾಗ / ಅದೇ ಸರ್ವೆ ನಂಬ್ರದ ಉಳಿದ ಭಾಗ; **ದಕ್ಷಿಣ :** ಅದೇ ಸರ್ವೆ ನಂಬ್ರದ ಉಳಿದ ಭಾಗ / ಅದೇ ಸರ್ವೆ ನಂಬ್ರದ ಉಳಿದ ಭಾಗ.

ಸಾಲಗಾರರು / ಅಡಮಾನದಾರರು / ಸಹ-ಬಾಧ್ಯತೆದಾರರು / ಜಾಮೀನುದಾರರು ಸಾಲಗಳ ಬಾಕಿ ಹಣವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, **ಅಧಿಕೃತ ಅಧಿಕಾರಿಯವರು ಮೇಲೆ ಹೇಳಿದ ಕಾಯ್ದೆಯ ಪರಿಚ್ಛೇದ 13(4) ರಲ್ಲಿ ಮತ್ತು ನಿಯಮ 8 & 9 ರಲ್ಲಿ ದತ್ತವಾದ ಅಧಿಕಾರದಂತೆ ಮೇಲೆ ವಿವರಿಸಿದ ಸ್ಥಿರಾಸ್ತಿಗಳನ್ನು ದಿನಾಂಕ 13.04.2026 ರಂದು ಸ್ವಾಧೀನಪಡೆಯಲಾಗಿದೆ** ಎಂದು ಸಾಲಗಾರರಿಗೆ / ಅಡಮಾನದಾರರಿಗೆ / ಸಹ-ಬಾಧ್ಯತೆದಾರರಿಗೆ / ಜಾಮೀನುದಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ನೋಟೀಸು ನೀಡಲಾಗಿದೆ. (ಭದ್ರತೆಯ ಸ್ವತ್ತುಗಳನ್ನು ಹಿಂದೆ ಪಡೆಯುವ ಬಗ್ಗೆ ಕಾಯಿದೆಯ ಸೆಕ್ಷನ್ 13 ಉಪನಿಯಮ (8)ರಲ್ಲಿ ಲಭ್ಯವಾಗುವ ಕಾಲಾವಕಾಶದ ಬಗ್ಗೆ ಸಾಲಗಾರರು / ಅಡಮಾನದಾರರು / ಸಹ-ಬಾಧ್ಯತೆದಾರರು / ಜಾಮೀನುದಾರರ ಗಮನವನ್ನು ಸೆಳೆಯಲಾಗಿದೆ). ಸಾಲಗಾರರು / ಅಡಮಾನದಾರರು / ಸಹ-ಸಾಲಗಾರರು / ಜಾಮೀನುದಾರರು ಮತ್ತು ಸಾರ್ವಜನಿಕರು ನಿರ್ದಿಷ್ಟವಾಗಿ ಈ ಮೇಲ್ಕಂಡ ಸ್ಥಿರಾಸ್ತಿಗಳೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸಲಾಗಿದೆ ಮತ್ತು ಈ ಸ್ಥಿರಾಸ್ತಿಗಳೊಂದಿಗಿನ ಯಾವುದೇ ವ್ಯವಹಾರಗಳು **ಕರ್ಣಾಟಕ ಬ್ಯಾಂಕ್ ಲಿಮಿಟೆಡ್‌ನ ಮೇಲ್ಕಂಡ ಶಾಖೆಗಳ ಸುಪರ್ದಿಗೆ ಒಳಪಟ್ಟಿರುತ್ತದೆ.**

ದಿನಾಂಕ : 13.04.2026
ಸ್ಥಳ : ತೋಟ ಗ್ರಾಮ, ಮಂಗಳೂರು ತಾಲೂಕು / ಪಿಲಾತ್ತಬೆಟ್ಟು ಗ್ರಾಮ, ಬಂಟ್ವಾಳ ತಾಲೂಕು

ಸಹಿ/-, ಮುಖ್ಯ ಪ್ರಬಂಧಕರು ಮತ್ತು ಅಧಿಕೃತ ಅಧಿಕಾರಿ
ಕರ್ಣಾಟಕ ಬ್ಯಾಂಕ್ ಲಿ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ವಿಭಾಗ, ಹುಬ್ಬಳ್ಳಿ

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2025-26 ದಿನಾಂಕ: 15-04-2026

ಅಲ್ಪಾವಧಿ/ಇ-ಟೆಂಡರ್ ಅಧಿಸೂಚನೆ

ಜಾಹಿರಾತು ನಂ:- ದಿನಾಂಕ:- ಉಲ್ಲೇಖ: ಜಾಹಿರಾತು ನಂ:- 1370 ದಿನಾಂಕ:- 17-03-2026.

ಹುಬ್ಬಳ್ಳಿ-ಧಾರವಾಡ ಮಹಾನಗರ ಸನ್ 2025-26ನೇ ಸಾಲಿನ ವಾರ್ಡ ವಾರು ಅನುದಾನ ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ:-

1) ಇಂಡೆಂಟ್ ನಂ- 57401 ರೂ. 49.10ಲಕ್ಷ **2)** ಇಂಡೆಂಟ್ ನಂ- 57402 ರೂ. 9.56ಲಕ್ಷ **3)** ಇಂಡೆಂಟ್ ನಂ- 57205 ರೂ. 12.63ಲಕ್ಷ **4)** ಇಂಡೆಂಟ್ ನಂ- DMA/2026-27/Auction6473 ಟೆಂ.ಮೊ.ರೂ. 200000/- ಇಎಂಡಿ ಮೊತ್ತ 100000/-

ಮರು ಕರೆ ಕಾಮಗಾರಿಗಳು:-

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ:-

5) ಇಂಡೆಂಟ್ ನಂ- 53039 ರೂ. 24.00ಲಕ್ಷ (4ನೇ ಕರೆ) **6)** ಇಂಡೆಂಟ್ ನಂ- 44230 ರೂ. 8.95ಲಕ್ಷ (6ನೇ ಕರೆ) **7)** ಇಂಡೆಂಟ್ ನಂ- 46141 ರೂ. 5.00ಲಕ್ಷ (8ನೇ ಕರೆ) **8)** ಇಂಡೆಂಟ್ ನಂ- 37838 ರೂ. 4.00ಲಕ್ಷ (8ನೇ ಕರೆ) **9)** ಇಂಡೆಂಟ್ ನಂ- 44536 ರೂ. 6.45ಲಕ್ಷ (8ನೇ ಕರೆ) **10)** ಇಂಡೆಂಟ್ ನಂ- 46020 ರೂ. 18.00ಲಕ್ಷ (8ನೇ ಕರೆ) **11)** ಇಂಡೆಂಟ್ ನಂ- 45514 ರೂ. 8.20ಲಕ್ಷ (8ನೇ ಕರೆ) **12)** ಇಂಡೆಂಟ್ ನಂ- 44209 ರೂ. 3.75ಲಕ್ಷ (8ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ: **0836-2213834**ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ : **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ: **17-04-2026** ಪಡೆಯಬಹುದಾಗಿದೆ.

ಕ್ರ. ಸಂ **01** ರಿಂದ **03** ಹಾಗೂ **05** ರಿಂದ **12**ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **27-04-2026** ರಂದು ಸಾಯಂಕಾಲ **4.00** ಗಂಟೆಯವರೆಗೆ. ಕ್ರ.ಸಂ **01** ರಿಂದ **03** ಹಾಗೂ **05** ರಿಂದ **12**ರ ಟೆಂಡರ್ ತೆರೆಯುವ ದಿನಾಂಕ: **28-04-2026** ಸಾಯಂಕಾಲ **4.30** ಗಂಟೆಯ ನಂತರ ತೆರೆಯಲಾಗುವುದು.

ಕ್ರ.ಸಂ **04**ರ ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ (e-Auction) ಯಾವುದಾದರು ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP) ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ನಿಯಮಗಳನ್ನು ಒಳಗೊಂಡಿರುವ ಟೆಂಡರ್ ದಾಸ್ತಾವೇಜನ್ನು ಅಂತರ್ ಜಾಲ ವಿಳಾಸ **kppp.karnataka.gov.in** ದಲ್ಲಿ ದಿನಾಂಕ: **17-04-2026** ರಿಂದ ಪಡೆಯಬಹುದಾಗಿದೆ ಹೆಚ್ಚಿನ ಮಾಹಿತಿ ಕುರಿತು ಸರಬರಾಜುದಾರರು (Bidders) ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಹು-ಧಾ, ಮಹಾನಗರ ಪಾಲಿಕೆ ರವರ ಕಚೇರಿ ಸಮಯದಲ್ಲಿ ಸಂಪರ್ಕಸಬಹುದು.

- ಡೌನ್‌ಲೋಡ್ ಮಾಡಿಕೊಳ್ಳಲು ಕೊನೆಯ ದಿನಾಂಕ: **20-04-2026** ರಂದು **17.30:00** ಗಂಟೆಯವರೆಗೆ
- ಇ-ಹರಾಜು ಪಾಲ್ಗೊಳ್ಳಲು ಕೊನೆಯ ದಿನಾಂಕ: **23-04-2026** ರಂದು **17.30:00** ಗಂಟೆಯವರೆಗೆ
- ಇ-ಹರಾಜು ಜರುಗುವ ದಿನಾಂಕ: **27-04-2026** ರಂದು ಮುಂಜಾನೆ **10.00** ಗಂಟೆಯಿಂದ ಸಾಯಂಕಾಲ **5:30** ಘಂಟೆಯವರೆಗೆ

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾ.ಸಾ.ಇ./ಧಾರವಾಡ/64/2026-27/ದೇಶಪಾಂಡೆಪಬ್ಲಿಸಿಟಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ ಎಸ್.ಬಿ.ಸಿ ಪಾ&ಪೋ ವಿಭಾಗ, ಭಿಮರಾಯನಗುಡಿ-585287 ತಾ: ಶಹಾಪೂರಜಿ: ಯದಗಿರಿ. email:kbjnleesbc@gmail.com

ಸಂ.ಕೃಭಾಜನಿನಿ/ಕಾನಿ/ಎಸ್.ಬಿ.ಸಿ/ಟಿ.ಎನ್.ಡಿ/ಯೋಶಾ/2026-27/21 ದಿನಾಂಕ:10.04.2026

ಟೆಂಡರ್ ಪ್ರಕಟಣೆ

(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿಯಮಿತ), ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿದಾರರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಸಿವಿಲ್ ಒಂದನೇದರ್ಜೆ ಹಾಗೂ ಮೇಲ್ಪಟ್ಟಗುತ್ತಿಗೆದಾರರಿಂದ "Survey, Investigation, Design, Supply, Erection, Testing and Commissioning of required Number of Vertical Turbine Pumps coupled to HT Motor for providing Irrigation facility to Suffering atchkat 2847 Ha. of Lateral No.27 to 32 of Dy.No.6 of Shahapur Branch Canal from Karnal Nala under Karnal LIS in Shorapur Taluk Yadagir District Viz., Construction of Diversion Weir, Intake Fore-bay, Jackwell Cum Pump House, Manifold along With Electrical Panel, Soft Starter, Capacitor, 11 KV Power Transformers, HT Bus Bar / Cabling, 11/6.6 KV Sub-Station, Power Line and 11 KV Terminal Bay, MS Rising Main, Valves and Construction of Delivery Chamber, ERM to Lateral 27 & 31 of Dy.No.6 (selected reach) Supply of Spare, Accessories and Tools Including Operation & Maintenance of the entire System for five years from the date of successful Commissioning of Karnal Lift Irrigation Scheme on Turnkey Basis".(Work indent no:KBJNL/2025-26/ LI/ WORK_INDENT2778)"ಎಂಬ ಕಾಮಗಾರಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ತಿಳಿಸಿರುವಂತೆ ಕಾಮಗಾರಿಗೆ ಕರ್ನಾಟಕ ಪಬ್ಲಿಕ್ ಪೋರ್ಟಲ್‌ಮೂಲಕ ಅಹ್ವಾನಿಸಲಾಗಿದೆ.

1) **ಲಕೋಟೆ ಪದ್ಧತಿ:** ದ್ವಿ-ಲಕೋಟೆ **2) ಕಾಮಗಾರಿ ಅಂದಾಜು ಪತ್ರಿಕೆಯ ಸಂಖ್ಯೆ:** KBJNL/2025-26/LI/WORK_INDENT2775)" **3)ಟೆಂಡರ್ ಅರ್ಜಿ ಪ್ರಾರಂಭವಾಗುವ ದಿನಾಂಕ:** 14.04.2026 ರಿಂದ 12.05.2026 ಸಂಜೆ 5.00 ಗಂಟೆಯವರೆಗೆ **4) ಟೆಂಡರ್ ಕುರಿತು ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:** 22.04.2026 ರಂದು ಸಂಜೆ 5.30 ಗಂಟೆಯವರೆಗೆ **5) ಪ್ರೀ-ಬಿಡ್ ಸಭೆ ಜರುಗುವ ದಿನಾಂಕ:** 23.04.2026 ರಂದು ಬೆಳಗ್ಗೆ 11.30 ಗಂಟೆಗೆ **6) ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:** 12.05.2026 ರಂದು ಸಂಜೆ 5.00 ಗಂಟೆಯವರೆಗೆ **7) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ:** 14.05.2026ರಂದು ಬೆಳಗ್ಗೆ 11.00ಗಂಟೆಗೆ **8) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 18.05.2026 ರಂದು ಬೆಳಗ್ಗೆ 11.30ಗಂಟೆಗೆ (ತಾತ್ಕಾಲಿಕ)

ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲ ವಿಳಾಸ https://kppp.karnataka.gov.in ದಲ್ಲಿ ಅಥವಾ ಈ ಕೆಳಗೆ ಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕಅಭಿಯಂತರು
ಕೃಭಾಜನಿನಿ, ಎಸ್.ಬಿ.ಸಿ ಪಾ&ಪೋ,ವಿಭಾಗ
ಭಿಮರಾಯನಗಯಡಿ

ವಾ.ಸಾ.ಸಂ.ಇ/ಯಾದಗಿರ/28/ಕೆ.ಎಸ್.ಎಂ.ಸಿ.&ಎ/2026-27

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ-590018, ಕರ್ನಾಟಕ, ಭಾರತ

Ref. VTU/BGM/SAP/CW1/T-728/735/737/2025-26/228 Dtd.15-04-2026

ಅಲ್ಪಾವಧಿ ಟೆಂಡರ್ ಪ್ರಕಟನೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ-ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ್ ಮೂಲಕ ಮೊಹರ ಬಂದ್ ದರಖಾಸ್ತುಗಳನ್ನು ಅರ್ಹ ತಯಾರಕರು/ ಪೂರೈಕೆದಾರರಿಂದ ಅಹ್ವಾನಿಸಲಾಗಿದೆ.

ಕ್ರ ಸಂ	ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ	ಮುಂಗಡ ಠೇವಣಿ
1	T-728: Tender for Set Up the Smart Classes to Govt. Kannada Higher Primary School Santibastwada, Govt. Kannada Primary School at, Valmiki Nagar, Govt. Kannada High School at Theerthkunde and Govt. Marathi Higher Primary School at Koulapur	28,33,400/-	56,700/-
2	T-735: Tender for procurement of equipment for establishment of AICTE Idea Lab at Dept. of Mechanical Engineering, UBDTCE, Davangere	59,84,000/-	90,000/-
3	T-737: Tender for Procurement of NRE Fused Deposition Modeling (FDM) Technology 3D Printer to Dept. of Robotics and Artificial Intelligence, UBDTCE, Davangere under VGST-K-FIST – L2 and VTU Matching Grants	17,00,000/-	42,500/-

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **23-04-2026** ರ **2.30** ರ ವರೆಗೆ. ಟೆಂಡರ್ ತೆರೆಯುವ ದಿನಾಂಕ: **24-04-2026** ರ **4.00** ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ **www.kppp.karnataka.gov.in** ಮತ್ತು **www.vtu.ac.in** ನೋಡಬಹುದು.

ಸಹಿ/-
ಕುಲಸಚಿವರು

ವಾ.ಸಾ.ಸಂ.ಇ./ಬೆಳಗಾವಿ/108/ದೇಶಪಾಂಡೆಪಬ್ಲಿಸಿಟಿ/2026-27

ಕರ್ನಾಟಕ ಸರಕಾರ

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಗದಗ, ಇವರ ಕಾರ್ಯಾಲಯ

ದೂರವಾಣಿ : 08372-250758 ಇ-ಮೇಲ್ : dcpogadag@gmail.com
ಸಂ:ಜಿಮರಅ/ಜಿಮರಘ/ಗ/ಪ್ರ.ಕು/2026-27/41 ದಿನಾಂಕ : 15.04.2026

ಗಂಡು ಮಗುವಿನ ಪತ್ತೆ

ದಿನಾಂಕ:06-09-2022 ರಂದು ಕುರ್ತುಕೋಟಿ ಗ್ರಾಮದ ಸಾರ್ವಜನಿಕ ಹಿತಾಸಕ್ತಿ ಹೊಂದಿದ ವ್ಯಕ್ತಿಗಳು ಬಾಲಕ ಶ್ರೀಧರ ನಾಗೇಶ ಹರ್ಜಿ ಇವನನ್ನು ರಕ್ಷಿಸಿ ರಕ್ಷಣೆ-ಪೋಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿ ಗದಗ ಇಲ್ಲಿಗೆ ಹಾಜರುಪಡಿಸಿದ್ದು, ಅದರಂತೆ ಬಾಲಕನ ರಕ್ಷಣೆ-ಪೋಷಣೆಗಾಗಿ ಮಾನ್ಯ ಅಧ್ಯಕ್ಷರು ಮಕ್ಕಳ ಕಲ್ಯಾಣ



ಸಮಿತಿಯವರ ಆದೇಶದಂತೆ ಬಾಲಕರ ಸರಕಾರಿ ಬಾಲಮಂದಿರದಲ್ಲಿ ದಾಖಲಿಸಿಕೊಳ್ಳಲಾಯಿತು. ಬಾಲಕನ ತಾಯಿ ತೀರಿಕೊಂಡಿದ್ದು, ತಂದೆಯು ಇನ್ನೊಬ್ಬ ಮಹಿಳೆಯೊಂದಿಗೆ ಮದುವೆಯಾಗಿ ಬಾಲಕನನ್ನು ಕುರ್ತುಕೋಟಿ ಗ್ರಾಮದಲ್ಲಿ ರಾತ್ರೋ ರಾತ್ರಿ ಬಿಟ್ಟು ಹೋಗಿರುತ್ತಾರೆ. ಬಾಲಕನ ಪುನರ್ವಸತಿ ಕಲ್ಪಿಸುವುದು ಅವಶ್ಯಕವಾಗಿದ್ದರಿಂದ ಇವರು ಬಾಲಕನ ಪಾಲಕರ/ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲು ಹಾಗೂ ಮಗುವನ್ನು ಕಾನೂನು ಬದ್ಧ ದತ್ತು ಪ್ರಕ್ರಿಯೆಗೆ ಒಳಪಡಿಸಲು ಈ ಮೂಲಕ ಮಗುವನ್ನು ಕುಟುಂಬ ವ್ಯವಸ್ಥೆಯಲ್ಲಿ ಪುರ್ನವಸತಿಗೊಳಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಜೈವಿಕ ಪಾಲಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದ್ದು, ಸದರಿ ಬಾಲಕನಿಗೆ ಸಂಬಂಧಿಸಿದವರು ಸೂಕ್ತ ದಾಖಲೆಗಳೊಂದಿಗೆ 30 ದಿನಗಳೊಳಗಾಗಿ ಮಕ್ಕಳ ಕಲ್ಯಾಣ ಸಮಿತಿ, ಗದಗ ಅಥವಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ ರೂ ನಂ-225 ಜಿಲ್ಲಾಡಳಿತ ಭವನ, ಗದಗ ಈ ವಿಳಾಸದಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/27/2026-27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-618) ಡ್ರಾ ಏಪ್ರಿಲ್ 16ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
PL 561807 (VAIKKOM)

Consolation Prize Rs.5,000/-
PA 561807 PB 561807 PC 561807 PD 561807
PE 561807 PF 561807 PG 561807 PH 561807
PJ 561807 PK 561807 PM 561807

2nd Prize Rs.30,00,000/- [30 Lakhs]
PK 832398 (ERNAKULAM)

3rd Prize Rs.5,00,000/- [5 Lakhs]
PA 125808 (MANANTHAVADY)

FOR THE TICKETS ENDING WITH THE FOLLOWING NUMBERS

4th Prize Rs.5,000/-
0514 0723 0925 2553 2798 2811 3033 3263 3508 3940
4195 4994 6591 6724 8000 8100 8209 9846 9892

5th Prize Rs.2,000/-
0896 3043 3200 4096 7062 7221

6th Prize Rs.1,000/-
0556 0574 0816 1070 1775 2166 2511 2684 3579 3595
3614 3669 4489 4869 5215 5861 6044 7126 7357 7497
8296 8354 8580 9157 9196

7th Prize Rs.500/-
0205 0220 0414 0464 0683 0689 1201 1587 1673 2001
2271 2462 2843 2865 3008 3180 3276 3479 4003 4122
4190 4298 4421 5067 5102 5242 5263 5413 5438 5532
5781 5896 5920 6012 6200 6219 6231 6291 6549 6603
6673 6697 6775 7112 7191 7199 7285 7362 7371 7506
7866 7943 8265 8277 8374 8391 8527 8739 8766 8790
8832 8933 8959 9152 9165 9278 9379 9452 9454 9640
9747 9772 9775 9845 9851 9946

8th Prize Rs.200/-
0028 0091 0214 0301 0427 0571 0690 0777 0850 0889
0924 1110 1128 1218 1494 1730 1735 1980 2049 2162
2203 2227 2300 2333 2381 2561 2680 2866 3042 3574
3662 3676 3943 4051 4091 4123 4185 4211 4285 4591
4704 4777 4778 5533 5574 5745 5790 5814 5924 6235
6357 6569 6576 6596 6654 6659 6719 7180 7395 7560
7603 7785 7808 8076 8225 8346 8548 8712 8877 8894
8908 8940 9040 9116 9204 9235 9471 9556 9571 9695
9707 9899 9927 9928

9th Prize Rs.100/-
0010 0128 0133 0177 0261 0266 0405 0554 0595 0609
0677 0684 0704 0806 0844 0963 1102 1180 1195 1227
1327 1357 1646 1710 1838 1866 1915 1967 2097 2370
2460 2607 2638 3175 3176 3221 3302 3307 3418 3504
3592 3720 3954 4008 4026 4084 4130 4200 4247 4336
4370 4383 4397 4448 4457 4496 4500 4539 4597 4623
4638 4648 4697 4788 4812 4813 4946 4970 4986 5008
5145 5160 5185 5241 5582 5601 5608 5675 5698 5739
5772 5802 5830 5852 5947 6028 6142 6153 6207 6213
6234 6270 6293 6348 6361 6391 6451 6685 6744 6802
7036 7063 7094 7144 7224 7242 7309 7337 7429 7479
7488 7572 7614 7696 7702 7812 7815 7821 7841 8058
8089 8226 8552 8555 8570 8577 8747 8788 8791 8854
8889 8901 8989 8997 9013 9024 9028 9187 9229 9303
9312 9322 9411 9418 9450 9519 9632 9674 9703 9728
9783 9813 9814 9880 9906 9974

ನಿಧನ ಸುದ್ದಿ

ಸೀತಾರಾಮ



ಬೆಳ್ತಂಗಡಿ: ಕರಂಬಾರು ಗ್ರಾಮದ ಕೇಳ್ಕರ್ ಮನೆತನದ ತಂತ್ರಿವರ್ಯರಾದ,ಕೃಷಿಕರೂ ಆಗಿದ್ದ ಕಾಜಿಮುಗೇರು ಸೀತಾರಾಮ ಹೆಬ್ಬಾರ್ ಕೇಳ್ಕರ್(78) ಏ.15ರಂದು ವಯೋಸಹಜ ಅಸೌಖ್ಯದಿಂದ ಬೆಂಗಳೂರಿನ ತಮ್ಮ ಕಿರಿಯ ಪುತ್ರನ ಮನೆಯಲ್ಲಿ ನಿಧನ ಹೊಂದಿದರು. ಸೂಳಬೆಟ್ಟಿನ ಬರಾಯ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಅನುವಂಶೀಯ ತಂತ್ರಿಗಳಾಗಿದ್ದರು. ಸುಮಾರು 32 ವರ್ಷಗಳ ಕಾಲ ತಂತ್ರಿಗಳಾಗಿ ಸೇವೆ ಸಲ್ಲಿಸಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ವೆಂಕಟೇಶ



ಬೆಳ್ತಂಗಡಿ: ತಾಲೂಕಿನ ಓಡಿಲ್ನಾಳ ಗ್ರಾಮದ ಮೇಗಿನಮನೆ ನಿವಾಸಿ, ಕೃಷಿಕರಾದ ಎಂ. ವೆಂಕಟೇಶ ಬೈಪಾಡಿತ್ತಾಯ(79) ಅವರು ಗುರುವಾರ ಅಲ್ಪಕಾಲದ ಅಸೌಖ್ಯದಿಂದ ನಿಧನರಾಗಿದ್ದಾರೆ. ಅವರು ಪತ್ನಿ, ಪತ್ರಕರ್ತರಾದ ಶ್ರೀಶ ಪುಣಚ ಹಾಗೂ ಶ್ರೀನಿಧಿ ಓಡಿಲ್ನಾಳ ಸೇರಿದಂತೆ ಇಬ್ಬರು ಗಂಡು, ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಬಾಲಕೃಷ್ಣ



ಬೆಳ್ತಂಗಡಿ: ಉಜಿರೆ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಪಾರ ವಿನಾಯಕ ನಗರ ನಿವಾಸಿ ಬಾಲಕೃಷ್ಣ ಗೌಡ (64) ಏ. 15ರಂದು ರಾತ್ರಿ ಅಸೌಖ್ಯದಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಕೇಶವ ಎಂ.



ಬೆಳ್ತಂಗಡಿ: ಬೆಳ್ತಂಗಡಿ ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ, ಧರ್ಮಸ್ಥಳ ಗ್ರಾಮದ ಕನ್ಯಾಡಿ ನಿವಾಸಿ ಕೇಶವ ಎಂ. (46) ಅವರು ಹೃದಯಾಘಾತ ಎ.16ರಂದು ಮಂಗಳೂರು ಆಸ್ಪತ್ರೆಯಲ್ಲಿ ನಿಧನರಾದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರಾಗಿದ್ದ ಇವರು, ಬೆಳ್ತಂಗಡಿ ತಾಲೂಕು ಪಂಚಾಯತಿನ ಸದಸ್ಯರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ಯಾಡಿ ಸೇವಾ ಭಾರತಿ ಸಂಸ್ಥೆ ಸೇರಿದಂತೆ ಅನೇಕ ಸೇವಾ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು. ಅವಿವಾಹಿತರಾಗಿದ್ದ ಇವರು ಕುಟುಂಬ ವರ್ಗದವರನ್ನು ಅಗಲಿದ್ದಾರೆ.

ಏ.18–24: ಪದವು ಕುಲಶೇಖರ ಶ್ರೀ ಶನೈಶ್ಚರ ದೇವಸ್ಥಾನದ ಬಿಂಬ ಪ್ರತಿಷ್ಠೆ ಬ್ರಹ್ಮಕಲಶೋತ್ಸವ

ಏ.19: ಹಿಂದೂ ಯುವಸೇನೆ ಸಮಾವೇಶ



ಮಂಗಳೂರು: ಪದವು ಕುಲಶೇಖರದಲ್ಲಿ ಹಿಂದೂ ಯುವಸೇನೆ ಸಂಚಾಲಿತ ಧಾರ್ಮಿಕ ಶ್ರದ್ಧಾ ಕೇಂದ್ರ ಶ್ರೀ ಶನೈಶ್ಚರ ದೇವಸ್ಥಾನದ ಬಿಂಬ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವ ಏ.18ರಿಂದ 24ರ ತನಕ ಬಾಳಂಭಟ್ ಮನೆತನದ ಜ್ಯೋತಿಷ್ಯ ವಿದ್ವಾನ್ ವೇದಮೂರ್ತಿ ಎಂ. ಗಿರಿಧರ ಭಟ್ ಮತ್ತು ವೇದಮೂರ್ತಿ ಡಾ. ಸತ್ಯಕೃಷ್ಣ ಭಟ್ ಅವರ ನೇತೃತ್ವದಲ್ಲಿ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್‌ಕುಮಾರ್ ಕಟೀಲು ತಿಳಿಸಿದರು.

ಹಿಂದೂ ಯುವಸೇನೆ ಪದವು ಶಾಖೆಯ ಧಾರ್ಮಿಕ ವಿಭಾಗವಾಗಿ ಕಳೆದ ಎರಡೂವರೆ ದಶಕಗಳಿಂದ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಶನೈಶ್ಚರ ಪೂಜಾ ಸಮಿತಿ ಶ್ರೀ ಸಗ್ರಹ ಮಖ ಶನೈಶ್ಚರ ಮಹಾಯಾಗವನ್ನು ಬಾಳಂಭಟ್ ಮನೆತನದ ವೇದಮೂರ್ತಿ ನಾರಾಯಣ ಭಟ್ ಅವರ ಮಾರ್ಗದರ್ಶನದಲ್ಲಿ 2000 ಹಾಗೂ 2018ರಲ್ಲಿ ನಡೆಸಿತ್ತು. ಮಂಗಳೂರಿನ ಕುಲಶೇಖರದ ಪದವು ಮೇಗಿನಮನೆ ಬಳಿ 2010ರಲ್ಲಿ 600 ಚ.ಅಡಿಯಲ್ಲಿ ಶ್ರೀ ಶನೈಶ್ಚರ ಪೂಜಾ ಮಂದಿರವನ್ನು ನಿರ್ಮಿಸಿ ಶ್ರೀ ಶನಿದೇವರ ಆರಾಧನೆಯನ್ನು ನಡೆಸಲಾಗುತ್ತಿತ್ತು. 2023ರಲ್ಲಿ ಶ್ರೀ ಶನೈಶ್ಚರ ದೇವಸ್ಥಾನ ನಿರ್ಮಾಣ ಸಮಿತಿಯನ್ನು ರಚಿಸಿ, 10 ಸೆಂಟ್ಸ್ ಸ್ಥಳವನ್ನು ಖರೀದಿಸಿ, ನೂತನ ಶಿಲಾಮಯ ಶ್ರೀ ಶನೈಶ್ಚರ ದೇವಸ್ಥಾನದ ಶಂಕುಸ್ಥಾಪನೆ ನಡೆಸಲಾಗಿತ್ತು. ಪ್ರಶ್ನಾಚಿಂತನೆಯಲ್ಲಿ ಕಂಡುಬಂದಂತೆ ಶ್ರೀ ಶನೈಶ್ಚರ ದೇವಸ್ಥಾನದಲ್ಲಿ ನವಗ್ರಹ ಸಹಿತ ಶ್ರೀ ಶನೈಶ್ಚರ, ಶ್ರೀ ಮಹಾಗಣಪತಿ ಹಾಗೂ ಶ್ರೀ ದುರ್ಗಾದೇವಿಯನ್ನು ಪ್ರತಿಷ್ಠಾಪಿಸಲಾಗುವುದು ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ಏ.18ರಂದು ಸಾಮೂಹಿಕ ಪ್ರಾರ್ಥನೆಯಿಂದ ಮೊದಲ್ಗೊಂಡು 108 ಕಾಯಿ ಗಣಯಾಗ, ರುದ್ರಯಾಗ, ಲಕ್ಷ್ಮೀನಾರಾಯಣ ಪ್ರಧಾನ ಹೋಮ ಏ.22ರತನಕ ನಡೆಯಲಿದೆ. ಏ.23ರಂದು ಬೆಳಗ್ಗೆ 8.02ಕ್ಕೆ ನೂತನ ಆಲಯದಲ್ಲಿ ಗಣಪತಿ, ದುರ್ಗಾ, ನವಗ್ರಹ ಸಹಿತ ಶ್ರೀ ಶನೈಶ್ಚರ ದೇವರ ಬಿಂಬ ಪ್ರತಿಷ್ಠೆ, ಶಿಖರ ಕಲಶ ಪ್ರತಿಷ್ಠೆ ಮತ್ತು ಶ್ರೀ ದೇವರಿಗೆ ಪರಿಕಲಶ ಸಹಿತ ಬ್ರಹ್ಮಕಲಶಾಭಿಷೇಕವು ಜರಗಲಿದೆ. ಏ. 24ರಂದು ಚಂಡಿಕಾಯಾಗ ಹಾಗೂ ಸಗ್ರಹ ಶನೈಶ್ಚರ ಮಹಾಯಾಗ ಸಂಪನ್ನಗೊಳ್ಳಲಿದೆ. ಪ್ರತಿದಿನ ವಿವಿಧ ಮಂಡಳಿಗಳಿಂದ ಭಜನೆ, ಅನ್ನಸಂತರ್ಪಣೆ, ಧಾರ್ಮಿಕ ಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿವೆ ಎಂದರು.

ಶನಿದೇವರ ಮಹಾತ್ಮೆಯ ಪುಣ್ಯಕಥಾನಕ ವನ್ನು 'ಛಾಯಾನಂದನ' ಯಕ್ಷಗಾನ ಬಯಲಾಟದ ಮೂಲಕ ಶ್ರೀ ಪಾವಂಜೆ ಮೇಳದವರು ಏ.21ರಂದು ಹಾಗೂ ಶ್ರೀಲಲಿತೆ ಕಲಾವಿದರು ಏ. 23ರಂದು 'ಶನಿ ಮಹಾತ್ಮೆ' ತುಳು ಪೌರಾಣಿಕ ನಾಟಕದ ಮೂಲಕ ಪ್ರದರ್ಶಿಸಲಿರುವರು. ಏ.18ರಂದು ಸಂಜೆ 7ಕ್ಕೆ ಸೌದಾಮಿನಿ ರಾವ್ ಕಟಪಾಡಿ ಮತ್ತು ಬಳಗದವರಿಂದ 'ನೃತ್ಯರಂಜಿನಿ', 20ರಂದು ರಾತ್ರಿ 7.30ಕ್ಕೆ ವಿಧಾತ್ರಿ ಕಲಾವಿದೆರ್ ಕುಡ್ಲ ಇವರಿಂದ 'ಜೈ ಹನುಮಾನ್' ಸಿನಿ ನಾಟಕ, ಸ್ಥಳೀಯ ಪ್ರತಿಭೆಗಳಿಂದ ಸಾಂಸ್ಕೃತಿಕ ವೈವಿಧ್ಯ, ಜಗದೀಶ್ ಕದ್ರಿಯವರ ಸಂಯೋಜನೆಯಲ್ಲಿ ಕದ್ರಿ ಈವೆಂಟ್ಸ್ ಪ್ರಸ್ತುತಿಯ 'ಭಕ್ತಿಸಂಗೀತ ಲಹರಿ', ಏ.25ರಂದು ಪಕ್ಷಿಕೆರೆ ಶ್ರೀ ಶನೀಶ್ವರ ಭಕ್ತವೃಂದದಿಂದ ಪೂಜಾ ಸಹಿತ ಶ್ರೀ ಶನೀಶ್ವರ ಮಹಾತ್ಮೆ ತುಳು ತಾಳಮದ್ದಳೆ ಮೊದಲಾದ ಕಲಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ವಿವರಿಸಿದರು. ಏ. 19ರಂದು ಬೆಳಿಗ್ಗೆ 9ಕ್ಕೆ ಶರವು ಮಹಾಗಣಪತಿ ದೇವಸ್ಥಾನದಲ್ಲಿ ಶರವು ರಾಘವೇಂದ್ರ ಶಾಸ್ತ್ರಿ ಅವರು ಹೊರೆಕಾಣಿಕೆ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ನೂತನ ಶಿಲಾಬಿಂಬಗಳೊಂದಿಗೆ ದೇವಸ್ಥಾನದ ನಿತ್ಯೋಪಯೋಗಿ ಪರಿಕರಗಳು, ಬ್ರಹ್ಮಕಲಶಕ್ಕೆ ಬೇಕಾದ ಪರಿಕರಗಳು, ಹೊರೆಕಾಣಿಕೆ ಮೆರವಣಿಗೆಯಲ್ಲಿ ಸಾಗಲಿದೆ. ಹಿಂದೂ ಯುವ ಸೇನೆಯ ವಿವಿಧ ಶಾಖೆಗಳು, ಪರಿಸರದ ಸಂಘ ಸಂಸ್ಥೆಗಳು, ಜಿಲ್ಲೆಯ ಧಾರ್ಮಿಕ ಕ್ಷೇತ್ರಗಳಿಂದ ಹೊರೆಕಾಣಿಕೆ ವಾಹನಗಳು ಪಾಲ್ಗೊಳ್ಳಲಿದೆ.

ಹಿಂದೂ ಯುವಸೇನೆಯ ಸಮಾವೇಶ

ಶಿವಾಜಿ ಮಂಟಪದಲ್ಲಿ ಪ್ರತಿದಿನ ಸಂಜೆ ಧರ್ಮಸಭೆ ನಡೆಯಲಿದ್ದು, ಏ. 19ರಂದು ಹಿಂದೂ ಯುವಸೇನೆಯ ಸಮಾವೇಶ ಜರಗಲಿದೆ. ಹಿಂದೂ ಯುವಸೇನೆಯ ಹಿರಿಯ ನಾಯಕರು, ವಿವಿಧ ಶಾಖೆಗಳ ಸ್ವಯಂಸೇವಕರು, ಧಾರ್ಮಿಕ ನೇತಾರರು ಈ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಮುಂದೆ ಶ್ರೀ ಕ್ಷೇತ್ರದಲ್ಲಿ ನಡೆಯುವ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅನುಕೂಲ ವಾಗುವಂತೆ ಇನ್ನೂ 20 ಸೆಂಟ್ಸ್ ಜಮೀನಿನ ಅವಶ್ಯಕತೆಯಿದ್ದು, ಭೂ ದಾನ ಯೋಜನೆಯ ಮೂಲಕ ನಿಧಿ ಸಂಗ್ರಹ ಅಭಿಯಾನ ಆರಂಭವಾಗಿದ್ದು, ಮಂಗಳೂರು ನಗರದಲ್ಲಿ 13 ವಲಯ ಸಮಿತಿಗಳನ್ನು ಹಾಗೂ ಮಹೇಶ್ ಶೆಟ್ಟಿ ತೆಳ್ಳಾರ್ ಅವರ ಅಧ್ಯಕ್ಷತೆಯಲ್ಲಿ ಮುಂಬೈ ಸಮಿತಿಯನ್ನು ರಚಿಸಲಾಗಿದೆ ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಡಿ. ವೇದವ್ಯಾಸ ಕಾಮತ್, ಪ್ರಧಾನ ಕಾರ್ಯದರ್ಶಿ ಭಾಸ್ಕರಚಂದ್ರ ಶೆಟ್ಟಿ, ದೇವಸ್ಥಾನ ನಿರ್ಮಾಣ ಸಮಿತಿ ಅಧ್ಯಕ್ಷ ಕದ್ರಿ ನವನೀತ ಶೆಟ್ಟಿ, ಗೌರವಾಧ್ಯಕ್ಷ ಮೋನಪ್ಪ ಭಂಡಾರಿ, ಶ್ರೀ ಶನೈಶ್ಚರ ಪೂಜಾ ಸಮಿತಿ ಅಧ್ಯಕ್ಷ ರಾಮಚಂದ್ರ ಚೌಟ, ಮಾತೃಮಂಡಳಿ ಅಧ್ಯಕ್ಷೆ ವಿಜಯ ಅರುಣ್, ಕಾರ್ಯಾಧ್ಯಕ್ಷೆ ಕಾವ್ಯ ನಟರಾಜ್, ಉಮೇಶ್ ರೈ ಪದವುಮೇಗಿನಮನೆ ಉಪಸ್ಥಿತರಿದ್ದರು.

> **ಅಪೂರ್ವ ಕ್ಷೇತ್ರ**
> ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಅಪೂರ್ವವಾದ ಶ್ರೀ ಶನೈಶ್ಚರ ದೇವಾಲಯ ಮಂಗಳೂರಿನ ಪದವುವಿನಲ್ಲಿ ನಿರ್ಮಾಣವಾಗಿದ್ದು, ಅದ್ದೂರಿ ಬ್ರಹ್ಮಕಲಶ ನಡೆಯಲಿದೆ. ಹಿಂದು ಯುವಸೇನೆ ಸಂಚಾಲಿತ ಈ ದೇವಾಲಯದಲ್ಲಿ ನಿರಂತರ ಧರ್ಮಶಿಕ್ಷಣ, ರಾಷ್ಟ್ರಜಾಗೃತಿಯ ಕಾರ್ಯ ನಡೆಯಲಿದೆ.
> ■ ನಳಿನ್‌ಕುಮಾರ್ ಕಟೀಲು, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷರು

> **ನೆರವು ಅಗತ್ಯ**
> ಪದವು ಶ್ರೀ ಶನೈಶ್ಚರ ದೇವಸ್ಥಾನದ ಬ್ರಹ್ಮಕಲಶೋತ್ಸವಕ್ಕೆ ಸಕಲ ಸಿದ್ಧತೆ ನಡೆಸಲಾಗಿದೆ. ದೇವಸ್ಥಾನಕ್ಕೆ ಇನ್ನೂ ಜಾಗದ ಅಗತ್ಯವಿದ್ದು, ಜಾಗ ಖರೀದಿಸಲು ದಾನಿಗಳು, ಭಕ್ತರು ನೆರವು ನೀಡಬೇಕು.
> ■ ವೇದವ್ಯಾಸ ಕಾಮತ್, ಶಾಸಕರು, ಕಾರ್ಯಾಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ

ಶ್ವಾನ ಅಡ್ಡಬಂದು ಆಟೋ ಪಲ್ಟಿ: ಚಾಲಕ ಸಾವು



ಬೆಳ್ತಂಗಡಿ: ನಾಯಿ ಅಡ್ಡ ಬಂದು ಚಲಿಸುತ್ತಿದ್ದ ಆಟೋ ರಿಕ್ಷಾ ಪಲ್ಟಿಯಾಗಿ ಚಾಲಕ ಆಸ್ಪತ್ರೆಗೆ ಸಾಗಿಸುವ ವೇಳೆ ಸಾವನ್ನಪ್ಪಿದ ಘಟನೆ ಅಳದಂಗಡಿ ಸತ್ಯದೇವತೆ ದೇವಸ್ಥಾನದ ಬಳಿ ಏ.16 ರಂದು ನಡೆದಿದೆ. ಬೆಳ್ತಂಗಡಿ ತಾಲೂಕಿನ ನಾವರ ಗ್ರಾಮದ ಹಾರಡ್ಡೆ ನಿವಾಸಿ ಡೀಕಯ್ಯ ಪೂಜಾರಿ ಅವರ ಮೂರನೇ ಮಗ ಆಟೋ ರಿಕ್ಷಾ ಚಾಲಕ ವೃತ್ತಿ ಮಾಡುತ್ತಿದ್ದ ದೇವಪ್ಪ ಸುಧಾಕರ (37) ಸಾವನ್ನಪ್ಪಿದ ದುರ್ದೈವಿಯಾಗಿದ್ದಾರೆ.

ಯುವ ವಾಹಿನಿಯ ಸಾರಥ್ಯ | ಏ. 19ರಂದು ಬಿ.ಸಿ.ರೋಡ್‌ನಲ್ಲಿ ಆಯೋಜನೆ

'ಡೆನ್ನಾನ ಡೆನ್ನನ' ಸಂಭ್ರಮಕ್ಕೆ ಸಜ್ಜಾಗಿದೆ ಸ್ಪರ್ಶ ಕಲಾ ಮಂದಿರ

ಬಂಟ್ವಾಳ: ಯುವವಾಹಿನಿ ಕೇಂದ್ರ ಸಮಿತಿ ಆಶ್ರಯದಲ್ಲಿ ಯುವವಾಹಿನಿ ಬಂಟ್ವಾಳ ಘಟಕದ ಸಹಕಾರದಲ್ಲಿ ಯುವ ವಾಹಿನಿ ಅಂತರ್ ಘಟಕ ಸಾಂಸ್ಕೃತಿಕ ಸ್ಪರ್ಧೆ 'ಡೆನ್ನಾನ ಡೆನ್ನನ 2026' ಬಿ.ಸಿ. ರೋಡ್‌ನ ಸ್ಪರ್ಶ ಕಲಾ ಮಂದಿರದಲ್ಲಿ ಏ. 19ರಂದು ಬೆಳಗ್ಗೆಯಿಂದ ಸಂಜೆವರೆಗೆ ನಡೆಯಲಿದೆ ಎಂದು ಯುವವಾಹಿನಿ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ ರೇಖಾ ಗೋಪಾಲ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬರೋಬ್ಬರಿ 1500 ಕ್ಕೂ ಅಧಿಕ ಕಲಾವಿದರು

1500ಕ್ಕೂ ಅಧಿಕ ಕಲಾವಿದರು, ಬೆಂಗಳೂರು, ಉಡುಪಿ ಸೇರಿದಂತೆ ಯುವವಾಹಿನಿ ಸಂಸ್ಥೆಯ 35 ಘಟಕಗಳು ಈ ಸಾಂಸ್ಕೃತಿಕ ಹಬ್ಬದಲ್ಲಿ ಭಾಗವಹಿಸಲಿದೆ. ಯುವವಾಹಿನಿ ಕೇಂದ್ರ ಸಮಿತಿಯನ್ನು ಮುನ್ನಡೆಸಿದ 35 ಮಾಜಿ ಅಧ್ಯಕ್ಷರಿಗೆ ಗೌರವಾರ್ಪಣೆ ಹಾಗೂ, ದ್ವಿತೀಯ ಪಿಯುಸಿ ರಾಜ್ಯದ ಟಾಪರ್ ದಿಶಾ ಇವರಿಗೆ ಅಭಿನಂದನಾ ಸಮಾರಂಭ ನಡೆಯಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಯುವವಾಹಿನಿ ಬಂಟ್ವಾಳ ಘಟಕ ಅಧ್ಯಕ್ಷ ನಾಗೇಶ್ ಪೂಜಾರಿ ನೈಬೇಲು ಅಧ್ಯಕ್ಷತೆ ವಹಿಸಲಿದ್ದಾರೆ. ಪಡುಮಲೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೆ. ಹರಿಕೃಷ್ಣ ಬಂಟ್ವಾಳ್ ಸ್ಪರ್ಧೆಗೆ ಚಾಲನೆ ನೀಡಲಿದ್ದಾರೆ.

ಮಧ್ಯಾಹ್ನ ನಡೆಯುವ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯುವವಾಹಿನಿ ಕೇಂದ್ರ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು ವಹಿಸಲಿದ್ದಾರೆ, ಸಂಸದರಾದ ಕ್ಯಾ. ಬ್ರಿಜೇಶ್ ಚೌಟ, ಶಾಸಕರುಗಳಾದ ರಾಜೇಶ್ ನಾಯ್ಕ್, ಅಶೋಕ್ ಕುಮಾರ್ ರೈ, ಮಾಜಿ ಸಚಿವರಾದ ಬಿ. ರಮಾನಾಥ ರೈ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ.

ಸಂಜೆ ಯುವವಾಹಿನಿ ಕೇಂದ್ರ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು ಸಮಾರೋಪದ ಅಧ್ಯಕ್ಷತೆಯನ್ನು ವಹಿಸಲಿದ್ದು, ಶಾಸಕ ಉಮಾನಾಥ ಕೋಟ್ಯಾನ್, ಮೂಲ್ಕಿ ಅಖಿಲ ಭಾರತ ಬಿಲ್ಲವರ ಮಹಾಮಂಡಲ ಅಧ್ಯಕ್ಷ ಸೂರ್ಯಕಾಂತ್ ಜೆ. ಸುವರ್ಣ, ಕರ್ನಾಟಕ ಸರ್ಕಾರದ ಹೆಚ್ಚುವರಿ ಅಡ್ವಕೇಟ್ ಜನರಲ್ ತಾರನಾಥ ಪೂಜಾರಿ ಮತ್ತಿತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಚಿಪ್ಪಾರುಗುತ್ತು ದಿ| ಲಕ್ಷ್ಮಣ ಶೆಟ್ಟಿ ಸ್ಮರಣಾರ್ಥ ಪತ್ನಿ ಮತ್ತು ಮಕ್ಕಳು - ಅಡ್ಯಾರು ಶ್ರೀ ವೀರಾಂಜನೇಯ ದೇವಸ್ಥಾನ ವಠಾರ.
2. ಅಶೋಕ್ ಕುಮಾರ್, ಹೊಸ್ಮಾರು ಮನೆ, ಬೈಪಾಸು, ಬಂಟ್ವಾಳ (ತಾ).
3. ಕಾಂತಪ್ಪ ರೈ, ಮುಕ್ಕಾಲ್ದಿ ಮನೆ, ಎಕ್ಕಾರು.
4. ರತ್ನ ಸುಂದರಿ ಶೆಡ್ತಿ ಮತ್ತು ಮಕ್ಕಳು, ಪುತ್ತಿಗೆಗುತ್ತು, ಕೊಲೆಕ್ಕಾಡಿ, ಪುತ್ತಿಗೆ - ಶ್ರೀ ಕ್ಷೇತ್ರದ ವಠಾರದಲ್ಲಿ.
5. ಸುಜನ ಶೇಖರ ಶೆಟ್ಟಿ, 'ಆಶ್ರಯ', ಕೊಲೆಕ್ಕಾಡಿ, ಕಿಲ್ಪಾಡಿ, ಭಂಡಸಾಲೆ, ಮೂಲ್ಕಿ.
6. ಶಿವರಾಮ ಶೆಟ್ಟಿ, ಅಜೆಕಾರು, ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ವಠಾರದಲ್ಲಿ, ವಯಾ ಕಾರ್ಕಳ (ತಾ).
7. ರಾಕೇಶ್ ಮಲ್ಲಿ, ಪಲ್ಲಮಜಲು, ಮೊಡಂಕಾಪು ವಯಾ ಬಿ.ಸಿ. ರೋಡು, ಬಂಟ್ವಾಳ (ತಾ).

ಶ್ರೀ ಧರ್ಮಸ್ಥಳ ಮೇಳ
ಕೊಕ್ಕರ್ಣೆ-ಹೆನ್ನಿಯಲ್ಲಿ
ಶ್ರೀ ಎ. ಶ್ರೀನಿವಾಸ ಶೆಟ್ಟಿ, ಹೆನ್ನಿ, ಕಂಪದಬೈಲು, ರತ್ನಾನಿಲಯ, ಬೈದೆಬೆಟ್ಟು

ಶ್ರೀ ಸಾಲಿಗ್ರಾಮ ಮೇಳ
ತೆಕ್ಕಟ್ಟೆ ಕರಿಕಲ್ ಕಟ್ಟೆಯಲ್ಲಿ-**ಸ್ವಪ್ನಮಂಟಪ**

ಶ್ರೀ ಪೆರ್ಡೂರು ಮೇಳ
ಉಳ್ಳೂರು 11ರಲ್ಲಿ-**ನಾಗವಲ್ಲಿ**

ಶ್ರೀ ಹನುಮಗಿರಿ ಮೇಳ
ಹಟ್ಟಿಕುದ್ರುನಲ್ಲಿ

ಶ್ರೀ ಪಾವಂಜೆ ಮೇಳ
ಕೈಕಂಬ-ಕಿನ್ನಿಕಂಬಳ ರಾಧಾಕೃಷ್ಣ ಭಜನಾ ಮಂದಿರದಲ್ಲಿ
ಉತ್ತಮ ಸೌಧಾಮಿನಿ

ಪುತ್ತೂರು ಮಾರುಕಟ್ಟೆ ಧಾರಣೆ

16-04-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	445 - 485	ಹಳೆ ಕರಿಗೋಟು	235 - 265
ಚೋಲ್ ಅಡಿಕೆ	530 - 555	ಹಸಿ ಕೊಕ್ಕೋ	70 - 100
ಡಬಲ್ ಚೋಲ್	530 - 555	ಒಣ ಕೊಕ್ಕೋ	270 - 310
ಹೊಸ ಪಟೋರ	350 - 400	**ಕಾಳುಮೆಣಸು ಧಾರಣೆ**	
ಹಳೆ ಪಟೋರ	375 - 405	ಕಾಳುಮೆಣಸು	450 - 685
ಹೊಸ ಉಳ್ಳಿ	120 - 290	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	110 - 290	ಆರ್‌ಎಸ್‌ಎಸ್ 1	226.00
ಹೊಸ ಕೋಕಾ	325 - 345	ಆರ್‌ಎಸ್‌ಎಸ್ 2	196.00
ಹಳೆ ಕೋಕಾ	325 - 345	ಸ್ಕ್ರಾಪ್ 1	137.50
ಹೊಸ ಕರಿಗೋಟು	235 - 265	ಸ್ಕ್ರಾಪ್ 2	125.00

ಶೈಕ್ಷಣಿಕ ಸಾಧಕರೇ, ಅಭಿನಂದನೆಗಳು!

ಸಿಬಿಎಸ್‌ಇ 10ನೇ ತರಗತಿಯ ಬೋರ್ಡ್ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿದ್ದು, ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಕರಾವಳಿಯ ಹಲವು ವಿದ್ಯಾಸಂಸ್ಥೆಗಳು ಮಹತ್ವದ ಸಾಧನೆ ತೋರಿವೆ. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಶಾರದಾ ವಿದ್ಯಾಲಯ, ಶಕ್ತಿನಗರದ ಶಕ್ತಿ ರೆಸಿಡೆನ್ಶಿಯಲ್ ಸ್ಕೂಲ್, ಬಿಜಿಎಸ್ ಕಾವೂರು, ಪುತ್ತೂರಿನ ಅಂಬಿಕಾ ವಿದ್ಯಾಸಂಸ್ಥೆ, ಕುಂದಾಪುರ ಗುರುಕುಲ ವಕ್ವಾಡಿ ಪಬ್ಲಿಲ್ ಸ್ಕೂಲ್ ಸೇರಿದಂತೆ ಹಲವು ಶಾಲೆಗಳು ಗಮನಾರ್ಹ ಸಾಧನೆ ತೋರಿವೆ. ಸಾಧನೆ ತೋರಿದ ವಿವಿಧ ವಿದ್ಯಾ ಸಂಸ್ಥೆಗಳ ವಿದ್ಯಾರ್ಥಿಗಳ ವಿವರ ಇಲ್ಲಿದೆ.

ಕಿರುಸುದ್ದಿ

ಹರ್ಷಪ್ರಿಯ ಎ.ಎಸ್. ಶೇ. 95.8 ಅಂಕ



ಸುಬ್ರಹ್ಮಣ್ಯ: ಸಿ.ಬಿ.ಎಸ್.ಸಿ. ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಬೆಂಗಳೂರಿನ ಆರ್ ಎನ್‌ಎಸ್ ಇಂಟರ್‌ನ್ಯಾಶನಲ್ ಸ್ಕೂಲ್ ವಿದ್ಯಾರ್ಥಿನಿ ಹರ್ಷಪ್ರಿಯ ಎ.ಎಸ್. ಶೇ.95.8 ಅಂಕಗಳನ್ನು ಗಳಿಸಿದ್ದಾರೆ. ಅವರು ಸುಳ್ಯದ ಅಡ್ಕಾರ್ ನಿವಾಸಿ, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಶ್ಯಾಮ್‌ಪ್ರಸಾದ್ ಮತ್ತು ಸ್ಮಿತಾ ದಂಪತಿಯ ಪುತ್ರಿ.

ವಿವೇಕಾನಂದ ಸೆಂಟ್ರಲ್ ಸ್ಕೂಲ್‌ಗೆ ಶೇ.100 ಉತ್ತೀರ್ಣತೆ ದಾಖಲು



ಪುತ್ತೂರು: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ(ಸಿಬಿಎಸ್‌ಇ) 2025–2026ನೇ ಸಾಲಿನ 10ನೇ ತರಗತಿಯ ಪರೀಕ್ಷೆಯಲ್ಲಿ ವಿವೇಕಾನಂದ ಸೆಂಟ್ರಲ್ ಸ್ಕೂಲ್‌ನ ವಿದ್ಯಾರ್ಥಿಗಳು ತೃತೀಯ ಬಾರಿಯೂ ಸತತ ಶೇ.100 ಉತ್ತೀರ್ಣತೆಯೊಂದಿಗೆ ಹ್ಯಾಟ್ರಿಕ್ ಸಾಧಿಸಿದ್ದಾರೆ.

10ನೇ ತರಗತಿಯ ಬೋರ್ಡ್ ಪರೀಕ್ಷೆ ಬರೆದ 32 ವಿದ್ಯಾರ್ಥಿಗಳಲ್ಲಿ ಪ್ರಥಮ ಸ್ಥಾನ ಧನ್ಯಶ್ರೀ ಎಚ್.ಪಿ. ಶೇ.97.2, ದ್ವಿತೀಯ ಸ್ಥಾನ ನಿಹಾಲ್ ಸಿ. ರೈ ಶೇ.96.4, ತೃತೀಯ ಸ್ಥಾನ ಶ್ಯಾಮ್ ಎಂ.ಎಸ್. ಶೇ.94 ಗಳಿಸಿದ್ದು, ಉಳಿದಂತೆ ಮಿಹಿರ್ ಭಟ್ ಎಸ್. ಶೇ.93, ಸಮೃದ್ಧ್ ರೈ ಶೇ.92.8, ಆಪ್ತ ಚಂದ್ರಮತಿ ಮುಳಿಯ ಶೇ.92.6, ಸಂಪ್ರೀತ್ ಶೇ.90.8, ಕೃತಿ ರೈ ಶೇ.90.6 ಅಂಕಗಳನ್ನು ಪಡೆದಿದ್ದಾರೆ. ವಿಶಿಷ್ಟ ಶ್ರೇಣಿಯಲ್ಲಿ 21 ವಿದ್ಯಾರ್ಥಿಗಳು, ಪ್ರಥಮ ಶ್ರೇಣಿಯಲ್ಲಿ 11 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ವಕ್ವಾಡಿ ಗುರುಕುಲ ಪಬ್ಲಿಕ್ ಸ್ಕೂಲ್: ಶೇ.100 ಫಲಿತಾಂಶ





ಕುಂದಾಪುರ: ವಕ್ವಾ ಗುರುಕುಲ ಪಬ್ಲಿಕ್ ಸ್ಕೂಲ್ ಸತತ 16ನೇ ಬಾರಿಗೆ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಪಡೆದಿದೆ. ಪರೀಕ್ಷೆಗೆ ಹಾಜರಾದ ಒಟ್ಟು 141 ವಿದ್ಯಾರ್ಥಿಗಳಲ್ಲಿ 21 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ ಹಾಗೂ 89 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 25 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ ಹಾಗೂ 6 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಸಂಸ್ಥೆಯ ಜಂಟಿ ಕಾರ್ಯನಿರ್ವಾಹಕರಾದ ಭಾಂಡ್ಯ ಸುಭಾಷ್ ಚಂದ್ರ ಶೆಟ್ಟಿ ಹಾಗೂ ಅನುಪಮಾ ಎಸ್. ಶೆಟ್ಟಿ ತಿಳಿಸಿದ್ದಾರೆ. ಸಾಯಿಸಮರ್ಥ ಗಟಾಟೆ ಶೇ.99 (495), ರಕ್ಷಾ ಆರ್. ಶೇ.95 (475), ಶಿಖಾ ಶೇ.92.8 (464), ದಿಗಂತ ಎಂ.ತೋಳಾರ್ ಶೇ.92.6 (463), ಎನ್.ಸೃಜನಿ ಶೇ.92.6 (463), ಎಸ್.ಎಂ.ಹಿತೈಶಿ ಶೇ.92.4 (462), ಆನ್ವೇಶ್ ಪೂಜಾರಿ ಶೇ.92 (460), ಲೋಹಿತ್ ಗಜಾನನ ಶೇಟ್ ಶೇ.91.4 (457), ತನಿಷ್ಕಾ ಜಿ.ಬೆಟ್ಟಿನ್ ಶೇ.90.8 (454), ದೇವಿ ಬಿ.ಶೆಟ್ಟಿ ಶೇ.90.4 (452), ಸ್ಕಂದ ಗಣೇಶ ಎಸ್.ವಿ. ಶೇ.90.4 (452), ನಿರ್ಭಯ್ ಯು.ಶೆಟ್ಟಿ ಶೇ.90.4 (452), ವಿದ್ಯಾವಂತಿ ಜೆ. ಶೇ.90.4 (452), ತನ್ಮಯ್ ಆರ್. ಶೇ.89.2 (446), ಎನ್.ಸನ್ಮತಿ ಶೇ. 89 (445), ವೈಭವ ಶೇಟ್ ಶೇ.88.4 (442), ಅಂಕಿತಾ ಶೇ.87 (435), ಸ್ನಿಗ್ಧಾ ಶೆಟ್ಟಿ ಶೇ.87 (435), ಸಿಯಾ ಜೆ.ಶೆಟ್ಟಿ ಶೇ.86.4 (432), ಟಿ.ಗೌರವ ಪ್ರಭು ಶೇ.85.8 (429), ಚೈತಾಲಿ ಆರ್. ತಿಂಗಳಾಯ ಶೇ.84.8 (424) ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.

ಹೆಬ್ರಿ ಎಸ್.ಆರ್. ಪಬ್ಲಿಕ್ ಸ್ಕೂಲ್ 100 ಫಲಿತಾಂಶ

ಉಡುಪಿ: ಸಿಬಿಎಸ್‌ಸಿ 10ನೇ ತರಗತಿ ಪರೀಕ್ಷೆಯಲ್ಲಿ ಹೆಬ್ರಿ ಎಸ್.ಆರ್. ಪಬ್ಲಿಕ್ ಸ್ಕೂಲ್ ಸತತ 16ನೇ ವರ್ಷ ಶೇ. 100 ಫಲಿತಾಂಶ ದಾಖಲಿಸಿದೆ. ವಿದ್ಯಾರ್ಥಿಗಳಾದ ಧ್ವನಿ ಪಡುಕುಡೂರು 500ರಲ್ಲಿ 476 ಅಂಕ (ಶೇ 95.20) ಪಡೆದು ಶಾಲೆಗೆ ಪ್ರಥಮ, ಪ್ರೀತಮ್ ಗೌಡ ಕೆ.ಸಿ. ಶಿವಮೊಗ್ಗ 467 ಅಂಕ (ಶೇ 93.40) ದ್ವಿತೀಯ, ಸಮರ್ಥ್ ಎ. ಜಾಧವ್ ಬೆಂಗಳೂರು 463 ಅಂಕ (ಶೇ 92.60) ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ಪರೀಕ್ಷೆಗೆ ಹಾಜರಾದ 130 ವಿದ್ಯಾರ್ಥಿಗಳಲ್ಲಿ, 57 ಮಂದಿ ಅತ್ಯುನ್ನತ ಶ್ರೇಣಿ, 48ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆಂದು ಎಸ್. ಆರ್. ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಚ್. ನಾಗರಾಜ ಶೆಟ್ಟಿ, ಕಾರ್ಯದರ್ಶಿ ಸಪ್ನಾ ಎನ್. ಶೆಟ್ಟಿ ತಿಳಿಸಿದ್ದಾರೆ.

ಆಳ್ವಾಸ್ ವಿದ್ಯಾಸಂಸ್ಥೆಗೆ ಶೇ.100 ಫಲಿತಾಂಶ



ಮೂಡುಬಿದಿರೆ: ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಈ ಬಾರಿಯ ಹತ್ತನೆ ತರಗತಿಯ ಫಲಿತಾಂಶ ಪ್ರಕಟಿಸಿದ್ದು ಸತತ ಆರನೇ ವರ್ಷ ಆಳ್ವಾಸ್ ಶಾಲೆಯು ಶೇ.100 ಫಲಿತಾಂಶ ದಾಖಲಿಸಿದೆ.

ಆಳ್ವಾಸ್ ಶಾಲೆಯ 46 ವಿದ್ಯಾರ್ಥಿಗಳು ಶೇ.95ಕ್ಕಿಂತ ಹೆಚ್ಚು ಅಂಕ ಪಡೆಯುವ ಮೂಲಕ ಶ್ರೇಷ್ಠ ಸಾಧನೆ ಮೆರೆದಿದ್ದಾರೆ. ಕರ್ನಾಟಕ ಒಂದು ಶಾಲೆಯಿಂದ 95 ಶೇಕಡಾಕ್ಕಿಂತ ಹೆಚ್ಚು ಅಂಕ ಪಡೆದವರ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಆಳ್ವಾಸ್ ಪ್ರಥಮ ಸ್ಥಾನ ಪಡೆದಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅನಘಾ ಉಮೇಶ್‌ರಾವ್ (99.2 ಶೇ.), ಪ್ರಮತ್ ಔರಾದ್ಕರ್ (99 ಶೇ.), ಆದ್ಯಾ ಭಟ್ (99 ಶೇ.), ಅನುರಾಧ(99 ಶೇ.), ವಾತ್ಸಲ್ಯ ಎನ್. (ಶೇ. 98), ಧನ್ವಿತ್ ಟಿಬಿ (97.2 ಶೇ.), ನಮೃತಾ (97.2 ಶೇ.), ಮನೋಘ್ನ (97 ಶೇ.), ಶ್ವೇತಾ(97ಶೇ.), ಶಿವಾನಿ ಜಿಎ (97ಶೇ.), ವಾಕ್ಮಿ ಪ್ರಶಾಂತ್ (97ಶೇ.), ಅವನಿ ಪಿ ಶೆಟ್ಟಿ (97ಶೇ.), ವಿಭಾಸ್(97 ಶೇ.), ಯಕ್ಷಿತಾ (96.4ಶೇ.), ಸೃಜನ್(96.4ಶೇ.), ಗೌತಮ್ (96.4ಶೇ.), ಪ್ರತೀಕ್ಷಾ ಕೆ ಎಂ(96.4 ಶೇ.), ಸಾನ್ವಿ(96.4ಶೇ.), ಜನಿತ್ (96.2ಶೇ.), ಭಾರ್ಗವ್ (96 ಶೇ.), ಜಶ್ಮಿತಾ(96 ಶೇ.), ಐಶ್ರೀ ಶೆಟ್ಟಿ (96 ಶೇ.), ಆದಿಲ್ (96 ಶೇ.), ಧೃತಿ (96 ಶೇ.), ನಿಶ್ಚಲ್ (96ಶೇ.), ಹಿತೈಶಿ (96ಶೇ.), ಪ್ರಥಮ್ (96ಶೇ.), ಆದ್ರಿತ್ (95.4ಶೇ.), ಸುಮಿತ್(95.2ಶೇ.), ಐಶಾನಿ(95.2ಶೇ.), ಭೃತಿ(95ಶೇ.), ಪೂರ್ವಿಕ್ (95 ಶೇ.), ತರುಂಜನ್(95 ಶೇ.), ಸಾಯಿದೀಕ್ಷಾ(95 ಶೇ.), ಅಂಜನಾತನಯ್(95 ಶೇ.), ಗ್ಲೋರಿ ಪ್ರಕಾಶ್(95 ಶೇ.), ಅಂಜನಿ(95%), ದಿವ್ಯಾ(95 ಶೇ.), ಧನ್ಯಾ(95 ಶೇ.), ನಿಶಾ(95 ಶೇ.), ಅದ್ವಿತಿ(95 ಶೇ.), ಯಶಸ್ವಿ (95 ಶೇ.), ಸಂಜನಾ(95 ಶೇ.), ಹರ್ಷವರ್ಧನ್ (95 ಶೇ.) ರೋಹಿತ್(95 ಶೇ.), ಸಿದ್ಧಾರ್ಥ (95ಶೇ.) ಅಂಕಗಳನ್ನು ಪಡೆಯುವುದರ ಮೂಲಕ ಸಾಧನೆ ಮೆರೆದಿದ್ದಾರೆ.

116 ವಿದ್ಯಾರ್ಥಿಗಳು 90 ಶೇ. ಗಿಂತ ಹೆಚ್ಚು ಅಂಕ ಗಳಿಸಿದರೆ, 185 ವಿದ್ಯಾರ್ಥಿಗಳು 85 ಶೇ., ಹಾಗೂ225 ವಿದ್ಯಾರ್ಥಿಗಳು 80 ಶೇ.ಕ್ಕಿಂತ ಅಧಿಕಅಂಕವನ್ನು ಗಳಿಸಿದ್ದಾರೆ.


ಸಂಸ್ಕೃತದಲ್ಲಿ 7 ವಿದ್ಯಾರ್ಥಿಗಳು, ಹಿಂದಿಯಲ್ಲಿ 4 ವಿದ್ಯಾರ್ಥಿಗಳು, ಸಮಾಜ ವಿಜ್ಞಾನದಲ್ಲಿ –3, ಕನ್ನಡದಲ್ಲಿ– 3, ವಿಜ್ಞಾನ ಹಾಗೂ ಇಂಗ್ಲೀಷ್‌ನಲ್ಲಿ ತಲಾ ಒರ್ವ ವಿದ್ಯಾರ್ಥಿ ಶೇಕಡಾ 100 ಅಂಕ ಪಡೆದಿದ್ದಾರೆ. ಇವುಗಳ ಜೊತೆಯಲ್ಲಿ ಐಟಿ ವಿಷಯದಲ್ಲಿ 17 ವಿದ್ಯಾಥಿಗಳು ಶೇಕಡಾ 100 ಅಂಕ ಗಳಿಸಿದ್ದಾರೆ.

ವಿಷಯವಾರು ಅಂಕಗಳಲ್ಲಿ, 36 ವಿದ್ಯಾರ್ಥಿಗಳು 100 ಶೇ., 69 ವಿದ್ಯಾರ್ಥಿಗಳು 99ಶೇ. ಅಂಕ, 117 ವಿದ್ಯಾರ್ಥಿಗಳು 98ಶೇ., 175 ವಿದ್ಯಾರ್ಥಿಗಳು 97ಶೇ., 255 ವಿದ್ಯಾರ್ಥಿಗಳು 96ಶೇ., 335 ವಿದ್ಯಾಥಿಗಳು 95ಶೇ. ಅಂಕಗಳಿಸಿದ್ದಾರೆ.

ಸಾಧನೆ ಮೆರೆದಿದ್ದಾರೆ

ಜಗತ್ತಿನಾದ್ಯಂತ 95ಶೇ.ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳು 2.24 ಶೇಕಡಾವಾರು ಆದರೆ, ಆಳ್ವಾಸ್‌ನಲ್ಲಿ 10.33% ವಿದ್ಯಾರ್ಥಿಗಳು ಈ ಸಾಧನೆ ಮೆರೆದಿದ್ದಾರೆ, ಅಂತೆಯೇ ರಾಷ್ಟ್ರಮಟ್ಟದಲ್ಲಿ 90 ಶೇಕಡಾಕ್ಕಿಂತ ಅಧಿಕ 8.96 ಶೇ. ಆದರೆ, ಆಳ್ವಾಸ್‌ನಲ್ಲಿ 26 ಶೇ. ವಿದ್ಯಾರ್ಥಿಗಳು ಈ ಸಾಧನೆ ಮೆರೆದಿದ್ದಾರೆ. ವಿದ್ಯಾರ್ಥಿಗಳಿಗೆ ಪಿಯುಸಿ ಹಾಗೂ ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಅವಕಾಶಗಳನ್ನು ಒದಗಿಸುವ ಸಲುವಾಗಿ ಆಳ್ವಾಸ್ ಸಿಬಿಎಸ್‌ಇ ಶಾಲೆಯಲ್ಲಿ ಕಠಿಣವಾದ ಸ್ಟ್ಯಾಂಡರ್ಡ ಮ್ಯಾಥ್ಸ್ ವಿಷಯವನ್ನು ಇತರ ವಿಷಯಗಳೊಂದಿಗೆ ಭೋಧಿಸಲಾಗುತ್ತಿದ್ದು, ಈ ವಿಷಯ ವಿದ್ಯಾರ್ಥಿಗಳಲ್ಲಿ ತಾರ್ಕಿಕ ಚಿಂತನೆ ಮತ್ತು ಸಮಸ್ಯೆ ಪರಿಹಾರ ಸಾಮರ್ಥ್ಯವನ್ನು ಬೆಳೆಸುತ್ತದೆ. ಗೋಷ್ಠಿಯಲ್ಲಿ ಆಡಳಿತಾಧಿಕಾರಿ ಪ್ರೀತಂಕುಂದರ್, ಆಳ್ವಾಸ್ ಸಿ.ಬಿ.ಎಸ್.ಇ ಶಾಲೆಯ ಮುಖ್ಯ ಶಿಕ್ಷಕ ಮೊಹಮ್ಮದ್ ಶಫಿ ಶೇಖ್ ಉಪಸ್ಥಿತರಿದ್ದರು.

ಶಕ್ತಿ ರೆಸಿಡೆನ್ಶಿಯಲ್ ಶಾಲೆ



ಮಂಗಳೂರು: ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆ ಫಲಿತಾಂಶದಲ್ಲಿ ಶಕ್ತಿನಗರದ ಶಕ್ತಿ ರೆಸಿಡೆನ್ಶಿಯಲ್ ಶಾಲೆ ಶೇ. 99.21 ದಾಖಲಿಸಿಕೊಂಡಿದೆ. ಪರೀಕ್ಷೆ ಬರೆದಿರುವ ಒಟ್ಟು 127 ವಿದ್ಯಾರ್ಥಿಗಳಲ್ಲಿ 126 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಒಟ್ಟು 500 ಅಂಕದಲ್ಲಿ ಪರೀಕ್ಷೆ ಬರೆದಿರುವ ಶಕ್ತಿ ರೆಸಿಡೆನ್ಶಿಯಲ್ ಶಾಲೆಯ 10ನೇ ತರಗತಿ ವಿದ್ಯಾರ್ಥಿಗಳಲ್ಲಿ ಕೌಸ್ತುಭ ಸೋಮಯಾಜಿ 475(95.00 ಶೇ.), ಪುರುಷೊತ್ತಮ ಗೋರವರ್ 474 (94.8 ಶೇ.), ಶ್ರೀನಿಧಿ 468(93.6 ಶೇ.), ತಮೀಶ್ ಡಿ.ಎಮ್. 466(93.2 ಶೇ.), ಪ್ರಭಾಸ್ 466 (93.2 ಶೇ.),ಆದ್ಯತಾ ಬಿ.ಎಸ್. 465(93 ಶೇ.), ಮನಸ್ವಿ ಎ.ಆರ್. 465 (93 ಶೇ.), ನಿಖಿಲ್‌ಮೋಹನ್ ಪಾಟೀಲ್ 465 (93), ಸಹನಾ ಸುನಿಲ್ ಜೋಶಿ 465 (93), ನಯನ್‌ಜೆ. ರೆಡ್ಡಿ 459 (91.8 ಶೇ.), ತುಷಾಂತ್ ಪಿ. 458 (91.6), ಸ್ವರೀತ ಬಪ್ಪಲಿಗೆ 456 (91.2 ಶೇ.) , ವಂಶಿ ಕೃಷ್ಣ 454 (90.8 ಶೇ.), ಅಮೀಷ್ ಭಾರದ್ವಾಜ್ 453 (90.6ಶೇ.), ಪ್ರಪುಲ್ 451 (90.2 ಶೇ.), ಸಚಿನ್ ಪತ್ತರ್ 451 (90.2 ಶೇ.) ಅಂಕಗಳನ್ನು ಗಳಿಸಿರುತ್ತಾರೆ.


- ಬಿಎಸ್‌ಇ 10ನೇ ತರಗತಿ ಪರೀಕ್ಷೆ ಯಲ್ಲಿ ಶಕ್ತಿ ರೆಸಿಡೆನ್ಶಿ ಯಲ್ ಶಾಲೆಗೆ ಉತ್ತಮ ಫಲಿತಾಂಶ ದಾಖಲು
- ತೇರ್ಗಡೆಯಾಗಿರುವ ಎಲ್ಲಾ ವಿದ್ಯಾರ್ಥಿಗಳನ್ನು ಆಡಳಿತ ಮಂಡಳಿಯಿಂದ ಅಭಿನಂದನೆ ಸಲ್ಲಿಕೆ

ವಿಶಿಷ್ಟ ಶ್ರೇಣಿಯಲ್ಲಿ 28 ವಿದ್ಯಾರ್ಥಿಗಳು,ಪ್ರಥಮಶ್ರೇಣಿಯಲ್ಲಿ 76 ವಿದ್ಯಾರ್ಥಿಗಳು, ದ್ವಿತೀಯ ಶ್ರೇಣಿಯಲ್ಲಿ 22 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಅಭಿನಂದನೆ

ತೇರ್ಗಡೆಯಾಗಿರುವ ಎಲ್ಲಾ ವಿದ್ಯಾರ್ಥಿಗಳನ್ನು ಆಡಳಿತ ಮಂಡಳಿಯ ಆಡಳಿತಾಧಿಕಾರಿ ಡಾ.ಕೆ.ಸಿ. ನ್ಯಾಕ್, ಕಾರ್ಯದರ್ಶಿ ಸಂಜೀತ್ ನ್ಯಾಕ್, ಪ್ರಧಾನ ಸಲಹೆಗಾರ ರಮೇಶ ಕೆ., ಶಕ್ತಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಪ್ರದೀಪ್‌ಕುಮಾರ್ ಶೆಟ್ಟಿ ಹಾಗೂ ಶಕ್ತಿ ರೆಸಿಡೆನ್ಶಿಯಲ್ ಶಾಲೆ ಪ್ರಾಂಶುಪಾಲರಾದ ಸುರೇಖಾ ಭಟ್ ಅಭಿನಂದಿಸಿದ್ದಾರೆ.


ಅಂಬಿಕಾ ವಿದ್ಯಾಲಯಕ್ಕೆ ಶೇ.100 ಫಲಿತಾಂಶ



ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆಯ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆ ಪ್ರಸ್ತುತ ವರ್ಷ ಕೇಂದ್ರೀಯ ಸಿಬಿಎಸ್‌ಇ ಮಂಡಳಿ ನಡೆಸಿದ 10ನೇ ತರಗತಿ ಪರೀಕ್ಷೆ ಯಲ್ಲಿ ಶೇ.100 ಫಲಿತಾಂಶ ದಾಖಲಿಸಿದೆ. ಪುತ್ತೂರಿನ ಸುರೇಶ್ ಶೆಟ್ಟಿ ಹಾಗೂ ನೈನ ಎಸ್. ಶೆಟ್ಟಿ ಪುತ್ರ ಕನಿಷ್ಕ ಎಸ್. ಶೆಟ್ಟಿ ಶೇ.97.33 ಅಂಕದೊಂದಿಗೆ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ಕರ್ಣಾಶ್ರುತ್ ಪ್ರಭು ಎಚ್. ಶೇ.95. 66, ತನ್ವಿ ಎ.ರೈ 95.33, ಸಿಂಚನ ಪ್ರವೀಣ್ 94.83, ಎ. ನಿಹಾರಿಕ ಎಂ. ಬೋಕಡೆ 94.33, ಪ್ರಿಯಾಂಶು ರಾವ್ ಯು. 94.16, ಮಂದಿರ ಕಜೆ 94, ಭುವಿ ವೈ. 93.66, ಸುಧನ್ವಾ ಸುದರ್ಶನ್ 93.5, ಶರಣ್ ಪಿ. 93.16, ಲಾಸ್ಯ ಸಂತೋಷ್ 93, ರಕ್ಷಾ ಎಸ್.ಎಸ್. 93, ಸಹನ ಹರೀಶ್ ಪಣಂಬು 92.33, ನಿಽ ಎಂ.ಯು. 91, ವಿವಿಕ್ತ ರೈ ಎಸ್. 87.83, ಯಶಸ್ ಆರ್. 86.33, ಸಮೃದ್ಧ್ ಎಲ್. ಶೆಟ್ಟಿ 85.6, ಸಾನ್ವಿಕ ವಿ. 85.33, ಹಿಮಾಂಶು ಎಲ್. ಶೆಟ್ಟಿ ಶೇ.85.16 ಅಂಕ ಪಡೆಯುವುದರೊಂದಿಗೆ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಜತೆಗೆ, 19 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲೆ ಆರಂಭದಿಂದಲೂ ನಿರಂತರ ವಾಗಿ ಶೇ.100 ಉತ್ತೀರ್ಣತೆ ದಾಖಲಿಸುತ್ತಿದೆ

ಕಾವೂರು ಬಿಜಿಎಸ್‌ಗೆ ಶೇ.100 ಫಲಿತಾಂಶ






ಮಂಗಳೂರು: ಕಾವೂರಿನ ಶ್ರೀ ಆದಿಚುಂಚನಗಿರಿ ಶಿಕ್ಷಣಟ್ರಸ್ಟ್ ವತಿಯಿಂದ ನಡೆಯು ತ್ತಿರುವ ಬಿಜಿಎಸ್ ಎಜ್ಯುಕೇಶನ್ ಸೆಂಟರ್ ಸಿಬಿಎಸ್‌ಇ ಶಾಲೆಗೆ ಪ್ರಸಕ್ತ ಸಾಲಿನ (2025–26) ಎಸ್‌ಎಸ್‌ಇ ಪರೀಕ್ಷೆಯಲ್ಲಿ, ಪರೀಕ್ಷೆಗೆ ಹಾಜರಾದ 58 ವಿದ್ಯಾರ್ಥಿಗಳಲ್ಲಿ 42 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ ಮತ್ತು 16 ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಮನೀಶ್ ಹೂಗರ್ (96.8%), ಸುಶ್ವಿ ಧೀರಜ್ ಕಾವೂರು (95.8%), ದಕ್ಷ ಸುರೇಶ್ ಪೂಜಾರಿ (95.6%), ವರ್ಧನ್ ಪ್ರಮೋದ್ ರಾವ್ (94.4%), ತನ್ಮಯ್ (93.6%), ವೈಷ್ಣವಿ(93.6%), ವೆಭೀಶ್ ರಾಜ್ ಬಿ. (93.4%), ಎಸ್ ಸಾಯಿ ವಿಷ್ಣು ಶರ್ಮ (93.2%,), ಸಿಂಧು ಸುವರ್ಣ ಎನ್ (92%), ಮನೀಷ ಎ (91.6%), ತಕ್ಷ ಸಿ ಜಿ (91.6%), ಯಶವಂತ್ ಎಚ್ ಎಲ್ (91.2%), ಹಾರ್ದಿಕ್ ಎಂ ಎಚ್(91%), ಗುರು ಸಾಂಧೀಪಾನಿ (90.6%), ದಿಶಾನ್ ಸಾಲ್ಯಾನ್ (89.8%), ಸಾನ್ವಿ ಬೇಕಲ್(89.6%), ಜಿತಿನ್ ಭಾರದ್ವಾಜ್(89.2%), ಕೆ ಯೂಶಾನ್ ಪೂಜಾರಿ (89.2%), ನಮಿತ್ ಉಡುಪ(88.8%), ಅಮೃತ ಡಿ ಕೆ(88.2%), ಆಯುಶ್ ಕುಮಾರ್ ಶೆಟ್ಟಿ(88.2%), ದಿವಿಶ್ ಎಚ್(87.6%), ದೀಪ್ತ(87.2%), ಪೂರ್ಣಚಂದ್ರ ಸಿ ಎಮ್(86.6%), ಎನ್ ಸಮರ್ಥ್ ಆಚಾರ್ಯ(86.4%), ಸಂಜನ್ ಸಿ ಡಿ (85.8%), ಆಶಿಕ್ ಆಫಾನ್ (85.6%), ಮಹಮ್ಮದ್ ಸಹಾರ್(85.4%), ತನುಷ ವಿ. ತೋಟದ (85%), ಭುವನ್ ಗೌಡ ಡಿ. ಎಸ್. (84.6%), ಸಮೃದ್ಧಿ (84.4%), ವ್ರಶಾಲಿ ಡಿ. ಕುಲಾಲ್ (84%), ಆಯಿಷ ಸಜಿನ (83.4%), ಭೂಮಿಕ ಸಿ. ಎಂ. (83.2%), ಶ್ರಾವ್ಯ ಆಚಾರ್ಯ (83%), ಮಿತಿಕ್ಷ (82.8%), ಸಾನ್ವಿ ಎಸ್ ಜೈನ್ (82.8%), ಸೂರ್ಯಜೀವ ಸಂಜಯ್ ಕುಮಾರ್ ರೋಡಕರ್(82.4%), ಕ್ರುತಿಕ (81.2%), ದಿಶಾ ಎಸ್. ಪೂಜಾರಿ (80.8%), ಶ್ರೇಯಸ್ ಗೌಡ ಎಂ. (80.8%), ಜಯದೀಪ್ ಶೇಟ್ (80.2%) ಅಂಕಗಳ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ ಎಂದು ಮಂಗಳೂರಿನ ಬಿಜಿಎಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ತಿಳಿಸಿದ್ದಾರೆ.

ಶಾರದಾ ವಿದ್ಯಾನಿಕೇತನ ವಿದ್ಯಾರ್ಥಿಗಳ ಸಾಧನೆ



ಮಂಗಳೂರು: ತಲಪಾಡಿ ದೇವಿನಗರದ ಶಾರದಾ ವಿದ್ಯಾನಿಕೇತನದ 10ನೇ ತರಗತಿಯ ವಿದ್ಯಾರ್ಥಿಗಳು 2025–2026 ಶೈಕ್ಷಣಿಕ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.


ಒಟ್ಟು236 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 47 ವಿದ್ಯಾರ್ಥಿಗಳು ಶೇಕಡ 90 ಕಿಂತ ಅಧಿಕ ಅಂಕ, 104 ವಿದ್ಯಾರ್ಥಿಗಳು ಶೇಕಡ (80 ರಿಂದ 89), 65 ವಿದ್ಯಾರ್ಥಿಗಳು ಶೇಕಡ(70 ರಿಂದ 79), 17 ವಿದ್ಯಾರ್ಥಿಗಳು ಶೇ. (60 ರಿಂದ 69), 3 ವಿದ್ಯಾರ್ಥಿಗಳು ಶೇ. (45 ರಿಂದ 59 ಶೇ.)ಅಂಕ ಪಡೆದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಡಾ. ಎಂ.ಬಿ. ಪುರಾಣಿಕ್ ಮತ್ತು ಆಡಳಿತ ಮಂಡಳಿ, ಪ್ರಾಂಶು ಪಾಲರು, ಉಪನ್ಯಾಸಕ ವೃಂದದವರು ಹರ್ಷ ವ್ಯಕ್ತಪಡಿಸಿದ್ದಾರೆ.

ಶೇಕಡ 95 ಕ್ಕೂ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳು

ಗುಣವಂತ್ ಬಿ.ಆರ್. 491 (98.2 ಶೇ.), ಶ್ರೀಧಾ ಐ.ಎಸ್. 489 (97.8 ಶೇ.), ಶ್ರಾವ್ಯ ಎಂ. 488 (97.6 ಶೇ.), ನಿವೇಧ್ಯ ಬಲ 487 (97.4 ಶೇ.) , ಶ್ರೀಹರಿ ರಥೀಶ್ 486 (97.2 ಶೇ.), ಪಾವನಿ ಬಿ.ಜಿ. 484 (96.8 ಶೇ.), ಇಂಚರ ಹೆಗ್ಡೆ 482 (96.4 ಶೇ.) , ರಿತೇಶ್ ಸಚಿನ್ ಅವರಡಿ 482 (96.4 ಶೇ.), ಪ್ರಯಾಗ್ ಜಿ. ಕೊಟ್ಟಾರಿ 481 (96.2 ಶೇ.), ವಿಶ್ರುತ್ ಆರ್. ಮೊಗ್ರ 481 (96.2 ಶೇ.), ಅಶ್ವಿನ್ ಸಜಿತ್ 480 (96 ಶೇ.) , ಆಯುಶ್ ಐಯಣ್ಣಾ ಎಂ.ಕೆ. 479 (95.8 ಶೇ.), ನೈತಿಕ್ ಎಚ್ ಕಯ್ಯ 479 (95.8 ಶೇ.) , ಸ್ನೇಹ ಭಟ್ 479 (95.8 ಶೇ.), ಕ್ರಿಪಾ ಎಂ. ಭಟ್ 478 (95.6 ಶೇ.) ಶ್ರೀ ಶರಣ್ ಯು. 478 (95.6 ಶೇ.), ಪೃಥ್ವಿ ವಿ. ರೈ ಕೆ. 475 (95 ಶೇ.), ಮೌಲ್ಯ ಎಸ್. ಶೆಟ್ಟಿ 474 (94.8 ಶೇ.), ಧಾರ್ಮಿಕ್ ಪಿ. ಕಿಲ್ಲೆ 473 (94.6 ಶೇ.), ಸ್ವಸ್ತಿ ಚಂದ್ರಿಕ ಭಟ್ 473 (94.6 ಶೇ.), ವಿಹಾನ್ ಎ.ಸಾಲಿಯಾನ್ 473 (94.6 ಶೇ.).

ಕೊಡಿಯಾಲ್‌ಬೈಲಿನಲ್ಲಿರುವ ಶಾರದಾ ವಿದ್ಯಾಲಯದ ವಿದ್ಯಾರ್ಥಿಗಳು ಸಿಬಿಎಸ್‌ಇ 10ನೇ ತರಗತಿಯ ಪರೀಕ್ಷೆಯಲ್ಲಿ ಸತತ ಶೇಕಡಾ 100 ಫಲಿತಾಂಶ ಸಾಧಿಸಿ ಶ್ಲಾಘನೆಗೆ ಪಾತ್ರರಾಗಿದ್ದಾರೆ. ಪರೀಕ್ಷೆಗೆ ಹಾಜರಾದ 189 ವಿದ್ಯಾರ್ಥಿಗಳಲ್ಲಿ 147 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದು, ಮಾ.ಅದ್ವೈತ ಕಿಗ್ಗಲ್ ಪ್ರದೀಪ್ 498 (99.6%) ಅಂಕಗಳನ್ನು ಗಳಿಸುವ ಮೂಲಕ ತಮ್ಮ ಶೈಕ್ಷಣಿಕ ಸಾಧನೆ ಮೆರೆದಿದ್ದಾರೆ.



ಆರೆಂಜ್ ಕ್ಯಾಪ್ | ಪರ್ಪಲ್ ಕ್ಯಾಪ್



ಕೊಹ್ಲಿ (ಆರ್‌ಸಿಬಿ) 228 ರನ್

ಪ್ರಸಿದ್ಧ ಕೃಷ್ಣ (ಗುಜರಾತ್) 10 ವಿಕೆಟ್

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	5	4	1	0	8	+1.503
ರಾಜಸ್ಥಾನ	5	4	1	0	8	+0.889
ಪಂಜಾಬ್	4	3	0	1	7	+0.720
ಹೈದರಾಬಾದ್	5	2	3	0	4	+0.576
ಡೆಲ್ಲಿ	4	2	2	0	4	+0.322
ಗುಜರಾತ್	4	2	2	0	4	-0.029
ಲಖನೌ	5	2	3	0	4	-0.804
ಚೆನ್ನೈ	5	2	3	0	4	-0.846
ಮುಂಬೈ	4	1	3	0	2	-0.772
ಕೆಕೆಆರ್	5	0	4	1	1	-1.383

ಪಂಜಾಬ್‌ಗೆ 197 ರನ್‌ಗಳ ಗುರಿ | ನಮನ್ ಅರ್ಧಶತಕ | ಅರ್ಶದೀಪ್‌ಗೆ 3 ವಿಕೆಟ್

ಮುಂಬೈಗೆ ಡಿಕಾಕ್ ಶತಕದ ಆಸರೆ

ಮುಂಬೈ: ಕ್ವಿಂಟನ್ ಡಿಕಾಕ್ ಅವರ ಸಮಯೋಚಿತ ಬ್ಯಾಟಿಂಗ್‌ಗೆ ಪಂಜಾಬ್ ತಂಡ ತತ್ತರಿಸಿದ್ದು, ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ದೊಡ್ಡ ಸ್ಕೋರ್ ನಿರ್ಮಿಸಿತು.

ರೋಹಿತ್ ಇಲ್ಲದೆ ಕಣಕ್ಕಿಳಿದ ಮುಂಬೈಗೆ ಆಘಾತ ಎದುರಾದರೂ ಡಿಕಾಕ್ ಹಾಗೂ ನಮನ್ ಅತ್ಯುತ್ತಮ ಬ್ಯಾಟಿಂಗ್ ಮಾಡಿದರು. ಇವರಿಬ್ಬರ ಆಸರೆ ಪಡೆದ ಮುಂಬೈ ಇಂಡಿಯನ್ಸ್ ಆರ್‌ಸಿಬಿ ವಿರುದ್ಧ ಕುಸಿತ ಕಂಡ ನಂತರ ಉತ್ತಮ ಸ್ಕೋರ್ ನಿರ್ಮಿಸಿತು. ಬ್ಯಾಟಿಂಗ್ ಆಹ್ವಾನ ಪಡೆದ ಹಾರ್ದಿಕ್ ಪಡೆ 195 ರನ್ ಗಳಿಸಿತು. ಪಂಜಾಬ್ 6 ವಿಕೆಟ್ ಪಡೆದುಕೊಂಡಿತು.

ರೋಹಿತ್ ಬದಲಿಗೆ ಕಣಕ್ಕಿಳಿದ ಡಿಕಾಕ್ 112(60ಎ, 8 ಬೌ, 7ಸಿ) ಇನ್ನಿಂಗ್ಸ್‌ನ ಹೀರೋ. ಇನ್ನಿಂಗ್ಸ್‌ನ ಅರ್ಧ ಓವರ್‌ಗಳ ವರೆಗೆ ಬ್ಯಾಟಿಂಗ್ ಮಾಡಿದ ಅವರು, ಪಂಜಾಬ್ ಪಡೆಯನ್ನು ದಂಡಿಸಿದರು. ಕೊನೆಯ ಬಾಲ್‌ವರೆಗೂ ಬ್ಯಾಟಿಂಗ್ ಮಾಡಿ ಶತಕ ಹಿಗ್ಗಿಸಿದರು. ನಮನ್ ಕೂಡ ಅರ್ಧಶತಕ ಬಾರಿಸಿ ಮಿಂಚಿದರು.

ಆರಂಭಿಕ ಆಘಾತ: ಆಸರೆ ಮುಂಬೈ ಇಂಡಿಯನ್ಸ್ ನಿರೀಕ್ಷಿತ ಆರಂಭ ಪಡೆದಿರಲಿಲ್ಲ. ಮೊದಲನೇ ಓವರ್‌ನಲ್ಲಿ ಕೇವಲ ಒಂದು ರನ್ ಮಾತ್ರ ಬಂದಿತ್ತು. ಎರಡನೇ ಓವರ್‌ನಲ್ಲಿ ಡಿಕಾಕ್ ಬೌಂಡರಿ ಬಾರಿಸಿದರು. ಅತ್ತ 2 ರನ್ ಮಾತ್ರ ಗಳಿಸಿದ್ದ ರಿಕೆಲ್ಟನ್ ಮೂರನೇ ಓವರ್‌ನಲ್ಲಿ ಕ್ಯಾಚ್ ಆದರು. ಮುಂದಿನ ಎಸೆತದಲ್ಲೇ ಸೂರ್ಯ ವಿಕೆಟ್ ಕೂಡ ಪಡೆದುಬಿಟ್ಟರು ವೇಗಿ ಅರ್ಶದೀಪ್ ಸಿಂಗ್. ಅಲ್ಲಿಗೆ 12 ರನ್ ಮಾತ್ರಕ್ಕೆ 2 ವಿಕೆಟ್ ಕಳೆದುಕೊಂಡು ಭಾರೀ ಸಂಕಷ್ಟದಲ್ಲಿದ್ದ ಮುಂಬೈ ನಮನ್ ಧಿರ್ ಅವರನ್ನು ನಾಲ್ಕನೇ ಕ್ರಮಾಂಕಕ್ಕೆ ಬಡ್ತಿ ನೀಡಿತು. ಬಂದ ಕ್ಷಣವೇ ಕ್ಯಾಚ್ ಕೊಟ್ಟಿದ್ದ ಅವರು ಯಜುವೇಂದ್ರ ಚಾಹಲ್ ಅವರಿಂದ ಜೀವದಾನ ಪಡೆದರು. ಡಿಕಾಕ್ ಅವರನ್ನು ರನ್‌ಔಟ್ ಮಾಡುವ ಅವಕಾಶವೂ ಪಂಜಾಬ್ ಕಳೆದುಕೊಂಡಿತು. ದೊಡ್ಡ ಹೊಡೆತಕ್ಕೆ ಮುಂದಾದ ಇವರಿಬ್ಬರ ವಿಕೆಟ್ ಉಳಿಸಿಕೊಳ್ಳುವ ಕಲೆಗೆ ಬದ್ಧರು. ಅದಾಗ್ಯೂ ಡಿಕಾಕ್ ತಮ್ಮ ವಿನ್ಯಾಸಕಾರಿ ಹೊಡೆತಗಳ ಮೂಲಕ ಮಿಂಚಿದರು. ಅಲ್ಲಿಗೆ ಪವರ್‌ಪ್ಲೇ ಮುಕ್ತಾಯಗೊಂಡಿತು. ಮುಂಬೈ 48 ರನ್‌ಗಳಿಸಿತು.



ಡಿಕಾಕ್ ಶತಕ: ಪಂಜಾಬ್‌ಗೆ ಡಿಕಾಕ್ ಅವರನ್ನು ಕಟ್ಟಿಹಾಕಲು ಸಾಧ್ಯವೇ ಆಗಲಿಲ್ಲ. ಬಂದ ಬೌಲರ್‌ಗಳನ್ನೆಲ್ಲಾ ಅವರು ಮನ ಬಂದಂತೆ ದಂಡಿಸಿದರು. ಪ್ರಮುಖ ಬೌಲರ್‌ಗಳ ಬೆಂಡೆತ್ತಿದರು. ರೋಹಿತ್ ಶರ್ಮಾ ಅವರ ಬದಲಿಗೆ ತಂಡಕ್ಕೆ ಬಂದ ಅವರು ಭರ್ಜರಿ ಶತಕ ಬಾರಿಸಿದರು. ಒಟ್ಟು 60 ಎಸೆತದಲ್ಲಿ ಅವರು ಔಟಾಗದೆ 112 ರನ್‌ಗಳಿಸಿದರು. ಇನ್ನು ಡೆತ್ ಓವರ್‌ನಲ್ಲೂ ಅವರಬ್ಬರ ಮುಂದುವರಿಯಿತು. ತಿಲಕ್ ಕೂಡ ಎರಡು ಬೌಂಡರಿ ಬಾರಿಸಿದರು. ಮುಂಬೈ ಡೆತ್ ಓವರ್‌ಗಳಲ್ಲಿ 35 ರನ್ ಗಳಿಸಿ 3 ವಿಕೆಟ್ ಕಳೆದುಕೊಂಡಿತು.

ನಮನ್-ಡಿಕಾಕ್ ಜೊತೆಯಾಟ

ಮಧ್ಯಮ ಓವರ್‌ಗಳಲ್ಲಿ ಅಬ್ಬರದ ಬ್ಯಾಟಿಂಗ್ ಮಾಡಿದ ನಮನ್ ಹಾಗೂ ಡಿಕಾಕ್ ಜೋಡಿ ಪಂಜಾಬ್ ಬೌಲರ್‌ಗಳ ಮೇಲೆ ಮರುಪ್ರಹಾರ ಶುರು ಮಾಡಿದರು. ಕ್ಲಾಸಿಕ್ ಬೌಂಡರಿಗಳೊಂದಿಗೆ ಚಾಣಾಕ್ಷತನದ ಸಿಂಗಲ್‌ಗಳನ್ನು ಬಾರಿಸಿದ ಡಿಕಾಕ್ ಪಂದ್ಯದ ಗತಿ ಬದಲಾಯಿಸಿದರು. ಅವರಿಗೆ ನಮನ್ ಅತ್ಯುತ್ತಮ ಸಾಥ್ ಕೊಟ್ಟರು. ಕ್ಯಾಚ್ ಮತ್ತು ರನ್‌ಔಟ್ ಮಿಸ್ ಮಾಡಿದ್ದ ಪಂಜಾಬ್ ತಕ್ಕ ಬೆಲೆ ತೆತ್ತಿತು. 30 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಡಿಕಾಕ್ ಮುಂದೆ ತೀರಾ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಅತ್ತ ನಮನ್ ಕೂಡ ಅಬ್ಬರಿಸಿದರು. ಯಾನ್ಸೆ ಕ್ಯಾಚ್ ಬಿಟ್ಟ ಚಾಹಲ್ ಅವರನ್ನೇ ದಂಡಿಸಿದರು. ಅವರೂ 30 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದರು. ಅನ್ನೇನು ಪಂಜಾಬ್ ತಂಡವನ್ನು ದಂಡಿಸುತ್ತಾ ಮೆರೆದಾಡುತ್ತಿದ್ದ ಮುಂಬೈಗೆ ಶಶಾಂಕ್ ಸಿಂಗ್ ಆಘಾತ ನೀಡಲು ಬಂದರು. 14ನೇ ಓವರ್‌ನಲ್ಲಿ ನಮನ್ 50 ರನ್‌ಗೆ ವಿಕೆಟ್ ಒಪ್ಪಿಸಿದರು. ಅವರ 31 ಬಾಲ್‌ಗಳ ಇನ್ನಿಂಗ್ಸ್‌ನಲ್ಲಿ 3 ಸಿಕ್ಸರ್, 3 ಬೌಂಡರಿ ಸೇರಿವೆ. ಮಧ್ಯಮ ಓವರ್‌ಗಳಲ್ಲಿ (7–15) ಮುಂಬೈ 1 ವಿಕೆಟ್ ಕಳೆದುಕೊಂಡು 112 ರನ್‌ಬಾರಿಸಿತು. ಡೆತ್ ಓವರ್‌ನಲ್ಲಿ ಮುಂಬೈ ಅಂದುಕೊಂಡ ಸ್ಕೋರ್ ಬಾರಿಸಲಿಲ್ಲ. ಹಾರ್ದಿಕ್ ಪಾಂಡ್ಯ ಸ್ಫೋಟಕ ಸಿಕ್ಸರ್ ಬಾರಿಸಿ ಅಬ್ಬರಿಸುವ ಹೊತ್ತಲ್ಲೇ ಶ್ರೇಯಸ್ ಅಯ್ಯರ್ ಅವರ ವಿಸ್ಮಯ ಕ್ಯಾಚ್‌ಗೆ ವಿಕೆಟ್ ಕೊಟ್ಟರು. ಅಲ್ಲಿಂದಲೇ ಡೆತ್ ಓವರ್‌ನಲ್ಲಿ ಕಂಬ್ಯಾಕ್ ಮಾಡಿತು ಪಂಜಾಬ್.

ಕಿರುಸುದ್ದಿ

ಸ್ಕ್ವಾಷ್: ಜೋಶ್ನಾ, ಚೋಟ್ರಾನಿ ಮುನ್ನಡೆ

ಹೊಸದಿಲ್ಲಿ: ಹ್ಯಾಂಬರ್ಗ್ ಓಪನ್ ಸ್ಕ್ವಾಷ್‌ನಲ್ಲಿ ಅನುಭವಿ ಆಟಗಾರ್ತಿ ಜೋಶ್ನಾ ಚಿನಪ್ಪ ಮತ್ತು ವೀರ್ ಚೋಟ್ರಾನಿ ಮುನ್ನಡೆದರೆ, ಭರವಸೆ ಆಟಗಾರ ವೆಲವನ್ ಸೆಂಥಿಲ್‌ಕುಮಾರ್ ಮತ್ತು ತನ್ವಿ ಖನ್ನಾ ಆರಂಭಿಕ ಸುತ್ತಿನಲ್ಲಿ ಸೋತರು. ವಿಶ್ವದ ಮಾಜಿ ಮಹಿಳಾ ನಂ. 10 ಜೋಶ್ನಾ ಸ್ಥಳೀಯ ಪ್ರತಿಸ್ಪರ್ಧಿ ಸಾಸ್ಕಿಯಾ ಬೀನ್‌ಹಾರ್ಡ್ ಅವರನ್ನು 11–4, 11–5, 11–4 ಅಂತರದಿಂದ ಸೋಲಿಸಿದರೆ, ಪುರುಷರ ವಿಶ್ವದ ನಂ. 47 ಚೋಟ್ರಾನಿ ಪಿಎಸ್‌ಎ ಕಂಚಿನ ಮಟ್ಟದ ಸ್ಪರ್ಧೆಯಲ್ಲಿ ಸ್ಪೇನ್‌ನ ಇವಾನ್ ಪೆರೆಜ್ ಅವರನ್ನು 11–8, 11–9, 11–8 ಅಂತರದಿಂದ ಸೋಲಿಸಿದರು. ಈ ವಾರ ವಿಶ್ವ ಶ್ರೇಯಾಂಕ 22ಕ್ಕೆ ಏರಿದ ಪುರುಷರ ಐದನೇ ಶ್ರೇಯಾಂಕಿತ ಅಭಯ್ ಸಿಂಗ್ ಮತ್ತು ಏಳನೇ ಶ್ರೇಯಾಂಕಿತ ರಮಿತ್ ಟಂಡನ್ ಮೊದಲ ಸುತ್ತಿನಲ್ಲಿ ಬೈ ಪಡೆದರು.

ಪಿಕಲ್‌ಬಾಲ್: ಭಾರತಕ್ಕೆ ಪದಕ

ಹೊಸದಿಲ್ಲಿ: ಫ್ಲೋರಿಡಾದ ನೇಪಲ್ಸ್‌ನಲ್ಲಿ ನಡೆದ ಯುಎಸ್ ಓಪನ್ ಪಿಕಲ್‌ಬಾಲ್ ಚಾಂಪಿಯನ್‌ಶಿಪ್‌ನ ಪುರುಷರ ಡಬಲ್ಸ್ 5.0 ಸ್ಪರ್ಧೆಯಲ್ಲಿ ಅರ್ಜುನ್ ಸಿಂಗ್, ಆದಿತ್ಯ ಸಿಂಗ್ ಅವರೊಂದಿಗೆ ಸೇರಿ ಜೆ. ಮಿಯೋಢ್ ಮತ್ತು ಡಬ್ಲ್ಯೂ. ಲಿನ್ ಅವರನ್ನು 9–11, 11–2, 11–7 ಸೆಟ್‌ಗಳಿಂದ ಸೋಲಿಸುವ ಮೂಲಕ ಪ್ರಶಸ್ತಿ ಗೆದ್ದರು. ಪಂತ್ ಥಕ್ಕರ್ ಮತ್ತು ಅಥರ್ವ ಶೇತ್ 4.5 ಪುರುಷರ ಡಬಲ್ಸ್ ವಿಭಾಗದಲ್ಲಿ ಕಯಾನ್ ಅಪ್ಪೆಲ್ ಮತ್ತು ಮೈಕೆಲ್ ವ್ಯಾನ್ ಡ್ಯುಸೆನ್ ವಿರುದ್ಧ 8–11, 9–11 ಸೆಟ್‌ಗಳಿಂದ ಸೋತ ನಂತರ ಬೆಳ್ಳಿ ಪದಕ ಗೆದ್ದರು. ಇದು ಟೂರ್ನಿಯಲ್ಲಿ ಅರ್ಜುನ್ ಅವರ ಮೂರನೇ ಚಿನ್ನ ಮತ್ತು ಅವರ ಸಹೋದರ ಆದಿತ್ಯ ಅವರೊಂದಿಗೆ ಅವರ ಎರಡನೇ ಚಿನ್ನ. ಈ ಹಿಂದೆ ಅವರು ಟೂರ್ನಿಯಲ್ಲಿ ಪಿ18 ಬಾಲಕರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದಿದ್ದರು.

ಫ್ರೆಂಚ್ ಓಪನ್ ಬಹುಮಾನ ಹೆಚ್ಚಳ

ಹೊಸದಿಲ್ಲಿ: ಟೆನಿಸ್ ಲೋಕದ ಪ್ರಮುಖ ಗ್ರ್ಯಾಂಡ್ ಸ್ಲಾಮ್ ಅನ್ನಿಸಿಕೊಳ್ಳುವ ಫ್ರೆಂಚ್ ಓಪನ್ ಪಂದ್ಯಾವಳಿಯ ಬಹುಮಾನವನ್ನು ಶೇ. 9.5ರಷ್ಟು ಹೆಚ್ಚಿಸಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಗುರುವಾರ ಹೊರಡಿಸಲಾಗಿರುವ ಪ್ರಕಟಣೆಯಲ್ಲಿ ಮೊತ್ತವನ್ನು 61.7 ಮಿಲಿಯನ್ ಯೂರೋಗೆ ಹೆಚ್ಚಿಸಲಾಗಿದೆ. ಇದು 2025ರ ಬಹುಮಾನಕ್ಕೆ ಹೋಲಿಸಿದರೆ 5.4 ಮಿಲಿಯನ್ ಹೆಚ್ಚಾಗಿದೆ. ಕೂಟದ ಪ್ರತಿ ಹಂತಕ್ಕೂ ತಲುಪುವ ಆಟಗಾರರಿಗೆ ಬಹುಮಾನ ಹೆಚ್ಚಿಸಲಾಗಿದೆ. ಅಂದರೆ ಇದು ಚಾಂಪಿಯನ್‌ಗಳಿಗೆ ಮಾತ್ರ ಸೀಮಿತವಾಗಿಲ್ಲ ಬದಲಾಗಿ ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳಿಗೂ ಹೆಚ್ಚಿನ ಬಹುಮಾನ ಸಿಗಲಿದೆ. ಮೂರು ಗ್ರ್ಯಾಂಡ್‌ಸ್ಲಾಮ್‌ಗಳಲ್ಲಿ ಬಹುಮಾನ ಹೆಚ್ಚಿದರೂ ಫ್ರೆಂಚ್ ಓಪನ್‌ನಲ್ಲಿ ಮಾತ್ರ ಹೆಚ್ಚಿರಲಿಲ್ಲ. ಹೀಗಿರುವಾಗ ಆಯೋಜಕರು ಈ ನಿರ್ಧಾರ ಕೈಗೊಂಡಿದ್ದಾರೆ ಎನ್ನಲಾಗಿದೆ. ಗ್ರ್ಯಾಂಡ್‌ಸ್ಲಾಮ್ ವಿಚಾರಕ್ಕೆ ಬಂದರೆ ವಿಂಬಲ್ಡನ್ ಅತಿ ಕಡಿಮೆ ಬಹುಮಾನ ಹೊಂದಿದ ಕೂಟ. ಯುಎಸ್ ಓಪನ್‌ನ ಒಟ್ಟು ಬಹುಮಾನ 90 ಮಿಲಿಯನ್ ಡಾಲರ್ ಕೊಟ್ಟರೆ, ಆಸ್ಟ್ರೇಲಿಯಾ 79.92 ಮಿಲಿಯನ್ ಡಾಲರ್ ಬಹುಮಾನ ನೀಡಿದೆ.

ವೈಶಾಲಿಗೆ ಒಲಿದ ಕ್ಯಾಂಡಿಡೇಟ್ಸ್ ಪಟ್ಟ



ಸಾಧನೆ ಮಾಡಿದ ಎರಡನೇ ಭಾರತ ಮಹಿಳೆ

ಹೊಸದಿಲ್ಲಿ: ಚೆಸ್ ಕ್ರೀಡಾ ಕ್ಷೇತ್ರದಲ್ಲಿ ಭಾರತದ ಪಾರುಪತ್ಯ ಮುಂದುವರಿದಿದೆ. ಕಳೆದ ವರ್ಷ ಡಿ. ಗುಕೇಶ್ ವಿಶ್ವಚಾಂಪಿಯನ್‌ಶಿಪ್ ಪಟ್ಟ ಗೆದ್ದ ನಂತರ ಇದೀಗ ಮಹಿಳೆಯರ ವಿಭಾಗದ ಫಿಡೆ ಕ್ಯಾಂಡಿಡೇಟ್ಸ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಆರ್. ವೈಶಾಲಿ ವಿಜಯಶಾಲಿಯಾಗಿದ್ದಾರೆ. ಇದರೊಂದಿಗೆ ವಿಶ್ವ ಚಾಂಪಿಯನ್ ಆಗುವುದಕ್ಕೆ ದಾಪುಗಾಲು ಹಾಕಿರುವ ಅವರು, ಈ ಸಾಧನೆ ಮಾಡಿರುವ ಮೊದಲ ಭಾರತೀಯೆ ಎನ್ನಿಸಿಕೊಂಡಿದ್ದಾರೆ. ಪುರುಷರ ಪಂದ್ಯಾವಳಿಯಲ್ಲಿ ಪ್ರಜ್ಞಾನಂದ ಸೇರಿದಂತೆ ಪ್ರಮುಖ ಆಟಗಾರರು ಹಿನ್ನಡೆ ಅನುಭವಿಸಿದ ನಂತರ ಭಾರತದ ಏಕೈಕ ನಿರೀಕ್ಷೆಯಾಗಿ ಗ್ರ್ಯಾಂಡ್‌ಮಾಸ್ಟರ್ ಆರ್.ವೈಶಾಲಿ ಉಳಿದಿದ್ದರು. ವಿಶ್ವದ ಅಗ್ರ ಶ್ರೇಯಾಂಕಿತ ಚೆಸ್ ಪಟುಗಳನ್ನು ಎದುರಿಸಿದ್ದ ಅವರು ಮೊದಲಿನಿಂದಲೂ ಪ್ರಾಬಲ್ಯ ಸಾಧಿಸುತ್ತಾ ಬಂದರು. ಕ್ಯಾಂಡಿಡೇಟ್ಸ್ ಗೆದ್ದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆ ಪಡೆದಿರುವ ಅವರು, ಅಂತಿಮ ಸುತ್ತಿನಲ್ಲಿ ರಷ್ಯಾದ ಕ್ಯಾತರಿನಾ ಲಾಗ್ನೊ ಅವರನ್ನು ಸೋಲಿಸಿ ಈ ಸಾಧನೆಗೈದರು. ಇನ್ನು ಮಹಿಳಾ ವಿಶ್ವ ಚಾಂಪಿಯನ್‌ಶಿಪ್ ಕಿರೀಟಕ್ಕಾಗಿ ಜು ವೆಂಜುನ್ ವಿರುದ್ಧ ಹೋರಾಡಲಿದ್ದಾರೆ. ಬುಧವಾರದ ಅಂತಿಮ ಸುತ್ತಿನ ಗೆಲುವಿನ ನಂತರ 8.5 ಅಂಕ ಗಳಿಸಿದ ವೈಶಾಲಿ ಅರ್ಧ ಪಾಯಿಂಟ್ ಅಂತರದಿಂದ ಒಂಟಿಯಾಗಿ ಅಗ್ರಸ್ಥಾನ ಪಡೆದರು. ಕಜಾಕಿಸ್ತಾನದ ಬಿಬಿಸಾರ ಅಸೌಬಯೇವಾ (8) ಎರಡನೇ ಸ್ಥಾನ ಪಡೆದರು. ಅವರು ಅಂತಿಮ ಸುತ್ತಿನಲ್ಲಿ ಭಾರತದ ದಿವ್ಯಾ ದೇಶಮುಖ್ (5.5) ವಿರುದ್ಧ ಡ್ರಾ ಮಾಡಿಕೊಂಡರು.

ಗ್ರ್ಯಾಂಡ್‌ಮಾಸ್ಟರ್ ಪಟ್ಟ ಪಡೆದ ವರ್ಷಗಳು

ಪಟ್ಟ	ವರ್ಷ
ಮಹಿಳಾ ಗ್ರ್ಯಾಂಡ್‌ಮಾಸ್ಟರ್	2013
ಮಹಿಳಾ ಇಂಟರ್‌ನ್ಯಾಷನಲ್ ಮಾಸ್ಟರ್	2016
ಮಹಿಳಾ ಗ್ರ್ಯಾಂಡ್‌ಮಾಸ್ಟರ್	2018
ಇಂಟರ್‌ನ್ಯಾಷನಲ್ ಮಾಸ್ಟರ್	2021
ಗ್ರ್ಯಾಂಡ್ ಮಾಸ್ಟರ್	2024

ನನ್ನ ಕನಸು ನನಸಾಗಿದೆ. ಪಂದ್ಯಾವಳಿಯ ಪ್ರಮುಖ ಪಂದ್ಯದಲ್ಲಿ ನಾನು ಝು ಜಿನರ್ ಅವರ ವಿರುದ್ಧ ಸೋತಾಗ ಒತ್ತಡವಿತ್ತು. ಆದರೆ ನಾನು ನನ್ನ ಆಟದ ಮೇಲೆ ಗಮನ ಹರಿಸಿ ಕೊನೆಯ ಸುತ್ತುಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವುದು ನನಗೆ ಸಂತಸ ತಂದಿದೆ. ನಾನು ನನ್ನ ಬೆಸ್ಟ್ ಆಟವಾಡಿದ್ದೇನೆ, ಮುಂದಿನ ಗುರಿ ವಿಶ್ವ ಚಾಂಪಿಯನ್‌ಶಿಪ್.

■ ಆರ್. ವೈಶಾಲಿ, ಕ್ಯಾಂಡಿಡೇಟ್ಸ್ ಚಾಂಪಿಯನ್


- ಕ್ಯಾತರಿನಾ ಲಾಗ್ನೊ ಸೋಲಿಸಿದ ಗ್ರ್ಯಾಂಡ್‌ಮಾಸ್ಟರ್
- ವಿಶ್ವಚಾಂಪಿಯನ್‌ಶಿಪ್‌ಗೆ ಅರ್ಹ
- ಉನ್ನತ ಪಂದ್ಯಾವಳಿಯಲ್ಲಿ ಚೀನಾದ ಜು ವೆಂಜುನ್ ಎದುರಾಳಿ

15 ವರ್ಷಗಳ ಬಳಿಕ ಇತಿಹಾಸ

ವೈಶಾಲಿ ಮಹಿಳಾ ವಿಶ್ವ ಚಾಂಪಿಯನ್‌ಶಿಪ್ ಪ್ರಶಸ್ತಿಗಾಗಿ ಹೋರಾಡಿದ ಎರಡನೇ ಭಾರತೀಯ ಮಹಿಳೆ ಮತ್ತು 15 ವರ್ಷಗಳ ನಂತರ ಈ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿರುವ ಮೊದಲಿಗರು ಅನ್ನಿಸಿಕೊಂಡರು. ಕೊನೆರು ಹಂಪಿ ಈ ಸಾಧನೆ ಮಾಡಿದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ. ಅವರು 2011ರಲ್ಲಿ ಅಲ್ಬೇನಿಯಾದ ಟಿರಾನಾದಲ್ಲಿ ಹೌ ಯಿಫಾನ್ ಅವರನ್ನು ಎದುರಿಸಿದ್ದರು. ಇತ್ತ ಸವಾಲಿಗೆ ಸಿದ್ಧವಾಗುತ್ತಿರುವ ವೈಶಾಲಿಗೆ ಕ್ಯಾಂಡಿಡೇಟ್ಸ್ ಗೆಲುವು ಕಳೆದ ಮೂರು ವರ್ಷಗಳಲ್ಲಿ ವೈಶಾಲಿ ಗೆದ್ದ ಮೂರನೇ ದೊಡ್ಡ ಪ್ರಶಸ್ತಿಯಾಗಿದೆ. 24 ವರ್ಷದ ಅವರು ಎರಡು ಬಾರಿ ಫಿಡೆ ಗ್ರ್ಯಾಂಡ್ ಸ್ವಿಸ್ ಪಂದ್ಯಾವಳಿಯನ್ನು ಗೆದ್ದಿದ್ದಾರೆ. ಮತ್ತು 2024 ರಲ್ಲಿ ಮಹಿಳಾ ಒಲಿಂಪಿಯಾಡ್ ವಿಜಯದ ಭಾಗವಾಗಿದ್ದರು.

ವೈಶಾಲಿ ಸಾಧನೆಗಾಥೆ

ಪುರುಷರ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರ ಸಹೋದರಿ ಆರ. ವೈಶಾಲಿ, ಭಾರತದ ಪ್ರಮುಖ ಚೆಸ್ ಆಟಗಾರರಲ್ಲಿ ಒಬ್ಬರು. ಸ್ವಿಸ್ ಚಾಂಪಿಯನ್‌ಶಿಪ್, ಒಲಿಂಪಿಯಾಡ್ ಸೇರಿದಂತೆ ವಿವಿಧ ಟೂರ್ನಿಗಳಲ್ಲಿ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಮೂಲತಃ ತಮಿಳುನಾಡಿನವರಾದ ಅವರು, ಬಾಲ್ಯದಿಂದಲೇ ಚೆಸ್‌ನಲ್ಲಿ ಆಸಕ್ತರಾಗಿದ್ದರು. ತಮ್ಮನ ಚೆಸ್ ಆಟದೊಂದಿಗೆ ಅಭ್ಯಾಸಕ್ಕಿಳಿದ ಅವರು, ಮುಂದೊಂದು ದಿನ ವೃತ್ತಿಜೀವನವಾಗಿ ಆಯ್ಕೆ ಮಾಡಿಕೊಂಡರು. 2012ರಿಂದ 2015ರವರೆಗೆ ಭಾರತದಲ್ಲಿ ಛಾಪು ಮೂಡಿಸಿದರು. ಮೊದಲಿಗೆ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಎಂಬ ಪಟ್ಟ ಪಡೆದಿದ್ದ ಅವರು 2024ರಲ್ಲಿ ಗ್ರ್ಯಾಂಡ್‌ಮಾಸ್ಟರ್ ಎಂಬ ಪಟ್ಟವೂ ಪಡೆದರು. ಗ್ರ್ಯಾಂಡ್‌ಮಾಸ್ಟರ್ ಪಟ್ಟ ಪಡೆದ ನಂತರದಿಂದ ವೈಶಾಲಿ ಚೆಸ್ ಅಂಗಳದಲ್ಲಿ ದಾಖಲೆಗಳನ್ನು ಮಾಡುತ್ತಲೇ ಬಂದಿದ್ದಾರೆ. ಬಹುತೇಕ ಎಲ್ಲಾ ಪ್ರಮುಖ ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.



ಯಾರ್‍ಯಾರು ಚಾಂಪಿಯನ್ಸ್

ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಮತ್ತು ಚೀನಾದ ಝು ಜಿನರ್ (ತಲಾ 7.5) ಅವರು ಮೂರನೇ ಸ್ಥಾನ ಹಂಚಿಕೊಂಡರು. ಓಪನ್ ವಿಭಾಗದಲ್ಲಿ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ (10 ಪಾಯಿಂಟ್ಸ್) ಒಂದು ಸುತ್ತು ಮೊದಲೇ ಚಾಂಪಿಯನ್ ಆಗಿದ್ದು, ಅವರು ಕೊನೆಯ ಸುತ್ತಿನಲ್ಲಿ ಚೀನಾದ ವೀ ಯಿ (7) ಜೊತೆ ಡ್ರಾ ಮಾಡಿಕೊಂಡರು. ಪ್ರಜ್ಞಾನಂದ (6) ಕೊನೆಯ ಸುತ್ತಿನಲ್ಲಿ ಅಮೆರಿಕದ ಹಿಕಾರು ನಕಾಮುರ (6.5) ಜೊತೆ ಡ್ರಾ ಮಾಡಿಕೊಂಡರು. ಜರ್ಮನಿಯ ಮಥಾಯಸ್ ಬ್ಲೂಬಾಮ್ (7) ಅವರನ್ನು ಸೋಲಿಸಿದ ನೆದರ್ಲೆಂಡ್ಸ್‌ನ ಅನೀಶ್ ಗಿರಿ (8.5) ಎರಡನೇ ಸ್ಥಾನ ಪಡೆದರು.

ಫ್ರಾಂಚೈಸಿಗಳಿಗೆ ನಿಲ್ಲದ ಗಾಯದ ಚಿಂತೆ

ಐಪಿಎಲ್: ಖಲೀಲ್, ಪೇನ್ ಹೊರಕ್ಕೆ





ಹೈದರಾಬಾದ್: ಗೆಲುವಿನ ಹಳಿಗೆ ಮರಳಿದ ಖುಷಿಯಲ್ಲಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಆಘಾತ ಎದುರಾಗಿದ್ದು, ತಂಡದ ಪ್ರಮುಖ ವೇಗಿ ಖಲೀಲ್ ಅಹ್ಮದ್ ಗಾಯದ ಕಾರಣದಿಂದಾಗಿ ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದ ಹೊರಬಿದ್ದರು.

ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ನಡೆದ ಪಂದ್ಯದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರು, ಅದೇ ಪಂದ್ಯದ ತಮ್ಮ ಕೋಟಾದ ಕೊನೆಯ ಓವರ್ ಮಾಡುವ ವೇಳೆ ಗಾಯಗೊಂಡಿದ್ದರು. ಕ್ವಾಡ್ರಿಸೆಪ್ ಗಾಯದಿಂದ ಹೊರನಡೆದ ಅವರು ಉಳಿದ ಭಾಗದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದಲೇ ಹೊರ ನಡೆದಿದ್ದಾರೆಂದು ಫ್ರಾಂಚೈಸಿ ಅಧಿಕೃತವಾಗಿ ತಿಳಿಸಿದೆ. ಗುರುವಾರದಂದು ಮಾಧ್ಯಮಗೋಷ್ಠಿಯಲ್ಲಿ ಚೆನ್ನೈ, ಖಲೀಲ್ ಅಹ್ಮದ್ ಅವರಿಗೆ ಗಾಯವಾಗಿದೆ. ಚೇತರಿಸಿಕೊಳ್ಳಲು ಸುಮಾರು 12 ವಾರಗಳ ಅವಶ್ಯಕತೆಯಿದೆ ಹೀಗಾಗಿ ಅವರು ಮುಂದಿನ ಭಾಗದಲ್ಲಿ ತಂಡದಲ್ಲಿರುವುದಿಲ್ಲ ಎಂದು ತಿಳಿಸಿದೆ. ಈಗಾಗಲೆ ನಾಥನ್ ಎಲ್ಲಿಸ್ ಗಾಯದಿಂದ ಹೊರನಡೆದಿದ್ದಾರೆ. ಚೆನ್ನೈ ತಂಡದ ಬೌಲಿಂಗ್ ಮೇಲೆ ಪರಿಣಾಮಕಾರಿ ಒತ್ತಡ ಬೀಳಲಿದೆ. ಬದಲಿ ಆಟಗಾರರನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ಯಾವುದೇ ಹೇಳಿಕೆ ಚೆನ್ನೈ ಸೂಪರ್ ಕಿಂಗ್ಸ್ ತಂಡ ತಿಳಿಸಿಲ್ಲ.

ಹೈದರಾಬಾದ್‌ಗೆ ಧೋನಿ

ತಂಡದ ಪ್ರಮುಖ ಆಟಗಾರ ಮಹೇಂದ್ರ ಸಿಂಗ್ ಧೋನಿ ಚೆನ್ನೈ ತಂಡದೊಂದಿಗೆ ಹೈದರಾಬಾದ್‌ಗೆ ತೆರಳಿದ್ದಾರೆ. ಕಾಲ್ ಸ್ಟ್ರೈನ್‌ನಿಂದ ಬಳಲುತ್ತಿದ್ದ ಧೋನಿ ಕಳೆದ ಪಂದ್ಯಗಳಲ್ಲಿ ಆಡಿರಲೇ ಇಲ್ಲ. ಸಂಜು ಸ್ಯಾಮ್ಸನ್ ವಿಕೆಟ್ ಕೀಪಿಂಗ್ ಮಾಡಿದ್ದರು. ಈ ಹಿಂದಿನ ಪಂದ್ಯದ ನಂತರ ಮುಖ್ಯ ಕೋಚ್ ಧೋನಿ ಆಡುವ ಬಗ್ಗೆ ಮಾತನಾಡಿದ್ದರು. ಶನಿವಾರದ ಪಂದ್ಯಕ್ಕಾಗಿ ಚೆನ್ನೈ ಸೂಪರ್ ಕಿಂಗ್ಸ್ ಹೈದರಾಬಾದ್‌ಗೆ ತೆರಳಿದ್ದು ಬಸ್ಸಿನಲ್ಲಿ ಧೋನಿ ಕಾಣಿಸಿಕೊಂಡಿದ್ದಾರೆ.

ಡೆವಿಡ್ ಪೇನ್ ಹೊರಕ್ಕೆ

ಇತ್ತ ಸನ್‌ರೈಸರ್ಸ್ ಹೈದರಾಬಾದ್ ತಂಡದಿಂದ ಡೆವಿಡ್ ಪೇನ್ ಹೊರಬಿದ್ದರು. ತಂಡದ ವೇಗಿಗಳ ಪಡೆಯ ಪ್ರಮುಖ ಬೌಲರ್‌ಗಳಲ್ಲಿ ಒಬ್ಬರಾಗಿದ್ದ ಅವರು, ಕೈಗೆ ಆದ ಬಲವಾದ ಗಾಯದಿಂದ ಹೊರನಡೆದಿದ್ದಾರೆಂದ ಫ್ರಾಂಚೈಸಿ ಗುರುವಾರ ತಿಳಿಸಿದೆ. ಹಿಂದಿನ ಪಂದ್ಯಗಳಲ್ಲಿ ಅವರು ಆರ್‌ಸಿಬಿ ಹಾಗೂ ಕೆಕೆಆರ್ ವಿರುದ್ಧ ಕಣಕ್ಕಿಳಿದಿದ್ದರು.

ಗುಜರಾತ್‌ಗೆ ಗೆಲುವಿನ ಗುರಿ

ಅಹಮದಾಬಾದ್: ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಶುಕ್ರವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ.

ಗೆಲುವುಗಳೊಂದಿಗೆ ಮಿಂಚುತ್ತಿರುವ ಗುಜರಾತ್ ತನ್ನ ತವರು ಪಂದ್ಯದಲ್ಲಿ ನಾಗಾಲೋಟ ಮುಂದುವರಿಸುವ ಹಂಬಲದಲ್ಲಿದ್ದು, ಗಿಲ್ ಪಡೆ ಸವಾಲಿಗೆ ಸಜ್ಜಾಗಿ ನಿಂತಿದೆ. ಚೆನ್ನೈ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಕೆಕೆಆರ್ ಮತ್ತೊಮ್ಮೆ ಹೀನಾಯವಾಗಿ ಸೋತಿತ್ತು. ಇತ್ತ ಗುಜರಾತ್ ಟೈಟಾನ್ಸ್ ಲಖನೌ ಸೂಪರ್ ಜೇಂಟ್ಸ್ ತಂಡದ ವಿರುದ್ಧ ಸುಲಭ ಜಯ ಸಾಧಿಸಿತ್ತು. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು ರನ್ ಹೊಳೆ ಹರಿಯುವ ಸಾಧ್ಯತೆ ಇದೆ ಎನ್ನಬಹುದು.

ಕುಸಿದ ಕೆಕೆಆರ್‌ಗೆ ಚಿಂತೆ: ಅನುಭವದ ಬೌಲಿಂಗ್ ಪಡೆ ಇಲ್ಲ. ಇದ್ದವರು ಮಿಂಚಿದರೂ ಬ್ಯಾಟಿಂಗ್‌ನಲ್ಲಿ ಹಿನ್ನಡೆ ಅನುಭವಿಸುತ್ತಿದೆ. ವೇಗಿಗಳಾದ ಪಥಿರಾಣ, ಹರ್ಷಿತ್ ರಾಣಾ ಮತ್ತು ಆಕಾಶ್‌ದೀಪ್ ಕೈಕೊಟ್ಟಿರುವುದು ತಂಡಕ್ಕೆ ದೊಡ್ಡ ಹಿನ್ನಡೆ ತಂದಿದೆ. ಸ್ಪಿನ್ನರ್‌ಗಳಾದ ಸುನಿಲ್ ನರೈನ್ ಮತ್ತು ವರುಣ್ ಚಕ್ರವರ್ತಿ ಕೂಡ ಅಲ್ಪ ದುಬಾರಿಯಾಗಿದ್ದಾರೆ. ಅಂಕುಲ್ ರಾಯ್ ಒಬ್ಬರೇ ವಿಕೆಟ್ ಕಿತ್ತವರು. ಇತ್ತ ಬ್ಯಾಟಿಂಗ್‌ನಲ್ಲಿ ಫಿನ್ ಅಲೆನ್ ಲಯದ ಹುಡುಕಾಟದಲ್ಲಿದ್ದಾರೆ. ನರೈನ್ ಮತ್ತೊಮ್ಮೆ ಆರಂಭಿಕರಾಗಿ ಕಾಣಿಸಿಕೊಂಡಿದ್ದರೂ ಕಳೆದ ಪಂದ್ಯದಲ್ಲಿ ನಿರೀಕ್ಷಿತ ಫಲಿತಾಂಶ ಕೊಟ್ಟಿಲ್ಲ. ಅಜಿಂಕ್ಯಾ ರಹಾನೆ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಇತ್ತ ರಿಂಕು ಸಿಂಗ್, ರಮಣದೀಪ್ ಲಯಕ್ಕೆ ಬರಬೇಕಿದೆ.




ಗುಜರಾತ್‌ಗೆ ವಿಶ್ವಾಸ: ಜಾಸ್ ಬಟ್ಲರ್ ತಮ್ಮ ನೈಜ ಲಯಕ್ಕೆ ಮರಳಿದ್ದು ತಂಡದ ವಿಶ್ವಾಸವನ್ನೇ ಹೆಚ್ಚಿಸಿದೆ. ಗಿಲ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಹಿಂದಿನ ಪಂದ್ಯಗಳಲ್ಲಿ ಅವರು ಮಿಂಚಿದ್ದು ಬ್ಯಾಟಿಂಗ್ ಪಡೆಗೆ ಬಲ ತಂದಿದೆ. ಮಧ್ಯಮ ಕ್ರಮಾಂಕದಲ್ಲಿ ಸ್ಫೋಟಕ ಬ್ಯಾಟರ್ ಫಿಲಿಪ್ಸ್, ತೇವಾಟಿಯಾ ಸೇರಿದಂತೆ ಪ್ರಮುಖರು ಲಯಕ್ಕೆ ಬರಬೇಕಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಪ್ರಸಿದ್ಧ ಕೃಷ್ಣ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ. ಹಿಂದಿನ ಪಂದ್ಯಗಳಲ್ಲಿ ಕರಾರುವಾಕ್ ಬೌಲಿಂಗ್ ದಾಳಿಗೆ ರಬಾಡ ಸೇರಿದಂತೆ ಪ್ರಮುಖ ವೇಗಿಗಳ ಸಾಥ್ ಸಿಕ್ಕಿದೆ. ಸ್ಪಿನ್ ವಿಭಾಗದಲ್ಲಿ ರಶೀದ್ ಖಾನ್ ಲಯಕ್ಕೆ ಮರಳಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಕೂಟದಲ್ಲಿ ಸ್ಫೂರ್ತಿದಾಯಕ ಸಾಧನೆ

ಹೈರಾಕ್ಸ್‌ನಲ್ಲಿ ವಿಶೇಷ ಕ್ರೀಡಾಪಟುಗಳ ಸಾಧನೆ

ಬೆಂಗಳೂರು: ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಇತ್ತೀಚೆಗೆ ನಡೆದ ಅಲ್ಟ್ರಾಹ್ಯೂಮನ್ ಹೈರಾಕ್ಸ್ ಸ್ಪರ್ಧೆಯಲ್ಲಿ ಅಡಾಪ್ಟಿವ್' ವಿಭಾಗದ ವಿಶೇಷ ಸಾಮರ್ಥ್ಯದ ಕ್ರೀಡಾಪಟುಗಳು ಅತ್ಯಂತ ಪ್ರೇರಣಾದಾಯಕ ಪ್ರದರ್ಶನ ನೀಡಿದರು.

ಈ ವಿಭಾಗದಲ್ಲಿ ಪ್ರಮುಖವಾಗಿ ಗಮನ ಸೆಳೆದವರು ಶಾಲಿನಿ ಸರಸ್ವತಿ. ನಾಲ್ಕು ಅಂಗಗಳನ್ನು ಕಳೆದುಕೊಂಡಿದ್ದರೂ ತಮ್ಮ ಹೋರಾಟ ಮನೋಭಾವದಿಂದ ಅವರು ಕ್ರೀಡೆಯಲ್ಲಿ ಹೊಸ ದಿಕ್ಕು ತೋರಿಸಿದ್ದಾರೆ. 2012ರಲ್ಲಿ ಅಪರೂಪದ ಬ್ಯಾಕ್ಟೀರಿಯಾ ಸೋಂಕಿನಿಂದಾಗಿ ಅವರು ತಮ್ಮ ನಾಲ್ಕು ಅಂಗಗಳನ್ನು ಕಳೆದುಕೊಂಡರು. ಆದರೂ ಅವರು ಹಿಂಜರಿಯದೆ 2021ರಲ್ಲಿ ಚಿನ್ನ ಮತ್ತು 2022ರಲ್ಲಿ ಬೆಳ್ಳಿ ಪದಕವನ್ನು ರಾಷ್ಟ್ರೀಯ ಪ್ಯಾರಾ ಗೇಮ್ಸ್‌ನಲ್ಲಿ 100 ಮೀ ಓಟದಲ್ಲಿ ಗೆದ್ದಿದ್ದಾರೆ. 2023ರ ಹ್ಯಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿರುವ ಅವರು ಟಿ62 ವಿಭಾಗದಲ್ಲಿ ಏಷ್ಯಾ ದಾಖಲೆ ಹೊಂದಿದ್ದಾರೆ.



ಪ್ರೊಫೆಷನಲ್ ಅಥ್ಲೆಟಿಕ್ಸ್‌ನಿಂದ ನಿವೃತ್ತಿಯಾದ ಬಳಿಕ ಹೈರಾಕ್ಸ್ ಸ್ಪರ್ಧೆಯನ್ನು ತಮ್ಮ ಹೊಸ ಗುರಿಯನ್ನಾಗಿ ಮಾಡಿಕೊಂಡಿರುವ ಅವರು, ಇದು ಸಹನಶಕ್ತಿ ಮತ್ತು ಶಕ್ತಿಯ ಉತ್ತಮ ಸಂಯೋಜನೆ ಎಂದು ಹೇಳಿದ್ದಾರೆ. ಸ್ಪರ್ಧೆಯ ಅನುಭವದ ಬಗ್ಗೆ ಮಾತನಾಡಿದ ಅವರು, ವಾಲ್ ಬಾಲ್ಸ್ ಬಹಳ ಕಷ್ಟವಾಗಿತ್ತು, ಆದರೆ ಪ್ರೇಕ್ಷಕರ ಪ್ರೋತ್ಸಾಹವೇ ನನಗೆ ಶಕ್ತಿ ನೀಡಿತು, ಎಂದು ಹೇಳಿದರು.

ಇನ್ನೊಬ್ಬ ಕ್ರೀಡಾಪಟು ವಿನಿತಾ ಜಾನ್ಸನ್ ಪುಣೆಯಿಂದ ಆಗಮಿಸಿದ್ದು, ಪಾದ ಸಮಸ್ಯೆ ಇದ್ದರೂ ತಮ್ಮ ಜೀವನವನ್ನು ಫಿಟ್ನೆಸ್‌ಗೆ ಅರ್ಪಿಸಿದ್ದಾರೆ. ಈ ವಿಭಾಗದಲ್ಲಿ ಸ್ಪರ್ಧಿಸುವುದು ನನಗೆ ಬಹಳ ಸಂತೋಷ ತಂದಿತು. ಜನರ ಪ್ರೋತ್ಸಾಹ ಸ್ಪರ್ಧೆಯನ್ನು ಹಬ್ಬದಂತಾಗಿಸಿತು, ಎಂದು ಅವರು ಹೇಳಿದರು. ಮುಂಬೈ ಇಂಜಿನಿಯರ್ ರಿಷಿ ವಾಖಾರಿಯಾ ಕೂಡ ಗಮನ ಸೆಳೆದರು. ಜನ್ಮತಃ ಶ್ರವಣ ದೋಷ ಹೊಂದಿದ್ದರೂ, ಕೊಕ್ಲಿಯರ್ ಇಂಪ್ಲಾಂಟ್ ಸಹಾಯದಿಂದ ಅವರು ಸಾಮಾನ್ಯ ಜೀವನ ನಡೆಸುತ್ತಿದ್ದಾರೆ. ಹೈರಾಕ್ಸ್ ನನ್ನಿಗೆ ಕೇವಲ ಫಿಟ್ನೆಸ್ ಸ್ಪರ್ಧೆಯಲ್ಲ, ಅದು ಆತ್ಮಸ್ಥೈರ್ಯ ಮತ್ತು ನಿಯಮಿತ ತರಬೇತಿಯ ಪ್ರತಿಬಿಂಬ. ನನ್ನ ಭಾಗವಹಿಸುವಿಕೆ ಇತರರಿಗೆ ಪ್ರೇರಣೆಯಾಗಬೇಕು, ಎಂದು ರಿಷಿ ಹೇಳಿದರು.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5956

5955 ಉತ್ತರ

ಎಡದಿಂದ ಬಲಕ್ಕೆ:
1.ರಾವಣ 3.ಕೊಂಕಣ
7.ರಾಜೀವ 8.ಅವಿರತ
10.ತಾರುಮಾರು
12.ಪರಶಿವ 15.ನಾಗರಿಕ
17.ಸಂದೇಹ 18.ಅಂಗಡಿ
19.ಮಾಳವ

ಮೇಲಿನಿಂದ ಕೆಳಕ್ಕೆ :
2.ವನದೇವಿ 4.ಕರಿನೀರು
5.ಪರಾತ 6.ತವರು
9.ಶಿಖರ 11.ಮಾದರಿ
13.ರಣರಂಗ 14.ವಸಂತ
15.ಕಹಳೆ 16.ಗಟ್ಟಿಮೇಳ

ಎಡದಿಂದ ಬಲಕ್ಕೆ
5.ಮಾನಸಿಕ ಶಕ್ತಿಯನ್ನು ಹೀಗೆನ್ನುತ್ತೇವೆ (4)
6.ಹತ–ನಗೆ ಇರುವ ದ್ವೇಷ (4)
7.ಮಾರನಲ್ಲಿ ತಿರುಗಿ ಕುಳಿತಿದ್ದಾನೆ (3)
8.ತಟದ ನಡುವೆ ಮಾಡಿದ ಮೋಸ (4)
10.ಮರ, ಮತ್ತದರ ಮೇಲೆ ಬೆಳೆದ ಬಳ್ಳಿ (4)
12.ಶ್ರೇಷ್ಠ ಅರಸನೀತ (4)
14.ದಾಳದ ನಡುವೆ ಈ ಹೂವು ಅಡಗಿದೆ (4)
15.ಏಳು ಕಲ್ಲುಗಳನ್ನಿಟ್ಟು ಚೆಂಡಿನಿಂದ ಹೊಡೆವ ಆಟ (3)
16.ಎಣೆಯಿಲ್ಲದ್ದು–ಹೋಲಿಕೆಗೆ ಮೀರಿದ್ದು (4)
17.ಹೂಕುಂಡವಲ್ಲ, ಯಜ್ಞಕ್ಕಾಗಿ ಇರುವಂತಹುದು (4)

ಮೇಲಿನಿಂದ ಕೆಳಕ್ಕೆ
1.ಜೀವಿ ವಾಸಿಸುವ ಸ್ಥಳ–ಮನೆ (2)
2.ಚಿಕ್ಕಪ್ರಾಯದ ಅಭಿನಯಗಾರ (4)
3.ಎಲ್ಲರೂ ಒಂದೇ ರೀತಿಯ ನಿರ್ಧಾರಕ್ಕೆ ಬರುವುದು (4)
4.ಅನುಭವ–ಶಿಕ್ಷಣದಿಂದ ಪಡೆದ ಶಕ್ತಿ (2)
9.ಪ್ರಧಾನಮಂತ್ರಿ ಕಡೆಯಲ್ಲಿ ದೀರ್ಘವಾಗಿದ್ದಾನೆ (3)
11.ಲೇಪಿಸು–ಬಳಿಯುವಿಕೆ ತಲೆಕೆಳಗಾಗಿದೆ (3)
13.ನೀರಿನಿಂದ ಆವೃತವಾದ ಸ್ಥಿತಿಯಿದು (4)
14.ಹಾದಿಯಲ್ಲಿ ಸಾಗುವವನು–ಪ್ರಯಾಣಿಕ (4)
16.ಬಲವಂತವಾಗಿ ಒಡ್ಡುವ ಪ್ರತಿರೋಧ (2)
18.ಏಳಂಬವಿಲ್ಲಿ ತಲೆಕೆಳಗಾಗಿದೆ (2)

ಕಿರುಸುದ್ದಿ

ಏ.18ರಂದು 165 ಕೋ.ರೂ. ಕಾಮಗಾರಿಗಳಿಗೆ ಶಿಲಾನ್ಯಾಸ

• **ಮಂಗಳೂರು:** ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ ಹಂತ 2ರಡಿ ರಾಜ್ಯ ಸರ್ಕಾರದಿಂದ ಮಂಗಳೂರು ಮಹಾನಗರ ಪಾಲಿಕೆಗೆ 165 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗಿದ್ದು, ಕಾಮಗಾರಿಗಳ ಶಿಲಾನ್ಯಾಸ ಕಾರ್ಯಕ್ರಮ ಏ.18ರಂದು ನಡೆಯಲಿದೆ ಎಂದು ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ ತಿಳಿಸಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ.

ಮರವೂರು ಸೇತುವೆ ಬಳಿ 3 ಕೋಟಿ ರೂ. ವೆಚ್ಚದ ಕಾಮಗಾರಿ, 9.45ಕ್ಕೆ ವೆಲೆನ್ಸಿಯಾ ಚರ್ಚ್ ಬಳಿ 1.95 ಕೋಟಿ ರೂ ವೆಚ್ಚದ ಕಾಮಗಾರಿ, ಚಿಲಿಂಬಿಗುಡ್ಡೆ ಬಳಿ 2 ಕೋಟಿ ರೂ. ವೆಚ್ಚ ಹೀಗೆ ಪ್ರಮುಖ ಕಾಮಗಾರಿಗಳಿಗೆ ಚಾಲನೆ ದೊರೆಯಲಿದೆ. ಬಳಿಕ ಸಭಾ ಕಾರ್ಯಕ್ರಮ ಉರ್ವಾಸ್ಟೋರ್‌ನ ಅಂಬೇಡ್ಕರ್ ಭವನದಲ್ಲಿ 11 ಗಂಟೆಗೆ ನಡೆಯಲಿದೆ ಎಂದು ಅವರು ಹೇಳಿದರು. ನಗರದಲ್ಲಿ ಒಳಚರಂಡಿ ಸಮಸ್ಯೆ ಸಾಕಷ್ಟು ಬಿಗಡಾಯಿಸಿದೆ. ನದಿ, ಬಾವಿ ಸೇರಿದಂತೆ ಜಲಮೂಲಗಳು ಒಳಚರಂಡಿ ನೀರಿನಿಂದಾಗಿ ಕಲುಷಿತವಾಗಿವೆ. ಈ ನಿಟ್ಟಿನಲ್ಲಿ 1250 ಕೋಟಿ ರೂ.ಗಳ ಸಮಗ್ರ ಒಳಚರಂಡಿ ಯೋಜನೆಗೆ ಡಿಪಿಆರ್ ಸರಕಾರಕ್ಕೆ ಸಲ್ಲಿಕೆಯಾಗಿದೆ. ಈ ಯೋಜನೆ ಅನುಷ್ಠಾನದ ನಿಟ್ಟಿನಲ್ಲಿ ಸ್ಥಳೀಯ ಜನಪ್ರತಿನಿಧಿಗಳು ಒಟ್ಟಾಗಿ ರಾಜ್ಯ ಸರಕಾರವನ್ನು ಮನವರಿಕೆ ಮಾಡಬೇಕಾಗಿದೆ ಎಂದವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ, ಮುಖಂಡರಾದ ಶಶಿಧರ ಹೆಗ್ಡೆ, ಅಪ್ಪಿ, ಭಾಸ್ಕರ್, ಡಿ.ಕೆ. ಅಶೋಕ್, ಪ್ರೇಮ್, ಕೇಶವ, ಚೇತನ್, ಇಮ್ರಾನ್, ಸೋನ್ಸ್, ಚಂದ್ರಹಾಸ ಪೂಜಾರಿ ಉಪಸ್ಥಿತರಿದ್ದರು.

ಆರ್‌ಎಸ್‌ಬಿ ಸಮಾಜದಿಂದ ವಧುವರರ ಸಮಾವೇಶ

• **ಉಡುಪಿ:** ರಾಜಾಪುರ ಸಾರಸ್ವತ ಬ್ರಾಹ್ಮಣ ಸಂಘ ಮಣಿಪಾಲ, ರಾಜಾಪುರ ಸಾರಸ್ವತ ಬ್ರಾಹ್ಮಣ ಮಹಿಳಾ ವೇದಿಕೆ ಮಣಿಪಾಲ ಹಾಗೂ ರಾಜಾಪುರ ಸಾರಸ್ವತ ಬ್ರಾಹ್ಮಣ ಸಮಾಜ ಬೆಂಗಳೂರು ಇದರ ಅಂಗಸಂಸ್ಥೆಯಾದ ಆರ್ ಎಸ್ ಬಿ ಅನುಬಂಧ ವಿವಾಹ ವೇದಿಕೆ ಬೆಂಗಳೂರು ಇವರುಗಳ ಜಂಟಿ ಆಶ್ರಯದಲ್ಲಿ ಏ.19 ರಂದು ಸಮಾಜದ ವಿವಾಹ ಅಪೇಕ್ಷಿತ ಯುವಕ, ಯುವತಿಯರಿಗೆ ವಧುವರರ ಸಮಾವೇಶ ನಡೆಯಲಿದೆ. ಮಣಿಪಾಲದ ಆರ್‌ಎಸ್ ಬಿ ಸಭಾಭವನದಲ್ಲಿ ಬೆಳಿಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ಜರಗಲಿದೆ ಎಂದು ಆರ್ ಎಸ್ ಬಿ ಮಹಿಳಾ ವೇದಿಕೆಯ ಅಧ್ಯಕ್ಷರಾದ ರೂಪ ನಾಯಕ್ ದೇವಿನಗರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಘಾತ: ಚಿಕಿತ್ಸೆ ಫಲಿಸದೆ ಸಾವು

• **ಮಂಗಳೂರು:** ನಗರದ ಉರ್ವಸ್ಟೋರ್ ಜಂಕ್ಷನ್ ಬಳಿ ನಡೆದ ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಬಿ.ಎಚ್.ವೆಂಕಟರಮಣ ಪೈ (74) ಅವರು ಚಿಕಿತ್ಸೆ ಫಲಿಸದೆ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.



ಬುಧವಾರ ಬೆಳಿಗ್ಗೆ 8.15ರ ವೇಳೆಗೆ ವೆಂಕಟಮಣ ಪೈ ಅವರು ತನ್ನ 10ವರ್ಷದ ಮೊಮ್ಮಗನ ಜತೆ ಮನೆಯಿಂದ ಬಿಜೈ ಕಾಪಿಕಾಡ್ ಕಡೆಗೆ ಹೊರಟಿದ್ದು, ಉರ್ವ ಸ್ಟೋರ್ ಜಂಕ್ಷನ್ ಬಳಿ ಮೊಹಮ್ಮದ್ ಶಂಶೀರ್ ಎಂಬಾತ ಚಲಾಯಿಸುತ್ತಿದ್ದ ಕಾರು ಡಿಕ್ಕಿಯಾಗಿತ್ತು. ಈ ಸಂದರ್ಭ ವೆಂಕಟೇಶರವರ ತಲೆಗೆ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಮಹಾ ಮೈಸೂರು ಗೂಡ್ಸ್ ಟ್ರಾನ್ಸ್ ಪೋರ್ಟ್ ನಲ್ಲಿ ಕಳೆದ ಸುಮಾರು 50 ವರ್ಷಗಳಿಂದ ಅವರು ಟ್ರಾನ್ಸ್‌ಪೋರ್ಟ್ ಓಪರೇಟರ್ ಆಗಿ ಕಾರ್ಯನಿರ್ವಹಿಸಿದ್ದರು.

ಗೂಡ್ಸ್ ರಿಕ್ಷಾ, ದ್ವಿಚಕ್ರವಾಹನ ಅಪಘಾತ: ಬೈಕ್ ಸಹ ಸವಾರ ಸಾವು

• **ಬಂಟ್ವಾಳ:** ಗೂಡ್ಸ್ ರಿಕ್ಷಾ ಹಾಗೂ ದ್ವಿಚಕ್ರವಾಹನ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್‌ನಲ್ಲಿ ಪ್ರಯಾಣಿ ಸುತ್ತಿದ್ದ ಸಹಸವಾರ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಕುಕ್ಕಾಜೆ ಎಂಬಲ್ಲಿ ನಡೆದಿದೆ. ಕುಕ್ಕಾಜೆಯ ಪಂಜಾಜೆ ನಿವಾಸಿ ಮನೀಶ್ (23) ಎಂಬಾತ ಮೃತಪಟ್ಟ ದುರ್ದೈವಿ ಯಾಗಿದ್ದಾರೆ. ಮಲ್ಲಾರ್‌ನಿಂದ ಸ್ನೇಹಿತ ಉದಯ ಎಂಬವರ ಜೊತೆ ಬೈಕ್ ನಲ್ಲಿ ಕುಕ್ಕಾಜೆಯಲ್ಲಿರುವ ತನ್ನ ಮನೆಗೆ ಸಂಚರಿಸುತ್ತಿದ್ದ ವೇಳೆ ಅಪಘಾತ ಈ ಅಪಘಾತ ಸಂಭವಿಸಿದೆ. ಅಪಘಾತದಿಂದ ಬೈಕ್‌ನಲ್ಲಿ ಸಹಸವಾರನಾಗಿ ತೆರಳುತ್ತಿದ್ದ ಮನೀಶ್ ರಸ್ತೆಗೆ ಎಸೆಯಲ್ಪಟ್ಟು ಗಂಭೀರ ಗಾಯಗೊಂಡು ಸ್ಥಳದಲ್ಲಿಯೇ ಮೃತಪಟ್ಟಿ ದ್ದಾರೆ. ಸವಾರ ಉದಯ ಅವರು ಸಣ್ಣಪುಟ್ಟ ಗಾಯಗೊಂಡಿ ದ್ದಾರೆನ್ನಲಾಗಿದೆ. ಬಂಟ್ವಾಳ ಟ್ರಾಫಿಕ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿದ್ದಾರೆ.

ಇನ್ನೂ ಕಡತದಲ್ಲಿಯೇ ಕನಸಾಗಿಯೇ ಉಳಿದ ಸಮಾಜ ಸುಧಾರಕ ಕುದ್ಮುಲ್ ರಂಗರಾಯರ ಸ್ಮಾರಕ

ಕೋಟಿ ಹಣವಿದ್ದರೂ ಕೂಡಿ ಬಂದಿಲ್ಲ ಕಾಲ!

ದಿಗಂತ ವಿಶೇಷ

• **ಮಂಗಳೂರು:** ಕುದ್ಮುಲ್ ರಂಗರಾವ್ ಎಂದರೆ ಯಾರಿಗೆ ಗೊತ್ತಿಲ್ಲ ಹೇಳಿ? ಶೋಷಿತರ ಧ್ವನಿ, ಸಮಾಜ ಸುಧಾರಕ, ಶೈಕ್ಷಣಿಕ ಪರಿವರ್ತನೆಯ ಹರಿಕಾರ...ಹೀಗೆ ಏನೇ ಅನ್ನಿ. ಅವರು ಅವೆಲ್ಲವೂ ಹೌದು. ದಕ್ಷಿಣ ಕನ್ನಡ, ಉಡುಪಿ ಭಾಗದ ಜನತೆಯಂತೂ ಅವರನ್ನು ಎಂದೂ ಮರೆಯಲು ಸಾಧ್ಯವಿಲ್ಲ...

ಜಾತಿ ವ್ಯವಸ್ಥೆ ಪ್ರಧಾನವಾಗಿದ್ದ ಅಂದಿನ ಕಾಲಘಟ್ಟದಲ್ಲಿಯೇ ಕುದ್ಮುಲ್ ರಂಗರಾವ್ ಅವರು ಶೋಷಿತರ ಧ್ವನಿಯಾಗಿ, ಅವರ ಶಿಕ್ಷಣ, ಹಕ್ಕುಗಳಿಗಾಗಿ ಏಕಾಂಗಿಯಾಗಿ ಹೋರಾಡಿದವರು. ಸಾಮಾಜಿಕ ಸಮಾನತೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟವರು. ಸ್ವತಃ ಮಹಾತ್ಮಗಾಂಧೀಜಿಯವರೇ ಇವರ ಕಾರ್ಯಗಳನ್ನು ಕಂಡ ಬೆರಗಾಗಿದ್ದರು. 'ಕುದ್ಮುಲ್ ರಂಗರಾವ್ ಅವರ ಕಾರ್ಯಗಳು ತನಗೆ ಪ್ರೇರಣೆಯಾಗಿವೆ' ಎಂದು ಹೇಳಿಕೊಂಡಿದ್ದರು. ಅಂತಹಾ ಮಹಾನ್ ನಾಯಕನ ಸ್ಮಾರಕ ನಿರ್ಮಾಣಕ್ಕೆ ಮಂಗಳೂರಿನಲ್ಲಿ ಇನ್ನೂ ಕಾಲ ಕೂಡಿಬಂದಿಲ್ಲ.!

ಜನಪ್ರತಿನಿಧಿಗಳ ಮತ್ತು ಇಲಾಖೆಗಳ ನಿರ್ಲಕ್ಷ್ಯದಿಂದಾಗಿ ಇನ್ನೂ ಅವರ ಸ್ಮಾರಕ ನಿರ್ಮಾಣದ ಪ್ರಸ್ತಾವನೆ ಕಡತದಲ್ಲಿಯೇ ಬಾಕಿ ಉಳಿಯುವಂತಾಗಿದೆ. ಸ್ಮಾರಕ ನಿರ್ಮಾಣಕ್ಕೆ ಒಂದಷ್ಟು ಮಂದಿ ಆಗ್ರಹಿಸಿದ್ದರೂ ಯಾವುದೇ ಫಲ ದೊರಕಿಲ್ಲ. ಅವರ ಸಮಾಧಿ ಸ್ಥಳದಲ್ಲಿ ಸುಂದರ ಸ್ಮಾರಕ ನಿರ್ಮಿಸಬೇಕೆಂಬ ಮಂಗಳೂರಿಗರ ಕನಸು ಕನಸಾಗಿಯೇ ಉಳಿದಿದೆ.

6 ವರ್ಷ ಹಿಂದೆ 3 ಕೋ. ಅನುದಾನ ಮೀಸಲು

ಮಂಗಳೂರು ಮಹಾನಗರ ಪಾಲಿಕೆಯ 2019–20ನೇ ಸಾಲಿನಲ್ಲಿ 'ಮಹಾತ್ಮ ಗಾಂಧಿ ನಗರವಿಕಾಸ ಯೋಜನೆ'ಯಡಿಯಲ್ಲಿ ಸ್ಮಾರಕ ನಿರ್ಮಾಣಕ್ಕೆಂದು 3 ಕೋಟಿ ರೂ ಅನುದಾನ ಮೀಸಲಿಡಲಾಗಿತ್ತು. ನಗರದ ಅತ್ತಾವರ ಬಾಬುಗುಡ್ಡೆ ಬಳಿ ಇರುವ ಕುದ್ಮುಲ್ ರಂಗರಾವ್ ಅವರ ಸಮಾಧಿ ಸ್ಥಳದಲ್ಲಿ ಸ್ಮಾರಕ ನಿರ್ಮಾಣ ಹಾಗೂ ಇದನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲು ಅಗತ್ಯ ಸಿದ್ಧತೆಗಳಾಗಿದ್ದವು.

ಅತ್ತಾವರದ ಸರ್ವೆ ನಂ. 251/1ರ 0.40 ಎಕರೆ ಜಮೀನನ್ನು 2021ರ ಜುಲೈ 7ರಂದು ಮಂಗಳೂರು ಉಪ ವಿಭಾಗದ ಸಹಾಯಕ ಆಯುಕ್ತರು ಭೂಕಂದಾಯ ಕಾಯ್ದೆಯಡಿ ಸಮಗ್ರ ಅಭಿವೃದ್ಧಿ ಕಾರ್ಯಕ್ಕಾಗಿ ಕಾಯ್ದಿರಿಸಿದ್ದರು.



ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಳ್‌ಬಾಗ್





ಅಧಿವೇಶನದಲ್ಲೂ ಧ್ವನಿ!

ಕುದ್ಮುಲ್ ರಂಗರಾವ್ ಸ್ಮಾರಕ ಅಭಿವೃದ್ಧಿಯ ವಿಚಾರ ಇತ್ತೀಚೆಗೆ ನಡೆದ ರಾಜ್ಯ ವಿಧಾನಮಂಡಲ ಅಧಿವೇಶನದಲ್ಲೂ ಈ ವಿಷಯ ಪ್ರಸ್ತಾಪಗೊಂಡಿತ್ತು. ವಿಧಾನ ಪರಿಷತ್ ನಾಮ ನಿರ್ದೇಶನ ಸದಸ್ಯ ಎಫ್.ಎಚ್. ಜಕ್ಕಪ್ಪನವರ್ ತಮ್ಮ ಚುಕ್ಕೆ ಗುರುತಿನ ಪ್ರಶ್ನೆಯಲ್ಲಿ ಸ್ಮಾರಕ ಅಭಿವೃದ್ಧಿಯಾಗದಿರಲು ಕಾರಣವೇನೆಂದು ಪ್ರಶ್ನಿಸಿದ್ದರು. ಇದಕ್ಕೆ ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ಅವರು, ಅಪಣ್ಯ ಇಲಾಖೆಯಿಂದ ಅನುಮತಿ ದೊರೆಯದೇ ಇರುವ ಕಾರಣ ವಿಳಂಬವಾಗಿದೆ. ಅನುಮತಿ ದೊರೆತ ತಕ್ಷಣ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದು ಉತ್ತರಿಸಿದ್ದಾರೆ.

ವಿಳಂಬಕ್ಕೆ ಕಾರಣವೇನು?

ಸ್ಮಾರಕ ಅಭಿವೃದ್ಧಿಗೆ ನಿಗದಿಯಾದ ಸ್ಥಳದಲ್ಲಿ ಸಾಕಷ್ಟು ಮರಗಳಿರುವ ಕಾರಣ ಬೆಳೆಸಿರುವ ಕಾರಣ ಕೆಲವೊಂದು ಮರಗಳ ತೆರವು ಅನಿವಾರ್ಯವಾಗಿತ್ತು. ಮರಗಳನ್ನು ಸ್ಥಳಾಂತರಿಸಲು ಅನುಮತಿ ಕೋರಿ **2022ರ ಜೂನ್ 1**ರಂದು ಪಾಲಿಕೆಯ ಕಾರ್ಯಪಾಲಕ ಅಭಿಯಂತರರು ಅರಣ್ಯ ಇಲಾಖೆಗೆ ಪತ್ರ ಬರೆದಿದ್ದರು. ಆದರೆ ಅರಣ್ಯ ಇಲಾಖೆಯಿಂದ ಅನುಮತಿ ವಿಳಂಬವಾಗಿರುವ ಕಾರಣ ಸ್ಮಾರಕ ನಿರ್ಮಾಣ ಕಾಮಗಾರಿಯೂ ನೆನೆಗುದಿಗೆ ಬೀಳುವಂತಾಗಿದೆ. ಅರಣ್ಯ ಇಲಾಖೆ ಆದಷ್ಟು ಶೀಘ್ರ ಅನುಮತಿ ನೀಡಲು ಜನಪ್ರತಿನಿಧಿಗಳು ಹೆಚ್ಚಿನ ಉತ್ಸಾಹ ತೋರಿದ್ದಲ್ಲಿ ಇನ್ನಾದರೂ ಕಾರ್ಯ ಸಾಧ್ಯವಾಗಬಹುದು. ಆ ಕಾರ್ಯ ತುರ್ತಾಗಿ ಆಗಲಿ ಎಂಬ ಆಗ್ರಹ ಸಾರ್ವಜನಿಕರದ್ದು.

ಸಂಘನಿಕೇತನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಕುರಿತು ವಿಚಾರ ಮಂಥನ

ಸಂವಿಧಾನಕ್ಕೆ ಸದಾ ಜೀವಂತಿಕೆ: ವಾದಿರಾಜ್

• **ಮಂಗಳೂರು:** ಭಾರತದ ಸಂವಿಧಾನ ಜೀವಂತಿಕೆ ಹಾಗೂ ಗಟ್ಟಿತನವನ್ನು ಹೊಂದಿರುವ ಸಂವಿಧಾನವಾಗಿದೆ ಎಂದು ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತ, ಸಾಮರಸ್ಯ ವೇದಿಕೆಯ ವಾದಿರಾಜ್ ಅವರು ಹೇಳಿದರು.

ಮಂಗಳೂರಿನ ಮಣ್ಣಗುಡ್ಡೆ ಪ್ರತಾಪನಗರದ ಸಂಘನಿಕೇತನದಲ್ಲಿ ಗುರುವಾರ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವತಿಯಿಂದ 'ಯುಗಪುರುಷ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್' ಎನ್ನುವ ವಿಚಾರದ ಕುರಿತು ನಡೆದ ವಿಚಾರ ಮಂಥನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶ್ವದ ಬೇರೆ ಬೇರೆ ದೇಶಗಳು ತಮ್ಮದೇ ಆದ ಸಂವಿಧಾನವನ್ನು ಹೊಂದಿವೆ. ಆದರೆ ಅವುಗಳ ಆಯುಷ್ಯ ಮಾತ್ರ ಸರಿಸುಮಾರು 19 ವರ್ಷ ಮಾತ್ರ. ಆದರೆ ಭಾರತದ ಸಂವಿಧಾನ ಇದಕ್ಕೆ ಭಿನ್ನವಾದುದು. ಅತ್ಯಂತ ಸತ್ವಯುತ ಮತ್ತು ಗಟ್ಟಿತನ ಹೊಂದಿರುವ ಈ ಸಂವಿಧಾನವನ್ನು ಕಳೆದ 75 ವರ್ಷಗಳಿಂದ ದೇಶದ ಜನತೆ ಅತ್ಯಂತ ಶ್ರದ್ಧೆಯಿಂದ ಪಾಲಿಸುತ್ತಿದ್ದಾರೆ ಎಂದರು.

ಅಂಬೇಡ್ಕರ್ ಅವರು ಅತ್ಯಂತ ಕಷ್ಟದ ಜೀವನವನ್ನು ಕಂಡವರು. ಆದರೆ ಎಷ್ಟೇ ನೋವುಂಡರೂ ತಮ್ಮ ಬದುಕಿನ ವಿಚಾರಗಳು ಸಂವಿಧಾನದಲ್ಲಿನುಸುಳದಂತೆನೋಡಿಕೊಂಡವರು. ಅವರ ಆಳವಾದ ವಿಚಾರಗಳಿಂದಾಗಿ ಇಂದು ಅವರ ಯೋಚನೆಗಳ ಬೇರುಗಳು ಎಲ್ಲೆಡೆ ಹರಡಿಕೊಂಡಿವೆ ಎಂದು ವಾದಿರಾಜ್ ಹೇಳಿದರು.

ಪ್ರಜಾಸತ್ತಾತ್ಮಕ ಹೋರಾಟದ ಬಗ್ಗೆ ನಂಬಿಕೆ ಹೊಂದಿದ್ದ ಅಂಬೇಡ್ಕರ್ ಅವರು ಚೌದರ್ ಕೆರೆಯ ಹೋರಾಟದ ವೇಳೆ ಪುರಸಭೆಯಿಂದ ಕೆರೆಯ ನೀರು ಎಲ್ಲರಿಗೂ ಸಲ್ಲುವಂಥದ್ದು ಎನ್ನುವ ನಿರ್ಣಯ ಕೈಗೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು, ಕಾಲಾರಾಮ್ ದೇವಸ್ಥಾನದ ಪ್ರವೇಶದ ಹೋರಾಟವೂ ಅವರು ಸಮಾಜದ ದೋಷವನ್ನು ತಿದ್ದಿ ದೇಶವನ್ನು ಗಟ್ಟಿಗೊಳಿಸಬೇಕು ಎನ್ನುವ ಅವರ ಯೋಚನೆಗೆ ನಿದರ್ಶನ ಎಂದು ವಾದಿರಾಜ್ ವಿವರಿಸಿದರು. ಕುದ್ಮುಲ್ ರಂಗರಾವ್ ಸ್ಮಾರಕ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಬಿ.ಆರ್. ಹೃದಯನಾಥ್ ಅಧ್ಯಕ್ಷತೆ ವಹಿಸಿದ್ದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕ್ಷೇತ್ರೀಯ ಸಂಘ ಚಾಲಕ ಡಾ.ಪಿ.ವಾಮನ್ ಶಣೈ, ಮಂಗಳೂರು ಮಹಾನಗರ ಸಂಘ ಚಾಲಕ ಡಾ.ಸತೀಶ್ ರಾವ್ ಉಪಸ್ಥಿತರಿದ್ದರು.



ಸಂಚಾರ ನಿಯಮ ಉಲ್ಲಂಘನೆಗೆ 'ಬಿಸಿ' ಮುಟ್ಟಿಸಿದ ಪೊಲೀಸರು

ಟಿಪ್ಪರ್ ಲಾರಿ, ಟ್ರ್ಯಾಕ್ಟರ್‌ಗಳಿಗೆ ದಂಡ

• **ಮಡಿಕೇರಿ/ಕುಶಾಲನಗರ:** ಪರವಾನಗಿ ನಿಯಮಗಳನ್ನು ಉಲ್ಲಂಘಿಸಿದ ಆರೋಪದಡಿ ಮೂರು ಟಿಪ್ಪರ್‌ಗಳನ್ನು ವಶಪಡಿಸಿಕೊಂಡಿರುವ ಕುಶಾಲನಗರ ಸಂಚಾರಿ ಪೊಲೀಸ್ ಠಾಣೆ ಪೊಲೀಸರು, ಒಂದು ಟ್ರ್ಯಾಕ್ಟರ್ ಹಾಗೂ ಆರು ಟಿಪ್ಪರ್ ಮಾಲಕರಿಗೆ ದಂಡ ವಿಧಿಸಿದ್ದಾರೆ.

ಕುಶಾಲನಗರ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯ ಸಾರ್ವಜನಿಕ ರಸ್ತೆಯಲ್ಲಿ ಜಲ್ಲಿಕಲ್ಲು ತುಂಬಿದ ವಾಹನಗಳು ಜಲ್ಲಿಕಲ್ಲು ಲೋಡ್ ಮಾಡಿಕೊಂಡು, ಪರವಾನಗಿ ನಿಯಮವನ್ನು ಉಲ್ಲಂಘಿಸಿ ಸಾರ್ವಜನಿಕರಿಗೆ ಹಾಗೂ ಇತರೆ ವಾಹನಗಳಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ರಸ್ತೆಯಲ್ಲಿ ಜಲ್ಲಿಕಲ್ಲು ಚೆಲ್ಲಿಕೊಂಡು ಚಾಲನೆ ಮಾಡುತ್ತಿರುವುದರಿಂದ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ದೂರು ಬಂದಿತ್ತು. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ ಕುಶಾಲನಗರ ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐಗಳಾದ ಗಣೇಶ್, ಶ್ರೀನಿವಾಸ್ ಹಾಗೂ ಸಿಬ್ಬಂದಿಗಳು, 281 ಬಿಎನ್‌ಎಸ್ 177 ಐಎಂವಿ ಆಕ್ಟ್ ಅಡಿಯಲ್ಲಿ ಮೂರು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಂಡು ಕೆಎ–12ಸಿ–1319, ಕೆಎ–12ಬಿ–1480ರ ಹಾಗೂ ಕೆಎ–51ಡಿ–2407ರ ನೋಂದಣಿ ಸಂಖ್ಯೆಯ ಟಿಪ್ಪರ್‌ಗಳನ್ನು ಪತ್ತೆ ಹಚ್ಚಿ ವಶಪಡಿಸಿಕೊಂಡಿದ್ದಾರೆ. ಅಲ್ಲದೆ ಮೋಟಾರ್ ವಾಹನ ಕಾಯಿದೆ ಉಲ್ಲಂಘನೆ ಅಡಿಯಲ್ಲಿ ಕೆಎ–12ಸಿ–3452, ಕೆಎ–12ಬಿ–8366, ಕೆಎ–12ಸಿ–5021, ಕೆಎ–12ಸಿ–6608, ಕೆಎಲ್–86 ಬಿ–1752 ಹಾಗೂ ಕೆಎ–12ಸಿ–5084ರ ಟಿಪ್ಪರ್'ಗಳು ಮತ್ತು ಕೆಎ–13 ಟಿಸಿ–0312ರ ಟ್ರ್ಯಾಕ್ಟರ್'ಗೆ ದಂಡ ವಿಧಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಮಾಡಿದ ವಾಹನಗಳನ್ನು ಪತ್ತೆ ಹಚ್ಚಿ ವಶಪಡಿಸಿಕೊಳ್ಳುವಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಅಧಿಕಾರಿ ಹಾಗೂ ಸಿಬ್ಬಂದಿಯವರನ್ನು ಜಿಲ್ಲಾ ಪೊಲೀಸ್ ಅಧೀಕ್ಷಕಿ ಕು. ಬಿಂದು ಮಣಿ. ಆರ್.ಎನ್ ಅವರು ಶ್ಲಾಘಿಸಿದ್ದಾರೆ.



ರಿಪ್ಪರ್ ಚಂದ್ರನ್‌ಗೆ ಗಲ್ಲು ಶಿಕ್ಷೆ ಲಭಿಸಿದ ಪ್ರಕರಣ

ನೇರ ಸಾಕ್ಷಿ ಬಾಲಚಂದ್ರ ಮನೆಯೊಳಗೆ ನಿಗೂಢ ಸಾವು

• **ಮಂಜೇಶ್ವರ:** ನಾಡನ್ನೇ ಬೆಚ್ಚಿ ಬೀಳಿಸಿದ ಕುಖ್ಯಾತ ದರೋಡೆಕೋರ ರಿಪ್ಪರ್ ಚಂದ್ರನ್‌ಗೆ ಗಲ್ಲು ಶಿಕ್ಷೆ ಲಭಿಸಿದ ಪ್ರಕರಣದಲ್ಲಿ ನೇರ ಸಾಕ್ಷಿಯಾಗಿದ್ದ ವ್ಯಕ್ತಿ ಮನೆಯೊಳಗೆ ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ.

ಮಂಜೇಶ್ವರ ವಾಮಂಜೂರು ಚೆಕ್‌ಪೋಸ್ಟ್ ಶ್ರೀ ಶಾಸ್ತಾವೇಶ್ವರ ಕ್ಷೇತ್ರ ಸಮೀಪದ ಶ್ರೀ ಶಾಸ್ತಾ ನಿಲಯದ ಬಾಲಚಂದ್ರ (53) ಎಂಬವರು ಮೃತಪಟ್ಟವರು. ಕಳೆದ ಮೂರು ದಿನಗಳಿಂದ ಇವರು ಫೋನ್ ಕರೆ ಸ್ವೀಕರಿಸದ ಹಿನ್ನೆಲೆಯಲ್ಲಿ ಮಂಗಳೂರಿನಲ್ಲಿರುವ ಸಹೋದರಿ ಬುಧವಾರ ಸಂಜೆ ಮನೆಗೆ ತಲುಪಿ ನೋಡಿದಾಗ ಮೃತದೇಹ ಕಂಡು ಬಂದಿದೆ. ಮನೆಯ ಒಳಗಿನಿಂದ ಬಾಗಿಲು ಮುಚ್ಚಿದ ಸ್ಥಿತಿಯಲ್ಲಿತ್ತು. ಪೊಲೀಸರು ಮೃತದೇಹವನ್ನು ಕಾಸರಗೋಡು ಜನರಲ್ ಆಸ್ಪತ್ರೆ ಶವಾಗಾರಕ್ಕೆ ತಲುಪಿಸಿದ್ದಾರೆ. ದಿ. ನರಸಪ್ಪಯ್ಯ ಹಂದೆ ಮತ್ತು ಇಂದಿರಾ ಹಂದೆ ದಂಪತಿಯ ಪುತ್ರನಾದ ಬಾಲಚಂದ್ರ ಕ್ಷೇತ್ರಗಳಲ್ಲಿ ಸಹಾಯಕ ಅರ್ಚಕನಾಗಿ ಕೆಲಸ ನಿರ್ವಹಿಸುತ್ತಿದ್ದರು. ಅವರಿಗೆ ಭಾರತಿ ಎಂಬ ಇನ್ನೋರ್ವ ಸಹೋದರಿಯೂ ಇದ್ದಾರೆ.



ಬಾಲಚಂದ್ರ ಹೇಳಿಕೆ ಪ್ರಕಾರ ರಿಪ್ಪರ್ ಚಂದ್ರನ್‌ನನ್ನು ಗಲ್ಲಿಗೇರಿಸಿದ್ದು ಮೃತಪಟ್ಟ ಬಾಲಚಂದ್ರರಿಗೆ 13 ವರ್ಷ ಪ್ರಾಯವಿದ್ದಾಗ ತಂದೆ ನರಸಪ್ಪಯ್ಯ ಹಂದೆ ಹಾಗೂ ಅವರ ಕೆಲಸಗಾರನಾದ ವಿಶ್ವನಾಥ ಎಂಬವರನ್ನು ರಿಪ್ಪರ್ ಚಂದ್ರನ್ ತಲೆಗೆ ಹೊಡೆದು ಕೊಲೆಗೈದಿದ್ದನು. ತಾಯಿ ಇಂದಿರಾ ಹಂದೆಯನ್ನು ಕೊಲೆಗೈಯ್ಯಲು ಪ್ರಯತ್ನ ನಡೆದಿತ್ತು. ತಲೆಗೆ ಬಿದ್ದ ಏಟಿನಿಂದ ಗಾಯಗೊಂಡ ಇಂದಿರಾ ದೀರ್ಘ ಕಾಲ ಅರೆಪ್ರಜ್ಞಾವಸ್ಥೆಯಲ್ಲಿದ್ದರು. ಬಳಿಕ ಚೇತರಿಸಿಕೊಂಡಿದ್ದರು. ವೃದ್ಧಾಪ್ಯ ಸಹಜ ಅಸೌಖ್ಯದಿಂದ ಅವರು ಬಳಿಕ ಮೃತಪಟ್ಟರು.

1985ರಲ್ಲಿ ಇಡೀ ನಾಡನ್ನೇ ಬೆಚ್ಚಿನ ಬೀಳಿಸಿ ಅವಳಿ ಕೊಲೆ ಕೃತ್ಯ ನಡೆದಿದೆ. ವಿಶ್ವನಾಥ ಮನೆ ವರಾಂಡದಲ್ಲಿ ನಿದ್ರಿಸಿದ್ದರು. ಮೊದಲು ಅವರನ್ನು ತಲೆಗೆ ಹೊಡೆದು ರಿಪ್ಪರ್ ಚಂದ್ರ ಕೊಲೆಗೈದಿದ್ದಾನೆ. ಬಳಿಕ ಮನೆಯ ಮೇಲೆ ಹತ್ತಿ ಹೆಂಚು ತೆಗೆದು ಒಳಗೆ ಪ್ರವೇಶಿಸಿದ ಬಳಿಕ ನರಸಪ್ಪಯ್ಯ ಹಂದೆಯವರನ್ನು ತಲೆಗೆ ಹೊಡೆದು ಕೊಲೆಗೈದಿದ್ದಾನೆ. ಇಂದಿರಾರಿಗೂ ಹಲ್ಲೆಗೈದು ಗಾಯಗೊಳಿಸಿದ್ದನು. ಈ ಪೈಶಾಚಿಕ ಕೊಲೆ ಕೃತ್ಯದಲ್ಲಿ ಬಾಲಚಂದ್ರ ಸಾಕ್ಷಿಯಾಗಿದ್ದರು. ಅಂದು ಅವರಿಗೆ 13 ವರ್ಷ, ಸಹೋದರಿಯರಿಗೆ 6 ಹಾಗೂ 2 ವರ್ಷ ಪ್ರಾಯವಾಗಿತ್ತು. ವಾಮಂಜೂರು ಅವಳಿ ಕೊಲೆಯ ಬಳಿಕ 14 ಕೊಲೆ ಪ್ರಕರಣಗಳಲ್ಲಿ ಚಂದ್ರನ್ ಆರೋಪಿಯಾಗಿದ್ದನು. 13 ಕೊಲೆ ಪ್ರಕರಣಗಳಲ್ಲಿ ವಿವಿಧ ನ್ಯಾಯಾಲಯಗಳು ಜೀವಾವಧಿ ಶಿಕ್ಷೆ ವಿಧಿಸಿವೆ. ಆದರೆ ವಾಮಂಜೂರು ಕೊಲೆ ಪ್ರಕರಣದಲ್ಲಿ ಬಾಲಚಂದ್ರ ನೀಡಿದ ಹೇಳಿಕೆಯನ್ನು ಪರಿಗಣಿಸಿ ಸಾವಿನವರೆಗೆ ಗಲ್ಲುಶಿಕ್ಷೆ ವಿಧಿಸಿ ನ್ಯಾಯಾಲಯ ತೀರ್ಪು ನೀಡಿತ್ತು. ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್ ವರೆಗೆ ಆರೋಪಿ ತೆರಳಿದರೂ ಗಲ್ಲು ಶಿಕ್ಷೆಯನ್ನು ಖಾಯಂಗೊಳಿಸಿ ತೀರ್ಪು ನೀಡಲಾಗಿತ್ತು. ನಂತರ ರಾಷ್ಟ್ರಪತಿಗೆ ಆತ ಕ್ಷಮೆಯಾಚಿಸಿ ಅರ್ಜಿ ಸಲ್ಲಿಸಿದ್ದನು. 1991 ಜುಲೈ 6ರಂದು ರಿಪ್ಪರ್ ಚಂದ್ರನ್‌ನನ್ನು ಕಣ್ಣೂರು ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಅಂದು ಕಣ್ಣೂರು ಸೆಂಟ್ರಲ್ ಜೈಲ್‌ನಲ್ಲಿ ನೇಣಿಗೇರಿಸುವ ವ್ಯಕ್ತಿಗಳು ಇಲ್ಲದಿದ್ದುದರಿಂದ ಜೈಲು ಸೂಪರಿಂಟೆಂಡೆಂಟ್ ಆರೆಯಕಂಡಿಪ್ಪಾರ ಎನ್.ಪಿ. ಕರುಣಾಕರನ್ ಗಲ್ಲು ಶಿಕ್ಷೆಯನ್ನು ನಿರ್ವಹಿಸಿದ್ದಾರೆ.

ರಿಪ್ಪರ್ ಚಂದ್ರನ್

ಚಂದ್ರನ್ ನೀಲೇಶ್ವರ ಸಮೀಪದ ಕರಿಂದಳ ಮುತ್ತು ಕುಟ್ಟಿ ನಿವಾಸಿಯಾಗಿದ್ದಾನೆ. **1950 ಡಿಸೆಂಬರ್ 18**ರಂದು ಕುಞಂಬು ಮತ್ತು ಪಾಟ ದಂಪತಿಯ ಪುತ್ರನಾಗಿ ಜನಿಸಿದ್ದನು. ಚಂದ್ರನ್‌ಗೆ **10** ವರ್ಷ ಪ್ರಾಯವಿದ್ದಾಗ ತಂದೆ ಮೃತಪಟ್ಟಿದ್ದರು. **14**ನೇ ವಯಸ್ಸಿನಲ್ಲಿ ಚಂದ್ರನ್ ಕರ್ನಾಟಕಕ್ಕೆ ತೆರಳಿದ್ದನು. ನಂತರ ಮರಳಿ ಬರುವಾಗ ಕುಖ್ಯಾತ ಕ್ರಿಮಿನಲ್ ಆಗಿ ಬದಲಾಗಿದ್ದನು. ಕಾಸರಗೋಡಿನಲ್ಲಿ ನಡೆದ ಒಂದು ಕಳವು ಪ್ರಕರಣದಲ್ಲಿ **1977**ರಲ್ಲಿ ಚಂದ್ರನ್ ಮೊದಲು ಸೆರೆಗೀಡಾಗಿದ್ದನು. ಈ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದಾನೆ. ಶಿಕ್ಷೆ ಕಾಲಾವಧಿ ಮುಗಿದ ಬಳಿಕ ಚಂದ್ರನ್ ಮತ್ತೆ ಕರ್ನಾಟಕಕ್ಕೆ ತೆರಳಿದ್ದನು. ಬಳಿಕ ತಿಮ್ಮ ಎಂಬ ಕುಖ್ಯಾತ ಆರೋಪಿಯೊಂದಿಗೆ ಸೇರಿಕೊಂಡಿದ್ದನು.

- 1985ರಲ್ಲಿ ಇಡೀ ನಾಡನ್ನೇ ಬೆಚ್ಚಿನ ಬೀಳಿಸಿ ಅವಳಿ ಕೊಲೆ ಕೃತ್ಯ ನಡೆದಿದೆ.
- 1991 ಜುಲೈ 6ರಂದು ರಿಪ್ಪರ್ ಚಂದ್ರನ್‌ನನ್ನು ಕಣ್ಣೂರು ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು.

ಉಡುಪಿ ಜಿಲ್ಲೆಗೆ ತೀವ್ರವಾಗಿ ಕಾಡುತ್ತಿದೆ ಅಗ್ನಿಶಾಮಕ ದಳದ ಕೊರತೆ | ಬ್ರಹ್ಮಾವರಕ್ಕೆ ಅನಿವಾರ್ಯವಾಗಿದೆ ಪ್ರತ್ಯೇಕ ಠಾಣೆ | ನಿರೀಕ್ಷೆಯಲ್ಲಿದ್ದಾರೆ ನಾಡಿನ ಜನತೆ

ಅವಘಡ ಘಟಿಸಿದರೆ ನಾಲ್ಕು ತಾಲೂಕುಗಳಿಗೆ ಉಡುಪಿಯೇ ಏಕೈಕ ಆಸರೆ!

▸ **ಸುದೀಪ್ ರಾಜ್ ಸುಳ್ಯ**

• **ಉಡುಪಿ:** ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಅಗ್ನಿ ಅವಘಡಗಳ ಸರಣಿಯು ಅಗ್ನಿಶಾಮಕ ದಳದ ಅಸಹಾಯಕತೆ ಬಿಚ್ಚಿಡುತ್ತಿದ್ದು, ವಿಶೇಷವಾಗಿ ಬ್ರಹ್ಮಾವರ ಭಾಗಕ್ಕೆ ಪ್ರತ್ಯೇಕ ಅಗ್ನಿಶಾಮಕ ಠಾಣೆಯ ಅಗತ್ಯತೆ ತೀವ್ರವಾಗಿ ಎದ್ದು ಕಾಣುತ್ತಿದೆ. ಪ್ರಸಕ್ತ 2026ನೇ ಸಾಲಿನಲ್ಲಿ ಜಿಲ್ಲೆಯಾದ್ಯಂತ ಇದುವರೆಗೆ ಒಟ್ಟು 268 ಅಗ್ನಿ ಅವಘಡಗಳು ಸಂಭವಿಸಿದ್ದು, ಈ ಪೈಕಿ ಬ್ರಹ್ಮಾವರ ವ್ಯಾಪ್ತಿಯೊಂದರಲ್ಲೇ 60ಕ್ಕೂ ಅಧಿಕ ಪ್ರಕರಣಗಳು ವರದಿಯಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಈ ಭಾಗದಲ್ಲಿ ಸಂಭವಿಸುವ ತುರ್ತು ಅನಾಹುತಗಳ ಸಂದರ್ಭದಲ್ಲಿ ಉಡುಪಿಯಿಂದಲೇ ವಾಹನ ಬರಬೇಕಾದ ಅನಿವಾರ್ಯತೆ ಇರುವುದರಿಂದ, ಬೆಂಕಿ ನಂದಿಸುವ ಕಾರ್ಯಾಚರಣೆ ವಿಳಂಬವಾಗಿ ಹೆಚ್ಚಿನ ನಷ್ಟ ಸಂಭವಿಸುತ್ತಿದೆ.

ಜಿಲ್ಲೆಯಲ್ಲಿ ಪ್ರಸ್ತುತ ಉಡುಪಿ, ಕಾರ್ಕಳ, ಕುಂದಾಪುರ, ಬೈಂದೂರು ಮತ್ತು ಮಲ್ಪೆ ಸೇರಿ ಒಟ್ಟು ಐದು ಅಗ್ನಿಶಾಮಕ ಠಾಣೆಗಳಿದ್ದು, ಕೇವಲ ಐದು ವಾಹನಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಉಡುಪಿ ಠಾಣೆಗೆ ನಿಗದಿಯಾಗಿದ್ದ ಎರಡು ವಾಹನಗಳಲ್ಲಿ ಒಂದನ್ನು ತಾತ್ಕಾಲಿಕವಾಗಿ ಬೈಂದೂರಿಗೆ ನಿಯೋಜಿಸಲಾಗಿದ್ದು, ಸದ್ಯ ಉಡುಪಿಯಲ್ಲಿರುವ ಏಕೈಕ ವಾಹನವು ಉಡುಪಿ, ಕಾಪು, ಬ್ರಹ್ಮಾವರ ಮತ್ತು ಹೆಬ್ರಿ ಎಂಬ ನಾಲ್ಕು ಬೃಹತ್ ತಾಲೂಕುಗಳ ವ್ಯಾಪ್ತಿಯನ್ನು ನಿಭಾಯಿಸಬೇಕಿದೆ. ದೂರದ ಪ್ರದೇಶಗಳಿಗೆ ವಾಹನ ತಲುಪಲು ಕನಿಷ್ಠ ಅರ್ಧದಿಂದ ಮುಕ್ಕಾಲು ಗಂಟೆಯ ಅವಶ್ಯಕತೆಯಿದ್ದು, ಈ ವಿಳಂಬವು ಅಗ್ನಿ ಅವಘಡದ ತೀವ್ರತೆಯನ್ನು ಹೆಚ್ಚಿಸುತ್ತಿದೆ. ಇದರ ಜೊತೆಗೆ ಸಿಬ್ಬಂದಿ ಕೊರತೆಯೂ ಇಲಾಖೆಯನ್ನು ಕಾಡುತ್ತಿದ್ದು, ಉಡುಪಿ ಠಾಣೆಯಲ್ಲಿ 42 ಸಿಬ್ಬಂದಿ ಇರಬೇಕಾದ ಜಾಗದಲ್ಲಿ ಕೇವಲ ಅರ್ಧದಷ್ಟು ಮಂದಿ ಮಾತ್ರ ಹಗಲಿರುಳು ಶ್ರಮಿಸುತ್ತಿದ್ದಾರೆ.

ಅಗ್ನಿ ಅವಘಡಗಳ ಅಂಕಿ ಅಂಶ

ಜಿಲ್ಲೆಯ ಅಗ್ನಿ ಅವಘಡಗಳ ಅಂಕಿ–ಅಂಶಗಳನ್ನು ಗಮನಿಸಿದರೆ ಪರಿಸ್ಥಿತಿಯ ಗಂಭೀರತೆ ಅರಿವಾಗುತ್ತದೆ. 2024ರಲ್ಲಿ ಜಿಲ್ಲೆಯಾದ್ಯಂತ 497 ಪ್ರಕರಣಗಳು ದಾಖಲಾಗಿದ್ದರೆ, 2025ರಲ್ಲಿ ಈ ಪ್ರಮಾಣ 513ಕ್ಕೆ ಏರಿಕೆಯಾಗಿತ್ತು. ಪ್ರಸಕ್ತ 2026ನೇ ಸಾಲಿನಲ್ಲಿ ಕೇವಲ ನಾಲ್ಕು ತಿಂಗಳ ಅವಧಿಯಲ್ಲೇ 268 ಪ್ರಕರಣಗಳು ವರದಿಯಾಗಿರುವುದು ಪರಿಸ್ಥಿತಿ ಕೈಮೀರುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಈ ಪೈಕಿ ಒಣಗಿದ ಹುಲ್ಲು ಮತ್ತು ಗಿಡಗಂಟಿಗಳಿಗೆ ತಗುಲಿದ ಬೆಂಕಿಯ ಪ್ರಕರಣಗಳೇ ಸಿಂಹಪಾಲಾಗಿದ್ದು, ಜಿಲ್ಲೆಯಾದ್ಯಂತ ಒಟ್ಟು 1181 ಇಂತಹ ಘಟನೆಗಳು ಈವರೆಗೆ ಸಂಭವಿಸಿವೆ. ಅರಣ್ಯ ಮತ್ತು ಅರಣ್ಯದಂಚಿನ ಪ್ರದೇಶಗಳಲ್ಲಿ 559 ಅಗ್ನಿ ಅವಘಡಗಳು ನಡೆದಿರುವುದು ಅಂಕಿ–ಅಂಶಗಳಿಂದ ತಿಳಿದುಬಂದಿದೆ.



ಏಕಕಾಲದಲ್ಲಿ ಸ್ಪಂದನೆ ಕಷ್ಟ

ಏಕಕಾಲದಲ್ಲಿ ಎರಡು ಅಥವಾ ಮೂರು ಕಡೆಗಳಲ್ಲಿ ಅವಘಡ ಸಂಭವಿಸಿದರೆ ಪರಿಸ್ಥಿತಿ ನಿಭಾಯಿಸುವುದು ಅಗ್ನಿಶಾಮಕ ದಳಕ್ಕೆ ದೊಡ್ಡ ಸವಾಲಾಗಿದೆ. ಪ್ರತೀ ಠಾಣೆಗೆ ದಿನಕ್ಕೆ ಕನಿಷ್ಠ 10ಕ್ಕೂ ಅಧಿಕ ತುರ್ತು ಕರೆಗಳು ಬರುತ್ತಿದ್ದು, ಪರ್ಯಾಯ ವಾಹನಗಳಿಲ್ಲದೆ ಜನಸಾಮಾನ್ಯರ ಆಸ್ತಿಪಾಸ್ತಿ ರಕ್ಷಿಸುವುದು ಕಷ್ಟ ಸಾಧ್ಯವಾಗುತ್ತಿದೆ. ಬ್ರಹ್ಮಾವರವು ವೇಗವಾಗಿ ಬೆಳೆಯುತ್ತಿರುವ ಪಟ್ಟಣವಾಗಿದ್ದು, ಇಲ್ಲಿನ ಜನವಸತಿ ಮತ್ತು ವಾಣಿಜ್ಯ ಸಂಕೀರ್ಣಗಳ ಸುರಕ್ಷತೆಯ ದೃಷ್ಟಿಯಿಂದ ಪ್ರತ್ಯೇಕ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವುದು ಜಿಲ್ಲಾಡಳಿತ ಮತ್ತು ಸರ್ಕಾರದ ಮುಂದಿರುವ ತುರ್ತು ಆದ್ಯತೆಯಾಗಬೇಕಿದೆ.

ತಾಲೂಕಿಗೊಂದು ಅಗ್ನಿಶಾಮಕ ವಾಹನವಿರಲಿ

ಜಿಲ್ಲಾ ಕೇಂದ್ರದಲ್ಲಿ ನಾಲ್ಕು ತಾಲೂಕುಗಳ ವ್ಯಾಪ್ತಿಗೆ ಕೇವಲ ಒಂದು ವಾಹನ ಲಭ್ಯವಿರುವುದು ತುರ್ತು ಸಂದರ್ಭಗಳಲ್ಲಿ ರಕ್ಷಣಾ ಕಾರ್ಯಾಚರಣೆ ವಿಳಂಬವಾಗಲು ಪ್ರಮುಖ ಕಾರಣವಾಗಿದೆ. ಜಿಲ್ಲೆಯಾದ್ಯಂತ ಕಳೆದ ಮೂರು ವರ್ಷಗಳಲ್ಲಿ ಒಟ್ಟು **2190** ಅಗ್ನಿ ಅವಘಡದ ಕರೆಗಳು ದಾಖಲಾಗಿದ್ದು, ಇವುಗಳನ್ನು ಸಮರ್ಪಕವಾಗಿ ನಿಭಾಯಿಸಲು ಪ್ರತಿಯೊಂದು ತಾಲೂಕು ಕೇಂದ್ರಗಳಲ್ಲೂ ಕನಿಷ್ಠ ಎರಡು ಸುಸಜ್ಜಿತ ವಾಹನಗಳು ಮತ್ತು ಪೂರ್ಣ ಪ್ರಮಾಣದ ಸಿಬ್ಬಂದಿ ನೇಮಕವಾಗುವುದು ಇಂದಿನ ತುರ್ತು ಅಗತ್ಯವಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು







ಪುತ್ತೂರ ಆಯನ

ಇಂದು ಬೆಡಿ

ಪುತ್ತೂರು ಸೀಮೆಯ ಆಸ್ತಿಕರ ಪರಮೋಚ್ಚ ಶ್ರದ್ಧಾ ಬಿಂದು ಮಹಾಸ್ವಾಮಿ ಶ್ರೀ ಮಹಾಲಿಂಗೇಶ್ವರ. ನಂಬಿದ ಭಕ್ತರನ್ನು ಹರಸುವ ಮಹಾಲಿಂಗೇಶ್ವರನ ವಾರ್ಷಿಕ ಜಾತ್ರೆಯೆಂದರೆ ಲಕ್ಷಾಂತರ ಭಕ್ತರಿಗೆ 10 ದಿನಗಳ ಹಬ್ಬವೇ ಸರಿ..







ವೇ। ಮೂ। ವಸಂತ ಕೆದಿಲಾಯ ಸದಸ್ಯರು | ಶ್ರೀ ಮಹಾಬಲ ರೈ ಬಳತ್ತಡ್ಕ ಸದಸ್ಯರು | ಶ್ರೀ ದಿನೇಶ್ ಪಿ.ವಿ. ಸದಸ್ಯರು | ಶ್ರೀ ವಿನಯ ಸುವರ್ಣ ಸದಸ್ಯರು | ಶ್ರೀ ಈಶ್ವರ ನಾಯ್ಕ ಸದಸ್ಯರು | ಶ್ರೀ ಸುಭಾಷ್ ರೈ ಬೆಳ್ಳಿಪ್ಪಾಡಿ ಸದಸ್ಯರು | ಶ್ರೀ ನಳಿನಿ ಪಿ. ಶೆಟ್ಟಿ ಸದಸ್ಯರು | ಶ್ರೀಮತಿ ಕೃಷ್ಣವೇಣಿ ಸದಸ್ಯರು | ಶ್ರೀ ಕೆ.ವಿ. ಶ್ರೀನಿವಾಸ್ ಕಾರ್ಯನಿರ್ವಹಣಾಧಿಕಾರಿ | ಶ್ರೀ ಹರೀಶ್ ಶೆಟ್ಟಿ ಕಚೇರಿ ವ್ಯವಸ್ಥಾಪಕರು

ವ್ಯವಸ್ಥಾಪನಾ ಸಮಿತಿ ಸದಸ್ಯರು ಹಾಗೂ ಸಿಬ್ಬಂದಿಗಳು, ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಪುತ್ತೂರು

ಶ್ರೀ ಅಶೋಕ್ ಕುಮಾರ್ ರೈ
ಶಾಸಕರು, ಪುತ್ತೂರು
ಅಧ್ಯಕ್ಷರು, ಜೀರ್ಣೋದ್ಧಾರ ಸಮಿತಿ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪುತ್ತೂರು

ಶ್ರೀ ಈಶ್ವರ ಭಟ್ ಪಂಜಿಗುಡ್ಡೆ
ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪುತ್ತೂರು

‘ನಾನು ನಿಮಿತ್ತ, ಮಹಾಲಿಂಗೇಶ್ವರನ ಸಾನಿಧ್ಯ ಅಭಿವೃದ್ಧಿಗಷ್ಟೇ ಆಪ್ತ’: ಪಂಜಿಗುಡ್ಡೆ ಈಶ್ವರ ಭಟ್

■ ರಾಜೇಶ್ ಪಟ್ಟೆ

‘ನಾವು ನಿಮಿತ್ತ ಮಾತ್ರ. ಭಗವಂತ ಇಚ್ಛಿಸಿದರೆ ಏನನ್ನೂ ಆತನೇ ಮಾಡಿಸುತ್ತಾನೆ. ಇತಿಹಾಸ ಪ್ರಸಿದ್ಧ, ಜಗದೊಡೆಯ ಪುತ್ತೂರು ಮಹಾಲಿಂಗೇಶ್ವರ ದೇವರ ಸೇವೆ ಮಾಡುವ ಪುಣ್ಯದ ಅವಕಾಶ ನಮಗೆ ಸಿಕ್ಕಿದೆ. ಶಾಸಕ ಅಶೋಕ್ ರೈ ದಿಟ್ಟ ಮಾರ್ಗದರ್ಶನ, ವ್ಯವಸ್ಥಾಪನ ಸಮಿತಿ ಸದಸ್ಯರು, ಭಕ್ತ ಕೋಟಿಯ ಪ್ರೀತಿಯ ಬೆಂಬಲದಿಂದ ನಿರೀಕ್ಷೆಗೂ ಮೀರಿದ ಅಭಿವೃದ್ಧಿ ಸಾಧ್ಯವಾಗುತ್ತಿದೆ. ಮುಂದಿನ ಒಂದು ವರ್ಷದಲ್ಲಿ ನಿರೀಕ್ಷೆಗೂ ಮೀರಿ ರಾಜ್ಯದಲ್ಲೇ ಪುತ್ತೂರು ಮಹಾಲಿಂಗೇಶ್ವರ ದೇವಾಲಯ ಜನಜನಿತವಾಗಲಿದೆ’.

ಇದು ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ಅವರ ವಿಶ್ವಾಸಭರಿತ ಮಾತು. ಈಶ್ವರ ಭಟ್ ಪಂಜಿಗುಡ್ಡೆ ಅಧ್ಯಕ್ಷತನದ ನೂತನ ವ್ಯವಸ್ಥಾಪನಾ ಸಮಿತಿ ಆಡಳಿತಕ್ಕೆ ಬಂದು ಒಂದು ವರ್ಷ ಮೂರು ತಿಂಗಳು ಕಳೆದಿದೆ. ಈ ಅವಧಿಯಲ್ಲಿ ನಡೆದ ಅಭೂತಪೂರ್ವ ಧನಾತ್ಮಕ ಬೆಳವಣಿಗೆ, ಮುಂದಿನ ಯೋಜನೆಗಳ ಕುರಿತು ಅವರ ಮಾತುಗಳ ವಿವರಣೆಯಿದು.

ಧನುವರ್ಮಾಸದ ಅವಧಿಯಲ್ಲಿ ಅಧಿಕಾರಕ್ಕೆ ಬಂದ ಆಡಳಿತ ಮಂಡಳಿ ಸ್ವಲ್ಪವೂ ಸಮಯವನ್ನು ವ್ಯರ್ಥ ಮಾಡದೆ ಭಕ್ತರಿಗೆ ಅನುಕೂಲವಾಗುವಂತೆ ತಕ್ಷಣ 1.25 ಲಕ್ಷ ವೆಚ್ಚದಲ್ಲಿ ಎಲ್‌ಸಿಡಿ ಟಿ.ವಿ.ಯ ವ್ಯವಸ್ಥೆಯನ್ನು ಮಾಡಿದೆ. ಇದಕ್ಕೆ ವ್ಯವಸ್ಥಾಪನ ಸಮಿತಿಯೇ ಹಣ ವಿನಿಯೋಗಿಸಿದೆ.

■ **ಅನ್ನ ಪ್ರಸಾದಕ್ಕೆ ಮಹತ್ವ**

ನೂತನ ಆಡಳಿತ ಮಂಡಳಿ ಭಕ್ತರ ಅನುಕೂಲತೆಗೆ ಪ್ರಥಮ ಆದ್ಯತೆ ನೀಡುವ ನಿಟ್ಟಿನಲ್ಲಿ ಪ್ರಥಮವಾಗಿ ಅನ್ನ ಪ್ರಸಾದ ವಿತರಣೆಗೆ ಮಹತ್ವ ನೀಡಿದೆ. ಭೋಜನ ಶಾಲೆಯಲ್ಲಿ ನೀರಿನ ಅನುಕೂಲತೆಗೆ ಸುಮಾರು 40 ಟ್ಯಾಪ್‌ಗಳನ್ನು ನಿರ್ಮಿಸಿದೆ. 3 ಕೌಂಟರ್ ವ್ಯವಸ್ಥೆ, ವಾರದ 7 ದಿವಸಗಳಲ್ಲೂ ಪಾಯಸ, ಹೊರಭಾಗದಲ್ಲಿ ನಿಲ್ಲಲು ಶೀಟ್ ಅಳವಡಿಕೆ, ವಿಐಪಿ ಕೌಂಟರ್ ವಿಸ್ತರಣೆ, ಅರ್ಚಕರಿಗೆ ವ್ಯವಸ್ಥೆ ಮಾಡಲಾಗಿದೆ. ಪರಿಣಾಮವಾಗಿ ನೂರಾರು ಸಂಖ್ಯೆಯಲ್ಲಿದ್ದ ಅನ್ನ ಪ್ರಸಾದ ಸ್ವೀಕರಿಸುವ ಭಕ್ತರ ಸಂಖ್ಯೆ ಈಗ ದಿನವಹಿ ಸರಾಸರಿ 5500ನ್ನೂ ದಾಟಿದೆ. ಸುಮಾರು 2500 ರಷ್ಟು ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳೇ ಮಧ್ಯಾಹ್ನ ಅನ್ನ ಪ್ರಸಾದ ಸ್ವೀಕರಿಸುತ್ತಿದ್ದಾರೆ.



> ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳೊಂದಿಗೆ ಬ್ರಹ್ಮಕಲಶೋತ್ಸವ ನಡೆಸಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಗಣ್ಯ ಭಕ್ತರನ್ನೂ ಸೇರಿಸಿಕೊಂಡು ಬ್ರಹ್ಮಕಲಶೋತ್ಸವ ಸಮಿತಿಯೂ ರಚನೆಯಾಗಿದೆ. ಸುಬ್ರಹ್ಮಣ್ಯ, ಧರ್ಮಸ್ಥಳದಂತೆ ಭಕ್ತರು ನಿರಂತರ ಭೇಟಿ ನೀಡುವಂತಹ ವ್ಯವಸ್ಥೆಗಳು ಇಲ್ಲಿ ಆಗಲಿವೆ. ಈ ನಿಟ್ಟಿನಲ್ಲಿ ಸರ್ವ ಭಕ್ತರ ಸಹಕಾರ ಬೇಕು.
> ■ **ಅಶೋಕ್ ರೈ**, ಶಾಸಕರು ಹಾಗೂ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರು

> ಹಂತ ಹಂತದಲ್ಲಿ ತ್ವರಿತವಾಗಿ ದೇವಾಲಯದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಸುಮಾರು 60 ಕೋಟಿ ವೆಚ್ಚದ ಮಾಸ್ಟರ್ ಪ್ಲಾನ್ ಮಾಡಲಾಗಿದೆ. ಶಾಸಕ ಅಶೋಕ್ ರೈ ನೇತೃತ್ವದಲ್ಲಿ ಭಕ್ತ ಸಮೂಹದ ಸಹಕಾರದೊಂದಿಗೆ ಮುಂದಿನ ಒಂದೂವರೆ ವರ್ಷದಲ್ಲಿ ದೇವಾಲಯದ ಬ್ರಹ್ಮಕಲಶೋತ್ಸವ ರಾಜ್ಯದಲ್ಲೇ ಎಲ್ಲೂ ಈವರೆಗೆ ಕಂಡಿರದಂತೆ, ಹೆಗ್ಗಳಿಕೆಗಳೊಂದಿಗೆ ಆಗಲಿದೆ.
> ■ **ಈಶ್ವರ ಭಟ್ ಪಂಜಿಗುಡ್ಡೆ**, ಅಧ್ಯಕ್ಷರು ಶ್ರೀ ಮಹಾಲಿಂಗೇಶ್ವರ ದೇವಾಲಯ ವ್ಯವಸ್ಥಾಪನ ಸಮಿತಿ

■ **ಭಕ್ತರಿಂದಲೇ ಅಕ್ಕಿ ಜೋಡಣೆ**

ಅನ್ನ ಪ್ರಸಾದ ಸ್ವೀಕರಿಸುವ ಭಕ್ತರ ಸಂಖ್ಯೆ ಏರಿಕೆಯಾಗುತ್ತಿದ್ದಂತೆ ಸಾಹಿತ್ಯ ಜೋಡಣೆಯೂ ಕಷ್ಟಕರವೆನಿಸಿದಾಗ ಭಕ್ತರ ಕಡೆಯಿಂದಲೇ ಅಕ್ಕಿ ಜೋಡಣೆಗೆ ವಿನಂತಿ ಮಾಡಲಾಗಿದೆ. ಪರಿಣಾಮ ತಿಂಗಳ ವಹಿ, ವಾರ್ಷಿಕ ವಹಿ ಅಕ್ಕಿ ನೀಡುವ ವಾಗ್ದಾನವನ್ನು ಮಾಡಿ ಭಕ್ತರು ಮುಂದೆ ಬಂದಿದ್ದಾರೆ. ಅಕ್ಕಿ ಇಡಲು ಜಾಗ ಸಮಸ್ಯೆ ಉಂಟಾದಾಗ ಹಣದ ರೂಪದಲ್ಲಿ ನೀಡಿದ್ದಾರೆ. ವರ್ತಕರೂ ಅಗತ್ಯದ ಸಮಯಕ್ಕೆ ಪೂರೈಕೆಯ ಜವಾಬ್ದಾರಿ ಹೊತ್ತು ಅದಕ್ಕೂ ತಮ್ಮ ಪಾಲಿನ ಅಕ್ಕಿ ಸೇರಿಸಿ ನೀಡುತ್ತಿದ್ದಾರೆ. ಒಟ್ಟಿನಲ್ಲಿ ಸುಮಾರು 25 ಲಕ್ಷ ಮೌಲ್ಯದ ಅಕ್ಕಿ ಬಂದಿದೆ. ಸುಮಾರು 16 ಲಕ್ಷ ವೆಚ್ಚದಲ್ಲಿ ಭೋಜನ ಶಾಲೆಗೆ ಅನ್ನ ಬೇಯಿಸುವ ಸ್ಟೀಂ ವ್ಯವಸ್ಥೆ ಮಾಡಲಾಗಿದೆ. ಒಟ್ಟು ಅನ್ನ ಪ್ರಸಾದ ವಿತರಣೆಯಲ್ಲಿ ಮಾಡಲಾದ ಸುವ್ಯವಸ್ಥೆಯ ಕಾರಣದಿಂದ ಭಕ್ತರ ಸಂಖ್ಯೆಯೂ ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಸಂತಸ ವ್ಯಕ್ತಪಡಿಸುತ್ತಾರೆ ವ್ಯವಸ್ಥಾಪನ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು.

■ **ತುಪ್ಪದ ದೀಪ, ಶುದ್ಧ ಎಣ್ಣೆ, ಕುಂಕುಮ**

2013 ರಲ್ಲಿ ಪ್ರಶ್ನಾ ಚಿಂತನೆಯಲ್ಲಿ ಕಂಡುಬಂದಿರುವಂತೆ ದೇವರ ನಡೆಯ ಬಳಿ ಭಕ್ತರಿಗೆ ತುಪ್ಪದ ದೀಪ ಬೆಳಗುವ ಹೊಸ ಸೇವೆಯನ್ನು ಕೆಲವು ಸಮಯಗಳಿಂದ ಆರಂಭಿಸಲಾಗಿದೆ. ಹುಟ್ಟಿದ ದಿನ, ವಿಶೇಷ ದಿನಗಳು ಅಥವಾ ವಿಶೇಷ ಪ್ರಾರ್ಥನೆಗಳನ್ನು ನೆರವೇರಿಸುವಂತೆ ಭಕ್ತರು ದೇವರಿಗೆ ತುಪ್ಪದ ದೀಪ ಸೇವೆಯನ್ನು ನೀಡುತ್ತಿದ್ದಾರೆ. ಅದರಲ್ಲೂ ಈ ಸೇವೆಯಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿದೆ. ಗಾಣದಿಂದ ತೆಗೆದ ಶುದ್ಧ ಎಳ್ಳೆಣ್ಣೆಯ ಪೂರೈಕೆ ಮಾಡಲಾಗುತ್ತಿದ್ದು, ಭಕ್ತರ ಮೂಲಕ ತಿಂಗಳಿಗೆ 60-70 ಲೀಟರ್ ಎಣ್ಣೆ ದೇವರಿಗೆ ಅಭಿಷೇಕವಾಗುತ್ತಿದೆ. ತಿಂಗಳ ಒಂದು ದಿನ ಮೃತ್ಯುಂಜಯ ಹೋಮದ ದಿನ ವಿಶೇಷ ಅಭಿಷೇಕವೂ ನಡೆಯುತ್ತಿದೆ. ಜತೆಗೆ ದೇವಾಲಯದಲ್ಲಿ ಭಕ್ತರಿಗೆ ಶುದ್ಧ ಕುಂಕುಮ ಸಮರ್ಪಣೆಗೂ ಅವಕಾಶ ಕಲ್ಪಿಸಲಾಗಿದೆ.

ಅಭಿವೃದ್ಧಿ ಪ್ರಗತಿ

ದೇವಾಲಯದ ಸುತ್ತಲಿನ 5 ಕಟ್ಟೆಗಳನ್ನು ಶಿಲಾಮಯಗೊಳಿಸಿ ದಾನಿಗಳ ದೇಣಿಗೆಯೊಂದಿಗೆ ನಿರ್ಮಿಸಲಾಗಿದೆ. ಅಶ್ವತ್ಥ ಕಟ್ಟೆಯೂ ನಿರ್ಮಾಣವಾಗುತ್ತಿದ್ದು ಎ. 16 ರ ಒಳಗಾಗಿ ಪೂರ್ತಿಯಾಗಲಿದೆ. ಸಂಗೀತ ಶಾಲೆಯ ಕಟ್ಟಡವನ್ನು ತೆರವುಗೊಳಿಸಿ ತಾತ್ಕಾಲಿಕ ಕಟ್ಟಡದಲ್ಲಿ ಮುಂದುವರಿಸಲಾಗಿದೆ. ಹಳೆಯ ಗೋಶಾಲೆಯನ್ನು ತೆರವುಗೊಳಿಸಲಾಗಿದ್ದು ಅಲ್ಲಿ ನೂತನ ಸಭಾಭವನ ನಿರ್ಮಾಣವಾಗಲಿದೆ. ನವಗ್ರಹವನ್ನು ಪುನ: ಒಳಗೆ ಮಾಡುತ್ತೇವೆ. ಸೇವಾ ಕೌಂಟರ್ ಪುನ: ಹಿಂದಿನ ಸ್ಥಳಕ್ಕೆ ಬಂದಿದೆ. ಶೀಘ್ರ ಅಯ್ಯಪ್ಪನ ಶಿಲಾಮಯ ಗುಡಿ ನಿರ್ಮಾಣವಾಗಲಿದೆ. 4.50 ಕೋಟಿ ವೆಚ್ಚದಲ್ಲಿ ದೇವಾಲಯದ ಸುತ್ತ ತಡೆಗೋಡೆ ನಿರ್ಮಾಣವಾಗುತ್ತಿದೆ. ದೇವಾಲಯದ ಪುಷ್ಕರಣಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ.

ಭಕ್ತರಿಂದಲೇ ಬೆಡಿ

ನೆರೆಯ ಕುಂಬಳೆ ಬೆಡಿಯಂತೆ ಪುತ್ತೂರು ಬೆಡಿಗೂ ವಿಶೇಷ ಹೆಗ್ಗಳಿಕೆ ಇದೆ. ಈ ಕಾರಣದಿಂದ ಕಳೆದ ವರ್ಷದಿಂದ ಭಕ್ತರ ಮೂಲಕ ಸಂಗ್ರಹಗೊಂಡ ಹಣದಿಂದಲೇ ಪುತ್ತೂರು ಬೆಡಿಯನ್ನು ನಡೆಸಲಾಗುತ್ತಿದೆ. ಕಾರ್ಕಳದ ತಂಡ ಬೆಡಿ ನಿರ್ವಹಿಸಲಿದ್ದು, ಗದ್ದೆಯ ವಿಸ್ತಾರವಾದ ಜಾಗದಲ್ಲಿ ನಡೆಯಲಿದೆ. ಮಹಾಲಿಂಗೇಶ್ವರ ದೇವರ ಪ್ಯಾರಾಚೂಟ್ ಮಾದರಿ, ಬಣ್ಣಗಳ ಚಿತ್ತಾರ, ಅದ್ಭುತ ಫಿನಿಶಿಂಗ್ ವಿಶೇಷವೆನಿಸಲಿದೆ.

ರಕ್ತೇಶ್ವರಿಗೆ ನ್ಯಾಯದ ಬಳಿಕ ಯಶಸ್ಸು

ದೇವಾಲಯದ ಪ್ರತೀ ಹಬ್ಬದ ಸಂದರ್ಭದಲ್ಲೂ ಬದಲಾವಣೆಗಳನ್ನು ತರುತ್ತಿದ್ದೇವೆ. ತಾಂಬೂಲ ಪ್ರಶ್ನೆಯಲ್ಲಿ ಕಂಡುಬಂದಂತೆ ಶಿವರಾತ್ರಿಯ ಸಂದರ್ಭದಲ್ಲಿ ಹೊರಭಾಗದಲ್ಲಿರುವ ರಕ್ತೇಶ್ವರಿ ಅಮ್ಮನವರನ್ನು ದೇವಾಲಯದ ಒಳಭಾಗದಲ್ಲಿ ತರುವುದರೊಂದಿಗೆ ದೀಪ ಬೆಳಗಿ ಆರಾಧಿಸಲಾಗುತ್ತಿದೆ. ಅದರ ನಂತರ ದೇವಾಲಯಕ್ಕೆ ಸಂಬಂಧಿಸಿ ಯಾವ ಕೆಲಸ ಕೈಗೊಂಡರೂ ಯಶಸ್ವಿಯಾಗಿ ಈಡೇರುತ್ತಿದೆ. ಜಾತ್ರೆ ಮುಗಿದ ಕೂಡಲೇ ದೇವಾಲಯದ ಒಳಗೆ ರಕ್ತೇಶ್ವರಿ ಗುಡಿ ನಿರ್ಮಾಣ ಕಾರ್ಯ ಆಗಲಿದೆ ಎಂದು ಈಶ್ವರ ಭಟ್ ತಿಳಿಸಿದ್ದಾರೆ.

ವ್ಯಾಪಾರಸ್ಥರಿಗೆ ಸಕಲ ವ್ಯವಸ್ಥೆ

ಪುತ್ತೂರು ಜಾತ್ರೋತ್ಸವ ಎಂದರೆ ಜಾತ್ರಾ ಗದ್ದೆಯಲ್ಲಿ ತಿಂಗಳ ಕಾಲ ನಡೆಯುವ ವ್ಯಾಪಾರ, ಮನೋರಂಜನಾ ಮಳಿಗೆಗಳೂ ಪ್ರಮುಖವೆನಿಸುತ್ತದೆ. ಕಳೆದ ಬಾರಿ ಸುಮಾರು 325 ಮಳಿಗೆಗಳಿದ್ದರೆ ಈ ಬಾರಿ ಮಳಿಗೆಗಳ ಸಂಖ್ಯೆಯು 400 ನ್ನು ಮೀರಿದೆ. ಎಲ್ಲಾ ಮಳಿಗೆಗಳಿಗೆ ನೀರು, ವಿದ್ಯುತ್ ಸೇರಿದಂತೆ ಸಕಲ ಮೂಲಭೂತ ಸೌಕರ್ಯಗಳನ್ನು ದೇವಾಲಯದ ಮೂಲಕ ಕಲ್ಪಿಸಲಾಗುತ್ತಿದೆ.



ಅಭಿವೃದ್ಧಿ ಕಾರ್ಯಗಳಿಗೆ ಶಿಲಾನ್ಯಾಸ



ಅಶೋಕ್ ರೈ ದಂಪತಿಯಿಂದ ಅಶ್ವತ್ಥ ಗಿಡ ನೆಡುವುದು



ಶ್ರೀ ಅಯ್ಯಪ್ಪ ಗುಡಿ ಶಿಲಾನ್ಯಾಸ



ದೇವರ ಪೇಟೆ ಸವಾರಿ ಸಂದರ್ಭದಲ್ಲಿ ಪಂಜಿಗುಡ್ಡೆ ಈಶ್ವರ ಭಟ್



ದೇವರ ಪೇಟೆ ಸವಾರಿ ಸಂದರ್ಭದಲ್ಲಿ ಶಾಸಕ ಅಶೋಕ್ ರೈ ಜತೆ ಪಂಜಿಗುಡ್ಡೆ ಈಶ್ವರ ಭಟ್



ನೂತನ ಶಿಲಾಮಯ ಕಟ್ಟೆ ಪರಿಶೀಲನೆ



ದೇವಸ್ಥಾನಕ್ಕೆ ಹೊಸದಾಗಿ ಖರೀದಿಸಿದ ಜಾಗದ ಗದ್ದೆಯಲ್ಲಿ ಸಮತಟ್ಟು ಕಾರ್ಯ ನಡೆಸುತ್ತಿರುವುದು



ಗದ್ದೆಯಲ್ಲಿ ಸಂತೆ ವ್ಯಾಪಾರಕ್ಕೆ ಮಾರ್ಕ್ ಮಾಡುತ್ತಿರುವ ಅಧ್ಯಕ್ಷರು



ಜಾಗ ಮರು ಸ್ವಾಧೀನದ ಸಂದರ್ಭದಲ್ಲಿ ಶಾಸಕರ ಜತೆ ಅಧ್ಯಕ್ಷರು, ಸದಸ್ಯರು



ಹೊಸದಿಗಂತ ಪತ್ರಿಕೆಯ ನಿತ್ಯ ಓದುಗರು ಪಂಜಿಗುಡ್ಡೆ ಈಶ್ವರ ಭಟ್

ಇಂದು ಸೀಮೆಯ ಒಡೆಯನ ಬ್ರಹ್ಮರಥೋತ್ಸವ

ಮಹತೋಭಾರ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಬ್ರಹ್ಮರಥೋತ್ಸವ, ಪುತ್ತೂರು ಬೆಡಿ ಎ.17 ರಂದು ರಾತ್ರಿ ನಡೆಯಲಿದೆ.

ಶ್ರೀ ಮಹಾಲಿಂಗೇಶ್ವರ ದೇವರ ಬ್ರಹ್ಮರಥ ಅದು ನಡೆ ದೇಗುಲ. ಪತಾಕೆ, ಅಷ್ಟ ದಿಕ್ಪಾಲಕರು, ಶಿಖರ ಕಲಶ, ಶ್ವೇತ ಚಕ್ರ ಮತ್ತು ಸತ್ತಿಗೆ ಅಳವಡಿಸಿದ 70 ಅಡಿ ಎತ್ತರದ ಬ್ರಹ್ಮರಥದಲ್ಲಿ ವರ್ಷದಲ್ಲಿ ಒಂದು ದಿನ ಶ್ರೀ ದೇವರು ವಿರಾಜಮಾನರಾಗುತ್ತಾರೆ. ರಾತ್ರಿ 8ರ ಅನಂತರ ಬ್ರಹ್ಮರಥೋತ್ಸವ ನಡೆಯುತ್ತದೆ. ದೇವಾಲಯದ ಮುಂಭಾಗದ ರಥ ಬೀದಿಯಲ್ಲಿ 400 ಮೀ. ಉದ್ದಕ್ಕೆ ಬ್ರಹ್ಮರಥ ತೆರಳಿ ಮತ್ತೆ ದೇವಾಲಯದ ಭಾಗಕ್ಕೆ ಬರುತ್ತದೆ.

10 ಎಕರೆ ವಿಸ್ತೀರ್ಣದಲ್ಲಿ ಬ್ರಹ್ಮರಥೋತ್ಸವ

ಏ.17ರಂದು ರಾತ್ರಿ ಶ್ರೀ ದೇವರ ಬ್ರಹ್ಮರಥೋತ್ಸವ ವೀಕ್ಷಿಸಲು 10 ಎಕರೆ ವಿಸ್ತೀರ್ಣವಿರುವ ಪುತ್ತೂರು ದೇವಾಲಯದ ಎದುರು ಗದ್ದೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಭಕ್ತರು ಸೇರುತ್ತಾರೆ. ದೂರದ ಮಡಿಕೇರಿ, ಚಿಕ್ಕಮಗಳೂರುಗಳಿಂದಲೂ ಪುತ್ತೂರು ತೇರು ನೋಡಲು ಭಕ್ತರು ಬರುತ್ತಾರೆ. ವರ್ಷದಿಂದ ವರ್ಷಕ್ಕೆ ದ.ಕ., ಉಡುಪಿ ಮಾತ್ರವಲ್ಲದೆ ಕರ್ನಾಟಕದ ಇತರ ಜಿಲ್ಲೆಗಳಿಂದಲೂ ಪುತ್ತೂರು ಜಾತ್ರೆಗೆ ಜನ ಆಗಮಿಸುತ್ತಾರೆ. ಅತೀ ಎತ್ತರವಾದ ಬ್ರಹ್ಮರಥದಲ್ಲಿ ವಿರಾಜಮಾನರಾದ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಉತ್ಸವ ಮೂರ್ತಿಯನ್ನು ಮತ್ತು ಬ್ರಹ್ರರಥ ಸಾಗುವುದನ್ನು ನೋಡಲು ಸಾವಿರ ಕಣ್ಣುಗಳಿದ್ದರೂ ಸಾಲದು. ಯಾಕೆಂದರೆ ಇಷ್ಟು ವೈಭವಯುತ ಬ್ರಹ್ಮರಥೋತ್ಸವ ಬೇರೆಲ್ಲೂ ಕಾಣಸಿಗದು.



■ ಅಪೂರ್ವ ಕ್ಷಣ

ಬ್ರಹ್ಮವಾಹಕರು ಶ್ರೀ ಮಹಾಲಿಂಗೇಶ್ವರ ದೇವರ ಉತ್ಸವ ಮೂರ್ತಿಯನ್ನು ತಲೆಯ ಮೇಲೆ ಹೊತ್ತು ಬ್ರಹ್ಮರಥವನ್ನು ಏರುವ ಸಮಯ ಪುತ್ತೂರು ಸೀಮೆಯ ಜನರಿಗೆ ಅಪೂರ್ವ ಧಾರ್ಮಿಕ ಕ್ಷಣವಾಗಿದೆ. ಚೆಂಡೆ ಮೇಳ, ಮಂಗಳವಾದ್ಯ, ಬ್ಯಾಂಡ್ ವಾಲಗ, ಶಂಖ ಜಾಗಟೆ, ಮಂಗಳಕರ ನಿನಾದದ ಹಿನ್ನೆಲೆಯಲ್ಲಿ ಶ್ರೀ ದೇವರು ಬ್ರಹ್ಮರಥಾರೂಢರಾಗುತ್ತಾರೆ. ಈ ಸಂದರ್ಭದಲ್ಲಿ ದೇವಾಲಯದ ಮುಂಭಾಗದ ಗದ್ದೆಯಲ್ಲಿ ಸೇರಿದ ಸಹಸ್ರಾರು ಭಕ್ತರು ಏಕ ಕಂಠದಲ್ಲಿ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಪಾದಾರವಿಂದಗಳಿಗೆ ಗೋವಿಂದ ಎನ್ನಿ ಗೋವಿಂದ ಎಂದು ಜಯಘೋಷ ಹಾಕುತ್ತಾರೆ.

ಬ್ರಹ್ಮರಥ

ಶ್ರೀ ಮಹಾಲಿಂಗೇಶ್ವರ ದೇವರಿಗೆ ಭಕ್ತ ಮುತ್ತಪ್ಪ ರೈ ಅವರು 2010 ರಲ್ಲಿ ಸುಂದರವಾದ ಕಲಾತ್ಮಕ ಕೆತ್ತನೆಗಳಿರುವ 71 ಅಡಿ ಎತ್ತರದ 20 ಅಡಿ ಅಗಲದ ಬ್ರಹ್ಮರಥವನ್ನು ಸೇವಾ ರೂಪದಲ್ಲಿ ನೀಡಿದ್ದಾರೆ. ಹೊಯ್ಸಳ ಶೈಲಿ ಕಾಷ್ಠ ಶಿಲ್ಪದಲ್ಲಿರುವ ಈ ರಥವನ್ನು ನಿರ್ಮಿಸಲು ಸುಮಾರು ಎರಡು ವರ್ಷ ತಗುಲಿದ್ದು, 7200 ಮಾನವ ದಿನಗಳು.

ಪುತ್ತೂರ್ದ ಬೆಡಿ

ಪುತ್ತೂರು ಬ್ರಹ್ಮರಥೋತ್ಸವ ದಂದು ನಡೆಯುವ ಸುಡುಮದ್ದು ಪ್ರದರ್ಶನ ಪುತ್ತೂರು ಬೆಡಿ ಎಂದೇ ಪ್ರಸಿದ್ಧಿ ಪಡೆದಿದೆ. ಪುತ್ತೂರು ಬೆಡಿಯನ್ನು ವೀಕ್ಷಿಸಲು ದ.ಕ. ಜಿಲ್ಲೆಯ ವಿವಿಧ ತಾಲೂಕುಗಳ, ಕಾಸರಗೋಡು ಮತ್ತು ಕೊಡಗು ಜಿಲ್ಲೆಗಳಿಂದಲೂ ಭಕ್ತರು ಆಗಮಿಸುತ್ತಾರೆ. ಪುತ್ತೂರು ಶ್ರೀದೇವಾಲಯದ ಮುಂಭಾಗದಲ್ಲಿರುವ 10 ಎಕರೆ ಸ್ಥಳದಲ್ಲಿ ಮಹಾಲಿಂಗೇಶ್ವರನ ಭಕ್ತರು ಸೇರುತ್ತಾರೆ.

■ ಜಾತ್ರೆ ಗದ್ದೆಯಲ್ಲಿ ಜನಸಾಗರ

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ಎದುರುಗದ್ದೆಯಲ್ಲಿ ಬ್ರಹ್ಮರಥೋತ್ಸವದ ಸಂದರ್ಭದಲ್ಲಿ ಬ್ರಹ್ಮರಥೋತ್ಸವ ಮತ್ತು ಸುಡುಮದ್ದು ವೀಕ್ಷಣೆಗಾಗಿ 1 ಲಕ್ಷ ಕ್ಕೂ ಮಿಕ್ಕಿ ಜನಸಾಗರವೇ ಸೇರುತ್ತದೆ. ರಥಬೀದಿಯಲ್ಲಿ ಬ್ರಹ್ಮರಥದ ಇಕ್ಕಡೆಗಳಲ್ಲಿ ಭಕ್ತರು ನಿಂತು ಬ್ರಹ್ಮರಥೋತ್ಸವ ವೀಕ್ಷಿಸಿದರೆ ರಥದ ಮುಂದೆ ಕಾಲಿಗೆ ಚಪ್ಪಲಿ ಧರಿಸದೆ ಬ್ರಹ್ಮರಥವನ್ನು ಎಳೆಯುವ ಮತ್ತು ಬ್ರಹ್ಮರಥೋತ್ಸವವನ್ನು ಹತ್ತಿರದಿಂದ ನೋಡುವ ಆಸಕ್ತರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ.

ಬೆಳಗ್ಗೆ ಶ್ರೀ ದೇವಾಲಯದಲ್ಲಿ ದೇವರ ಉತ್ಸವ ಬಲಿ ಮತ್ತು ದರ್ಶನ ಬಲಿ ಇರುವುದರಿಂದ ಒಳಾಂಗಣದಲ್ಲಿ ನೂರಾರು ಭಕ್ತರು ಜಮಾಯಿಸಿದರೆ ಸಂಜೆ 5 ಗಂಟೆಯ ಬಳಿಕ ದೇವಾಲಯದ ಒಳಾಂಗಣ, ಹೊರಾಂಗಣ ಮತ್ತು ಜಾತ್ರೆ ಗದ್ದೆಯಲ್ಲಿ ಜನರು ಸೇರಲಾರಂಭಿಸುತ್ತಾರೆ. ಶ್ರೀ ದೇವರು ಬ್ರಹ್ಮರಥದಿಂದ ಇಳಿದು ಪೇಟೆ ಸವಾರಿಗೆ ತೆರಳಿದ ಬಳಿಕ ಇಲ್ಲಿನ ಭಕ್ತರ ಸಂದಣಿ ತೆರವಾಗುತ್ತದೆ.

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಅವಭೃತ ಸವಾರಿ ಒಂದು ದಾಖಲೆ. ಯಾಕೆಂದರೆ ಪುತ್ತೂರು ದೇವಾಲಯದಿಂದ 12 ಕಿ.ಮೀ. ದೂರದಲ್ಲಿರುವ ವೀರಮಂಗಲ ಕುಮಾರಧಾರಾ ನದಿ ತಟಕ್ಕೆ ದೇವರು ಅವಭೃತ ಸವಾರಿ ತೆರಳುತ್ತಾರೆ. ಈ ಸಂದರ್ಭದಲ್ಲಿ 49 ಕಡೆ ಕಟ್ಟೆ ಪೂಜೆಯನ್ನು ಸ್ವೀಕರಿಸಿ ದೇವರ ಸವಾರಿ ಸಾಗುತ್ತದೆ. ಇಷ್ಟು ದೂರ ಅವಭೃತ ಸವಾರಿ ತೆರಳುವ ಕ್ರಮ ಪುತ್ತೂರಿನಲ್ಲಿ ಬಿಟ್ಟರೆ ಬೇರೆಲ್ಲೂ ಕಾಣಸಿಗದು. ಅವಭೃತ ತೆರಳುವ ದಾರಿಯಲ್ಲಿ ಅಲ್ಲಲ್ಲಿ ಯಕ್ಷಗಾನ ಬಯಲಾಟ, ನಾಟಕ ಪ್ರದರ್ಶನಗಳನ್ನು ನಡೆಸಲಾಗುತ್ತದೆ. ಪುತ್ತೂರು ದೇವಾಲಯದ ಅಂಗಣದಿಂದ ತೊಡಗಿ ವೀರಮಂಗಲದವರೆಗೆ ದಾರಿ ಬದಿಯಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಲಾಗುತ್ತದೆ. ಕಟ್ಟೆಗಳನ್ನು ಮತ್ತು ಅವುಗಳ ಪರಿಸರವನ್ನು ತಳಿರು ತೋರಣಗಳಿಂದ ಶೃಂಗರಿಸಲಾಗುತ್ತದೆ.

ಏ.18ರಂದು ಸಂಜೆ ದೇವಾಲಯದಿಂದ ಹೊರಟ ಅವಭೃತ ಸವಾರಿ ಏ.19ರಂದು ವೀರಮಂಗಲ ತಲುಪಿ ನದಿಯಲ್ಲಿ ದೇವರ ಜಲಕ ಮುಗಿದು ಬೆಳಗ್ಗೆ 10ರ ಒಳಗೆ ದೇವರು ದೇವಾಲಯವನ್ನು ಮರಳಿ ಸೇರುತ್ತಾರೆ. ಬಳಿಕ ಧ್ವಜಾವರೋಹಣ ನಡೆಯುತ್ತವೆ.

ಸುತ್ತಮುತ್ತ

ಇಂದು ಸುಳ್ಯದಲ್ಲಿ ವಿದ್ಯುತ್ ವ್ಯತ್ಯಯ

ಸುಳ್ಯ: ತುರ್ತು ನಿಯತಕಾಲಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ 11 ಕೆ.ವಿ ಸುಳ್ಯ-1 ಕೇರ್ಪಳ, ಸುಳ್ಯ-2 ಶ್ರೀರಾಂಪೇಟೆ, ಜಬಳೆ ಡಿಪ್ಪೋ, ಕೊಲ್ಚಾರ್, ತೊಡಿಕಾನ, ಅಜ್ಜಾವರ, ಉಬರಡ್ಕ, ಕಲ್ಲುಗುಂಡಿ, ಮಂಡೆಕೋಲು ಫೀಡರ್‌ಗಳಲ್ಲಿ ಇಂದು (ಏ.17) ಬೆಳಗ್ಗೆ 10 ರಿಂದ ಸಂಜೆ 6ರ ತನಕ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ನಾಳೆ ಭಜನಾ ಮಂಗಳೋತ್ಸವ

ಬಂಟ್ವಾಳ: ತಾಲೂಕಿನ ಕುಡಂಬೆಟ್ಟು ಗ್ರಾಮದ ಹಲೆಪ್ಪಾಡಿ ಶ್ರೀ ರಾಮಾಂಜನೇಯ ಭಜನಾ ಮಂದಿರದಲ್ಲಿ ಭಜನಾ ಮಂಗಳೋತ್ಸವ ಕಾರ್ಯಕ್ರಮ ಏ.19ಕ್ಕೆ ನಡೆಯಲಿದೆ. ಅಂದು ಬೆಳಗ್ಗೆ ಭಜನಾ ಮಂಗಳೋತ್ಸವಕ್ಕೆ ಚಾಲನೆ, ಗಣಯಾಗ, ಮಧ್ಯಾಹ್ನ ಮಹಾಪೂಜೆ, ಸಂಜೆ ಭಜನ ಮಂಗಳ, ರಾತ್ರಿ ಸ್ಥಳೀಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಬಳಿಕ ನಡೆಯುವ ಧಾರ್ಮಿಕ ಸಭೆಯಲ್ಲಿ ಬಂಟ್ವಾಳ ಶಾಸಕ ರಾಜೇಶ್ ನ್ಾಯಕ್ ಅಧ್ಯಕ್ಷತೆ ವಹಿಸಲಿರುವರು. ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಲಿರುವರು. ಈ ಸಂದರ್ಭದಲ್ಲಿ ನಾಟಿ ವೈದ್ಯೆ, ವೆಂಕಮ್ಮ ಪೂಜಾರ್ತಿ ಕಂಗಿತ್ತು ಹಾಗೂ ಭಜನ ಸಂಕೀರ್ತನಕಾರ ನವೀನ್ ಶೆಟ್ಟಿ ಕಕ್ಕಿಬೆಟ್ಟು ಅವರನ್ನು ಸನ್ಮಾನಿಸಲಾಗುವುದು. ಅನ್ನ ಸಂತರ್ಪಣೆ ಬಳಿಕ ಪುಂಜಾಲಕಟ್ಟೆ ತಾಂಬೂಲ ಕಲಾವಿದರಿಂದ ಎಲ್ಲೆ ದಾದ ಏರೆಗ್ ಗೊತ್ತು ತುಳು ನಾಟಕ ಪ್ರದರ್ಶನ ನಡೆಯಲಿದೆ ಎಂದು ಭಜನ ಮಂದಿರದ ಅಧ್ಯಕ್ಷ ಕಿರಣ್ ಕೋಟ್ಯಾನ್ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ನಾರಿ ಶಕ್ತಿ ವಂದನಾ ಕಾಯ್ದೆ ಜಾರಿ ಸ್ವಾಗತಾರ್ಹ: ಭಾಗೀರಥಿ ಮುರುಳ್ಯ

ಸುಳ್ಯ: 2047ರ ನಿರ್ಣಾಯಕ ಭಾರತ ಕಲ್ಪನೆಯೊಂದಿಗೆ ನಾರಿ ಶಕ್ತಿ ವಂದನಾ ಕಾಯ್ದೆಯನ್ನು ದೇಶದ ಪ್ರಧಾನಿ ಜಾರಿಗೆ ತರಲು ಹೊರಟಿರುವುದು ಸ್ವಾಗಾತಾರ್ಹ ಹಾಗೂ ಅಭಿನಂದನೀಯ ಎಂದು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಹೇಳಿದ್ದಾರೆ. ಅವರು ಗುರುವಾರ ಸುಳ್ಯ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹಿಳಾ ಮೀಸಲಾತಿಯನ್ನು ಜಾರಿಗೆ ತರುವ ಮೂಲಕ ಸ್ತ್ರೀಯರಿಗೆ ಶಕ್ತಿಯನ್ನು ನೀಡಲು ಹೊರಟಿದ್ದು ರಾಜಕೀಯ ಕ್ಷೇತ್ರದಲ್ಲಿ ಶಾಸನ ರಚಿಸಲು ಮೂರನೇ ಒಂದು ಭಾಗದಷ್ಟು ಮಹಿಳೆಯರಿಗೆ ಮೀಸಲಾತಿ ನೀಡಿರುವುದು ಸ್ವಾಗತಾರ್ಹವಾಗಿದೆ. ಇದನ್ನು ಪಕ್ಷಾತೀತವಾಗಿ ಮಹಿಳೆಯರು ಬೆಂಬಲಿಸಬೇಕು ಎಂದು ಹೇಳಿದರು.

ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಇಂದಿರ ಬಿ.ಕೆ., ಮಹಿಳಾ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಗುಣವತಿ ಕೊಲ್ಲಂತ್ತಡ್ಕ, ಮಂಡಲ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲೋಲಾಕ್ಷಿ, ಕಾರ್ಯದರ್ಶಿ ಶಶಿಕಲಾ ಎ. ನೀರಬಿದರೆ, ನಿವೃತ್ತ ಪಾಂಶುಪಾಲೆ ಯಶೋಧ ರಾಮಚಂದ್ರ ಮೊದಲಾದವರು ಇದ್ದರು.

ನಾಳೆ ವಾರ್ಷಿಕೋತ್ಸವ

ಬಂಟ್ವಾಳ: ದ.ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಂಘಟನೆ ಬಂಟ್ವಾಳ ತಾಲೂಕಿನ ಪಾಣೆಮಂಗಳೂರು ಸಮೀಪದ ನಾಯಿಲ ಓಂ ಶ್ರೀ ಗೆಳೆಯರ ಬಳಗದ 20 ನೇ ವರ್ಷದ ವಾಷಿಕೋತ್ಸವವು ಏ.18ಕ್ಕೆ ಸಂಘದ ವಠಾರದಲ್ಲಿ ನಡೆಯಲಿದೆ ಎಂದು ಸಂಘದ ಮಾಜಿ ಅಧ್ಯಕ್ಷ ಕಿರಣ್ ಅಟ್ಲೂರು ತಿಳಿಸಿದ್ದಾರೆ.
ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಿಗ್ಗೆಯಿಂದ ವಿವಿಧ ಕಾರ್ಯಕ್ರಮ ನಡೆಯಲಿದ್ದು, ಸಂಜೆ ಸ್ಥಳೀಯರಿಂದ ಸಾಂಸ್ಕೃತಿಕ ಕಾರ್ಯಕ್ರಮ, ನಂತರ ರೊ. ಸತೀಶ್ ಕುಮಾರ್ ಕೆ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ಜರಗಲಿದೆ. ಶಾಸಕ ರಾಜೇಶ್ ನ್ಾಯಕ್, ಮಾಜಿ ಸಚಿವ ಬಿ.ರಮಾನಾಥ ರೈ ಸಹಿತ ಹಲವಾರು ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.
ಈ ಸಂದರ್ಭ ಅನಿಲ್ ದಾಸ್ (ಸೇವಾ ಕ್ಷೇತ್ರ), ಮಹಮ್ಮದ್ ಯಾಸೀರ್(ಕಲಾಕ್ಷೇತ್ರ), ಜನಾರ್ದನ ಪೂಜಾರಿ (ಸಾಮಾಜಿಕ ಕ್ಷೇತ್ರ), ಪ್ರಶಾಂತ್ ಪುಂಜಾಲಕಟ್ಟೆ(ಮಾಧ್ಯಮ ಕ್ಷೇತ್ರ) ಅವರನ್ನು ಸನ್ಮಾನಿಸಲಾಗುವುದು ಅದೇರೀತಿ ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಸ್ಥಳೀಯವಾಗಿ ಗುರುತಿಸಿರುವ ಉತ್ತಮ ಸಂಘಟನೆಯಾದ ಶ್ರೀ ವೀರ ಮಾರುತಿ ರಾಮಾಂಜನೇಯ ವ್ಯಾಯಾಮ ಶಾಲೆಗೆ ಸಂಘ-ಸಂಸ್ಥೆಯನೆಲೆಯಲ್ಲಿ ಗೌರವಿಸಲಾಗುವುದು ಹಾಗೂ ಅಶಕ್ತರಿಗೆ ಸಹಾಯಧನ ನೀಡಲಾಗುವುದು. ಬಳಿಕ ಓಂಶ್ರೀ ಮ್ಯೂಸಿಕಲ್ ನೈಟ್ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಓಂಶ್ರೀ ಗೆಳೆಯರ ಬಳಗದ ಗೌರವಾಧ್ಯಕ್ಷ ನಾಗೇಶ್ ಕುಲಾಲ್, ಅಧ್ಯಕ್ಷ ದಿನೇಶ್ ನೆಲ್ಲಿಗುಡ್ಡೆ, ಮಹಿಳಾ ಮಂಡಲದ ಅಧ್ಯಕ್ಷೆ ನಳಿನಿ ಶುಭಕರ ಅವರು ಉಪಸ್ಥಿತರಿದ್ದರು.

ಶ್ರೀ ಮಹಾಲಿಂಗೇಶ್ವರ ಕ್ಷೇತ್ರದ ಜಾತ್ರಾ ಸಂಭ್ರಮ । 1 ಲಕ್ಷಕ್ಕೂ ಅಧಿಕ ಮಂದಿ ಭಕ್ತಾದಿಗಳು ಭಾಗಿ ನಿರೀಕ್ಷೆ

ಇಂದು ಶ್ರೀದೇವರ ಬ್ರಹ್ಮರಥೋತ್ಸವ, ಪುತ್ತೂರು ಬೆಡಿ

ಪುತ್ತೂರು: ಸೀಮೆಯ ಒಡೆಯ ಇತಿಹಾಸ ಪ್ರಸಿದ್ಧ ಮಹತೋಭಾರ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಬ್ರಹ್ಮರಥೋತ್ಸವ, ಪುತ್ತೂರು ಬೆಡಿಯು ಏ.17ರಂದು ಶುಕ್ರವಾರ ರಾತ್ರಿ ಲಕ್ಷಾಂತರ ಭಕ್ತ ಸಮೂಹದ ಸಾಕ್ಷಿಯಾಗಿ ನಡೆಯಲಿದೆ.

ಶ್ರೀ ಮಹಾಲಿಂಗೇಶ್ವರ ದೇವರ ನಡೆ ದೇಗುಲವಾಗಿರುವ ಪತಾಕೆ, ಅಷ್ಟ ದಿಕ್ಪಾಲಕರು, ಶಿಖರ ಕಲಶ, ಶ್ವೇತ ಚಕ್ರ ಮತ್ತು ಸತ್ತಿಗೆ ಅಳವಡಿಸಿದ 70 ಅಡಿ ಎತ್ತರದ ಬ್ರಹ್ಮರಥದಲ್ಲಿ ಶ್ರೀ ದೇವರು ವಿರಾಜಮಾನರಾಗಲಿದ್ದಾರೆ. ರಾತ್ರಿ 9ರ ಅನಂತರ ದೇವಾಲಯದ ಮುಂಭಾಗದ ರಥ ಬೀದಿಯಲ್ಲಿ ಸುಮಾರು 400 ಮೀ. ಉದ್ದಕ್ಕೆ ಬ್ರಹ್ಮರಥ ತೆರಳಿ ಮತ್ತೆ ದೇವಾಲಯದ ಭಾಗಕ್ಕೆ ಹಿಂದಿರುಗಿ ಬರುತ್ತದೆ.

ಅಪೂರ್ವ ಕ್ಷಣ

ಬ್ರಹ್ಮವಾಹಕರು ಶ್ರೀ ಮಹಾಲಿಂಗೇಶ್ವರ ದೇವರ ಉತ್ಸವ ಮೂರ್ತಿಯನ್ನು ತಲೆಯ ಮೇಲೆ ಹೊತ್ತು ಬ್ರಹ್ಮರಥವನ್ನು ಏರುವ ಸಮಯ ಪುತ್ತೂರು ಸೀಮೆಯ ಜನರಿಗೆ ಅಪೂರ್ವ ಧಾರ್ಮಿಕ ಕ್ಷಣ. ಚೆಂಡೆ ಮೇಳ, ಮಂಗಳವಾದ್ಯ, ಬ್ಯಾಂಡ್ ವಾಲಗ, ಶಂಖ



ಜಾಗಟೆ, ಮಂಗಳಕರ ನಿನಾದದ ಹಿನ್ನೆಲೆಯಲ್ಲಿ ಶ್ರೀ ದೇವರು ಬ್ರಹ್ಮರಥಾರೂಢರಾಗುತ್ತಾರೆ. ಈ ಸಂದರ್ಭ ದೇವಾಲಯದ ಮುಂಭಾಗದ ಗದ್ದೆಯಲ್ಲಿ ಸೇರಿದ ಸಹಸ್ರಾರು ಭಕ್ತರು ಏಕಕಂಠದಲ್ಲಿ ಶ್ರೀ ಮಹಾಲಿಂಗೇಶ್ವರ ದೇವರಿಗೆ ಜಯಘೋಷ ಹಾಕುತ್ತಾರೆ.

ದೇವರ ಬಲಿ ಉತ್ಸವ

ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಜಾತ್ರೆಯ ಹಿನ್ನೆಲೆಯಲ್ಲಿ ಬುಧವಾರ ರಾತ್ರಿ ಸೌರಯುಗಾದಿ ವಿಷುವಿನ ಅಂಗವಾಗಿ ಹೊರಾಂಗಣದಲ್ಲಿ ಶ್ರೀ ದೇವರ ಬಲಿ ಉತ್ಸವ ನಡೆದ ಬಳಿಕ ಪೂರ್ವಶಿಷ್ಟ ಸಂಪ್ರದಾಯದಂತೆ ಶ್ರೀ ದೇವರ ಚಂದ್ರಮಂಡಲ ಉತ್ಸವ ನಡೆದು ಅನಂತರ ಶ್ರೀ ದೇವರ ಪೇಟೆ ಸವಾರಿ ಮುಂದುವರೆಯಿತು.

ಜನಸಾಗರ ನಿರೀಕ್ಷೆ

ಶ್ರೀ ಮಹಾಲಿಂಗೇಶ್ವರ ದೇವಾಲಯದ ಎದುರು ಗದ್ದೆಯಲ್ಲಿ ರಥೋತ್ಸವ ಮತ್ತು ಸುಡುಮದ್ದು ವೀಕ್ಷಣೆಗಾಗಿ 1 ಲಕ್ಷಕ್ಕೂ ಮಿಕ್ಕಿ ಜನಸಾಗರ ಸೇರುತ್ತದೆ. ಸೀಮಾತೀತವಾಗಿ ದೇಶದಾದ್ಯಂತ ಇರುವ ಭಕ್ತರು ರಥೋತ್ಸವವನ್ನು ಕಣ್ತುಂಬಿಕೊಳ್ಳುವುದು ವಿಶೇಷ. ರಥಬೀದಿಯಲ್ಲಿ ಬ್ರಹ್ಮರಥದ ಇಕ್ಕೆಡೆಗಳಲ್ಲಿ ಭಕ್ತರು ನಿಂತು ಬ್ರಹ್ಮರಥೋತ್ಸವ ವೀಕ್ಷಿಸಿದರೆ ರಥದ ಮುಂದೆ ಕಾಲಿಗೆ ಚಪ್ಪಲಿ ಧರಿಸದೆ, ಸಾಂಪ್ರದಾಯಿಕ ಧಿರಿಸಿನಲ್ಲಿ ಬ್ರಹ್ಮರಥವನ್ನು ಎಳೆಯುವ ಮತ್ತು ಬ್ರಹ್ಮರಥೋತ್ಸವವನ್ನು ಹತ್ತಿರದಿಂದ ನೋಡುವ ಆಸಕ್ತರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ.

ಜಾತ್ರೆಯಲ್ಲಿ ಇಂದು

ಬೆಳಗ್ಗೆ ಉತ್ಸವ, ವಸಂತಕಟ್ಟೆ ಪೂಜೆ, ದರ್ಶನ ಬಲಿ, ರಾತ್ರಿ ಉತ್ಸವ, ಸಿಡಿಮದ್ದು ಪ್ರದರ್ಶನ, ಬ್ರಹ್ಮರಥೋತ್ಸವ, ಬಂಗಾರ್‌ಕಾಯರ್ ಕಟ್ಟೆ ಸವಾರಿ, ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಬೀಳ್ಕೊಡುಗೆ, ಶ್ರೀ ಭೂತಬಲಿ, ಶಯನ ನಡೆಯಲಿದೆ.

ಬೆಳಗ್ಗೆ ಶ್ರೀ ದೇವಾಲಯದಲ್ಲಿ ದೇವರ ಉತ್ಸವ ಬಲಿ ಮತ್ತು ದರ್ಶನ ಬಲಿ ನಡೆಯುತ್ತದೆ. ಸಂಜೆ 5 ಗಂಟೆಯ ಬಳಿಕ ದೇವಾಲಯದ ಒಳಾಂಗಣ, ಹೊರಾಂಗಣ ಮತ್ತು ಜಾತ್ರ ಗದ್ದೆಯಲ್ಲಿ ಜನರು ಸೇರಲಾರಂಭಿಸುತ್ತಾರೆ. ಇಲ್ಲಿನ ಭಕ್ತರ ಸಂದಣಿ ತೆರವಾಗುವುದೇ ಶ್ರೀ ದೇವರು ಬ್ರಹ್ಮರಥದಿಂದ ಇಳಿದು ಪೇಟೆ ಸವಾರಿಗೆ ತೆರಳಿದ ಬಳಿಕ.

ವಾಹನ ನಿಲುಗಡೆಗೆ ವ್ಯವಸ್ಥೆ

ಪುತ್ತೂರು ನಗರದ ತೆಂಕಿಲ, ಕೊಂಬೆಟ್ಟು, ಕಿಲ್ಲೆ ಮೈದಾನ, ಎಪಿಎಂಸಿ ರಸ್ತೆ ಬಳಿಯ ಗದ್ದೆಯಲ್ಲಿ ವಾಹನ ನಿಲುಗಡೆ ವ್ಯವಸ್ಥೆ ಮಾಡಲಾಗುತ್ತದೆ. ಸುರಕ್ಷಾ ಕ್ರಮವಾಗಿ ಗದ್ದೆಯಲ್ಲಿ ಅಗ್ನಿಶಾಮಕದಳದ ವಾಹನ, ಆರೋಗ್ಯ ಇಲಾಖೆಯ ಆ್ಯಂಬುಲೆನ್ಸ್ ಮತ್ತು ವೈದ್ಯರು ಇರುತ್ತಾರೆ.

ಬಸ್ಸಿನ ವ್ಯವಸ್ಥೆ

ಪ್ರತಿ ವರ್ಷದಂತೆ ಈ ಬಾರಿಯೂ ಬ್ರಹ್ಮರಥೋತ್ಸವಕ್ಕೆ ಆಗಮಿಸುವ ಭಕ್ತಾದಿಗಳಿಗೆ ಕೆಎಸ್‌ಆರ್‌ಟಿಸಿ ವತಿಯಿಂದ ತಾಲೂಕಿನ ವಿವಿಧ ಕಡೆಗಳಿಗೆ ಬಸ್ಸಿನ ವ್ಯವಸ್ಥೆ ಮಾಡಲಾಗುತ್ತದೆ. ಸಂಜೆ ಕೊನೆಯ ಟ್ರಿಪ್ ತೆರಳಿದ ಬಸ್ಸುಗಳು ರಾತ್ರಿ ಮರಳಿ ಪುತ್ತೂರಿಗೆ ಬರಲಿವೆ. ರಥೋತ್ಸವ ಮುಗಿದ ಕೂಡಲೇ ಭಕ್ತರನ್ನು ಕರೆದುಕೊಂಡು ಬಸ್ಸುಗಳು ತೆರಳಲಿವೆ.

ದೇವಳದ ಹೊರಾಂಗಣದಲ್ಲಿ ದೇವ-ದೈವ ಭೇಟಿ । ಪುನೀತರಾದ ಭಕ್ತರು

ಉಳ್ಳಾಲ್ತಿ ಭಂಡಾರ ಆಗಮನ, ಮಲ್ಲಿಗೆ ಸಮರ್ಪಣೆ

ಪುತ್ತೂರು: ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದ ಜಾತ್ರೆ ಪ್ರಯುಕ್ತ ಗುರುವಾರ ದೇವಾಲಯದ ಒಳಾಂಗಣದಲ್ಲಿ ದೇವರ ದೀಪ ಬಲಿ ಉತ್ಸವ, ರಾತ್ರಿ ಉತ್ಸವ ಬಲಿ, ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಭಂಡಾರ ಶ್ರೀ ದೇವಳಕ್ಕೆ ಆಗಮಿಸುವ ಪೂರ್ವ ಶಿಷ್ಟ ಸಂಪ್ರದಾಯ ನಡೆಯಿತು.

ರಾತ್ರಿ ದೇವಳದ ಹೊರಾಂಗಣದಲ್ಲಿ ದೇವ-ದೈವ ಭೇಟಿ ನಡೆದು ಸಾಂಪ್ರದಾಯಿಕ ನುಡಿಕಟ್ಟು ನಡೆದ ಬಳಿಕ ದೈವಗಳ ಭಂಡಾರದ ಜತೆಗೆ ಶ್ರೀ ದೇವರ ಉತ್ಸವ, ಬಳಿಕ ಪಲ್ಲಕ್ಕಿ ಉತ್ಸವ, ಸಣ್ಣ ರಥೋತ್ಸವ ಮತ್ತು ಕೆರೆ ಉತ್ಸವ, ತೆಪ್ಪೋತ್ಸವವು ಸಾವಿರಾರು ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ನಡೆಯಿತು.

ಮಲ್ಲಿಗೆ ಹೂವು ಸಮರ್ಪಣೆ

ಶ್ರೀ ಮಹಾಲಿಂಗೇಶ್ವರ ದೇವಾಲಯದ ಸಣ್ಣ ರಥೋತ್ಸವದ ದಿನವಾದ ಏ. 16 ಗುರುವಾರ ದೇವಾಲಯಕ್ಕೆ ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ಭಂಡಾರ ವಿವಿಧ ಬಿರುದಾವಳಿಗಳೊಂದಿಗೆ ಆಗಮಿಸುವ ಹಿನ್ನೆಲೆಯಲ್ಲಿ ಸೀಮೆಯ ಭಕ್ತರು ಮಲ್ಲಿಗೆ ಹೂವು ಸಮರ್ಪಣೆ ಸೇವೆ ಮಾಡಿದರು. ಪುತ್ತೂರು ನಗರದೆಲ್ಲೆಡೆ ಮಲ್ಲಿಗೆಯ ಕಂಪು ಸೂಸಿತು.

ಮಲ್ಲಿಗೆ ಚೆಂಡುಗಳನ್ನು ದೈವಗಳಿಗೆ ಬಲ್ನಾಡಿನಲ್ಲಿ, ಪುತ್ತೂರು ದೇವಾಲಯದಲ್ಲಿ ಮತ್ತು ಪುತ್ತೂರು ಹಳೆ ಪೊಲೀಸ್ ಠಾಣೆಯ ಬಳಿ ಇರುವ ಅಂಕದ ಕಟ್ಟೆಯ ಬಳಿ ಭಕ್ತರು ಸಮರ್ಪಿಸಿದರು. ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಮಲ್ಲಿಗೆ ಹೂವಿನ ವ್ಯಾಪಾರಸ್ಥರು ಪುತ್ತೂರಿಗೆ ಆಗಮಿಸಿದ್ದರು.



ತುಲಾಭಾರ ಸೇವೆ

ಪೂರ್ವಾಹ್ನ ದೇವಾಲಯದಲ್ಲಿ ತುಲಾಭಾರ ಸೇವೆ ನಡೆಯಿತು. ವರ್ಷದಲ್ಲಿ ಏ.18ಕ್ಕೆ 1 ದಿನ ಮಾತ್ರ ನಡೆಯುತ್ತಿದ್ದ ತುಲಾಭಾರ ಸೇವೆ ಕೆಲವು ವರ್ಷಗಳಿಂದ ಭಕ್ತರ ಅನುಕೂಲಕ್ಕಾಗಿ ಏ.16ಕ್ಕೂ ನಡೆಸಲಾಗುತ್ತಿದೆ. ಉದ್ಯಮಿ ದಿವಾಕರ ದಾಸ್ ಮಾಲಕತ್ವದ ಎಸ್.ಎಲ್.ವಿ. ಬುಕ್ ಹೌಸ್ ಸೇವಾಕರ್ತವಾಗಿ ಗುರುವಾರ ದೇವಳದಲ್ಲಿ ವಿಶೇಷ ಹೂವಿನ ಅಲಂಕಾರ ಗಮನ ಸೆಳೆಯಿತು.

ದೀಪ ಬಲಿ ಉತ್ಸವ

ಪ್ರತಿವರ್ಷ ಏ.16ರಂದು ಸೂರ್ಯೋದಯಕ್ಕೆ ಮೊದಲು ದೀಪ ಬಲಿ ಉತ್ಸವ ನಡೆಯಿತು. ಬ್ರಹ್ಮವಾಹಕರು, ತಂತ್ರಿಗಳು ಸೇರಿದಂತೆ ಉತ್ಸವಕ್ಕೆ ಸಂಬಂಧಪಟ್ಟ ಜವಾಬ್ದಾರಿಯವರು ಬೆಳ್ಳಿ ಮೂಡುವ ಮೊದಲೇ ಸ್ನಾನ ಮಾಡಿ ಮಡಿಯುಟ್ಟು ದೀಪ ಬಲಿ ಉತ್ಸವಕ್ಕೆ ಸಿದ್ಧರಾದ ಬಳಿಕ ದೀಪ ಹಚ್ಚಿ ದೇವರ ಬಲಿ ನಡೆಯಿತು. ವರ್ಷದಲ್ಲಿ ಒಂದು ದಿನ ಮಾತ್ರ ಅಂದರೆ ಜಾತ್ರೆಯ ಸಂದರ್ಭದ ಏ.16ರಂದು ಮಾತ್ರ ಶ್ರೀ ದೇವರ ದೀಪ ಬಲಿ ಉತ್ಸವ ನಡೆಯುತ್ತದೆ. ದೀಪ ಬಲಿ ಉತ್ಸವಕ್ಕೂ ಧಾರ್ಮಿಕ ಮಹತ್ವವಿದೆ. ದೇವಾಲಯದ ಒಳಾಂಗಣದಲ್ಲಿ ಗುಡಿಗಳ, ಮಹಾಬಲಿ ಪೀಠದ, ಧ್ವಜಸ್ಥಂಭದ ಬಳಿ ನೆಲದಲ್ಲಿ ಎಳ್ಳೆಣ್ಣೆ ಹಾಕಿ ಉರಿಸುವ ಹಣತೆಗಳನ್ನು ಬೆಳಗಿಸಿ ಹಣತೆಯ ಬೆಳಕಿನಲ್ಲಿ ನಡೆಯುವ ಉತ್ಸವ ಈ ದೀಪ ಬಲಿ. ಉತ್ಸವದ ಎಲ್ಲಾ ಸಂಪ್ರದಾಯ ದೀಪ ಬಲಿ ಉತ್ಸವದಲ್ಲಿ ಪಾಲಿಸಲಾಗುತ್ತದೆ.

ಕರುಂಬಿತ್ತಿಲು ಮನೆಯಂಗಳದಲ್ಲಿ 5 ದಿನಗಳ ಸಂಗೀತ ಶಿಬಿರಕ್ಕೆ ಚಾಲನೆ

ನಿಡ್ಲೆಯ ಪರಿಸರದಲ್ಲಿ ಸಂಗೀತದ 'ರಸದೌತಣ'

ಬೆಳ್ತಂಗಡಿ: ಧರ್ಮಸ್ಥಳ ಸಮೀಪದ ನಿಡ್ಲೆ ಕರುಂಬಿತ್ತಿಲು ಮನೆಯಂಗಳದಲ್ಲಿ ಸಂಗೀತಾಭ್ಯಾಸಿಗಳಿಗೆ ಪ್ರತಿವರ್ಷ ಬೇಸಿಗೆಯಲ್ಲಿ ನಡೆಸಿಕೊಂಡು ಬರುತ್ತಿರುವ ಕರುಂಬಿತ್ತಿಲು ಸಂಗೀತ ಶಿಬಿರ ಏ.15ರಂದು ಶ್ರೇಷ್ಠ ಸಂಗೀತಗಾರ ಎಸ್ ಆರ್ ಮಾರುತಿ ಪ್ರಸಾದ್ ಉದ್ಘಾಟಿಸಿ 5 ದಿನಗಳ ಸಂಗೀತೋತ್ಸವಕ್ಕೆ ಚಾಲನೆ ನೀಡಿದರು.

ಈಸಂದರ್ಭ ಶಿಬಿರದಸಂಯೋಜಕ ವಿಠ್ಠಲ ರಾಮಮೂರ್ತಿ, ರಾಜರಾಜೇಶ್ವರಿ ಭಟ್, ಬೆಂಗಳೂರಿನ ಕೃಷ್ಣ ಸಿಂಗ್, ಧರ್ಮಸ್ಥಳದ ಕೆ.ಸೀತಾರಾಮ ತೋಳ್ಪಡಿತ್ತಾಯ, ಸಂಗೀತಗಾರ ಪ್ರಾದೇಶ ಆಚಾರ್, ಮಂಗಳೂರಿನ ಮಾಣಿಕೃಷ್ಣಸ್ವಾಮಿ ಅಕಾಡೆಮಿಯ ಪಿ.ನಿತ್ಯಾನಂದ ರಾವ್ ಮೊದಲಾದವರು ಉಪಸ್ಥಿತರಿದ್ದರು. ವಿಠ್ಠಲ ರಾಮಮೂರ್ತಿಯವರು ಸ್ವಾಗತಿಸಿ, ವಂದಿಸಿದರು. ಮೊದಲ ದಿನದ ಕಾರ್ಯಕ್ರಮವಾಗಿ ಎಸ್. ಆರ್. ಮಾರುತಿ ಪ್ರಸಾದ್ ಅವರು ಸಂಗೀತ ಕಚೇರಿ ನಡೆಸಿಕೊಟ್ಟರು ಈ ಹಿಂದಿನ ವರ್ಷಗಳಲ್ಲಿ ಸಂಗೀತ ಶಿಬಿರದಲ್ಲಿ ವಿಶ್ವ ವಿಖ್ಯಾತ ಕಲಾವಿದರಾದ ಲಾಲ್ಗುಡಿ ಜಿ.ಜಯರಾಮನ್, ವಿದ್ವಾನ್ ಬಾಲ ಮುರಳಿಕೃಷ್ಣ ವಿದ್ವಾನ್ ಉಮಯಾಳಪುರಂ ಶಿವರಾಮನ್, ವಿದ್ವಾನ್ ಟಿ.ವಿ.ಗೋಪಾಲಕೃಷ್ಣ ವಿದ್ವಾನ್ ಎಂ. ಚಂದ್ರಶೇಖರ್, ವಿದ್ವಾನ್ ವಿ.ವಿ. ಸುಬ್ರಹ್ಮಣ್ಯಂ, ವಿದ್ವಾನ್ ಟಿ.ಎಂ. ಕೃಷ್ಣ ವಿದುಷಿ ಬಾಂಬೆ ಜಯಶ್ರೀ, ವಿದ್ವಾನ್ ನೈವೇಲಿ ಸಂತಾನಗೋಪಾಲನ್, ವಿದುಷಿ ಸೌಮ್ಯ, ವಿದ್ವಾನ್ ವಿಜಯಶಿವ, ಮುಂತಾದವರು ಸಂಗೀತ ಕಾರ್ಯಕ್ರಮ ನೀಡಿ ಸಂಗೀತಾಭ್ಯಾಸಿಗಳಿಗೆ ತಮ್ಮ ಕಲಾ ಶ್ರೀಮಂತಿಕೆಯನ್ನು ಧಾರೆಯೆರೆದಿದ್ದಾರೆ.

ಈ ವರ್ಷದ ಕರುಂಬಿತ್ತಿಲ್ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಪದ್ಮಶ್ರೀ ಎ.ಕನ್ಯಾಕುಮಾರಿ, ವಿದ್ವಾನ್ ಅಭಿಷೇಕ್ ರಘುರಾಮ್, ವಿದ್ವಾನ್ ಸುರೇಶ್ ವೈದ್ಯನಾಥನ್, ವಿದ್ವಾನ್ ಅರ್ಜುನ್ ಕುಮಾರ್, ವಿದ್ವಾನ್ ಬಿ.ಎಸ್. ಪುರುಷೋತ್ತಮ್, ವಿದ್ವಾನ್ ಎಸ್.ಆರ್. ಮಾರುತಿ ಪ್ರಸಾದ್, ವಿದ್ವಾನ್ ಬಾಲು ಮಾಸ್ತಿ ಹಾಗೂ ಇನ್ನಿತರ ಕಲಾವಿದರುಗಳು ಭಾಗವಹಿಸಿ ಸಂಗೀತ ಮಾಧುರ್ಯವನ್ನು ಅಭ್ಯಾಸಿಗಳಿಗೆ ಉಣಬಡಿಸಲಿದ್ದಾರೆ.
ಈ ಸಲದ ಕರುಂಬಿತ್ತಿಲ್ ಶಿಬಿರದಲ್ಲಿ ವಿಶೇಷ ಕಚೇರಿಗಳು, ಶ್ರೇಷ್ಠ ಕಲಾವಿದರ ವಿಶೇಷ ಸಂದರ್ಶನಗಳು, ಪ್ರತಿ ಶಿಬಿರಾರ್ಥಿಗೂ ಮೃದಂಗ, ವಯೊಲಿನ್ ಜತೆ ಪ್ರದರ್ಶನ ನೀಡುವ ಅವಕಾಶ, ಸಂಗೀತ ಕ್ವಿಜ್, ಸಂಗೀತ ಪ್ರಾತ್ಯಕ್ಷಿಕೆ, ಯಕ್ಷಗಾನ ಹಾಗೂ ಇನ್ನಿತರ ಚಟುವಟಿಕೆಗಳ ಪ್ರಯೋಜನ ಪಡೆಯಲಿದ್ದಾರೆ.

ಏ.17ಕ್ಕೆ ಬಾಲು ಮಾಸ್ತಿ ಅವರ ವೀಣಾ ಕಛೇರಿ ಹಾಗೂ ವಿದುಷಿ ಶ್ರೇಯಾ ಕೊಳತ್ತಾಯ ಹಾಗೂ ವಿದ್ವಾನ್ ನಿರಂಜನ್ ದಿಂಡೋಡಿ ಅವರ ಸಂಗೀತ ಕಾರ್ಯಕ್ರಮ, ಏ.18ರಂದು ಬೆಳಗ್ಗೆ ವಿದ್ವಾನ್ ಬಿ.ಎಸ್.ಪುರುಷೋತ್ತಮ್ ಅವರ ಲಯ ಕಾರ್ಯಾಗಾರ ಮತ್ತು ಸಂಜೆ ಗುರು ವಿದುಷಿ ಸಂಗೀತ ಕಲಾನಿಧಿ ಎ. ಕನ್ಯಾಕುಮಾರಿ ಹಾಗೂ ವಿದ್ವಾನ್ ವಿಠಲ್ ರಂಗನ್ ಅವರ ದ್ವಂದ್ವ ವಯಲಿನ್ ವಾದನ ಕಾರ್ಯಕ್ರಮ ನಡೆಯಲಿದ್ದು ಏ.19ಕ್ಕೆ ವಿದ್ವಾನ್ ಅಭಿಷೇಕ್ ರಘುರಾಮ್ ನೇತೃತ್ವದಲ್ಲಿ ಶಿಬಿರಾರ್ಥಿಗಳ ಸಂಗೀತ ಕಾರ್ಯಕ್ರಮ ನಡೆಯಲಿದೆ.



ಅಕ್ಷಯ ಪದವಿ ಪೂರ್ವ ಕಾಲೇಜಿನಲ್ಲಿ ವಿಶೇಷ ತರಬೇತಿ ತರಗತಿಗಳ ಉದ್ಘಾಟನೆ



ಪುತ್ತೂರು: ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಮೌಲ್ಯಾಧಾರಿತ ಆಧುನಿಕ ವಿದ್ಯಾಭ್ಯಾಸವನ್ನು ನೀಡುವ ಯೋಜನೆಯೊಂದಿಗೆ ಆರಂಭಗೊಂಡ ಅಕ್ಷಯ ಪದವಿಪೂರ್ವ ಕಾಲೇಜಿನಲ್ಲಿ ಬುಧವಾರ ಉಚಿತ ಬ್ರಿಡ್ಜ್ ಕೋರ್ಸ್ ಮತ್ತು ಸ್ಪೋಕನ್ ಇಂಗ್ಲೀಷ್ ತರಗತಿಗಳ ಉದ್ಘಾಟನೆ ವಿದ್ಯುಕ್ತವಾಗಿ ನೆರವೇರಿತು.

ಉಚಿತ ತರಬೇತಿ

ಕಾರ್ಯಕ್ರಮವನ್ನು ಉದ್ಘಾಟಿಸಿದ ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಜಯಂತ್ ನಡುಬೈಲು, ಅಕ್ಷಯ ಪದವಿ ಪೂರ್ವ ಕಾಲೇಜ್ ವಿದ್ಯಾರ್ಥಿಗಳಲ್ಲಿರುವ ಕ್ರಿಯಾಶೀಲತೆಯನ್ನು ಹೆಚ್ಚಿಸಿ ಅವರ ಭವಿಷ್ಯಕ್ಕೆ ಭದ್ರಬುನಾದಿಯನ್ನು ಒದಗಿಸುವ ನಿಟ್ಟಿನಲ್ಲಿ ಉಚಿತ ತರಬೇತಿಗಳನ್ನು ನೀಡುವ ಮೂಲಕ ಶೈಕ್ಷಣಿಕವಾಗಿ ಹೊಸ ಸಾಧನೆಯ ಹೆಜ್ಜೆ ಗುರುತುಗಳನ್ನು ಮೂಡಿಸಿದೆ ಎಂದರು.

ಆತ್ಮವಿಶ್ವಾಸ ವೃದ್ಧಿ

ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಅಭಿಲಾಷ್ ಕ್ಷತ್ರಿಯ ಮಾತನಾಡಿ, ದೊಡ್ಡ ನಗರಗಳಲ್ಲಿ ಮಾತ್ರ ಸಿಗುವ ಉಚಿತ ತರಬೇತಿ ಸೌಲಭ್ಯಗಳನ್ನು ನಾವು ನೀಡುತ್ತಿದ್ದೇವೆ. ಇದರಿಂದ ವಿದ್ಯಾರ್ಥಿಗಳ ಆತ್ಮವಿಶ್ವಾಸ ಹೆಚ್ಚಾಗಿ ಅವರ ಮುಂದಿನ ಹಂತದ ವಿದ್ಯಾಭ್ಯಾಸ ಸುಲಭವಾಗುತ್ತದೆ ಎಂದರು.

ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಗಂಗಾರತ್ನ ಮಾತನಾಡಿ, ವಿದ್ಯಾರ್ಥಿಗಳು ತಮ್ಮೆದುರು ತೆರೆದುಕೊಳ್ಳುವ ಅತ್ಯುತ್ತಮ ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕು ಎಂದರು. ಸಂಸ್ಥೆಯ ಆಡಳಿತಾಧಿಕಾರಿ ಅರ್ಪಿತ್ ಟಿ.ಎ. ಶುಭ ಹಾರೈಸಿದರು. ಉಪನ್ಯಾಸಕರು ಉಪಸ್ಥಿತರಿದ್ದರು.

ಏ.18-19ರಂದು ಬಜರಂಗದಳ ಪ್ರಾಂತ ಸಂಯೋಜಕ ಸಮಾವೇಶ

ಮಂಗಳೂರು: ವಿಶ್ವ ಹಿಂದೂ ಪರಿಷತ್ ಕರ್ನಾಟಕ ದಕ್ಷಿಣ ಇದರ ವತಿಯಿಂದ ಏ.18, 19ಕ್ಕೆ ಮಂಗಳೂರಿನ ಮಣ್ಣಗುಡ್ಡೆಯ ಪ್ರತಾಪನಗರದಲ್ಲಿರುವ ಸಂಘನಿಕೇತನದಲ್ಲಿ ಬಜರಂಗದಳ ಪ್ರಾಂತ ಸಂಯೋಜಕ ಸಮಾವೇಶ ಆಯೋಜಿಸಲಾಗಿದೆ ಎಂದು ಬಜರಂಗದಳ ಪ್ರಾಂತ ಸಂಯೋಜಕ್ ಪ್ರಭಂಜನ್ ಸೂರ್ಯ ತಿಳಿಸಿದ್ದಾರೆ.

ವಿಶ್ವಹಿಂದೂ ಪರಿಷತ್ ಕಾರ್ಯಾಲಯದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.18ಕ್ಕೆ ಬೆಳಗ್ಗೆ 9 ಗಂಟೆಗೆ ಸಮಾವೇಶಕ್ಕೆ ಚಾಲನೆ ದೊರೆಯಲಿದೆ. ವಿಹಿಂಪ ಕೇಂದ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ, ಜಂಟಿ ಪ್ರಧಾನ ಕಾರ್ಯದರ್ಶಿ ಸ್ಥಾಣು ಮಾಲಯನ್, ಬಜರಂಗದಳ ರಾಷ್ಟ್ರೀಯ ಸಂಯೋಜಕ್ ಕಿಶನ್ ಪ್ರಜಾಪತ್, ಕ್ಷೇತ್ರೀಯ ಸಂಯೋಜಕ್ ಕುಮಾರಸ್ವಾಮಿ, ಕೇಂದ್ರೀಯ ಉಪಾಧ್ಯಕ್ಷ ಮೋಹನ್ ಮಂಗ್ನಾನೀ, ಪ್ರಾಂತ ಅಧ್ಯಕ್ಷ ದೀಪಕ್ ರಾಜಗೋಪಾಲ್, ಪ್ರಾಂತ ಕಾರ್ಯದರ್ಶಿ ಸುರೇಶ್ ಬಿ ಈ., ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ಮುಂತಾದವರು ಮಾರ್ಗದರ್ಶನ ನೀಡಲಿದ್ದಾರೆ ಎಂದು ಅವರು ತಿಳಿಸಿದರು.

ವಿಶ್ವ ಹಿಂದೂ ಪರಿಷತ್ ಯುವ ವಿಭಾಗವಾದ ಬಜರಂಗದಳ ಕಳೆದ ನಾಲ್ಕು ದಶಕಗಳಿಂದ ದೇಶಾದ್ಯಂತ ಹಿಂದೂ ಯುವಕರಲ್ಲಿ ರಾಷ್ಟ್ರಭಕ್ತಿಯನ್ನು ಮತ್ತು ಸೇವಾಮನೋಭಾವನೆಯನ್ನು ಮೂಡಿಸುವುದರ ಮೂಲಕ ಜಾಗೂ ನಿರಂತರವಾಗಿ ಹಿಂದೂ ಧರ್ಮದ ರಕ್ಷಣೆಯ ಜೊತೆಗೆ ಸೇವಾ ಕಾರ್ಯವನ್ನು ಮಾಡುತ್ತಾ ಬಂದಿದೆ. ಸಮಾವೇಶದ ಮೂಲಕ ಸಂಘಟನೆಯನ್ನು ಮತ್ತಷ್ಟು ಬಲಗೊಳಿಸುವ ಉದ್ದೇಶ ಹೊಂದಲಾಗಿದೆ ಎಂದು ಪ್ರಭಂಜನ್ ಸೂರ್ಯ ತಿಳಿಸಿದರು.

ಐದು ವಿಷಯಗಳ ಚರ್ಚೆ

ಸಮಾವೇಶದಲ್ಲಿ ಪ್ರಮುಖ ಐದು ವಿಷಯಗಳ ಕುರಿತಂತೆ ಸಮಗ್ರ ಚರ್ಚೆ ನಡೆಯಲಿದೆ. ರಾಜ್ಯವ್ಯಾಪಿ ಬಜರಂಗದಳಕ್ಕೆ ಹೊಸ ಕಾರ್ಯಕರ್ತರ ಜೋಡಣೆ ಮತ್ತು ಸಂಘಟನಾ ವಿಸ್ತಾರ, ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮಗಳ ಮೂಲಕ ಡ್ರಗ್ಸ್ ಮುಕ್ತ ಕರ್ನಾಟಕ ಅಭಿಯಾನ, ಲವ್ ಜಿಹಾದ್ ಮುಕ್ತ ಹಿಂದೂ ಸಮಾಜ ನಿರ್ಮಾಣ, ಗೋ ರಕ್ಷಣೆ, ಹಿಂದೂ ಯುವಕರಿಗೆ ತರಬೇತಿ ನೀಡುವ ಮೂಲಕ ಸ್ವ ಉದ್ಯೋಗ ಕಲ್ಪಿಸುವುದು ಇತ್ಯಾದಿ ವಿಷಯಗಳ ಕುರಿತಂತೆ ಚರ್ಚೆಗಳು ನಡೆಯಲಿವೆ ಎಂದವರು ತಿಳಿಸಿದರು.
ಸುದ್ದಿಗೋಷ್ಠಿಯಲ್ಲಿ ಬಜರಂಗದಳ ಪ್ರಾಂತ ಸಂಯೋಜಕ ಭುಜಂಗ ಕುಲಾಲ್, ವಿಭಾಗ ಸಂಯೋಜಕ ಪುನೀತ್ ಅತ್ತಾವರ, ಜಿಲ್ಲಾ ಸಂಯೋಜಕ ನವೀನ್ ಮೂಡುಶೆಡ್ಡೆ, ಪ್ರೀತಂ ಕಾಟಿಪಳ್ಳ ಉಪಸ್ಥಿತರಿದ್ದರು.



ಕಟೀಲು ಏಳು ಮೇಳಗಳಲ್ಲಿ ಬುಧವಾರ ಬೆಳಿಗ್ಗೆ ಯುಗಾದಿ-ಬಿಸು ಆಚರಣೆ ಪ್ರಯುಕ್ತ ದೇವರಿಗೆ ವಿಶೇಷ ಪೂಜೆ, ಪಂಚಾಂಗ ಪಠಣ ನಡೆಯಿತು. ತಿಥಿವಾರ ನಕ್ಷತ್ರ ಕರಣ ಯೋಗ, ಸಂವತ್ಸರ ಫಲ ವಾಚಿಸಲಾಯಿತು. ಕಲಾವಿದರು, ಯಕ್ಷಗಾನ ಸೇವಾಕರ್ತರು ಇದ್ದರು.



ಮುಲ್ಕಿಯ ಹಳೆಯಂಗಡಿ ಸಮೀಪದ ಪಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಭರಣಿ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ದೇವಸ್ಥಾನದ ಅನುವಂಶಿಕ ಮೊಕ್ತೇಸರ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಆಡಳಿತ ಮೊಕ್ತೇಸರ ಚಂದ್ರಶೇಖರ್ ಬೆಲ್ಚಡ, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತಿತರರು ಇದ್ದರು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ವಾರ್ಷಿಕ ಕ್ರಿಯಾ ಯೋಜನಾ ಸಭೆಯಲ್ಲಿ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಮಾಹಿತಿ

2026-27ರ ಆರ್ಥಿಕ ವರ್ಷದಲ್ಲಿ ಒಟ್ಟು 8.50 ಕೋಟಿ ರೂ. ನಿವ್ವಳ ಲಾಭ ಸಾಧಿಸುವ ಗುರಿ

ಪುತ್ತೂರು: ಸಿಬ್ಬಂದಿಗಳ ನಗುಮೊಗದ ಪ್ರಾಮಾಣಿಕ ಮತ್ತು ದಕ್ಷ ಗ್ರಾಹಕ ಸೇವೆಯೇ ಸಂಸ್ಥೆಯ ಶಕ್ತಿ. ಪ್ರಾಮಾಣಿಕತೆ ಮತ್ತು ಪರಿಶ್ರಮಕ್ಕೆ ಯಾವುದೇ ತೇಮಾನವಿಲ್ಲ, ಸಂಸ್ಥೆಯ ಬ್ಯಾಲನ್ಸ್ ಶೀಟ್ ನೋಡಿ ಜನರು ಸಹಕಾರಿಯಲ್ಲಿ ವ್ಯವಹಾರ ಮಾಡುವಂತಾಗಬೇಕು. ಸಹಕಾರಿಯಿಂದ ಗುಣಮಟ್ಟದ ಸಾಲ ಹಂಚಿಕೆಯಾಗುವಂತೆ ಕ್ಷಮತೆ ಕಾಯ್ದುಕೊಳ್ಳಬೇಕು ಎಂದು ಶ್ರೀ ಸರಸ್ವತಿ ಸಹಕಾರಿಯ ಅಧ್ಯಕ್ಷ ಸಹಕಾರ ರತ್ನ ಎಸ್.ಆರ್. ಸತೀಶ್ಚಂದ್ರ ಹೇಳಿದರು.

ಮಂಗಳೂರಿನ ಬೊಕ್ಕಪಟ್ಣದಲ್ಲಿರುವ ಅಬ್ಬಕ್ಕ ರಾಣಿ ಕ್ರೂಸ್‌ನಲ್ಲಿ ನಡೆದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 2026-27ರ ಆರ್ಥಿಕ ವರ್ಷದ ವಾರ್ಷಿಕ ಕ್ರಿಯಾ ಯೋಜನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.



ಮೀನುಗಳಿಗೆ ಆಹಾರ ನೀಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು. ಬಳಿಕ ಮಾತನಾಡಿದ ಎಸ್.ಆರ್. ಸತೀಶ್ಚಂದ್ರ, ರಾಜ್ಯ ಮಟ್ಟದಲ್ಲಿ ಹೆಸರನ್ನು ಪಡೆದಿರುವ ಸರಸ್ವತಿ ಸಹಕಾರಿಯನ್ನು ಮುಂದಿನ ದಿನಗಳಲ್ಲಿ ರಾಷ್ಟ್ರ ಮಟ್ಟದಲ್ಲಿ ಗುರುತಿಸುವಂತಾಗಬೇಕು. ಇದಕ್ಕಾಗಿ ನಾವೆಲ್ಲರೂ ಕಾರ್ಯೋನ್ಮುಖರಾಗಬೇಕು. 2026-27 ಆರ್ಥಿಕ ವರ್ಷದಲ್ಲಿ ಸಹಕಾರಿಯು ರೂ.526ಕೋಟಿ ಠೇವಣಿ, ರೂ.475 ಕೋಟಿ ಸಾಲದೊಂದಿಗೆ ಒಟ್ಟು ರೂ.1001 ಕೋಟಿ ವ್ಯವಹಾರವನ್ನು ದಾಖಲಿಸಿ ರೂ.8.50 ಕೋಟಿಗೂ ಮೀರಿದ ನಿವ್ವಳ ಲಾಭವನ್ನು ದಾಖಲಿಸುವ ಗುರಿಯನ್ನು ಘೋಷಿಸಿದರು.

ಪ್ರಾಸ್ತಾವಿಸಿದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಸಂತ ನಾಯಕ್ ಎ. ಅವರು ಸಹಕಾರಿಯ ಸಾಧನೆಗೆ ಕಾರಣೀಕರ್ತರಾದ, ಸೂಕ್ತ ಮಾರ್ಗದರ್ಶನ ನೀಡಿದ ಆಡಳಿತ ಮಂಡಲಿ, ದಕ್ಷ ಸಿಬ್ಬಂದಿ ವರ್ಗ, ಲೆಕ್ಕ ಪರಿಶೋಧಕರು ಹಾಗೂ ಸದಸ್ಯರಿಗೆ ಅಭಿನಂದನೆ ಮತ್ತು ಕೃತಜ್ಞತೆಗಳನ್ನು ಸಲ್ಲಿಸಿ, ಮುಂದಿನ 2026-27ನೇ ಆರ್ಥಿಕ ವರ್ಷದಲ್ಲಿಯೂ ಗುರಿ ಮೀರಿದ ಸಾಧನೆಯನ್ನು ಮಾಡುವಂತಾಗಲಿ ಎಂದು ಶುಭ ಹಾರೈಸಿದರು.

2025-26ರ ಆರ್ಥಿಕ ವರ್ಷದಲ್ಲಿ ಗುರಿ ಮೀರಿ ಸಾಧನೆ ಮಾಡಿದ ಸಹಕಾರಿಯ ಸುಳ್ಯ ಮತ್ತು ಬಿ.ಸಿ.ರೋಡು ಶಾಖೆಗಳನ್ನು ಗುರುತಿಸಿ ಸನ್ಮಾನಿಸಲಾಯಿತು ಹಾಗೂ ಸಹಕಾರಿಯ ನೂತನ ವಿವಾಹಿತ ಸಿಬ್ಬಂದಿಗಳಿಗೆ ಶುಭ ಹಾರೈಸಲಾಯಿತು. ಸಹಕಾರಿಯ ಸಿಬ್ಬಂದಿಗಳಿಗೆ ಪ್ರಜ್ವಲ್ ಕುಲಾಲ್ ಮತ್ತು ತಂಡದವರಿಂದ ಮನೋರಂಜನಾ ಆಟಗಳೊಂದಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.
ಸಹಕಾರಿಯ ಸಿಬ್ಬಂದಿಗಳಾದ ಶ್ರೀರಂಜಿತಾ ಮತ್ತು ವಿದುಷಿ ವೈಷ್ಣವಿ ಎಸ್. ನಾಯಕ್ ಪ್ರಾರ್ಥನೆ ಮತ್ತು ವಂದೇ ಮಾತರಂ ಗೀತೆ ಹಾಡಿದರು. ಹಿರಿಯ ವ್ಯವಸ್ಥಾಪಕ ದೇವಿಪ್ರಸಾದ್ ಎ. ಸ್ವಾಗತಿಸಿ, ವ್ಯವಸ್ಥಾಪಕ ಶಿವಪ್ರಸಾದ್ ಪಿ. ವಂದಿಸಿದರು.

3 ನೂತನ ಶಾಖೆಗಳು

ಸಹಕಾರಿಯು ಈ ಆರ್ಥಿಕ ವರ್ಷದಲ್ಲಿ ಮೂರು ನೂತನ ಶಾಖೆಗಳನ್ನು ಪ್ರಾರಂಭಿಸುವ ಯೋಜನೆಯನ್ನು ರೂಪಿಸಿದೆ. ಅಲ್ಲದೆ, ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಮುಖಾಂತರ ವಿವಿಧ ಸಮಾಜಮುಖಿ ಕಾರ್ಯಗಳನ್ನು ಮಾಡಲು ಯೋಜಿಸಿದೆ ಎಂದು ಎಸ್.ಆರ್. ಸತೀಶ್ಚಂದ್ರ ಅವರು ತಿಳಿಸಿದರು.

7.27 ಕೋ. ರೂ. ನಿವ್ವಳ ಲಾಭ

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘವು 2025-26ರ ಆರ್ಥಿಕ ವರ್ಷಾಂತ್ಯಕ್ಕೆ 20 ಶಾಖೆಗಳೊಂದಿಗೆ 52,431 ಸದಸ್ಯರು, ಠೇವಣಿ ರೂ.414 ಕೋಟಿ, ಸಾಲ ರೂ.387 ಕೋಟಿ, ಒಟ್ಟು801 ಕೋ. ರೂ. ವ್ಯವಹಾರ ನಡೆಸಿ, 7.27 ಕೋ. ರೂ. ನಿವ್ವಳ ಲಾಭ ಗಳಿಸಿದೆ.

ಸುತ್ತ ಮುತ್ತ

ಏ.18: ಕ್ಯಾಂಪ್ಕೊಗೆ ರಜೆ

ಪುತ್ತೂರು: ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜಾತ್ರೆಯ ಪ್ರಯುಕ್ತ ಕ್ಯಾಂಪ್ಕೊ ಸಂಸ್ಥೆಯ ಪುತ್ತೂರು ಶಾಖೆಗೆ ಏ.18ರಂದು ರಜೆ ಇರುತ್ತದೆ. ಸದಸ್ಯರು ಸಹಕರಿಸಬೇಕು ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಏ.18: ಬಂಟ್ವಾಳ ನೈಟ್ಸ್ -2 ಕೆ26

ಬಂಟ್ವಾಳ: ಎಕ್ಸ್ ಟ್ರಿಮ್ ಡ್ಯಾನ್ಸ್ ಕ್ರಿವ್ ಬಿ.ಸಿ.ರೋಡು, ಬಂಟ್ವಾಳ ಇದರ ಆಶ್ರಯದಲ್ಲಿ 'ಬಂಟ್ವಾಳ ನೈಟ್ಸ್ -2ಕೆ26' ಸ್ಟಾರ್ ನೈಟ್ ಮತ್ತು ಸಾಧಕರಿಗೆ ಗೌರವಾರ್ಪಣೆ ಏ.18 ರಂದು ಸಂಜೆ ಬಂಟ್ವಾಳದ ದೇವರಕಟ್ಟೆ ಶೆಟ್ಟಿ ಮೈದಾನದಲ್ಲಿ ನಡೆಯಲಿದೆ ಎಂದು ಕೊರಿಯೋಗ್ರಾಫರ್ ಮತ್ತು ಸಂಸ್ಥೆಯ ಮುಖ್ಯಸ್ಥ ವಿನೋದ್ ರಾಜ್ ತಿಳಿಸಿದ್ದಾರೆ.

ಗುರುವಾರ ಬಂಟ್ವಾಳ ಪ್ರೆಸ್‌ಕ್ಲಬ್‌ನಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು ಸಂಸ್ಥೆಯು ಬಂಟ್ವಾಳ ಮತ್ತು ಬಿ.ಸಿ.ರೋಡಿನಲ್ಲಿ ಶಾಖೆಗಳನ್ನು ಹೊಂದಿದ್ದು ಇದೇ ಮೊದಲಿಗೆ ವಾರ್ಷಿಕೋತ್ಸವದ ಪ್ರಯುಕ್ತ ಬಂಟ್ವಾಳದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಬೆಂಜನಪದವು ಕೊರಗಜ್ಜ ಕ್ಷೇತ್ರದ ಧರ್ಮದರ್ಶಿ ವಿಜಯಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ರಾಜೇಶ್ ನ್ಯಾಕ್, ಮಾಜಿ ಸಚಿವ ಬಿ.ರಮಾನಾಥ ರೈ ಸಹಿತ ಹಲವಾರು ಗಣ್ಯರು ಭಾಗಹಿಸಲಿದ್ದಾರೆ ಎಂದು ವಿವರಿಸಿದ ಅವರು ಕನ್ನಡ, ತುಳು ಸಿನಿಮಾ ರಂಗದಲ್ಲಿ ಹೆಸರು ಮಾಡಿದ ಜೆ.ಪಿ.ತೂಮಿನಾಡು, ಶನಿಲ್ ಗುರು, ಸ್ವರಾಜ್ ಶೆಟ್ಟಿ, ನಿತ್ಯಪ್ರಕಾಶ್ ಬಂಟ್ವಾಳ, ಕಿಶೋರ್ ಅಮನ್ ಶೆಟ್ಟಿ, ಎಲ್ಸನ್ ಜೆಫ್ ಮೊದಲಾದ ಸ್ಟಾರ್‌ಗಳು ಭಾಗವಹಿಸುವರು ಎಂದರು.

ಯುವ ಸಾಧಕ ಪ್ರತಿಭೆಗಳಾದ ಕೌಶಿಕ್ ಆಚಾರ್ಯ, ರಿತ್ವಿಕ್ ಬಂಟ್ವಾಳ, ಸಾನ್ವಿ ಕೆ, ಮನೀಶ್ ಗಾಣಿಗ ಅವರನ್ನು ಸನ್ಮಾನಿಸಲಾಗುವುದು ಎಂದವರು ಮಾಹಿತಿ ನೀಡಿದರು. ಸಂಸ್ಥೆಯಲ್ಲಿ ತರಬೇತಿ ಪಡೆದ ಹಲವಾರು ವಿದ್ಯಾರ್ಥಿಗಳು ಟಿ.ವಿ.ಚಾನಲ್ ಗಳು ನಡೆಸುವ ಡ್ಯಾನ್ಸ್ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪೂರ್ಣಿಮಾ ಶೆಟ್ಟಿ, ದಿವ್ಯಾ, ತೇಜಾಕ್ಷ, ಅರ್ಚನಾ ಇರಾ ಉಪಸ್ಥಿತರಿದ್ದರು.

ಏ.28: ಕರಂದಕ್ಕಾಡು ಶ್ರೀ ವೀರಹನುಮಾನ್ ಮಂದಿರ ವಾರ್ಷಿಕೋತ್ಸವ

ಕಾಸರಗೋಡು: ಕರಂದಕ್ಕಾಡು ಶ್ರೀ ವೀರಹನುಮಾನ್ ಮಂದಿರದ 24ನೇ ವಾರ್ಷಿಕೋತ್ಸವ ಏ.28ರಂದು ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಜರಗಲಿದೆ. ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ 6 ಗಂಟೆಗೆ ಗಣಪತಿಹೋಮ, 8ಕ್ಕೆ ದೀಪಾರಾಧನೆ, 8.15ಕ್ಕೆ ವೀರಹನುಮಾನ್ ಬಾಲಗೋಕುಲದ ಮಕ್ಕಳಿಂದ ಶ್ರೀರಾಮ ರಕ್ಷಾಸ್ತೋತ್ರ ಪಾರಾಯಣ, 9 ಗಂಟೆಗೆ ಸಾಮೂಹಿಕ ಶ್ರೀ ಶನೀಶ್ವರ ಪೂಜೆ ಆರಂಭ, 12.30ಕ್ಕೆ ಅನ್ನಸಂತರ್ಪಣೆ, 2.30ಕ್ಕೆ ನೃತ್ಯಂ ಬೀರಂತಬೈಲು ವತಿಯಿಂದ ನೃತ್ಯ ಶಿಕ್ಷಕಿ ಲತಾ ಶಶಿಧರನ್ ಅವರ ಶಿಷ್ಯೆಯರಿಂದ ನೃತ್ಯ ಕಾರ್ಯಕ್ರಮ, ಸಂಜೆ 6.30ಕ್ಕೆ ಶ್ರೀ ವೀರಹನುಮಾನ್ ಮಲ್ಟಿ ಜಿಮ್ನೇಶಿಯಂ ಸದಸ್ಯರಿಂದ ದೇಹದಾರ್ಢ್ಯ ಪ್ರದರ್ಶನ, ರಾತ್ರಿ 7ರಿಂದ 8.30ರ ತನಕ ಭಜನೆ, 9.30ಕ್ಕೆ ವಿಶೇಷ ಮಹಾಪೂಜೆ, ರಾತ್ರಿ 10ಕ್ಕೆ ಮಂಜೇಶ್ವರ ಶಾರದಾ ಆರ್ಟ್ಸ್ ತಂಡದ ಐಸಿರಿ ಕಲಾವಿದರಿಂದ ಜೈ ಭಜರಂಗ ಬಲಿ ಎಂಬ ತುಳು ಸಾಮಾಜಿಕ ನೀತಿಬೋಧ ನಾಟಕ ಪ್ರದರ್ಶನಗೊಳ್ಳಲಿದೆ.

ನೃತ್ಯ ಪ್ರತಿಭೋತ್ಸವ: ಶಮಾ ವಳಕುಂಜ ಭರತನಾಟ್ಯ ಪ್ರದರ್ಶನ

ಬದಿಯಡ್ಕ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಬೆಂಗಳೂರು ಇವುಗಳ ವತಿಯಿಂದ ಬೆಂಗಳೂರು ಕನ್ನಡ ಭವನದಲ್ಲಿ ಜರಗಿದ ಸಂಗೀತ ನೃತ್ಯ ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಗಡಿನಾಡು ಕಾಸರಗೋಡಿನ ಯುವ ಪ್ರತಿಭೆ ಶಮಾ ವಳಕ್ಕುಂಜ ಭಾಗವಹಿಸಿ ಭರತನಾಟ್ಯ ಕಾರ್ಯಕ್ರಮ ನೀಡಿದರು. ಈಕೆ ವೈಷ್ಣವೀ ನಾಟ್ಯಾಲಯದ ವಿದುಷಿ ಯೋಗಿಶ್ವರೀ ಜಯಪ್ರಕಾಶ್ ಪುತ್ತೂರು ಅವರ ಶಿಷ್ಯೆಯಾಗಿದ್ದು, ಪ್ರತಿಭಾವಂತೆ ವಿದ್ಯಾರ್ಥಿನಿಯಾಗಿದ್ದಾರೆ.

ಹೆಬ್ರಿಯಲ್ಲಿ 'ಮೋಕ್ಷಧಾಮ' ಕಟ್ಟಡದ ಶಿಲಾನ್ಯಾಸ | ಪೇಜಾವರ ಶ್ರೀ ಆಶೀರ್ವಚನ

ತಂದೆ ತಾಯಿಯ ಸೇವೆ ಮಾಡುವುದು ಮಕ್ಕಳ ಆದ್ಯ ಕರ್ತವ್ಯ

ಹೆಬ್ರಿ: ತಂದೆ, ತಾಯಿಗಳ ಋಣ ಬಹಳ ದೊಡ್ಡದು. ಜೀವಿತಾವಧಿಯಲ್ಲಿ ಅವರ ಸೇವೆಯನ್ನು ಮಾಡುವುದು ಮಕ್ಕಳ ಆದ್ಯ ಕರ್ತವ್ಯ. ಹಾಗೆಯೇ ಮರಣಾನಂತರವೂ ಅವರ ಔರ್ಧ್ವ ದೈಹಿಕ ಕ್ರಿಯೆಗಳನ್ನು ಮಾಡುವುದು ಅತಿ ಅವಶ್ಯವಾಗಿದೆ. ಮಾತಾಪಿತರ ಆಶೀರ್ವಾದ ನಮಗೆ ಸದಾ ಇದ್ದಾಗ ಭಗವಂತನು ನಮ್ಮ ಕೆಲಸ ಕಾರ್ಯಗಳಿಗೆ ಅನುಗ್ರಹವನ್ನು ನೀಡುತ್ತಾನೆ ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥರು ಹೇಳಿದ್ದಾರೆ.

ಅವರು ಹೆಬ್ರಿ ಗಿಲ್ಲಾಳಿ ಗೋಶಾಲೆ, ಶ್ರೀ ಪೇಜಾವರ ಅಧೋಕ್ಷಜ ಮಠ ಗಿಲ್ಲಾಳಿ ಹೆಬ್ರಿ ವತಿಯಿಂದ 75 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ 'ಮೋಕ್ಷಧಾಮ' ಕಟ್ಟಡದ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು.



ಬ್ಯಾಂಕ್‌ನಿಂದ ಇನ್ನಷ್ಟು ಸಹಕಾರ

ಮಂಗಳೂರು ಕರ್ಣಾಟಕ ಬ್ಯಾಂಕ್ ಲಿಮಿಟೆಡ್‌ನ ಎಂ.ಡಿ. ಮತ್ತು ಸಿ. ಇ. ಓ.ರಾಘವೇಂದ್ರ ಭಟ್ ಮಾತನಾಡಿ, ಉತ್ತಮ ಸಾಮಾಜಿಕ ಬದ್ಧತೆಯ ಕಾರ್ಯಗಳಿಗೆ ಬ್ಯಾಂಕ್ ವತಿಯಿಂದ ಇನ್ನಷ್ಟು ಸಹಕಾರವನ್ನು ನೀಡಲಿದ್ದೇವೆ. ಹೆಬ್ರಿಯಲ್ಲಿ ಸುಸಜ್ಜಿತವಾದ ಮೋಕ್ಷಧಾಮ ಕಟ್ಟಡ ನಿರ್ಮಾಣವಾಗುತ್ತಿರುವುದು ಇಲ್ಲಿನ ಜನರ ಸೌಭಾಗ್ಯ ಎಂದು ಹೇಳಿದರು. ಹೆಬ್ರಿ ಅನಂತಪದ್ಮನಾಭ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ರಾಘವೇಂದ್ರ ಆಚಾರ್, ವೈದ್ಯರಾದ ರಾಮಚಂದ್ರ ಐತಾಳ್ ಇವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಶುಭ ಹಾರೈಸಿದರು. ಗೋಶಾಲೆಯ ಟ್ರಸ್ಟಿ ಎಂ. ರವಿ ರಾವ್ ಹೆಬ್ರಿ, ಗಿಲ್ಲಾಳಿ ವಿಷ್ಣುಮೂರ್ತಿ ಆಚಾರ್ಯ, ಶ್ರೀಕಾಂತ್ ಭಟ್ ಅಜೆಕಾರು, ವಿಷ್ಣುಮೂರ್ತಿ ನಾಯಕ್ ಹೆಬ್ರಿ, ಲಕ್ಷ್ಮಣ ಭಟ್ ಹೆಬ್ರಿ,ಬೆಳ್ವೆ ಗಣೇಶ್ ಕಿಣಿ, ಲಕ್ಷ್ಮೀನಾರಾಯಣ ಜೋಯಿಸ್ ಹೆಬ್ರಿ, ಡಾ. ಭಾರ್ಗವಿ ಐತಾಳ್, ಗೋಶಾಲೆಯ ಉಸ್ತುವಾರಿ ಸುಬ್ರಮಣ್ಯ ನಾಯಕ್ ಮೊದಲಾದವರು ಉಪಸ್ಥಿತರಿದ್ದರು.

ಗೋಶಾಲೆಯ ಟ್ರಸ್ಟಿ ಗಿಲ್ಲಾಳಿ ಪದ್ಮನಾಭ ಆಚಾರ್ಯ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು. ಟ್ರಸ್ಟಿ ಗುರುದಾಸ ಶೆಣೈ ವಂದಿಸಿದರು. ಶಿಕ್ಷಕ ಬಲ್ಲಾಡಿ ಚಂದ್ರಶೇಖರ ಭಟ್ ಕಾರ್ಯಕ್ರಮ ನಿರೂಪಿಸಿದರು.

> **ದೇವರ ಅನುಗ್ರಹ ಪಡೆಯೋಣ**
>
> ಹೆಬ್ರಿ ಭಾಗದಲ್ಲಿ ಅತ್ಯಂತ ಸುಸಜ್ಜಿತವಾದ ಮೋಕ್ಷಧಾಮ ಕಟ್ಟಡ ನಿರ್ಮಾಣದ ಸಂಕಲ್ಪ ಇಟ್ಟುಕೊಂಡಿದ್ದೇವೆ. ಗಿಲ್ಲಾಳಿ ಆಚಾರ್ಯ ಕುಟುಂಬಸ್ಥರು ದಾನವಾಗಿ ನೀಡಿದ ಗೋಶಾಲೆಯಲ್ಲಿ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಕಾರ್ಯ ನಡೆಯು ವಂತೆ ಮೋಕ್ಷಧಾಮದಲ್ಲಿ ಪಿತೃ ಯಜ್ಞಕ್ಕೆ ಅನುಕೂಲವಾಗುವಂತೆ ಪ್ರಾಜ್ಞ ಸದನ, ಜನಾರ್ದನ ಧಾಮ, ವಾಸುದೇವ ಸದನ, ಅತಿಥಿ ಗೃಹವನ್ನೊಳಗೊಂಡ ಮೋಕ್ಷಧಾಮ ಕಟ್ಟಡಕ್ಕೆ ಕರ್ಣಾಟಕ ಬ್ಯಾಂಕ್‌ನಿಂದ 15 ಲ.ರೂ. ಅನುದಾನ ಒದಗಿಸಿ ಸಾಮಾಜಿಕ ಬದ್ಧತೆಯ ಕಾರ್ಯಕ್ಕೆ ಕೈಜೋಡಿಸಿದ್ದಾರೆ. 75 ಲಕ್ಷ ರೂ.ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಈ ಕಾರ್ಯಕ್ಕೆ ಎಲ್ಲರೂ ಸಹಕರಿಸುವ ಮೂಲಕ ದೇವರ ಅನುಗ್ರಹ ಪಡೆಯೋಣ
>
> ● ಪೇಜಾವರ ಶ್ರೀ

- ಗಿಲ್ಲಾಳಿ ಆಚಾರ್ಯ ಕುಟುಂಬಸ್ಥರು ದಾನವಾಗಿ ನೀಡಿದ ಗೋಶಾಲೆ
- 75 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಲಿದೆ ಗೋ ಶಾಲೆ

ವಿವೇಕಾನಂದ ಕಾಲೇಜಿನ ಬಿಬಿಎ ವಿಭಾಗದಿಂದ ಮಂಗಳೂರು ವಿಮಾನ ನಿಲ್ದಾಣಕ್ಕೆ ಶೈಕ್ಷಣಿಕ ಭೇಟಿ



ಪುತ್ತೂರು: ನಗರದ ವಿವೇಕಾನಂದ ಕಲಾ, ವಾಣಿಜ್ಯ ಹಾಗೂ ವಿಜ್ಞಾನ(ಸ್ವಾಯತ್ತ) ಕಾಲೇಜಿನ ಬಿಬಿಎ ಲಾಜಿಸ್ಟಿಕ್ಸ್ ವಿದ್ಯಾರ್ಥಿಗಳು ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶೈಕ್ಷಣಿಕ ಭೇಟಿ ನೀಡಿದರು. ಕಾಲೇಜಿನ ವ್ಯವಹಾರ ನಿರ್ವಹಣಾ ಆಡಳಿತ ವಿಭಾಗ, ಅದಾನಿ ಸಂಸ್ಥೆಯ ಯೋಜನೆಯಾಗಿರುವ 'ಉಡಾನ್' ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಿತು.

ಭೇಟಿ ಸಂದರ್ಭ ಉಡಾನ್ ಯೋಜನೆ ಸಂಯೋಜಕರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಈ ಯೋಜನೆಯ ಸಂಪೂರ್ಣ ದೃಷ್ಟಿಕೋನ ವಿವರಿಸಿದರು. ಮಂಗಳೂರು ಅಂತಾರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ ಮೆನೇಜರ್ ವಿದ್ಯಾರ್ಥಿಗಳಿಗೆ ಪ್ರಯಾಣಿಕರ ಚೆಕ್-ಇನ್ ಮತ್ತು ಚೆಕ್-ಔಟ್ ವಿಧಾನಗಳು, ಕಸ್ಟಮ್ಸ್ ಕ್ಲಿಯರೆನ್ಸ್, ಸ್ವಯಂಚಾಲಿತ ಪರಿಶೀಲನಾ ವ್ಯವಸ್ಥೆಗಳು , ಇತ್ತೀಚೆಗೆ ಪರಿಚಯಿಸಲಾದ ಡಿಜಿ ಯಾತ್ರಾ ವ್ಯವಸ್ಥೆ ಪ್ರಯೋಜನಗಳ ವಿವರಿಸಿದರು. ವಿದ್ಯಾರ್ಥಿಗಳು ಏರ್ ಟ್ರಾಫಿಕ್ ಕಂಟ್ರೋಲ್ ವ್ಯವಸ್ಥೆ-ರಾಡಾರ್ ಕಾರ್ಯಾಚರಣೆಗಳ ಬಗ್ಗೆ ಪ್ರಾಯೋಗಿಕ ತಿಳುವಳಿಕೆ ಪಡೆದರು.

ಈ ಸಂದರ್ಭ ಏರೋಡ್ರೋಮ್ ಅಗ್ನಿಶಾಮಕ ಮತ್ತು ಸುರಕ್ಷತಾ ವಿಭಾಗದ ಮುಖ್ಯಸ್ಥರು ಸುರಕ್ಷತಾ ನಿಯಮಗಳ ಮಹತ್ವವನ್ನು ವಿವರಿಸಿ, ವಿಮಾನ ನಿಲ್ದಾಣದಲ್ಲಿ ಲಭ್ಯವಿರುವ ಆಧುನಿಕ ತುರ್ತು ಪ್ರತಿಕ್ರಿಯಾ ಉಪಕರಣಗಳು , ಸಿದ್ಧತಾ ವ್ಯವಸ್ಥೆಗಳನ್ನು ಪ್ರದರ್ಶಿಸಿದರು. ವಿದ್ಯಾರ್ಥಿಗಳು ಇಂಟಿಗ್ರೇಟೆಡ್ ಕಾರ್ಗೋ ಟರ್ಮಿನಲ್‌ಗೂ ಭೇಟಿ ನೀಡಿದ ಸಂದರ್ಭ ಕಾರ್ಗೋ ಟರ್ಮಿ ನಲ್ ಮ್ಯಾನೇಜರ್ ದೇಶೀಯ, ಅಂತಾರಾಷ್ಟ್ರೀಯ ಸರಕುಗಳ ಹ್ಯಾಂಡ್ಲಿಂಗ್ , ಏರ್ ಕಾರ್ಗೋ ನಿರ್ವಹಣೆಯಲ್ಲಿ ಅಗತ್ಯವಿರುವ ದಾಖಲೆ ಪ್ರಕ್ರಿಯೆಗಳ ವಿವರಿಸಿದರು. ಕಾಲೇಜಿನ ಬಿಬಿಎ ವಿಭಾಗ ಉಪನ್ಯಾಸಕರಾದ ದೀಪಿಕಾ, ಗೌತಮ್ ಪೈ ಉಪಸ್ಥಿತರಿದ್ದರು.

ಮಕ್ಕಳ ವಿಶೇಷ ಪ್ರತಿಭೆಯ ಅನಾವರಣಕ್ಕೆ ಬೇಸಿಗೆ ಶಿಬಿರ ಪೂರಕ: ಮಾಧವ ಸುವರ್ಣ



- ಕುಂಪಲ ಶಾಲೆಯಲ್ಲಿ 'ಚಿಗುರು' ಬೇಸಿಗೆ ಶಿಬಿರ ಉದ್ಘಾಟನೆ
- ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ

ಉಳ್ಳಾಲ: ವಿವಿಧ ಶಾಲೆಗಳ ಮಕ್ಕಳು ಒಟ್ಟು ಸೇರಿಕೊಂಡು ನಾನಾ ಚಟುವಟಿಕೆಗಳನ್ನು ನಡೆಸಲು ಬೇಸಿಗೆ ಶಿಬಿರಗಳು ಪ್ರತಿಕೂಲ ವಾತಾವರಣ ಸೃಷ್ಟಿಸಿಕೊಡುತ್ತದೆ. ಶಿಬಿರಗಳಲ್ಲಿ ವಿವಿಧ ಕ್ಷೇತ್ರದ ಗಣ್ಯರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವ ಮೂಲಕ ಮಕ್ಕಳಿಗೆ ನಾನಾ ವಿಚಾರಗಳ ಬಗ್ಗೆ ಅಮೂಲ್ಯವಾದ ಮಾಹಿತಿಗಳು ಲಭಿಸುವ ಜೊತೆಗೆ, ಮಕ್ಕಳಲ್ಲಿ ಅಡಗಿರುವ ವಿಶೇಷ ಪ್ರತಿಭೆಗಳ ಅನಾವರಣಕ್ಕೆ ಶಿಬಿರವು ವೇದಿಕೆಯಾಗಲಿ ಎಂದು ಮಂಗಳೂರು ರೋಟರಿ ಕ್ಲಬ್ ಆರ್‌ಸಿಸಿ ಚೇರ್ಮನ್ ಮಾಧವ ಸುವರ್ಣ ಆಶಿಸಿದರು.

ಕುಂಪಲದ ಕೇಸರಿ ಮಿತ್ರ ವೃಂದ ಸೇವಾ ಟ್ರಸ್ಟ್,ರೋಟರಿ ಕ್ಲಬ್ ಮಂಗಳೂರು, ರೋಟರಿ ಸಮುದಾಯ ದಳ ಕುಂಪಲ ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕುಂಪಲ ಇದರ ಸಹಭಾಗಿತ್ವದಲ್ಲಿ, ಚಿತ್ತಾರ ಪ್ರತಿಷ್ಠಾನ ಪಿಲಾರು ಇವರ ಸಹಯೋಗದೊಂದಿಗೆ ಕುಂಪಲ ಶಾಲೆಯಲ್ಲಿ ಆರಂಭಗೊಂಡ 'ಚಿಗುರು 2026' ಬೇಸಿಗೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಕುಂಪಲ ಸರಕಾರಿ ಶಾಲೆಯ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಕಿಶೋರ್ ಕುಮಾರ್ ಡಿ.ಕೆ. ಮತ್ತು ಮುಖ್ಯೋಪಾಧ್ಯಾಯಿನಿ ಚಂದ್ರಕಲಾ ಶುಭಹಾರೈಸಿದರು.

ಕೇಸರಿ ಮಿತ್ರ ವೃಂದ ಸೇವಾ ಟ್ರಸ್ಟ್ ಅಧ್ಯಕ್ಷ ಸುಧಾಕರ ಕುಂಪಲ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟ್‌ನ ಸ್ಥಾಪಕಾಧ್ಯಕ್ಷರಾದ ನಾರಾಯಣ ಕುಂಪಲ ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತಿಸಿದರು. ಚಿತ್ತಾರ ಪ್ರತಿಷ್ಠಾನ ಸಂಚಾಲಕ ನವೀನ್ ಪಿಲಾರ್ ನಿರೂಪಿಸಿದರು.

ತಂದೆ -ತಾಯಿಗಳೇ ಹೀರೋಗಳು, ಅವರೇ ದೊಡ್ಡ ಸಾಧಕರು: ಡಾ.ಭಾರತಿ



ಕುಂದಾಪುರ: ತಂದೆ ತಾಯಿಗಳೇ ನಿಮಗೆ ದೊಡ್ಡ ಹೀರೊಗಳು, ಅವರೇ ನಿಮಗೆ ದೊಡ್ಡ ಸಾಧಕರು. ಕಲೆಯು ಜೀವನದಲ್ಲಿ ತಾಳ್ಮೆ, ಏಕಾಗ್ರತೆ ಕಲಿಸುತ್ತದೆ. ಬದುಕು ಹೇಗಿರಬೇಕು, ಶಿಸ್ತುಬದ್ಧ ಜೀವನ ಹೇಗೆ ನಡೆಸಬಹುದು ಎಂಬುದನ್ನು ಕಲೆ ತಿಳಿಸುತ್ತದೆ. ನಮ್ಮ ನಡುವೆ ಬಹುದೊಡ್ಡ ಕಲಾವಿದರಿದ್ದು ಪ್ರತಿಭೆಯಿದ್ದು ಅದನ್ನು ಬೆಳೆಸಿಕೊಳ್ಳಬೇಕು. ಕಲಾವಿದರಾಗಿ ವೃತ್ತಿಯಲ್ಲಿ ಒಂದು ಕೆಲಸವನ್ನು ಆಯ್ಕೆ ಮಾಡಿಕೊಳ್ಳಿ, ಜೊತೆಗೆ ನಿಮ್ಮೊಳಗಿರುವ ಕಲಾವಿದರನ್ನು ಬೆಳೆಸಿಕೊಳ್ಳಿ ಎಂದು ಪ್ರಸಿದ್ಧ ರಂಗೋಲಿ ಕಲಾವಿದೆ ಡಾ. ಭಾರತಿ ಮರವಂತೆ ಹೇಳಿದರು.

ಕುಂದಾಪುರದ ತ್ರಿವರ್ಣ ಆರ್ಟ್ ಕ್ಲಾಸಸ್‌ನಲ್ಲಿ ವಿಶ್ವ ಕಲಾ ದಿನಾಚರಣೆ ಪ್ರಯುಕ್ತ ಬುಧವಾರ ಜರಗಿದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸಿದ್ಧ ಚಿತ್ರ ಕಲಾವಿದ ಕೇಶವ ಸಸಿಹಿತ್ಲು ಮಾತನಾಡಿ, ಚಿತ್ರಕಲೆಯನ್ನು ಯಾರೂ ನಿರ್ಲಕ್ಷ್ಯ ಮಾಡಬಾರದು. ಚಿತ್ರಕಲಾ ಕ್ಷೇತ್ರಗಳಲ್ಲಿ ವಿಫುಲ ಉದ್ಯೋಗಾ ವಕಾಶಗಳಿವೆ. ಚಿತ್ರಕಲೆಯನ್ನು ಯಾವುದೇ ಕಾರಣಕ್ಕೂ ಕಡೆಗಣಿಸದೆ ಚಿತ್ರಕಲೆ ಯನ್ನು ಪ್ರೋತ್ಸಾಹಿಸಬೇಕು, ಚಿತ್ರ ಕಲಾವಿದರನ್ನು ಹುರಿದುಂಬಿಸಬೇಕು ಎಂದರು.

ಚಿತ್ರಕಲಾ ಪ್ರೋತ್ಸಾಹಕ ರಾಜು ಪೂಜಾರಿ, ಕುಂದಾಪುರದ ತ್ರಿವರ್ಣ ಆರ್ಟ್ ಕ್ಲಾಸಸ್‌ನ ಮುಖ್ಯಸ್ಥ ಹರೀಶ್ ಸಾಗ ಉಪಸ್ಥಿತರಿದ್ದರು. ಇದೇ ಸಂದರ್ಭ ತ್ರಿವರ್ಣ ಆರ್ಟ್ ಕ್ಲಾಸ್‌ನ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ವಿದ್ಯಾರ್ಥಿನಿ ಕೃತಿ ಕೆ.ದೇವಾಡಿಗ ಕಾರ್ಯಕ್ರಮ ನಿರ್ವಹಿಸಿದರು.

ಕಡಬ ಪರಿಸರದ ವಿವಿಧ ದೇವಳಗಳಲ್ಲಿ ಸಂಭ್ರಮದ 'ಬಿಸು ಪರ್ಬ' ಆಚರಣೆ



ಕಡಬ: ಪರಿಸರದ ವಿವಿಧ ದೇವಸ್ಥಾನಗಳಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಬಿಸು ಪರ್ಬ ಆಚರಣೆಯನ್ನು ಬುಧವಾರ ಸಂಭ್ರಮದಿಂದ ನಡೆಸಲಾಯಿತು.

ಕಡಬದ ಶ್ರೀಕಂಠ ಸ್ವಾಮಿ ಮತ್ತು ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಬಿಸು ಪ್ರಯುಕ್ತ ವಿಶೇಷ ಪೂಜೆ ಹಾಗೂ ವಿವಿಧ ಭಜನಾ ಮಂಡಳಿಗಳಿಂದ ಭಜನೆ ನೆರವೇರಿತು. ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯಿತು. ದೇವಸ್ಥಾನದ ಪ್ರಧಾನ ಅರ್ಚಕ ಕೇಶವ ಬೈಪಾಡಿತ್ತಾಯ ಅವರು ವೈದಿಕ ವಿಧಿಗಳನ್ನು ನೆರವೇರಿಸಿದರು.

ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಹರೀಶ ರೈ ಹಳ್ಳಿ, ನಿಕಟಪೂರ್ವ ಅಧ್ಯಕ್ಷ ಮುತ್ತು ಕುಮಾರ್, ಸದಸ್ಯರಾದ ಗಂಗಾಧರ ನ್ಯಾಕ್, ಸಂಜೀವ ನಾಯ್ಕ, ದೇವಪ್ಪ ಕುಂಬಾರ, ಸಾವಿತ್ರಿ ಟಿ. ನಾಯ್ಕ, ಭಾಗೀರಥಿ, ಜನಾರ್ದನ ಮುಗೇರ, ಅಶೋಕ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಪವಮಾನ ಪಾರಾಯಣ

ಪಿಜಕಳದ ಶ್ರೀ ಮಹಾವಿಷ್ಣು ದೇವಸ್ಥಾನದಲ್ಲಿ ಶ್ರೀ ಮಹಾವಿಷ್ಣು ಭಜನಾ ಮಂಡಳಿಯ ನೇತೃತ್ವದಲ್ಲಿ ಬೆಳಿಗ್ಗೆ ವಿಷು ಪೂಜೆ, ಪವಮಾನ ಪಾರಾಯಣ, ಮಧ್ಯಾಹ್ನ ಅಭಿಷೇಕ, ಮಹಾಪೂಜೆ, ಅನ್ನ ಸಂತರ್ಪಣೆ, ಸಂಜೆ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ರಾತ್ರಿ ನಗರ ಭಜನೆ ಮಂಗಲೋತ್ಸವ ಹಾಗೂ ರಂಗಪೂಜೆ ಜರಗಿತು.

ವಿವಿಧ ಭಜನಾ ಮಂಡಲಿಯಿಂದ ಭಜನೆ

ಬಲ್ಯದ ಶ್ರೀ ಉಮಾಮಹೇಶ್ವರೀ ದೇವಸ್ಥಾನ ದಲ್ಲಿ ವಿಷು ಆಚರಣೆ ಪ್ರಯುಕ್ತ ವಿವಿಧ ಭಜನಾ ಮಂಡಳಿಗಳಿಂದ ಭಜನೆ, ಮಧ್ಯಾಹ್ನ ಮಹಾಪೂಜೆ, ಅನ್ನ ಸಂತರ್ಪಣೆ, ಸಂಜೆ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ನೆರವೇರಿತು.

ರಾತ್ರಿ 'ಶ್ರೀದೇವಿ ಮಹಾತ್ಮೆ' ಯಕ್ಷಗಾನ ಬಯಲಾಟ ನೆರವೇರಿತು.

ಪೆರಾಜೆ ಮಠ: 'ಕನ್ನಡ ಕಲಿಯೋಣ ಬನ್ನಿ' ವಿದ್ಯಾರ್ಥಿಗಳ ಬೇಸಿಗೆ ಶಿಬಿರ ಉದ್ಘಾಟನೆ



ಬಂಟ್ವಾಳ: ಶಾಲೆಗಳಲ್ಲಿ ಕನ್ನಡ ಭಾಷೆಯು ಕಡೆಗಣಿಸಲ್ಪಟ್ಟಿದ್ದು ಮನೆಮನೆಗಳಲ್ಲಿ ಕನ್ನಡ ಭಾಷೆಯನ್ನು ಕಲಿಸಬೇಕಾದ ಅನಿವಾರ್ಯತೆ ಇದೆ. ಮೊಬೈಲ್ ಬಳಕೆಯಿಂದ ಕನ್ನಡದಲ್ಲಿ ಬರೆಯುವ ಸಾಮರ್ಥ್ಯ ವನ್ನು ವಿದ್ಯಾರ್ಥಿಗಳು ಕಳೆದುಕೊಳ್ಳು ತ್ತಿದ್ದಾರೆ. ಹೀಗಾದರೆ ಮುಂದೆ ಮುಂದೆ ಕನ್ನಡ ಪುಸ್ತಕ ಮಾತ್ರವಲ್ಲ ದಿನಪತ್ರಿಕೆಯನ್ನು ಓದುವವರೂ ಇಲ್ಲದಾಗಬಹುದು ಎಂದು ಬಂಟ್ವಾಳ ತಾಲೂಕು ಕಸಾಪ ಮಾಜಿ ಅಧ್ಯಕ್ಷ ಜಯಾನಂದ ಪೆರಾಜೆ ಕಳವಳ ವ್ಯಕ್ತಪಡಿಸಿದರು.

ಅವರು ಪೆರಾಜೆ ಮಠದ ಬಳಿ ವಿಜಯ ಶ್ರೀರಾಮ ಸಭಾಂಗಣದಲ್ಲಿ ಮಾಣಿ ಲಯನ್ಸ್ ಕ್ಲಬ್ ಸಹಕಾರದಲ್ಲಿ ನಡೆಯುವ ಕನ್ನಡ ಕಲಿಯೋಣ ಬನ್ನಿ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಶ್ರೀ ರಾಮಕುಂಜೇಶ್ವರ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಲೋಹಿತ್ ಕುಮಾರ್ ವಿಷು ಹಬ್ಬದ ಬಗ್ಗೆ ಮಾತನಾಡಿ ನಮ್ಮ ಪರಿಸರದ ಗಿಡಮರಗಳ ಹೆಸರೂ ಮಕ್ಕಳಿಗೆ ಗೊತ್ತಿಲ್ಲದಂತಾಗಿದೆ ಎಂದು ಅವರು ಹೇಳಿದರು.

ಮಾಣಿ ಲಯನ್ಸ್ ಕ್ಲಬ್ ಅಧ್ಯಕ್ಷ ಜನಾರ್ದನ ಪೆರಾಜೆ ಅಧ್ಯಕ್ಷತೆ ವಹಿಸಿ ಶಿಬಿರದ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕೆಂದು ಹೇಳಿದರು. ಭಾರತಿ ಸೇವಾಕೇಂದ್ರ ಬಿಸಿರೋಡು ಇದರ ಮುಖ್ಯಸ್ಥೆ ಭಾರತಿ, ವರಲಕ್ಷ್ಮೀ ಸೇವಾ ಪೆರಾಜೆ ಸಮಿತಿಯ ಸದಸ್ಯೆ ಶಶಿಕಲಾ ಶುಭಹಾರೈಸಿ ಮಾತನಾಡಿದರು.

ಕಲ್ಲಡ್ಕ ಶ್ರೀರಾಮ ಆಂಗ್ಲಮಾಧ್ಯಮ ಶಾಲೆಯ ಶಿಕ್ಷಕಿ ಅಮಿತಾ ಅನಿಲ್ ಸ್ವಾಗತಿಸಿ ನಿರೂಪಿಸಿದರು. ವಿದ್ಯಾರ್ಥಿನಿ ಭೂಮಿ ನಾಡಗೀತೆ ಹಾಡಿ ವಂದಿಸಿದರು. ಒಂದು ತಿಂಗಳು ಕನ್ನಡ ಭಾಷಾ ಕಲಿಕೆಯ ಶಿಬಿರವು ವಿವಿಧ ಚಟುವಟಿಕೆಗಳಿಂದ ಹಲವು ಶಿಕ್ಷಕರ ಸಹಕಾರದೊಂದಿಗೆ ನಡೆಯಲಿದೆ.

ಏ.18,19: ಕಂಚಿಕಾಮಾಕ್ಷಿಯಮ್ಮ ದೇವಳ ಪುನರ್ ಪ್ರತಿಷ್ಠಾಪನಾ ವಾರ್ಷಿಕೋತ್ಸವ





ಮಡಿಕೇರಿ: ಮಡಿಕೇರಿ ನಗರದ ನಾಲ್ಕು ಶಕ್ತಿ ದೇವತೆಗಳಲ್ಲಿ ಒಂದಾದ ಶ್ರೀ ಕಂಚಿಕಾಮಾಕ್ಷಿಯಮ್ಮ ದೇವಾಲಯದ 19ನೇ ಪುನರ್ ಪ್ರತಿಷ್ಠಾಪನಾ ವಾರ್ಷಿಕೋತ್ಸವ ಏ.18 ಮತ್ತು 19 ರಂದು ನಡೆಯಲಿದೆ.

ಕೇರಳದ ಪಯ್ಯನೂರ್ ನ ಶ್ರೀ ಈಶ್ವರ ನಂಬೂದರಿ ಅವರ ನೇತೃತ್ವದಲ್ಲಿ ಎರಡು ದಿನಗಳ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನೆರವೇರಲಿವೆ.

ಏ.18 ರಂದು ಸಂಜೆ 6 ಗಂಟೆಗೆ ಆಚಾರ್ಯರ ಆಗಮನ, ದೇವಾಲಯದಲ್ಲಿ ಪುಣ್ಯಾಹ ಶುದ್ಧಿ, ದೇವಿ ಪೂಜೆ, ಸುದರ್ಶನ ಹೋಮ ಮತ್ತು ಪ್ರಸಾದ ವಿತರಣೆಯಾಗಲಿದೆ.

ಏ.19 ರಂದು ಬೆಳಿಗ್ಗೆ 7 ಗಂಟೆಗೆ ಮಹಾ ಗಣಪತಿ ಹೋಮ, ಮಹಾ ಮೃತ್ಯುಂಜಯ ಹೋಮ, ಐಕ್ಯಮತ್ಯ ಸುಕ್ತದ ಹೋಮ ಪೂಜೆ, ಕಳಸ ಪೂಜೆ, ದೇವಿಗೆ ಅಭಿಷೇಕ, ಅಲಂಕಾರ ಪೂಜೆ ಹಾಗೂ ಮಹಾಪೂಜೆ ನೆರವೇರಲಿದೆ. ನಂತರ ಭಕ್ತರಿಗೆ ಅನ್ನಸಂತರ್ಪಣೆಯಾಗಲಿದೆ.

ಅನ್ನಸಂತರ್ಪಣೆಗೆ ಬೇಕಾಗುವ ಅಕ್ಕಿ, ಬೇಳೆ, ಬೆಲ್ಲ, ತರಕಾರಿ ಹಾಗೂ ಇತರ ಸಾಮಾಗ್ರಿಗಳನ್ನು ನೀಡಲಿಚ್ಛಿಸುವ ದಾನಿಗಳು 9482192248, 8095858864, 9731411523 ನ್ನು ಸಂಪರ್ಕಿಸಬಹುದಾಗಿದೆ.

ಎರಡು ದಿನಗಳ ಕಾಲ ನಡೆಯುವ ಪುನರ್ ಪ್ರತಿಷ್ಠಾಪನಾ ವಾರ್ಷಿಕೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳುವಂತೆ ಶ್ರೀ ಕಂಚಿಕಾಮಾಕ್ಷಿಯಮ್ಮ ದೇವಾಲಯ ಸಮಿತಿಯು ಮನವಿಯನ್ನು ಮಾಡಿದೆ.

ನಾಳೆ ಆಳ್ವಾಸ್‌ನಲ್ಲಿ 'ಸುಸ್ಥಿರ ಕೃಷಿಗಾಗಿ ಸಮಗ್ರ ಕೃಷಿ ಪದ್ಧತಿ' ವಿಚಾರ ಸಂಕಿರಣ

ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಳ್ವಾಸ್ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯು ಮೂಡುಬಿದಿರೆಯ ಕೃಷಿ ವಿಚಾರ ವಿನಿಮಯ ಕೇಂದ್ರ, ರೈತಜನ್ಯ ಫಾರ್ಮರ್ ಪ್ರೊಡ್ಯೂಸರ್ ಕಂಪನಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ತೋಟಗಾರಿಕೆ ಇಲಾಖೆ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಇವುಗಳ ಸಹಯೋಗದೊಂದಿಗೆ ಒಂದು ದಿನದ ರೈತ ವಿಜ್ಞಾನಿಗಳ ವಿಚಾರ ಸಂಕಿರಣ 'ಸುಸ್ಥಿರ ಕೃಷಿಗಾಗಿ ಸಮಗ್ರ ಕೃಷಿ ಪದ್ಧತಿ' ಏ.18ರಂದು ಮಿಜಾರಿನ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದೆ.



ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಕಾಸರಗೋಡಿನ ಕೇಂದ್ರೀಯ ತೋಟಪಟ್ಟಿ ಬೆಳೆಗಳ ಸಂಶೋಧನಾ ಸಂಸ್ಥೆಯ, ನಿರ್ದೇಶಕ ಡಾ. ಕೆ. ಬಾಲಚಂದ್ರ ಹೆಬ್ಬಾರ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ. ಸಿ. ಟ್ರಸ್ಟ್ ಕೇಂದ್ರ ಕಚೇರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನಿಲ್ ಕುಮಾರ್ ಎಸ್. ಎಸ್., ಮೂಡುಬಿದಿರೆಯ ಮಂಗಳೂರು ಕೃಷಿ ಒಕ್ಕೂಟ ಉತ್ಪಾದಕರ ಕಂಪನಿ ಲಿಮಿಟೆಡ್‌ನ ವ್ಯವಸ್ಥಾಪನಾ ನಿರ್ದೇಶಕ ಸುನಿಲ್ ಸೋನ್ಸ್,ಮಂಗಳೂರಿನ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಕೆ. ಪ್ರವೀಣ್, ಆಳ್ವಾಸ್ ಟ್ರಸ್ಟಿ ವಿವೇಕ್ ಆಳ್ವ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ವಹಿಸಲಿದ್ದಾರೆ.

ಈ ವಿಚಾರ ಸಂಕಿರಣದಲ್ಲಿ ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರದಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ಹಾಗೂ ರೈತರ ಆದಾಯವನ್ನು ದ್ವಿಗುಣಗೊಳಿಸುವ ಕುರಿತಂತೆ ನುರಿತ ಕೃಷಿ ವಿಜ್ಞಾನಿಗಳು ಮತ್ತು ತಜ್ಞರು ವಿವಿಧ ವಿಷಯಗಳ ಕುರಿತು ವಿಚಾರ ವಿನಿಮಯ ಕಾರ್ಯಕ್ರಮ ನಡೆಯಲಿದೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ ಬೆಂಗಳೂರಿನ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ ನಿವೃತ್ತ ಪ್ರಧಾನ ವಿಜ್ಞಾನಿ ಡಾ. ಮಹೇಂದ್ರಕರ್ ಶ್ರೀನಿವಾಸರಾವ್ ಮಣ್ಣಿನ ಮಹತ್ವ ಹಾಗೂ ಜೈವಿಕ ಗೊಬ್ಬರಗಳ ಪಾತ್ರ, ಕುಂದಾಪುರದ ಉಡುಪಿ ಕಲ್ಪರಸ ತೆಂಗು ಮತ್ತು ಸರ್ವಸಾಂಬಾರು ಉತ್ಪಾದಕರ ಕಂಪನಿ ಲಿಮಿಟೆಡ್‌ನ ಅಧ್ಯಕ್ಷ ಸತ್ಯನಾರಾಯಣ ಉಡುಪ ಮತ್ತು ಮೂಡುಬಿದಿರೆಯ ಮಂಗಳೂರು ಕೃಷಿ ಒಕ್ಕೂಟ ಉತ್ಪಾದಕರ ಕಂಪನಿ ಲಿಮಿಟೆಡ್‌ನ ವ್ಯವಸ್ಥಾಪನಾ ನಿರ್ದೇಶಕ ಸುನಿಲ್ ಸೋನ್ಸ್-ಕಲ್ಪರಸ ಉತ್ಪಾದನಾ ತಾಂತ್ರಿಕತೆ, ಪುತ್ತೂರಿನ ಡಿ.ಸಿ.ಆರ್. ವಿಜ್ಞಾನಿ ಡಾ. ಮಂಜೇಶ ಜಿ.ಎನ್. ಕರಾವಳಿ ಪ್ರದೇಶಕ್ಕೆ ಸೂಕ್ತ ಪರ್ಯಾಯ ಬೆಳೆಗಳು ಹಾಗೂ ಸುಂಟಿಕೊಪ್ಪ ಗರ್ವಾಲೆ ಗ್ರಾಮದ ತಳಿ ಸಂರಕ್ಷಕ ಪೂಣಚ್ಚ ನಾಪಂಡ-ಕಾಳುಮೆಣಸು ಬೆಳೆಯ ದೇಸಿ ತಳಿಗಳ ಪರಿಚಯ, ಕೃಷಿಯಲ್ಲಿ ಡ್ರೋನ್ ತಂತ್ರಜ್ಞಾನದ ಬಳಕೆ ಮತ್ತು ಅದರ ಪ್ರಾಯೋಗಿಕತೆ, ಇತ್ಯಾದಿ ವಿಷಯಗಳನ್ನು ಒಳಗೊಂಡಂತೆ ರೈತರಿಗೆ ಉಪಯುಕ್ತವಾದ ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತದೆ.

ಕರಾವಳಿ ಪ್ರದೇಶದ ಎಲ್ಲಾ ರೈತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಇದರ ಸದುಪಯೋಗ ಪಡೆದುಕೊಳ್ಳುವಂತೆ ವಿನಂತಿಸಿಕೊಳ್ಳಲಾಗಿದೆ.

ಪ್ರಮುಖರಾದ ಡಾ ವಾಸುದೇವ್ ನಭಿರಾಜ್, ಡಾ ಸುರೇಶ್, ರಾಜವರ್ಮ ಬೈಲಂಗಡಿ, ಧನಕೀರ್ತಿ ಬಲಿಪ, ಧನಂಜಯ ಕುಲಾಲ್, ಸಂದೀಪ ಪೂಜಾರಿ, ಜಿನೇಂದ್ರ ಜೈನ್, ಸುಭಾಷ್ ಚಂದ್ರಚೌಟ ಉಪಸ್ಥಿತರಿದ್ದರು.

ಐಲ ಕ್ಷೇತ್ರದಲ್ಲಿ ವಿಷು ಜಾತ್ರೆ : ಇಂದು ಬೆಡಿ ಉತ್ಸವ

ಉಪ್ಪಳ: ಐಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಧ್ವಜಾರೋಹಣ ದೊಂದಿಗೆ ವಿಷು ಜಾತ್ರಾ ಮಹೋತ್ಸವ ಆರಂಭಗೊಂಡಿದ್ದು, ಏ.18ರ ವರೆಗೆ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಗುರುವಾರ ನಡುದೀಪೋತ್ಸವದ ಪ್ರಯುಕ್ತ ರಾತ್ರಿ 7.45ರಿಂದ ಮಹಾ ತಿರುವಾದಿರಕಳಿ, ಮಾಗಣೆ ಕೂಟ, ಪಲ್ಲಕ್ಕಿ ಉತ್ಸವ ಸಹಿತ ಬಲಿ ಉತ್ಸವ, ನಡು ದೀಪೋತ್ಸವ ನಡೆಯಿತು



ಏ.17ರಂದು ಬೆಳಗ್ಗೆ 7ರಿಂದ ವಿವಿಧ ವೈದಿಕ ಕಾರ್ಯಕ್ರಮ, ರಾತ್ರಿ 7.45ರಿಂದ ಬಲಿ ಉತ್ಸವ, ಕೆರೆದೀಪೋತ್ಸವ, 9.30ರಿಂದ ಐಲ ಕ್ಷೇತ್ರದ ಮೈದಾನದಲ್ಲಿ ವಿರಾಟ್ ನೃತ್ಯ ಭಜನಾ ಸಂಭ್ರಮ, ರಾತ್ರಿ 10.30ರಿಂದ ಕಟ್ಟೆಪೂಜೆ, ಸಾರ್ವಜನಿಕ ಬೆಡಿ ಉತ್ಸವ, 12.30ಕ್ಕೆ ಕವಾಟ ಬಂಧನ. ಏ.18ರಂದು ಆರಾಟು ಉತ್ಸವ, ಶ್ರೀ ದೇವರ ಅವಭೃತ ಸ್ನಾನ, ಧ್ವಜಾವರೋಹಣದೊಂದಿಗೆ ವಿಷು ಜಾತ್ರೆ ಕಾರ್ಯಕ್ರಮ ಸಂಪನ್ನಗೊಳ್ಳಲಿದೆ. ಏ.19ರಂದು ಸಂಜೆ 5ರಿಂದ ಶ್ರೀ ವ್ಯಾಘ್ರ ಚಾಮುಂಡಿ ದೈವದ ನೇಮ ನಡೆಯಲಿದೆ.

ಸುತ್ತಮುತ್ತ

ನಾಳೆ ಐಲ ತರುಣ ಕಲಾ ವೃಂದದ ವಾರ್ಷಿಕೋತ್ಸವ

ಉಪ್ಪಳ: ಐಲ ತರುಣ ಕಲಾವೃಂದ ಇವರ 58ನೇ ವಾರ್ಷಿಕೋತ್ಸವ ಏ.18ರಂದು ಐಲ ಶ್ರೀ ದುರ್ಗಾಪರಮೇಶ್ವರೀ ಕ್ಷೇತ್ರದ ವಿಷು ಜಾತ್ರೆ ಸಂದರ್ಭದಲ್ಲಿ ನಡೆಯಲಿದೆ. ಅಂದು ರಾತ್ರಿ 7ರಿಂದ 7.30ರ ತನಕ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಪುರುಷೋತ್ತಮ್ ಐಲ ಅಧ್ಯಕ್ಷತೆ ವಹಿಸುವರು. ಜಯಪ್ರಕಾಶ್ ಶೆಟ್ಟಿ ಉಪ್ಪಳ, ಜೆ.ಪಿ.ತೂಮಿನಾಡು, ಪದ್ಮಾ ಮೋಹನ್‌ದಾಸ್ ಐಲ, ವಸಂತಕುಮಾರ್ ಮಯ್ಯ ತಿಂಬರ ಮೊದಲಾದವರು ಉಪಸ್ಥಿತರಿರುವರು. ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ರಾತ್ರಿ 7.30ರಿಂದ ಶಾರದಾ ಆರ್ಟ್ಸ್ ತಂಡದ ಐಸಿರಿ ಕಲಾವಿದರು ಮಂಜೇಶ್ವರ ಸಾದರಪಡಿಸುವ ಜೈ ಭಜರಂಗ ಬಲಿ ತುಳು ನಾಟಕ ಪ್ರದರ್ಶನಗೊಳ್ಳಲಿದೆ.

ಏ.24: ಸ್ಪಾಟ್ ಅಡ್ಮಿಷನ್

ಕಾಸರಗೋಡು: ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ಇ.ಶ್ರೀಧರನ್ ಸೆಂಟರ್ ಫಾರ್ ಲೈಫ್ ಸ್ಕಿಲ್ಸ್ ಎಜುಕೇಶನ್ ನೇತೃತ್ವದಲ್ಲಿ ನಡೆಸಲಾಗುವ ಪಿಜಿ ಡಿಪ್ಲೊಮಾ ಇನ್ ಲೈಫ್ ಸ್ಕಿಲ್ಸ್ ಎಜುಕೇಶನ್ ಕೋರ್ಸ್‌ನಲ್ಲಿ ಖಾಲಿಯಿರುವ ಎಸ್‌ಸಿ ಮತ್ತು ಎಸ್‌ಟಿ ವಿಭಾಗದ ಸೀಟ್‌ಗಳಿಗೆ ಸ್ಪಾಟ್ ಅಡ್ಮಿಷನ್ ಏರ್ಪಡಿಸಲಾಗಿದೆ.
ಮೂಲ ಅರ್ಹತೆ ಯಾವುದೇ ವಿಷಯದಲ್ಲಿ ಪದವಿ ಆಗಿದ್ದು, ಯಾವುದೇ ವಯಸ್ಸಿನ ಮಿತಿಯಿಲ್ಲ, ಪ್ರಸ್ತುತ ಇತರ ಕೋರ್ಸ್‌ಗಳನ್ನು ಕಲಿಯುತ್ತಿರುವವರು ಅಥವಾ ಕೆಲಸ ಮಾಡುತ್ತಿರುವವರು ಅರ್ಜಿ ಸಲ್ಲಿಸಬಹುದು. ಆಸಕ್ತ ಅಭ್ಯರ್ಥಿಗಳು ಏ.24 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 12.30ರ ವರೆಗೆ ಪೆರಿಯ ಕಾಲೇಜು ಕ್ಯಾಂಪಸ್‌ನ ಸರಸ್ವತಿ ಬ್ಲಾಕ್‌ನಲ್ಲಿ ನಡೆಯಲಿರುವ ಸ್ಪಾಟ್ ಅಡ್ಮಿಷನ್‌ಗೆ ಹಾಜರಾಗಬೇಕು ಎಂದು ಸಂಬಂಧಿತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜಿಲ್ಲೆಯಲ್ಲಿ ಹೆಚ್ಚಿದ ಬಿಸಿಲಿನ ತಾಪಮಾನ: ಸಾರ್ವಜನಿಕರಿಗೆ ಎಚ್ಚರಿಕೆ

ಕಾಸರಗೋಡು: ಕಾಸರಗೋಡು ಜಿಲ್ಲೆ ಸೇರಿದಂತೆ ಕೇರಳದ ವಿವಿಧ ಜಿಲ್ಲೆಗಳಲ್ಲಿ ಬಿಸಿಲಿನ ತಾಪಮಾನ ಇನ್ನಷ್ಟು ಏರಿಕೆಯಾದ ಹಿನ್ನೆಲೆಯಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ಸೂಚನೆಗಳನ್ನು ನೀಡಿದೆ. ಉಷ್ಣತೆ ಬಿಸಿಲಿನ ಹೊಡೆತ, ಶಾಖದ ಹೊಡೆತ ಸಹಿತ ಹಲವಾರು ಗಂಭೀರ ಆರೋಗ್ಯ ಸಮಸ್ಯೆ ಉಂಟುಮಾಡ ಬಹುದು. ಆದ್ದರಿಂದ ಸಾರ್ವಜನಿಕರು ಜಾಗರೂಕತೆ ಪಾಲಿಸಬೇಕು. ಜಿಲ್ಲೆಯ ಮಂಜೇಶ್ವರ, ಕಾಸರಗೋಡು, ಹೊಸದುರ್ಗ, ವೆಳ್ಳರಿ ಕುಂಡು ತಾಲೂಕುಗಳಲ್ಲಿ ಸಮಾನ ತಾಪಮಾನ ಹೆಚ್ಚಳಗೊಳ್ಳುತ್ತಿದ್ದು, ಬೆಳಗ್ಗೆ 11 ರಿಂದ ಅಪರಾಹ್ನ 3ರ ವರೆಗೆ ನೇರ ಸೂರ್ಯನ ಬಿಸಿಲಿಗೆ ದೀರ್ಘಕಾಲ ಮೈಯೊಡ್ಡುವುದನ್ನು ತಪ್ಪಿಸಬೇಕೆಂದು ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಏ.23:ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್ ಆರಂಭ

ಕಾಸರಗೋಡು: ಕಾಸರಗೋಡು ಎಲ್‌ಬಿಎಸ್ ಇಂಜಿನಿಯರಿಂಗ್ ಕಾಲೇಜು ವತಿಯಿಂದ ಶಾಲಾ ಮತ್ತು ಪ್ಲಸ್ ಟು ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಇಲೆಕ್ಟ್ರಾನಿಕ್ಸ್ ಸರ್ಕ್ಯೂಟ್ ಡಿಸೈನ್ ಮತ್ತು ಆರ್ಡುನೊ, ಪೈಥಾನ್ ಪ್ರೋಗ್ರಾಮಿಂಗ್ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್‌ನಂತಹ ಕೋರ್ಸ್‌ಗಳನ್ನು ಏ.23 ರಿಂದ ನಡೆಸಲು ನಿರ್ಧರಿಸಲಾಗಿದೆ. ಥಿಯರಿ, ಪ್ರಾಕ್ಟಿಕಲ್ ಸೇರಿದಂತೆ ತರಗತಿ'ಮಯ ಬೆಳಗ್ಗೆ 9.30 ರಿಂದ ಸಂಜೆ 4.30ರವರೆಗೆ ಆಗಿದೆ. ಮಾಹಿತಿಗೆ 9447855635, 9526068319, 9446326176 ಕರೆ ಮಾಡಬಹುದು.

ಉಚಿತ ಲಾಜಿಸ್ಟಿಕ್ಸ್ ಕೋರ್ಸ್‌ಗೆ ಅರ್ಜಿ ಆಹ್ವಾನ

ಕಾಸರಗೋಡು: ಎಎಸ್‌ಎಪಿ ಕೇರಳ ವತಿಯಿಂದ ನಡೆಸಲಾಗುವ ಉಚಿತ ಲಾಜಿಸ್ಟಿಕ್ಸ್ ಕೋರ್ಸ್‌ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಜಾಗತಿಕ ಲಾಜಿಸ್ಟಿಕ್ಸ್ ವಲಯದಲ್ಲಿ ವೃತ್ತಿಜೀವನವನ್ನು ನೀಡುವ 10 ತಿಂಗಳ ಕೋರ್ಸ್ (ಆಫ್‌ಲೈನ್ ಬ್ಯಾಚ್) ಎಎಸ್‌ಎಪಿ ಕಾಸರಗೋಡು ಸಮುದಾಯ ಕೌಶಲ್ಯ ಉದ್ಯಾನವನದಲ್ಲಿ ನಡೆಯಲಿದೆ.
ಬಿಸಿಡಿಡಿ ಸೇರಿದಂತೆ ಅಪರಾಧೇತರ ಪದರದ ವರ್ಗಕ್ಕೆ ಸೇರಿದ ನಿರುದ್ಯೋಗಿಗಳಿಗೆ ಶೇಕಡಾ 100ರಷ್ಟು ಶುಲ್ಕ ಸಬ್ಸಿಡಿ ಮತ್ತು 4000 ರೂಪಾಯಿ ಸ್ಟೈಫಂಡ್ ಲಭಿಸುತ್ತದೆ.
ಈ ನಿಟ್ಟಿನಲ್ಲಿ ಸಂದರ್ಶನವು ಏ.18 ರಂದು ಬೆಳಿಗ್ಗೆ 10.30ಕ್ಕೆ ಕಾಸರಗೋಡಿನ ವಿದ್ಯಾನಗರದಲ್ಲಿರುವ ಎಎಸ್‌ಎಪಿ ಸಮುದಾಯ ಕೌಶಲ್ಯ ಉದ್ಯಾನವನದಲ್ಲಿ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗೆ 9495999752 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

8.50 ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡ ಕಾಮಗಾರಿಗೆ ಈಗ ಆಮೆಗತಿ

ಉದ್ಘಾಟನೆಗಾಗಿ ಕಾಯುತ್ತಿದೆ ಆಸ್ಪತ್ರೆಯ ನೂತನ ಕಟ್ಟಡ!

ಕಾಸರಗೋಡು: ನಬಾರ್ಡ್ ಯೋಜನೆಯಲ್ಲಿ ಒಳಪಡಿಸಿ 8.50 ಕೋ.ರೂ. ವೆಚ್ಚದಲ್ಲಿ ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆಯ ಕಾಂಪೌಂಡ್‌ನಲ್ಲಿ ನೂತನವಾಗಿ ನಿರ್ಮಿಸಲಾದ ಕಟ್ಟಡದ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದರೂ ಈಗ ನಿಧಾನಗತಿಯಲ್ಲಿ ಕೆಲಸ ನಡೆಯುತ್ತಿದ್ದು ಮುಂದಿನ ಪ್ರಕ್ರಿಯೆಗಳು ವಿಳಂಬಗೊಳ್ಳುತ್ತಿವೆ. 2017ರಲ್ಲಿ ಈ ಕಟ್ಟಡದ ಕಾಮಗಾರಿ ಆರಂಭಗೊಂಡಿತ್ತು. ಎಂಟು ಅಂತಸ್ತಿನ ಈ ನೂತನ ಬಹುಮಹಡಿ ಕಟ್ಟಡವನ್ನು ಅತ್ಯಾಧುನಿಕ ಮಾದರಿಯಲ್ಲಿ ನಿರ್ಮಿಸಲಾಗಿದೆ.
ಜನರಲ್ ಆಸ್ಪತ್ರೆಯ ಹಳೆಯ ಕಟ್ಟಡದಲ್ಲಿ ರ್‍ಯಾಂಪ್ ಸೌಲಭ್ಯವಿಲ್ಲ, ನೂತನ ಕಟ್ಟಡದಲ್ಲಿ ರ್‍ಯಾಂಪ್ ಸೌಕರ್ಯ, ಅತ್ಯುತ್ತಮ ರೀತಿಯಲ್ಲಿರುವ ಲಿಫ್ಟ್ ಸೌಕರ್ಯ ಇತ್ಯಾದಿ ಅಳವಡಿಸಲಾಗಿದೆ. ಕಟ್ಟಡದ ಕಾಮಗಾರಿ ಕೊನೆ ಹಂತದಲ್ಲಿದ್ದು, ಅದು ಪೂರ್ಣಗೊಂಡು ಲೋಕಾರ್ಪಣೆಯಾದರೆ ಈ ಆಸ್ಪತ್ರೆಗೆ ಆಗಮಿಸುವ ಬಡರೋಗಿಗಳಿಗೆ ಅತ್ಯುತ್ತಮ ರೀತಿಯಲ್ಲಿ ಸೌಲಭ್ಯಗಳು ಲಭಿಸಲಿವೆ. ಮಾತ್ರವಲ್ಲದೆ ಒಳರೋಗಿಗಳಿಗೆ ಚಿಕಿತ್ಸಾ




ವ್ಯವಸ್ಥೆ ಕಲ್ಪಿಸಲು ಸಾಧ್ಯವಾಗಲಿದೆ.

ಭರವಸೆಯಾಗಿಯೇ ಉಳಿದಿದೆ

ಜನರಲ್ ಆಸ್ಪತ್ರೆಯ ಕಟ್ಟಡದ ಕಾಮಗಾರಿಯನ್ನು ಆರಂಭಿಸಿದ ಬಳಿಕ ಕೇರಳ ರಾಜ್ಯ ಆರೋಗ್ಯ ಇಲಾಖೆ ಸಚಿವರು , ಉನ್ನತ ಮಟ್ಟದ ಅಧಿಕಾರಿಗಳು ಮೂರು ಬಾರಿ ಮಾತ್ರ ಆಸ್ಪತ್ರೆ ಸಂದರ್ಶಿಸಿದ್ದರು. ಈ ಸಂದರ್ಭ ಸಲಹೆ ಸೂಚನೆ ನೀಡಿದ್ದ ಸಚಿವರು, ಕಟ್ಟಡ ಕಾಮಗಾರಿ ಶೀಘ್ರ ಪೂರ್ಣಗೊಳಿಸುವುದಾಗಿ ಮತ್ತು ಅತೀ ಶೀಘ್ರ ಉದ್ಘಾಟನೆಗೆ ವ್ಯವಸ್ಥೆ ಮಾಡು ವುದಾಗಿ ಭರವಸೆ ನೀಡಿದ್ದರು. ಆದರೆ ಸಚಿವರ ಮಾತು ಇಲ್ಲಿ ಪಾಲನೆಯಾಗದಿರುವುದು ವಿಪರ್ಯಾಸವಾಗಿದೆ.
ಗುತ್ತಿಗೆದಾರನಿಗೆ 8.50 ಕೋ.ರೂ. ಒಟ್ಟು ಕಾಮಗಾರಿ ಮೊತ್ತವಾಗಿದ್ದು, ಆದರೆ ಅದರಲ್ಲಿ ಇಲ್ಲಿಯವರೆಗೆ ಕಟ್ಟಡಕ್ಕೆ ಖರ್ಚಾದ ಎಲ್ಲಾ ಮೊತ್ತವನ್ನು ನೀಡಿಲ್ಲವೆಂದು ದೂರಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳನ್ನು ಈ ನಿಟ್ಟಿನಲ್ಲಿ ಹಲವು ಬಾರಿ ಸಂಪರ್ಕಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಲಾಗಿದೆ. ಕಟ್ಟಡಕ್ಕೆ ಇದುವರೆಗೆ ವೆಚ್ಚವಾದ ಹಣವನ್ನು ಒದಗಿಸದಿದ್ದಲ್ಲಿ ಮುಂದಿನ ಕಾಮಗಾರಿ ಬಹಳಷ್ಟು ವಿಳಂಬಗೊಳ್ಳಬಹುದೆಂದು ಗುತ್ತಿಗೆದಾರರು ತಿಳಿಸಿದ್ದಾರೆ.
ಈ ಮಧ್ಯೆ ಉಕ್ಕಿನಡ್ಕದಲ್ಲಿರುವ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜು ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸದೆ ಜಿಲ್ಲೆಯ ಬಗ್ಗೆ ಆರೋಗ್ಯ ಇಲಾಖೆಯ ಅಧಿಕಾರಿಗಳು ತೋರುತ್ತಿರುವ ಕಡೆಗಣನೆಯಂತೆ ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆಯ ನೂತನ ಕಟ್ಟಡ ಪೂರ್ಣಗೊಳಿಸುವಲ್ಲಿಯೂ ಅವಗಣನೆ ಕಂಡುಬರುತ್ತಿರುವುದಾಗಿ ಸಾರ್ವಜನಿಕರಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗತೊಡಗಿವೆ.

ಆಸ್ಪತ್ರೆಯಲ್ಲಿ ಅಗತ್ಯದ ಸೌಲಭ್ಯಗಳು ಬೇಕು

ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆ ಕಾಸರಗೋಡು ನಗರದ ಹೃದಯ ಭಾಗದಲ್ಲಿರುವ ಪ್ರಮುಖ ಆರೋಗ್ಯ ಕೇಂದ್ರವಾಗಿದೆ. ಈ ಆಸ್ಪತ್ರೆಗೆ ಜಿಲ್ಲೆಯ ವಿವಿಧ ಕಡೆಗಳಲ್ಲಿ ದಿನಂಪ್ರತಿ ರೋಗಿಗಳು ಆಗಮಿಸುತ್ತಿದ್ದಾರೆ. ಅಗತ್ಯ ಮೂಲಭೂತ ಸೌಲಭ್ಯಗಳು ಇನ್ನೂ ಅಳವಡಿಕೆಯಾಗದೆ ರೋಗಿಗಳು, ಜನಸಾಮಾನ್ಯರು ಸಮಸ್ಯೆ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆ ರಾಜ್ಯದ ಆರೋಗ್ಯ ಖಾತೆ ಸಚಿವರು ವಿಶೇಷ ಮುತುವರ್ಜಿ ವಹಿಸಬೇಕಾಗಿತ್ತು. ಜೊತೆಗೆ ಆರೋಗ್ಯ ಇಲಾಖೆ ಅಧಿಕಾರಿಗಳು, ಜಿಲ್ಲಾಡಳಿತ ವಿಶೇಷ ಕಾಳಜಿಯಡಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಬೇಕಾದ ಎಲ್ಲಾ ಸೌಲಭ್ಯ ಒದಗಿಸಬೇಕಾಗಿದೆ.

ಜನರಲ್ ಆಸ್ಪತ್ರೆಯ ನಿರ್ಲಕ್ಷ್ಯ

ಕಾಸರಗೋಡು ಜನರಲ್ ಆಸ್ಪತ್ರೆಯ ಬಗ್ಗೆ ನಿರ್ಲಕ್ಷ್ಯ ತೋರಲಾಗುತ್ತಿದೆ. ಇದರ ಹಿಂದೆ ಖಾಸಗಿ ಆಸ್ಪತ್ರೆಗಳ ಲಾಬಿಯಿದೆಯೇ ಎಂಬ ಬಗ್ಗೆ ಅನುಮಾನ ಮೂಡಿದ್ದು, ಈ ವಿಚಾರದಲ್ಲಿ ಆಸ್ಪತ್ರೆಯ ಆಡಳಿತ ಮಂಡಳಿ ಜನರಿಗೆ ಸ್ಪಷ್ಟಪಡಿಸಬೇಕಾಗಿದೆ. ಆಸ್ಪತ್ರೆಯಲ್ಲಿ ಅಗತ್ಯದ ವೈದ್ಯರು ಮತ್ತು ಸಿಬ್ಬಂದಿಗಳು ಇಲ್ಲದಿರುವುದು ಸಮಸ್ಯೆ ಒಂದು ಭಾಗವಾಗಿದೆ. ಸಂಘ ಸಂಸ್ಥೆಗಳು ಒಗ್ಗೂಡಿ ಕಾಸರಗೋಡು ಜನರಲ್ ಆಸ್ಪತ್ರೆ ನೂತನ ಕಟ್ಟಡದ ಕಾಮಗಾರಿ ಪೂರ್ಣಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ ಕೈಗೊಳ್ಳುವ ಲಕ್ಷಣಗಳು ಗೋಚರಿಸುತ್ತಿವೆ. ಈ ಬಗ್ಗೆ ಇನ್ನಾದರೂ ವಿಶೇಷ ಯೋಜನೆ ಸಿದ್ಧಪಡಿಸಿ ಅನುಷ್ಠಾನಕ್ಕೆ ತರಬೇಕಾಗಿದೆ.

ಮೇ 16ರಂದು ಬಜಕೂಡ್ಲು ಗೋಶಾಲೆಯಲ್ಲಿ ಶನಿ ಜಯಂತಿ: ಆಮಂತ್ರಣ ಪತ್ರ ಬಿಡುಗಡೆ



ಪೆರ್ಲ: ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ನಿರ್ದೇಶನದಲ್ಲಿರುವ ಪೆರ್ಲ ಸಮೀಪದ ಬಜಕೂಡ್ಲು ಅಮೃತಧಾರ ಗೋಶಾಲೆಯಲ್ಲಿ ಮೇ 16ರಂದು ಶನಿ ಜಯಂತಿ ಕಾರ್ಯಕ್ರಮ ಜರಗಲಿದೆ. ಈ ಸಮಾರಂಭದ ಶನಿ ನಮನ ಪಾಪ ಶಮನ ಆಮಂತ್ರಣ ಪತ್ರಿಕೆಯನ್ನು ಮಂಗಳವಾರ ಬಿಡುಗಡೆಗೊಳಿಸಲಾಯಿತು.
ಈ ಸಂದರ್ಭದಲ್ಲಿ ಗೋಶಾಲೆಯ ಧರ್ಮಕರ್ಮ ವಿಭಾಗದ ಪ್ರಮುಖರಾದ ವೇದಮೂರ್ತಿ ಕೇಶವಪ್ರಸಾದ ಭಟ್ ಕೂಟೇಲು ಕಾರ್ಯಕ್ರಮದ ಕುರಿತು ಸಮಗ್ರ ಮಾಹಿತಿ ನೀಡಿ, ಶನಿ ಎಲ್ಲಾ ದೇವತೆಗಳನ್ನೂ ತನ್ನ ಪ್ರಭಾವಕ್ಕೆ ಒಳಪಡಿಸಿದ್ದಾನೆ. ಆದರೆ ಆಂಜನೇಯ ಮತ್ತು ಗಣಪತಿಯನ್ನು ಕಾಡಲು ಶನಿದೇವರಿಗೆ ಆಗಲಿಲ್ಲ. ಈ ಹಿನ್ನೆಲೆಯಲ್ಲಿ ವೈಶಾಖ ಅಮಾವಾಸ್ಯೆಯ ಪುಣ್ಯದಿನದಂದು ಶನಿ ಜಯಂತಿ , ಅಖಂಡ ಗಣಪತಿ ಅಥರ್ವಶೀರ್ಷ ಪಾರಾಯಣವನ್ನು ನಡೆಸಲು ತೀರ್ಮಾನಿಸಲಾಗಿದೆ. ಪರಾಭವ ಸಂವತ್ಸರದ ಶನಿ ಜಯಂತಿಗೆ ವಿಶೇಷ ಮಹತ್ವವಿದೆ. ಗಣಪತಿಯ ಜೊತೆಗೆ ಶನಿಯ ಆರಾಧನೆ ನಡೆಯುತ್ತದೆ. ಶನಿದೋಷದ ಪರಿಹಾರಕ್ಕೆ ಆಂಜನೇಯ, ಗಣಪತಿ ಆರಾಧನೆ ಬಹುಮುಖ್ಯ ಎಂದರು.
ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಗೋಶಾಲೆಯ ಪದಾಧಿಕಾರಿಗಳು, ಗೋಪ್ರೇಮಿಗಳು ಪಾಲ್ಗೊಂಡಿದ್ದರು.
ಮೇ 16ರಂದು ಪ್ರಾತಃಕಾಲ ಬಾಲಗಣಪತಿ ಹೋಮ ಬಳಿಕ ಸೂರ್ಯೋದಯದಿಂದ ಮರುದಿನ ಸೂರ್ಯೋದಯದ ತನಕ ನಿರಂತರ ಗಣಪತಿ ಅಥರ್ವಶೀರ್ಷ ಪಾರಾಯಣ, ನವಗ್ರಹಶಾಂತಿ, ಸಹಸ್ರ ಸಂಖ್ಯೆಯಲ್ಲಿ ಶನಿಶಾಂತಿ, ವಿವಿಧ ಸ್ತೋತ್ರಗಳ ಪಾರಾಯಣ, ಹನುಮತ್ಪಂಚರತ್ನ ಸ್ತೋತ್ರ ಪಠಣ, ಶನಿಕಲ್ಪೋಕ್ತ ಪೂಜೆ, ಗಣಪತ್ಯಥರ್ವಶೀರ್ಷ ಹೋಮ ನಡೆಯಲಿದೆ.

ಏ.19ರಂದು ಕೂಡ್ಲುವಿನಲ್ಲಿ 'ಶ್ರೀಸ್ಕಂದ ಒಡ್ಡೋಲಗ' ವಿನೂತನ ಕಾರ್ಯಕ್ರಮ



ಕಾಸರಗೋಡು: ರಾಮದಾಸನಗರ ಕೂಡ್ಲು ಪರಿಸರದ ಪಾಯಿಚ್ಚಾಲಿನ ಶ್ರೀಸ್ಕಂದ ಯಕ್ಷಗಾನ ಕೇಂದ್ರದ ನೇತೃತ್ವದಲ್ಲಿ 'ಶ್ರೀಸ್ಕಂದ ಒಡ್ಡೋಲಗ' ಎಂಬ ವಿನೂತನ ಕಾರ್ಯಕ್ರಮ ಏ.19ರಂದು ಕೂಡ್ಲು ಶ್ರೀ ಗೋಪಾಲಕೃಷ್ಣ ಪ್ರೌಢಶಾಲೆಯ ಕಲಾವಿದ ಕೂಡ್ಲು ಗೋಪಾಲಕೃಷ್ಣ ಶ್ಯಾನುಭೋಗ್ ಸಭಾಂಗಣದ ಕೂಡ್ಲು ಈಶ್ವರ ಶ್ಯಾನುಭೋಗ್ ವೇದಿಕೆಯಲ್ಲಿ ಜರಗಲಿದೆ.
ಮಕ್ಕಳಲ್ಲಿನ ಯಕ್ಷಗಾನದ ಪ್ರತಿಭೆಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಆಯ್ದ ಐದು ತಂಡಗಳಿಂದ ದಿನಪೂರ್ತಿ ಯಕ್ಷಗಾನ ಪ್ರದರ್ಶನ. ಬೆಳಿಗ್ಗೆ 9 ಗಂಟೆಗೆ ಶ್ರೀಸ್ಕಂದ ಒಡ್ಡೋಲಗವನ್ನು ಕೇಂದ್ರದ ಗುರುಗಳಾದ ರಂಜಿತ್ ಮಲ್ಲ ಅವರು ಉದ್ಘಾಟಿಸಲಿದ್ದಾರೆ. ಬಳಿಕ 9.30ಕ್ಕೆ ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ತರಬೇತಿ ಕೇಂದ್ರದ ಸದಸ್ಯರಿಂದ 'ವೇದೋದ್ಧರಣ' ಎಂಬ ಕಥಾಭಾಗ, 11ರಿಂದ ಕೇರಳ ರಾಜ್ಯ ಶಾಲಾ ಕಲೋತ್ಸವದಲ್ಲಿ ರಾಜ್ಯಮಟ್ಟದಲ್ಲಿ ಎ ಗ್ರೇಡ್ ಪಡೆದ ಕಲ್ಲಿಕೋಟೆ ಜಿಲ್ಲೆಯ ಪ್ರೊವಿಡೆನ್ಸ್ ಹೈಯರ್ ಸೆಕೆಂಡರಿ ಶಾಲೆಯ ಮಕ್ಕಳಿಂದ ಸುಧನ್ವಾರ್ಜುನ ಕಾಳಗ, 11,45ರಿಂದ ಶ್ರೀ ವೆಂಕಟ್ರಮಣ ಸ್ವಾಮಿ ಕೃಪಾಶ್ರಿತ ಯಕ್ಷಗಾನ ಅಧ್ಯಯನ ಕೇಂದ್ರದವರಿಂದ ನರಕಾಸುರ ಮೋಕ್ಷ, 1.30ರಿಂದ ಕೇರಳ ರಾಜ್ಯ ಶಾಲಾ ಕಲೋತ್ಸವದಲ್ಲಿ ರಾಜ್ಯಮಟ್ಟದಲ್ಲಿ ಎ ಗ್ರೇಡ್ ಪಡೆದ ಕಣ್ಣೂರಿನ ಸೈಂಟ್ ತೇರೆಸಾಸ್ ಆಂಗ್ಲೋ ಇಂಡಿಯನ್ ಹೈಯರ್ ಸೆಕೆಂಡರಿ ಶಾಲೆಯ ಮಕ್ಕಳಿಂದ ತರಣಿಸೇನ ಕಾಳಗ, 2.15ರಿಂದ ಪಾಯಿಚ್ಚಾಲು ಕೂಡ್ಲು ಶ್ರೀಸ್ಕಂದ ಯಕ್ಷಗಾನ ಕೇಂದ್ರದವರಿಂದ ಮಹಿಷಮರ್ದಿನಿ ಎಂಬ ಕಥಾಭಾಗಗಳ ಪ್ರದರ್ಶನವಿದೆ.

ಸಮಾರೋಪ ಸಮಾರಂಭ

ಸಂಜೆ ಜರಗುವ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಸ್ಮರಣಿಕೆ ನೀಡಿ ಗೌರವಿಸಲಾಗುವುದು. ಶ್ರೀಸ್ಕಂದ ಯಕ್ಷಗಾನ ಕೇಂದ್ರ ಅಧ್ಯಕ್ಷ ಕಿರಣ್‌ಪ್ರಸಾದ್ ಕೂಡ್ಲು ಅಧ್ಯಕ್ಷತೆ ವಹಿಸಲಿದ್ದು ಮಧೂರು ಗ್ರಾ.ಪಂ. ಉಪಾಧ್ಯಕ್ಷ ಭಾನುಪ್ರಕಾಶ್, ಶಿವಮಂಗಲ ಕ್ಷೇತ್ರದ ಪ್ರಧಾನ ಅರ್ಚಕ ನಾಗೇಂದ್ರ ಭಟ್, ಕೂಡ್ಲು ಶಾಲೆಯ ವ್ಯವಸ್ಥಾಪಕರಾದ ಕೆ.ಜಿ.ಶ್ಯಾನುಭೋಗ್, ಶೇಷವನ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಆಡಳಿತ ಮೊಕ್ತೇಸರ ವೇಣುಗೋಪಾಲ ಉಪಸ್ಥಿತರಿರುವರು.

ಪಚ್ಲಂಪಾರೆ ಎಸ್‌ಸಿ ಕಾಲನಿಯಲ್ಲಿರುವ ಸ್ಮಶಾನ ಅಭಿವೃದ್ಧಿಗೆ ನಾಗರಿಕರ ಒತ್ತಾಯ



ಉಪ್ಪಳ: ಮಂಗಲ್ಪಾಡಿ ಪಂಚಾಯತ್‌ನ ಪಚ್ಲಂಪಾರೆ ಎಸ್‌ಸಿ ಕಾಲನಿಯಲ್ಲಿರುವ ಸ್ಮಶಾನ ಶೋಚನೀಯವಸ್ಥೆಯಲ್ಲಿದ್ದು ಅಭಿವೃದ್ಧಿಗೊಳಿಸಲು ನಿವಾಸಿಗಳು ಒತ್ತಾಯಿಸಿದ್ದಾರೆ.

ಪರದಾಡಬೇಕಾಗಿದೆ

ಸ್ಮಶಾನದಲ್ಲಿ ಶವ ಸುಡುವ ಶೆಡ್ಡ್ ಹಾಗೂ ಹಾಗೂ ಹೊರಭಾಗ ಅಳವಡಿಸಿದ ತಗಡ್ ಶೀಟ್ ತುಕ್ಕು ಹಿಡಿದು ಹಾನಿಗೀಡಾಗಿದ್ದು ಮಳೆಗಾಲದಲ್ಲಿ ತೀರಾ ಸಮಸ್ಯೆಗೆ ಕಾರಣವಾಗಿದೆ. ಅಲ್ಲದೆ ಬೆಳಕಿನ ವ್ಯವಸ್ಥೆಯಿಲ್ಲದಿರುವುದರಿಂದ ರಾತ್ರಿ ಹೊತ್ತಲ್ಲಿ ಶವ ಸುಡಲು ತಲುಪುವವರು ಪರದಾಡಬೇಕಾಗಿದೆ. ಅಲ್ಲದೆ ನೀರಿನ ವ್ಯವಸ್ಥೆ ಕೂಡಾ ಅಗತ್ಯವಾಗಿದೆ. ಹಲವು ವರ್ಷಗಳಿಂದಲೂ ಅಭಿವೃದ್ಧಿ ಬಗ್ಗೆ ಪಂಚಾಯತ್ ಅಧಿಕಾರಿಗಳನ್ನು ಸಂಪರ್ಕಿಸುತ್ತಲೇ ಬರುತ್ತಿದ್ದರೂ ಇದುವರೆಗೂ ದುರಸ್ತಿ ಕಾರ್ಯದ ಬಗ್ಗೆ ಕ್ರಮಯಿಲ್ಲವೆಂದು ಸ್ಥಳೀಯರು ತಿಳಿಸಿದ್ದಾರೆ.
ಸಂಬಂಧಪಟ್ಟ ಪಂಚಾಯತ್ ಅಧಿಕಾರಿಗಳು ಮಳೆಗಾಲ ಬರುವ ಮುನ್ನವೇ ಸ್ಮಶಾನದ ಅಭಿವೃದ್ಧಿ ಕೆಲಸ ನಡೆಸಬೇಕು ಎಂದು ಊರವರು ಒತ್ತಾಯಿಸಿದ್ದಾರೆ.

ಅಪಾಯ ಆಹ್ವಾನಿಸುತ್ತಿದೆ ಜೋಡುಕಲ್ಲಿನ ರಸ್ತೆ ಬದಿಯ ಒಣ ಮರ: ತೆರವಿಗೆ ಆಗ್ರಹ



ಉಪ್ಪಳ: ಕೈಕಂಬ – ಬಾಯಾರು ರಸ್ತೆಯ ಜೋಡುಕಲ್ಲು ಎಂಬಲ್ಲಿ ಒಣಗಿದ ಮರಗಳು ಯಾವುದೇ ಕ್ಷಣದಲ್ಲಿ ಧಾರಾಶಾಯಿಗೊಳ್ಳುವ ಆತಂಕ ಸಾರ್ವಜನಿಕರನ್ನು ಕಾಡುತ್ತಿದೆ. ಈ ರಸ್ತೆ ಅಭಿವೃದ್ಧಿಗೊಳಿಸುವ ವೇಳೆ ಗುತ್ತಿಗೆದಾರ ಅಪಾಯದ ಸ್ಥಿತಿಯಲ್ಲಿರುವ ಮರಗಳನ್ನು ತೆರವುಗೊಳಿಸಿದ್ದರು. ಆದರೆ ಒಣಗಿದ ಈ ಮರವನ್ನು ತೆರವುಗೊಳಿಸದ ಹಿನ್ನೆಲೆಯಲ್ಲಿ ಅಪಾಯತಪ್ಪಿದ್ದಲ್ಲ ಈ ಪರಿಸರದಿಂದ ಪ್ರಮುಖ ವಿದ್ಯುತ್ ತಂತಿಹೊಂದಿರುವ ಕಂಬಗಳುಯಿದ್ದು, ಮರ ಮುರಿದು ತಂತಿ ಮೇಲೆ ಬಿದ್ದಲ್ಲಿ ಹಲವಾರು ಕಂಬಗಳು ರಸ್ತೆಗೆ ಮುರಿದು ಬೀಳಬಹುದಾಗಿದೆ. ದಿನನಿತ್ಯ ನೂರಾರು ವಾಹನಗಳು ಸಂಚರಿಸುತ್ತಿದೆ.
ಅಲ್ಲದೆ ಈ ಪರಿಸರದಲ್ಲಿ ವ್ಯಾಪಾರ ಸಂಸ್ಥೆಗಳು ಹೊಂದಿದ್ದು ಜನನಿಬಿಡ ಪ್ರದೇಶವಾಗಿದೆ. ಆದ್ದರಿಂದ ಇಲ್ಲಿ ಅಪಾಯದ ಸ್ಥಿತಿಯಲ್ಲಿರುವ ಒಣಗಿದ ಮರಗಳನ್ನು ತೆರವುಗೊಳಿಸಬೇಕೆಂದು ಊರವರು ಒತ್ತಾಯಿಸುತ್ತಲೇ ಇದ್ದಾರೆ. ಆದರೆ ತೆರವುಗೊಳಿಸಲು ಕ್ರಮಯಿಲ್ಲವೆಂದು ಸ್ಥಳೀಯರು ತಿಳಿಸಿದ್ದಾರೆ.
ಮಳೆಗಾಲ ಸಮೀಪಿಸುವ ಮೊದಲೇ ಮರವನ್ನು ತೆರವುಗೊಳಿಸದಿದಲ್ಲಿ ಅಪಾಯ ತಪ್ಪಿದ್ದಲ್ಲ. ಅಪಾಯದಲ್ಲಿರುವ ಮರವನ್ನು ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಮುತುವರ್ಜಿವಹಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಪೆರಡಾಲ ಶ್ರೀ ದೇವಸ್ಥಾನದ ಬ್ರಹ್ಮಕಲಶ: ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶ ಏ.17ರಂದು ಆರಂಭಗೊಳ್ಳಲಿದೆ. ಬೆಳಿಗ್ಗೆ 7 ಗಂಟೆಗೆ ಗಣಪತಿ ಹೋಮ, 8.30ಕ್ಕೆ ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಳ ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಆನೆಮಜಲು ಅವರಿಂದ ಉಗ್ರಾಣ ಮುಹೂರ್ತ, 9.30ಕ್ಕೆ ಕೆಡೆಂಜಿ ಶ್ರೀ ಮಹಾವಿಷ್ಣು ದೇವಸ್ಥಾನದಿಂದ ವಾದ್ಯಘೋಷಗಳೊಂದಿಗೆ ಹೊರಟು ಶ್ರೀ ಕಿನ್ನಿಮಾಣಿ ಪೂಮಾಣಿ ದೈವಸ್ಥಾನದ ಮೂಲಕ ಬದಿಯಡ್ಕ ಪೇಟೆಯಲ್ಲಿ ಸಾಗಿ ಭವ್ಯ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ ನಡೆಯಲಿದೆ.
ಸಂಜೆ 6 ಗಂಟೆಗೆ ವಾಸ್ತುಶಿಲ್ಪಿ ಕೃಷ್ಣಪ್ರಸಾದ ಮುನಿಯಂಗಳ ಅವರ ಉಪಸ್ಥಿತಿಯಲ್ಲಿ ಪ್ರಾಸಾದ ಪರಿಗ್ರಹ, ಸಾಮೂಹಿಕ ಶ್ರೀ ದೇವತಾಪ್ರಾರ್ಥನೆ, ನಟರಾಜವೇದಿಕೆಯಲ್ಲಿ ಸಾಂಸ್ಕೃತಿಕಕಾರ್ಯಕ್ರಮಗಳನ್ನು ಏಷ್ಯಾನೆಟ್ ಚಾನೆಲ್ ಧಾರವಾಹಿ ನಟಿ ಆದಿರಾ ಲಕ್ಷ್ಮಣ್ ಉದ್ಘಾಟಿಸುವರು. ಬ್ರಹ್ಮಕಲಶೋತ್ಸವ ಸಮಿತಿಯ ರಕ್ಷಾಽಕಾರಿ ಗೋಪಾಲಕೃಷ್ಣ ಪೈ ಬದಿಯಡ್ಕ ಅಧ್ಯಕ್ಷತೆ ವಹಿಸುವರು. 6.30ರಿಂದ ರಂಗಸಿರಿ ಸಾಂಸ್ಕೃತಿಕ ವೇದಿಕೆ ಬದಿಯಡ್ಕ ಇವರಿಂದ ಯಕ್ಷಗಾನ ಬಯಲಾಟ, ರಾತ್ರಿ 9ರಿಂದ ನೃತ್ಯಗುರು ಸೌರಮ್ಯ ಶೈಜು ಪರಕ್ಕಿಲ ಮಧೂರು ಬಳಗದವರಿಂದ ನೃತ್ಯಾರ್ಚನೆ ಜರಗಲಿದೆ.

ಏ.28ರಂದು ಹರಾಜು ವ್ಯವಸ್ಥೆ

ಕಾಸರಗೋಡು: ಕಾಸರಗೋಡು ಸರ್ಕಾರಿ ಕಾಲೇಜಿಗೆ ಹೊಸದಾಗಿ ನಿರ್ಮಿಸಲಾದ ಆವರಣಗೋಡೆಗೆ ಅಡ್ಡಿಯಾಗಿರುವ ತೇಗ ಸೇರಿದಂತೆ 33 ಮರಗಳನ್ನು ಹರಾಜು ಮಾಡಿ ಮಾರಾಟ ಮಾಡಲಾಗುತ್ತಿದೆ. ಏ.28ರಂದು ಬೆಳಿಗ್ಗೆ 11.30ಕ್ಕೆ ಕಾಲೇಜು ಕಚೇರಿ ಆವರಣದಲ್ಲಿ ಷರತ್ತುಗಳಿಗೆ ಒಳಪಟ್ಟು ಹರಾಜು ನಡೆಯಲಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 04994256027 ಕರೆ ಮಾಡಬಹುದು.

ಸಿಬಿಎಸ್‌ಸಿ ಎಸ್ಸೆಸೆಲ್ಸಿ: ಶೇ.100 ಫಲಿತಾಂಶ ದಾಖಲಿಸಿದ ನಾಯ್ಕಾಪು ಲಿಟ್ಲ್ ಲಿಲ್ಲಿ ಸ್ಕೂಲ್



ಕುಂಬಳೆ: ಸತತ 28 ವರ್ಷಗಳಿಂದ ನಾಯ್ಕಾಪು ಲಿಟ್ಲ್ ಲಿಲ್ಲಿ ಆಂಗ್ಲ ಮಾಧ್ಯಮ ಶಾಲೆಯು ಸಿಬಿಎಸ್‌ಸಿ ವಿಭಾಗದ ಎಸ್ಸೆಸೆಲ್ಸಿ ಪರೀಕ್ಷಾಯಲ್ಲಿ ಶೇಕಡಾ 100 ಫಲಿತಾಂಶ ಪಡೆದು ನಾಡಿನ ಹೆಮ್ಮೆಯ ಶಿಕ್ಷಣ ಸಂಸ್ಥೆಯಾಗಿ ಹೊರಹೊಮ್ಮಿದೆ.
ಸಿಬಿಎಸ್‌ಇ ಪರೀಕ್ಷಾ ಮಂಡಳಿಯು ನಡೆಸಿದ ಈ ಬಾರಿಯ ಎಸ್ಸೆಸೆಲ್ಸಿ ಪರೀಕ್ಷೆಯಲ್ಲೂ ಶಾಲೆ ಶೇಕಡಾ 100ರಷ್ಟು ಫಲಿತಾಂಶ ದಾಖಲಿಸುವ ಮೂಲಕ ಶೈಕ್ಷಣಿಕ ಪ್ರಗತಿಯಾನ ಮುಂದುವರಿದಿದೆ. ಫಲಿತಾಂಶಕ್ಕೆ ಅರ್ಹರಾದ ಎಲ್ಲಾ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ, ಮಂಡಳಿ ಅಧ್ಯಕ್ಷೆ ಸರಸ್ವತಿ ಎ. ಅಭಿನಂದಿಸಿದ್ದಾರೆ.
ನಿರಂತರವಾಗಿ ಶೇಕಡಾ 100 ಫಲಿತಾಂಶ ಪಡೆಯುವ ಶಾಲಾ ಇತಿಹಾಸದ ಮುಂದುವರಿಸಲು ಕಾರಣರಾದ ಪ್ರಾಂಶುಪಾಲ ಚಂದ್ರಬೋಸ್, ಅಧ್ಯಾಪಿಕೆಯರಾದ ರಾಶಿತಾ, ರೇಖಾ, ಮೋನಿಕಾ, ಜೀತಾ, ನಿಶಾ ಅವರ ನಿಸ್ವಾರ್ಥ ಕಾರ್ಯವನ್ನು ಶಾಲಾ ಆಡಳಿತ ಮಂಡಳಿ ಪ್ರಶಂಸಿಸಿದೆ.
ನಾಯ್ಕಾಪು ಲಿಟ್ಲ್ ಲಿಲ್ಲಿ ಇಂಗ್ಲೀಷ್ ಮಾಧ್ಯಮ ಶಾಲೆಯು ಪ್ಲೇ ಸ್ಕೂಲ್‌ನಿಂದ ಆರಂಭಗೊಂಡು ಎಲ್‌ಕೆಜಿ, ಯುಕೆಜಿ , 1ರಿಂದ 10 ಹಾಗೂ ಪದವಿ ಪೂರ್ವ ತರಗತಿಗಳ ಒಳಗೊಂಡಿದೆ. ಈ ಶಾಲೆಯಲ್ಲಿ ವಿದ್ಯಾರ್ಜನೆ ಮಾಡಿದವರು ದೇಶದ ವಿವಿಧ ರಾಜ್ಯಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ನಾಡಿಗೆ ಕೀರ್ತಿ ತಂದಿದ್ದಾರೆ.

ಶ್ಲಾಘನೆ

ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ನಾಯ್ಕಾಪು ಲಿಟ್ಲ್ ಲಿಲ್ಲಿ ಇಂಗ್ಲಿಷ್ ಮೀಡಿಯಂ ಶಾಲೆ 28 ವರ್ಷಗಳಿಂದ ಶೇ.100ರಷ್ಟು ದಾಖಲೆ ಫಲಿತಾಂಶ ಪಡೆದಿದ್ದು, ಅಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳ ಸಂಯುಕ್ತ ಸಹಕಾರವೇ ಮುಖ್ಯ ಕಾರಣ ಶ್ಲಾಘನೆ ವ್ಯಕ್ತಗೊಂಡಿದೆ.



ಇಚ್ಲಂಗೋಡು ಅಡ್ಕ ಉಳಿಸಿನಡಿ ಬಯಲಿನಲ್ಲಿ ಬುಧವಾರ ಸಂಜೆ ಹುಲ್ಲಿಗೆ ಬೆಂಕಿ ತಗುಲಿ ಹುಲ್ಲು ಸಹಿತ ಕೆಲವು ಮರಗಳು ನಾಶಗೊಂಡಿವೆ. ಹಲವು ಎಕರೆ ಸ್ಥಳ ಹೊಂದಿರುವ ಬಯಲು ಪ್ರದೇಶ ಇದಾಗಿದೆ. ಮಾಹಿತಿ ತಿಳಿದು ಉಪ್ಪಳ ಅಗ್ನಿ ಶಾಮಕದಳ ಹಾಗೂ ಊರವರು ಸೇರಿ ಬೆಂಕಿಯನ್ನು ನಂದಿಸಲು ಸಹಕರಿಸಿದರು.

ಶ್ರೀ ಮಲ್ಲಿಕಾರ್ಜುನ ಬಾಲಗೋಕುಲ ಸಂಭ್ರಮದ ದಶಮಾನೋತ್ಸವ ಕಾರ್ಯಕ್ರಮ

ಆಧ್ಯಾತ್ಮಿಕ ಉನ್ನತಿಯಿಂದ ಭವ್ಯ ಭಾರತ ನಿರ್ಮಾಣ: ಒಡಿಯೂರು ಶ್ರೀ

ಕಾಸರಗೋಡು: ಆಧ್ಯಾತ್ಮವೇ ಭಾರತದ ತಿರುಳು. ಆಧ್ಯಾತ್ಮಿಕ ಉನ್ನತಿಯಿಂದ ಭವ್ಯ ಭಾರತ ನಿರ್ಮಾಣ ಸಾಧ್ಯ. ವ್ಯಕ್ತಿ ವಿಕಾಸದಿಂದ ದೇಶ ವಿಕಾಸ. ಇಂದಿನ ದಶಮಾನೋತ್ಸವ ಎಂಬುದು ಶತಮಾನೋತ್ಸವದ ಮುನ್ನುಡಿ. ಶಿಕ್ಷಕರು ಮತ್ತು ಪೋಷಕರ ಮೂಲಕ ಪ್ರಜ್ಞಾವಂತರ ಸೃಷ್ಟಿ ಭಾರತವೆಂಬ ರಥಕ್ಕೆ ಸಾರಥಿಯಾಗಬೇಕು ಎಂದು ಶ್ರೀ ಕ್ಷೇತ್ರ ಒಡಿಯೂರಿನ ಪರಮಪೂಜ್ಯ ಶ್ರೀ ಗುರುದೇವಾನಂದ ಸ್ವಾಮೀಜಿ ನುಡಿದರು.
ನುಳ್ಳಿಪ್ಪಾಡಿ ಕೋಟೆಕಣಿ ಅಡ್ಡ ರಸ್ತೆಯ ಶ್ರೀ ಮಲ್ಲಿಕಾರ್ಜುನ ಬಾಲಗೋಕುಲದ ಸಂಭ್ರಮದ ದಶಮಾನೋತ್ಸವ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಆಶೀರ್ವಚನ ನೀಡಿ



ಸ್ವಾಮೀಜಿ ಮಾತನಾಡಿದರು. ವಿಶ್ವಹಿಂದೂ ಪರಿಷತ್ ಕಾಸರಗೋಡು ಜಿಲ್ಲಾ ಸತ್ಸಂಗ ಪ್ರಮುಖ್ ಕೈತಪ್ರಂ ಮಾಧವನ್ ನಂಬೂದಿರಿ ಧಾರ್ಮಿಕ ಭಾಷಣ ಮಾಡಿದರು. ಶ್ರೀ ಮಲ್ಲಿಕಾರ್ಜುನ ಬಾಲಗೋಕುಲದ ಅಧ್ಯಕ್ಷ ವರಪ್ರಸಾದ್ ಕೋಟೆಕಣಿ ಅಧ್ಯಕ್ಷತೆವಹಿಸಿದ್ದರು. ಬಾಲಗೋಕುಲ ಕಾಸರಗೋಡು ನಗರ ಅಧ್ಯಕ್ಷ ಭಾಗ್ಯರಾಜ್ ನುಳ್ಳಿಪ್ಪಾಡಿ ವರದಿ ವಾಚಿಸಿದರು. ಕಾರ್ಯಕ್ರಮದಲ್ಲಿ ಕಾಸರಗೋಡು ನಗರಸಭಾ ಸದಸ್ಯೆ ದಿವ್ಯಾ ಸಂದೀಪ್, ಕಾಸರಗೋಡು ತಾಲೂಕು ಬಾಲಗೋಕುಲ ರಕ್ಷಾಧಿಕಾರಿ ಪ್ರವೀಣ್‌ಕುಮಾರ್, ಮಧೂರು ಗ್ರಾ.ಪಂ.ಸದಸ್ಯೆ, ಬಾಲಗೋಕುಲದ ಶಿಕ್ಷಕಿ ದೀಪ್ತಿ ಮೋದಕ್‌ರಾಜ್, ಪತ್ರಕರ್ತ ಪ್ರದೀಪ್ ಬೇಕಲ್, ಸುನಂದ ಸುಧಾಕರ ಕೋಟೆಕಾರ್ ಉಪಸ್ಥಿತರಿದ್ದರು.
ಶ್ರೀ ಮಲ್ಲಿಕಾರ್ಜುನ ಬಾಲಗೋಕುಲದ ಕಾರ್ಯದರ್ಶಿ ಮೋದಕ್‌ರಾಜ್ ಸ್ವಾಗತಿಸಿ, ಕೋಟೆಕಣಿ ವಂದಿಸಿದರು. ದೇವದಾಸ್ ನುಳ್ಳಿಪ್ಪಾಡಿ ನಿರೂಪಿಸಿದರು. ಧನೇಶ್ ಸಭಾಕಾರ್ಯಕ್ರಮಕ್ಕೆ ಮುನ್ನ ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಅವರಿಗೆ ಪೂರ್ಣಕುಂಭ ಸ್ವಾಗತ ನೀಡಲಾಯಿತು.

ಸಾಂಸ್ಕೃತಿಕ ಕಾರ್ಯಕ್ರಮ

ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ಕೊಂಡೆವೂರು ಸಹೋದರಿಯ ರಿಂದ ವಾದ್ಯ ಸಂಗೀತ ಕಾರ್ಯಕ್ರಮ ನಾದ ನಿನಾದ ಹಾಗೂ ಬಾಲಗೋಕುಲ ಮಕ್ಕಳಿಂದ ನೃತ್ಯ ವೈಭವ ಜರಗಿತು.

> **ಸನಾತನ ಧರ್ಮಕ್ಕೆ ಶಕ್ತಿ ತುಂಬುತ್ತದೆ**
> **ಧರ್ಮ ಸಂಸ್ಕೃತಿ ಜಾಗೃತಿಯಿಂದ ಸನಾತನ ಧರ್ಮಕ್ಕೆ ಶಕ್ತಿ ತುಂಬುತ್ತದೆ. ಭಾರತೀಯ ಮೌಲ್ಯ ಬೆಳಗಿಸುವ ಕಾರ್ಯ ಅತ್ಯಂತ ಶ್ರೇಷ್ಠ.**
> ● ಒಡಿಯೂರು ಶ್ರೀ

ಪಡ್ರೆ ಸ್ವರ್ಗ ಮಲೆತ್ತಡ್ಕ ಶ್ರೀ ಜಟಾಧಾರಿ ಮೂಲಸ್ಥಾನಕ್ಕೆ ಶಿಲ್ಪಶಾಸ್ತ್ರಜ್ಞರ ಭೇಟಿ



ಪೆರ್ಲ: ಅತ್ಯಂತ ಕಾರಣಿಕ ಕ್ಷೇತ್ರಗಳಲ್ಲಿ ಒಂದಾದ ಪಡ್ರೆ ಸ್ವರ್ಗ ಮಲೆತ್ತಡ್ಕ ಶ್ರೀ ಜಟಾಧಾರಿ ಮೂಲಸ್ಥಾನಕ್ಕೆ ಶಿಲ್ಪ ಶಾಸ್ತ್ರಜ್ಞ ಕೃಷ್ಣಪ್ರಸಾದ ಮುನಿಯಂಗಳ ಭೇಟಿ ನೀಡಿದರು. ಮೂಲಸ್ಥಾನದ ಬಳಿ ನಿರ್ಮಾಣ ಹಂತದಲ್ಲಿರುವ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಶಿಲಾಮಯ ಗರ್ಭಗುಡಿಯ ನವನಿರ್ಮಾಣ ಕಾಮಗಾರಿಯನ್ನು ಪರಿಶೀಲನೆ ನಡೆಸಿದ ಅವರು ಸಲಹೆ ಸೂಚನೆಗಳನ್ನು ನೀಡಿದರು.
ಶ್ರೀ ಕ್ಷೇತ್ರದ ವಾಯುವ್ಯ ಉತ್ತರ ದಿಕ್ಕಿನಲ್ಲಿರುವ ಶ್ರೀ ಜಟಾಧಾರಿ ಬನದ ಜೀರ್ಣೋದ್ಧಾರ ಮತ್ತು ಸುತ್ತು ಪೌಳಿ ಮಾರ್ಕಿಂಗ್ ಕುರಿತು ನವ ನಿರ್ಮಾಣ ಸಮಿತಿ ಪದಾಧಿಕಾರಿಗಳು, ಸದಸ್ಯರ ಜೊತೆ ಅವರು ಸಮಗ್ರವಾಗಿ ಸಮಾಲೋಚಿಸಿದರು. ಶಿಲಾಮಯ ಗರ್ಭಗುಡಿಯ ನಿರ್ಮಾಣದ ಜವಾಬ್ದಾರಿ ವಹಿಸಿರುವ ಕಾರ್ಕಳದ ದಯಾನಂದ ಹಾಗೂ ಶ್ರೀ ಕ್ಷೇತ್ರ ಸಮಿತಿ ಪದಾಧಿಕಾರಿಗಳು ಮತ್ತಿತರರಿದ್ದರು.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಶುಕ್ರವಾರ 17, ಏಪ್ರಿಲ್ 2026

ಸುತ್ತಮುತ್ತ

ಇಂದು ಇನ್ನಂಜೆ ಉಂಡಾರು ದೇವಳದ ಶ್ರೀ ಮನ್ಮಹಾರಥೋತ್ಸವ

ಶಿರ್ವ: ಉಡುಪಿ ಶ್ರೀ ಸೋದೆ ವಾದಿರಾಜ ಮಠದ ಆಡಳಿತಕ್ಕೆ ಒಳಪಟ್ಟ ಇತಿಹಾಸ ಪ್ರಸಿದ್ಧ ಶ್ರೀಕ್ಷೇತ್ರ ಉಂಡಾರು (ಇನ್ನಂಜೆ)ಶ್ರೀ ವಿಷ್ಣುಮೂರ್ತಿ ದೇವಳದ ಶ್ರೀ ಮನ್ಮಹಾರಥೋತ್ಸವ ಇಂದು (ಏ.17)ಶ್ರೀ ಸೋದೆ ಮಠದ ಯತಿವರ್ಯ ಶ್ರೀ ವಿಶ್ವವಲ್ಲಭತೀರ್ಥ ಶ್ರೀ ಪಾದರ ಉಪಸ್ಥಿತಿಯಲ್ಲಿ ಸಂಪನ್ನಗೊಳ್ಳಲಿದೆ. ಪೂರ್ವಾಹ್ನ ಉಂಡಾರು ಮಠದಲ್ಲಿ ಸೋದೆ ಶ್ರೀಗಳಿಂದ ಸಂಸ್ಥಾನ ದೇವರಿಗೆ ಮಹಾಪೂಜೆ, 9ಕ್ಕೆ 108 ಕಾಯಿಗಳ ಗಣಯಾಗದ ಪೂರ್ಣಾಹುತಿ, 10ಕ್ಕೆ ಮಹಾಪೂಜೆ, 11.30ಕ್ಕೆ ರಥಾರೋಹಣ, ಮಧ್ಯಾಹ್ನ 12.30ರಿಂದ ಮಹಾ ಅನ್ನಸಂತರ್ಪಣೆ, ಸ್ಯಾಕ್ಸೋಫೋನ್ ವಾದನ ಕಛೇರಿ, ಸಂಜೆ 4.30ಕ್ಕೆ ಭಕ್ತಿ ಸಂಗೀತ,6.30ಕ್ಕೆ ಸ್ಯಾಕ್ಸೋಫೋನ್ ವಾದನ, ಸಂಜೆ 7ಕ್ಕೆ ಶ್ರೀ ಭೂತರಾಜರಿಗೆ ವಿಶೇಷ ಪೂಜೆ, ರಾತ್ರಿ 7.30ರಿಂದ ಶ್ರೀ ಮನ್ಮಹಾರಥೋತ್ಸವ, ಮಹಾಭೂತ ಬಲಿ, ಶಯನೋತ್ಸವ, ಕವಾಟ ಬಂಧನ, ಏ.18 ಬೆಳಿಗ್ಗೆ ಕವಾಟೋದ್ಘಾಟನೆ, ಸಂಜೆ 6.30ರಿಂದ ಬಲಿ, ಓಕುಳಿ, ಅವಭೃತಸ್ನಾನ, ಧ್ವಜಾವರೋಹಣ, ಪೂರ್ಣಾಹುತಿ, ಮಹಾ ಮಂತ್ರಾಕ್ಷತೆ ನಡೆಯಲಿದೆ ಎಂದು ಶ್ರೀ ದೇವಳದ ಪ್ರಕಟನೆ ತಿಳಿಸಿದೆ.

ಏ.19ರಂದು ವಧು ವರರ ಸಮಾವೇಶ

ಉಡುಪಿ: ರಾಜಾಪುರ ಸಾರಸ್ವತ ಬ್ರಾಹ್ಮಣ ಸಂಘ ಮಣಿಪಾಲ, ರಾಜಾಪುರ ಸಾರಸ್ವತ ಬ್ರಾಹ್ಮಣ ಮಹಿಳಾ ವೇದಿಕೆ ಮಣಿಪಾಲ, ಹಾಗೂ ರಾಜಾಪುರ ಸಾರಸ್ವತ ಬ್ರಾಹ್ಮಣ ಸಮಾಜ ಬೆಂಗಳೂರು ಇದರ ಅಂಗಸಂಸ್ಥೆಯಾದ ಆರ್‌ಎಸ್‌ಬಿ ಅನುಬಂಧ ವಿವಾಹ ವೇದಿಕೆ ಬೆಂಗಳೂರು ಇವರುಗಳ ಜಂಟಿ ಆಶ್ರಯದಲ್ಲಿ ಏ.19ರಂದು ಸಮಾಜದ ವಿವಾಹ ಅಪೇಕ್ಷಿತ ಯುವಕ, ಯುವತಿಯರಿಗೆ ವಧು ವರರ ಸಮಾವೇಶವು ಮಣಿಪಾಲದ ಆರ್‌ಎಸ್‌ಬಿ ಸಭಾಭವನದಲ್ಲಿ ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ನಡೆಯಲಿದೆ ಎಂದು ಆರ್‌ಎಸ್‌ಬಿ ಮಹಿಳಾ ವೇದಿಕೆಯ ಅಧ್ಯಕ್ಷ ರೂಪ ನಾಯಕ್ ದೇವಿನಗರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೇನೇಶ್ವರ ದೇವರ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ಚಾಲನೆ

ಬೈಂದೂರು: ಇಲ್ಲಿನ ಐತಿಹಾಸಿಕ ಮಹತೋಭಾರ ಶ್ರೀ ಸೇನೇಶ್ವರ ದೇವರ ವಾರ್ಷಿಕ ಜಾತ್ರಾ ಮಹೋತ್ಸವವು ಏ.16ಕ್ಕೆ ಆರಂಭಗೊಂಡಿದ್ದು ಏ.24ರ ತನಕ ಜರುಗಲಿದೆ. ಆ ಪ್ರಯುಕ್ತ ಗುರುವಾರ ಮಧ್ಯಾಹ್ನ ದೇವಳದ ತಂತ್ರಿ ಕೃಷ್ಣ ಸೋಮಯಾಜಿ ಇವರ ಮಾರ್ಗದರ್ಶನದಲ್ಲಿ ಕೂಟಾಡಿ ರಾಮಕೃಷ್ಣ



ಭಟ್ ಕಿರಿಮಂಜೇಶ್ವರ ಆಚಾರ್ಯತ್ವದಲ್ಲಿ ಧ್ವಜಾರೋಹಣ ನೆರವೇರಿತು. ಬೆಳಿಗ್ಗೆ ದೇವಳದಲ್ಲಿ ಕಲಶಪ್ರತಿಷ್ಠೆ ಕಂಕಣ ಧಾರಣೆಯ ನಂತರ ರುಜ್ಜು ಬಂಧನ ಮುಂತಾದ ಧಾರ್ಮಿಕ ವಿಧಾನಗಳು ನಡೆಯಿತು. ದೇವಳದ ಅರ್ಚಕರಾದ ಮಂಜುನಾಥ ಮಯ್ಯ, ನಾಗರಾಜ ಭಟ್, ರಾಜೇಶ ಐತಾಳ್, ಶಿವಾನಂದ ಅಡಿಗ ಸಹಕರಿಸಿದರು. ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಗಿರೀಶ ಬೈಂದೂರು, ಸಮಿತಿಯ ಸದಸ್ಯರು, ದೇವಳದ ಸಿಬ್ಬಂದಿವರ್ಗ ಹಾಗೂ ಊರಿನ ಹತ್ತು ಸಮಸ್ತರು ಭಾಗವಹಿಸಿದ್ದರು. ಪ್ರತಿದಿನ ಅಪ್ಪಿಕಟ್ಟೆ, ಬಿಯಾರಕಟ್ಟೆ, ಜಟ್ಟನಕಟ್ಟೆ, ನಾಕಟ್ಟೆ, ಪಡುವರಿಕಟ್ಟೆ, ಬಂಕೇಶ್ವರಕಟ್ಟೆ ಉತ್ಸವಗಳು ಜರುಗಲಿದೆ. ಏ.22ಕ್ಕೆ ಶ್ರೀ ಸೇನೇಶ್ವರ ದೇವರ ಶ್ರೀ ಮನ್ಮಹಾರಥೋತ್ಸವ ಹಾಗೂ ಮೇ 23ರಂದು ಅವಭೃಥೋತ್ಸವ, ಏ.24ರಂದು ಧ್ವಜಾವರೋಹಣ, ಸಂಜೆ ನಗರೋತ್ಸವ ನಡೆಯಲಿದೆ.

ಏ.18, 19: ಬಂಟಕಲ್ಲು ದೈವಸ್ಥಾನದ ವಾರ್ಷಿಕ ನೇಮ

ಶಿರ್ವ: ಬಂಟಕಲ್ಲು ಶ್ರೀ ಬಬ್ಬುಸ್ವಾಮಿ ದೈವಸ್ಥಾನದ ವಾರ್ಷಿಕೋತ್ಸವ ಏ.18,ಏ.19ರಂದು ಜರುಗಲಿದೆ. ಏ.18ಕ್ಕೆ ಪೂರ್ವಾಹ್ನ 9.15ಕ್ಕೆ ಗಜಕಂಬ ಮುಹೂರ್ತ, 11.30ಕ್ಕೆ ಚಪ್ಪರ ಮುಹೂರ್ತ,ಮಧ್ಯಾಹ್ನ 1ರಿಂದ ಸಾರ್ವಜನಿಕ ಅನ್ನಸಂತಪಣೆ, ರಾತ್ರಿ 7.30ಕ್ಕೆ ಭಂಡಾರ ಹೊರಡುವಿಕೆ, ರಾತ್ರಿ 10ರಿಂದ ಶ್ರೀ ಬಬ್ಬುಸ್ವಾಮಿ ಮತ್ತು ತನ್ನಿಮಾನಿಗ ದೈವಗಳ ನೇಮ. ಏ.19ಕ್ಕೆ ಬೆಳಿಗ್ಗೆ 9ರಿಂದ ಶ್ರೀ ಧೂಮಾವತಿ ಮತ್ತು ಬಂಟ ದೈವಗಳ ನೇಮ, ಅಪರಾಹ್ನ 2.30ರಿಂದ ಗುಳಿಗ ದೈವದ ನೇಮ, ಸಂಜೆ 4ರಿಂದ ಶ್ರೀ ಕೊರಗಜ್ಜ ದೈವದ ನೇಮ, 5.30ಕ್ಕೆ ಭಂಡಾರ ದೈವಸ್ಥಾನಕ್ಕೆ ಹಿಂದಿರುಗುವಿಕೆಯೊಂದಿಗೆ ಸಮಾಪನಾಗೊಳ್ಳಲಿದೆ ಎಂದು ದೈವಸ್ಥಾನದ ಆಡಳಿತ ಮಂಡಳಿ ಪ್ರಕಟನೆ ತಿಳಿಸಿದೆ.

ಆಸ್ತಿ ತೆರಿಗೆ : ರಿಯಾಯಿತಿ ಸೌಲಭ್ಯದ ಅವಕಾಶ

ಉಡುಪಿ: ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಬರುವ ವಾಸ, ವಾಣಿಜ್ಯ, ಕೈಗಾರಿಕೆ, ಸಾರ್ವಜನಿಕ ಕಟ್ಟಡ ಹಾಗೂ ಖಾಸಗಿ ವಿದ್ಯಾ ಸಂಸ್ಥೆಗಳು ಮತ್ತು ಖಾಲಿ ನಿವೇಶನದ ಮಾಲೀಕರುಗಳು, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶನದಂತೆ ಪ್ರಸಕ್ತ ಸಾಲಿನ ಆಸ್ತಿ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿಯನ್ನು 2026ರ ಏಪ್ರಿಲ್ ತಿಂಗಳ ಅಂತ್ಯದ ಒಳಗೆ ಮಾತ್ರ ಅವಕಾಶ ಕಲ್ಪಿಸಲಾಗಿದ್ದು, ಈ ಮೇಲಿನ ಎಲ್ಲಾ ಕಟ್ಟಡಗಳ / ಖಾಲಿ ನಿವೇಶನಗಳ ಮಾಲೀಕರು ತಮ್ಮ ಆಸ್ತಿ ತೆರಿಗೆಯನ್ನು ಏ.30ರ ಅಂತ್ಯದೊಳಗೆ ಶೇ.5ರ ರಿಯಾಯಿತಿಯ ಸದುಪಯೋಗವನ್ನು ಪಡೆದುಕೊಂಡು ಪಾವತಿಸಿ, ಉಡುಪಿ ನಗರಸಭೆಯ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುವಂತೆ ನಗರಸಭೆ ಪೌರಾಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಕ್ರಮ ಕೈಗೊಳ್ಳದ ಅಧಿಕಾರಿಗಳಿಗೆ ಶಾಸಕ ಕೊಡ್ಗಿ ತೀವ್ರ ತರಾಟೆ | ಕಪ್ಪುಪಟ್ಟಿಗೆ ಗುತ್ತಿಗೆದಾರರ ಸೇರಿಸಲು ಸೂಚನೆ

ಮೂರು ತಿಂಗಳು ಕಳೆದರೂ ಜಲಸಮಸ್ಯೆಗೆ ಸಿಗದ ಮುಕ್ತಿ!

ಕುಂದಾಪುರ: ಕುಡಿಯುವ ನೀರಿನ ಸಮಸ್ಯೆ ಕಳೆದ ಮೂರು ತಿಂಗಳ ಹಿಂದೆ ನಡೆದ ಸಭೆಯಲ್ಲಿ ಪ್ರಸ್ತಾವಗೊಂಡ ಸಮಸ್ಯೆಗಳಿಗೆ ಈವತ್ತಿಗೂ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ, ಕಳೆದ ಸಭೆಗೂ ಇವತ್ತಿನ ಸಭೆಗೆ ಕೇವಲ ಪತ್ರ ವ್ಯವಹಾರ ನಡೆದಿದ್ದು ಬಿಟ್ಟರೆ ಬೇರೆನೂ ಪ್ರಗತಿ ಆಗಿಲ್ಲ, ಪತ್ರ ಬರೆದು ಸುಮ್ಮನೆ ಕುಳಿತುಕೊಂಡರೆ ಹೇಗೆ.? ಸಮಸ್ಯೆ ಮತ್ತು ವಿಚಾರಗಳ ಬಗ್ಗೆ ಫಾಲೋಅಪ್ ಮಾಡುತ್ತಿಲ್ಲ, ಮೀಟಿಂಗ್ ದಿನ ಅದೇ ಸಮಸ್ಯೆಗಳನ್ನು ಪುನಃ ಪುನಃ ಹೇಳಿದರೆ ಏನು ಮಾಡಲು ಸಾಧ್ಯ ಎಂದು ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಅವರು ಅಧಿಕಾರಿಗಳ ವಿರುದ್ಧ ಹರಿಹಾಯ್ದರು.

ಕುಂದಾಪುರ ತಾಲೂಕು ಪಂಚಾಯತ್ ಸಭಾಂಗಣ ದಲ್ಲಿ ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುಡಿಯುವ ನೀರಿನ ಸಮಸ್ಯೆ ಹಾಗೂ ಪ್ರಾಕೃತಿಕ ವಿಕೋಪದ ಮುಂಜಾಗ್ರತಾ ಕ್ರಮಗಳ ಬಗ್ಗೆ ಅಧಿಕಾರಿಗಳೊಂದಿಗೆ ಗುರುವಾರ ಜರಗಿದ ಸಭೆಯಲ್ಲಿ ಅವರು ಮಾತನಾಡಿದರು.

ಜೆಜೆಎಂ ಯೋಜನೆಯಡಿ ಸಾಧಿಸಿದ ಪ್ರಗತಿ ಬಗ್ಗೆ



ಆಕ್ಷೇಪ ವ್ಯಕ್ತಪಡಿಸಿದ ಶಾಸಕರು,ಗುತ್ತಿಗೆದಾರರನ್ನು ಬ್ಲ್ಯಾಕ್ ಲಿಸ್ಟ್‌ಗೆ ಪ್ರಸ್ತಾವನೆ ಸಲ್ಲಿಸಿ ಎಂದರು.

ಕುಂದಾಪುರ ಕ್ಷೇತ್ರ ವ್ಯಾಪ್ತಿಯ 21 ಗ್ರಾಪಂ. ನಿಂದ ನೀರಿನ ಕೊರತೆ ಇಲ್ಲ ಎಂದು ವರದಿ ನೀಡಿದ್ದಾರೆ ಎಂದು ಕುಂದಾಪುರ ಇಒ ಮಹೇಶ ಕೆ.ಜಿ. ಹೇಳಿದರು. ಕುಂದಾಪುರ ಪುರಸಭೆ ವ್ಯಾಪ್ತಿಯ ನೀರಿನ ನಿರ್ವಹಣೆ ಮಾಡುತ್ತಿರುವ ಜಲಸಿರಿ ಅಧಿಕಾರಿಗಳು ಸಭೆಗೆ ಗೈರಾಗಿರುವುದರ ಬಗ್ಗೆ ಶಾಸಕ ಕೊಡ್ಗಿ ಕೆಂಡಾಮಂಡಲರಾದರು.

ರಾಷ್ಟ್ರೀಯ ಹೆದ್ದಾರಿ 66ರ ಅಗಲೀಕರಣ ಮತ್ತು ಸರ್ವಿಸ್ ರಸ್ತೆ ನಿರ್ಮಾಣ ಕಾರ್ಯದಿಂದ ಕೋಟೇಶ್ವರ, ಬೀಜಾಡಿ, ಗೋಪಾಡಿ, ತೆಕ್ಕಟ್ಟೆ ಗ್ರಾಪಂ. ವ್ಯಾಪ್ತಿಯ ಕುಡಿಯುವ ನೀರಿನ ಪೈಪ್‌ಲೈನ್‌ಗಳಿಗೆ ಹಾನಿಯಾಗಿ, ನೀರು ಕೊಡಲು ಆಗುತ್ತಿಲ್ಲ, ಈ ಬಗ್ಗೆ ಕಳೆದ ಸಭೆಯಲ್ಲಿ ಚರ್ಚೆ ನಡೆದು ಮೂರು ತಿಂಗಳಾದರೂ ಸಮಸ್ಯೆ ಪರಿಹಾರ ಆಗಿಲ್ಲ, ಯಾವ ಭಾಗದಲ್ಲಿ ಎಷ್ಟು ಹಾನಿಯಾಗಿದೆ ಎಂದು ವರದಿ ಸಿದ್ಧಪಡಿಸಿಲ್ಲ, ಹೀಗಾದರೆ ಎಪ್ರಿಲ್, ಮೇನಲ್ಲಿ ನೀರಿಲ್ಲದೆ ಜನರಿಗೆ ಆಗುವ ತೊಂದರೆಗಳಿಗೆ ಯಾರು ಹೊಣೆ ಎಂದು ಅವರು ಅಧಿಕಾರಿಗಳನ್ನು ಶಾಸಕರು ಪ್ರಶ್ನಿಸಿದರು.

> **ಅತ್ತ ಗಂಭೀರ ಚರ್ಚೆ; ಇತ್ತ ಮೊಬೈಲ್‌ನಲ್ಲಿ ಬ್ಯುಸಿ!**
>
> ಕುಡಿಯುವ ನೀರಿನ ವಿಚಾರದಲ್ಲಿ ಶಾಸಕರು ಸಭೆಯಲ್ಲಿ ಚರ್ಚೆ ನಡೆಸುತ್ತಿರುವಾಗ ಬಹುತೇಕ ಅಧಿಕಾರಿಗಳು, ಪಿಡಿಒಗಳು ಮೊಬೈಲ್‌ನಲ್ಲಿ ಬ್ಯುಸಿಯಾಗಿದ್ದರು. ಬಹಳ ಗಂಭೀರವಾಗಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆ ಮಾಡಬೇಕಿದ್ದ ಈ ಸಭೆ ಗಂಭೀರತೆಯನ್ನು ಕಳೆದುಕೊಂಡಂತೆ ಕಾಣಿಸಿತ್ತು. ಶಾಸಕರಿಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಲ್ಲಿ ಇದ್ದ ಕಾಳಜಿ ಅಧಿಕಾರಿಗಳಲ್ಲಿ ಕಂಡು ಬರಲಿಲ್ಲ, ಒಟ್ಟಾರೆ ಈ ಸಭೆ ಕೇವಲ ಪ್ರಶ್ನೋತ್ತರಗಳಿಗೆ ಮಾತ್ರ ಸೀಮಿತವಾದಂತಿತ್ತು.

ಇದೇ ಸಂದರ್ಭ ಕೋಟೇಶ್ವರ, ಗೋಪಾಡಿ, ಕುಂಭ್ರಿ, ಯಡಾಡಿ- ಮತ್ಯಾಡಿ, ಮಡಾಮಕ್ಕಿ-ಶೇಡಿಮನೆ, ಗಿಳಿಯಾರು, ಐರೋಡಿ, ಕೊರ್ಗಿ ಗ್ರಾಮದ ಕುಂಜನಕಟ್ಟೆ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪಿಡಿಒಗಳು ಸಭೆಯ ಗಮನಕ್ಕೆ ತಂದರು. ಇದಕ್ಕೆ ಉತ್ತರಿಸಿದ ಶಾಸಕರು ಎಲ್ಲಾ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಸೂಚನೆ ನೀಡಿದರು.

ವಾರಾಹಿ ನೀರಿನ ಹರಿವು ಕ್ಷೀಣ

ಆವರ್ಸೆ ಗ್ರಾಮದ ನಾಲ್ಕು ಟ್ಯಾಂಕ್‌ಗಳಿಗೆ ವಾರಾಹಿ ನೀರಿನ ಹರಿವು ತುಂಬಾ ಕಡಿಮೆಯಿದ್ದು, ಟ್ಯಾಂಕ್ ತುಂಬಲು ತುಂಬಾ ಸಮಯ ಬೇಕಾಗುತ್ತದೆ. ನೀರು ರಭಸವಾಗಿ ಬರುವಂತೆ ಮಾಡಬೇಕು ಎಂದು ಪಿಡಿಒ ಸಭೆಯ ಗಮನಕ್ಕೆ ತಂದರು. ಕುಂದಾಪುರ ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್, ಬ್ರಹ್ಮಾವರ ತಹಶೀಲ್ದಾರ್ ಶ್ರೀಕಾಂತ ಹೆಗ್ಡೆ ಹೆಬ್ರಿ ತಹಶೀಲ್ದಾರ್ ಎಸ್.ಎ.ಪ್ರಸಾದ್, ಕುಂದಾಪುರ ಇಒ ಮಹೇಶ ಕೆ.ಜಿ., ಬ್ರಹ್ಮಾವರ ಇಒ ಎಚ್.ವಿ.ಇಬ್ರಾಹಿಂಪುರ, ಕಾರ್ಕಳ ಇಒ ಪ್ರಶಾಂತ್, ಕುಡಿಯುವ ನೀರು ವಿಭಾದ ಎಕ್ಸಿಕ್ಯೂಟಿವ್ ಇಂಜಿನಿಯರ್ ಉದಯ ಶೆಟ್ಟಿ, ವಿವಿಧ ಇಲಾಖೆ ಅಧಿಕಾರಿಗಳು, ಪಿಡಿಒಗಳು ಉಪಸ್ಥಿತರಿದ್ದರು.

ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯ: ಏಜೆನ್ಸಿ ಮುಂದೆ ಸಿಲಿಂಡರ್ ಇಟ್ಟು ಪ್ರತಿಭಟನೆ!



ಕೋಟ: ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಬುಕ್ಕಿಂಗ್ ಮಾಡಿ ತಿಂಗಳು ತನಕ ಗ್ಯಾಸ್ ಸಿಗುತ್ತಿಲ್ಲ, ಹೀಗಾಗಿ ಸಾಕಷ್ಟು ಮಂದಿಗೆ ಸಮಸ್ಯೆಯಾಗುತ್ತಿದೆ. ಎಂದು ಸಾಲಿಗ್ರಾಮದಲ್ಲಿ ಗ್ಯಾಸ್ ಏಜೆನ್ಸಿ ಎದುರು ಖಾಲಿ ಗ್ಯಾಸ್ ಸಿಲಿಂಡರ್ ಇಟ್ಟು ಗ್ರಾಹಕರು ಗುರುವಾರ ಪ್ರತಿಭಟನೆ ನಡೆಸಿದರು.

ಈ ಸಂದರ್ಭ ಪ್ರತಾಪ್ ಶೆಟ್ಟಿ ಸಾಸ್ತಾನ ಮಾತನಾಡಿ, ಬುಕ್ಕಿಂಗ್ ಮಾಡಿ ಒಂದು ತಿಂಗಳು ತನಕ ಗ್ಯಾಸ್ ಸಿಗುತ್ತಿಲ್ಲ, ಇದರಿಂದ ನೂರಾರು ಗ್ರಾಹಕರಿಗೆ ಸಮಸ್ಯೆಯಾಗುತ್ತಿದೆ. ಏಜೆನ್ಸಿಯವರ ಬಳಿ ಕೇಳಿದರೆ ಜಿಲ್ಲಾಧಿಕಾರಿಗಳು, ಸಂಸದರು, ಆಹಾರ ಇಲಾಖೆಗೆ ಮನವಿ ಮಾಡಿ ಎನ್ನುತ್ತಾರೆ. ಆದರೆ ಯಾರೂ ಈ ಬಗ್ಗೆ ಸರಿಯಾದ ಪ್ರತಿಕ್ರಿಯೆ ನೀಡುತ್ತಿಲ್ಲ, ಇಂದು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದ್ದೇವೆ. ಸಮಸ್ಯೆ ಸರಿಯಾಗದಿದ್ದರೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸುತ್ತೇವೆ ಎಂದರು.

ಈ ಸಂದರ್ಭ ಕೋಟ ಪೊಲೀಸ್ ಕ್ರೈಂ ವಿಭಾಗದ ಉಪನಿರೀಕ್ಷಕ ಮಹಾಂತೇಶ್ ಹಾಗೂ ಬ್ರಹ್ಮಾವರ ತಾಲೂಕು ಕಚೇರಿಯ ಆಹಾರ ವಿಭಾಗದ ವಸಂತ್, ಕೋಟ ಪೊಲೀಸ್ ಠಾಣೆಯ ಸಿಬ್ಬಂದಿ ಅಶೋಕ್, ಶ್ರೀಧರ್ ಹಾಗೂ ಗುಪ್ತವಾರ್ತೆ ವಿಭಾಗದ ಫಯಾಜ್ ಮೊದಲಾದವರು ಸ್ಥಳಕ್ಕಾಗಮಿಸಿ ಗ್ಯಾಸ್ ಏಜೆನ್ಸಿಯವರ ಜತೆ ಮಾತುಕತೆ ನಡೆಸಿದರು.

ಪೂರೈಕೆ ಪ್ರಮಾಣ ಹೆಚ್ಚಿಸುತೆ ತಾಲೂಕು ಆಹಾರ ಇಲಾಖೆ ಅಧಿಕಾರಿಗಳಮೂಲಕ ಮನವಿ ಮಾಡಲಾಯಿತು. ಈ ಸಂದರ್ಭ ಸ್ಥಳೀಯರಾದ ನಾಗರಾಜ್ ಗಾಣಿಗ, ಅಂಥೋನಿ, ವಿಟ್ಠಲ ಪೂಜಾರಿ, ರಾಘವೇಂದ್ರ ಐರೋಡಿ, ಶಂಕರ ಕುಲಾಲ್, ಸುರೇಶ್ ಪಾಂಡೇಶ್ವರ, ಜಗನ್ನಾಥ ಬಂಗೇರ ಇದ್ದರು.

> **ಪೂರೈಕೆಯಲ್ಲಿ ಸಮಸ್ಯೆ**
>
> ಏಜೆನ್ಸಿ ವ್ಯಾಪ್ತಿಯಲ್ಲಿ 19 ಸಾವಿರ ಗ್ರಾಹಕರಿದ್ದಾರೆ. ಪ್ರತಿದಿನ 600ಕ್ಕೂ ಅಧಿಕ ಗ್ಯಾಸ್ ಬೇಡಿಕೆ ಇದೆ. ಆದರೆ ಈಗ ಸಿಗುತ್ತಿರುವುದು ಕೇವಲ 342 ಸಿಲಿಂಡರ್ ಮಾತ್ರ. ಹೀಗಾಗಿ ಸುಮಾರು ಐದಾರು ಸಾವಿರ ಮಂದಿ ಕಾಯುವ ಸರದಿಯಲ್ಲಿದ್ದಾರೆ ಎಂದು ಗ್ಯಾಸ್ ಏಜೆನ್ಸಿ ಮಾಲಕಿ ಭೋಜಮ್ಮ ಹೇಳಿದ್ದಾರೆ. ಜಿಲ್ಲಾಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ಸಮಸ್ಯೆ ತಿಳಿಸಲಾಗಿದೆ. ಬೇಡಿಕೆ ಪಟ್ಟಿಯನ್ನು ಪ್ರತಿದಿನ ನೀಡಲಾಗುತ್ತಿದೆ. ಆದರೆ ಪೂರೈಕೆ ಪ್ರಮಾಣ ಹೆಚ್ಚಾಗಿಲ್ಲ ಎಂದರು.

ಹಟ್ಟಿಅಂಗಡಿಯ ಸಿದ್ಧಿವಿನಾಯಕ ವಸತಿ ಶಾಲೆಯಲ್ಲಿ 4 ದಿನಗಳ ಕಾರ್ಯಾಗಾರ



ಕುಂದಾಪುರ: ಹಟ್ಟಿಅಂಗಡಿಯ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯಲ್ಲಿ ಪ್ರಾಥಮಿಕ ಶಾಲಾ ವಿಭಾಗದ ಶಿಕ್ಷಕರಿಗಾಗಿ ಭಾಷಾ ಕೌಶಲ್ಯದ ಅಭಿವೃದ್ಧಿ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದಂತೆ ನಾಲ್ಕು ದಿನಗಳ ವಿಶೇಷ ಕಾರ್ಯಾಗಾರ ಏ.10ರಿಂದ 13ರವರೆಗೆ ನಡೆಯಿತು.

ಶಿಕ್ಷಕರಲ್ಲಿ ಸಮರ್ಥ ಸಂವಹನ ಕೌಶಲ್ಯವನ್ನು ಬೆಳೆಸುವುದರೊಂದಿಗೆ ಒತ್ತಡ ರಹಿತ ದಿನಚರಿಯನ್ನು ಅನುಸರಿಸುತ್ತಾ, ಉತ್ತಮ ಶಿಕ್ಷಕರಾಗಿ ಹೊಮ್ಮಲು ಸಹಕರಿಸುವ ಉದ್ದೇಶದಿಂದ ಆಯೋಜಿಸಲಾದ ವಿಶೇಷ ಕಾರ್ಯಾಗಾರವು ಅನುಭವಿ ಶಿಕ್ಷಣ ತಜ್ಞೆ ಹಾಗೂ ಯೋಗ ಥೆರಪಿಸ್ಟ್ ಜಯಶ್ರೀ ಮೃತ್ಯುಂಜಯ ಹಾಗೂ ಶಿಕ್ಷಣ ತಜ್ಞೆ ಅನುಪಮಾ ಆಲದಕಟ್ಟಿ ಅವರ ನೇತೃತ್ವದಲ್ಲಿ ಶ್ರೀ ಸಿದ್ಧಿ ಶೈಕ್ಷಣಿಕ ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ಶಾಲಾ ಪ್ರಾಂಶುಪಾಲ ಶರಣ ಕುಮಾರ ಹಾಗೂ ಶಾಲಾ ಆಡಳಿತಾಧಿಕಾರಿ ವೀಣಾರಶ್ಮಿ ಎಂ.. ಅವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ಸಂಪನ್ನಗೊಂಡಿತು.

ಶಿಕ್ಷಣ ತಜ್ಞೆ ಅನುಪಮಾ ಆಲದಕಟ್ಟಿ ಪ್ರಸ್ತುತ ಶೈಕ್ಷಣಿಕ ವಾತಾವರಣದಲ್ಲಿ ಆಂಗ್ಲ ಭಾಷೆಯ ಪ್ರಾಮುಖ್ಯತೆ ಹಾಗೂ ಶಿಕ್ಷಕರ ಪಾತ್ರ ಎಷ್ಟು ಮಹತ್ವಪೂರ್ಣ ಎಂಬುದರ ಬಗ್ಗೆ ಮತ್ತು ಜಯಶ್ರೀ ಮೃತ್ಯುಂಜಯ ಅವರು ವ್ಯಕ್ತಿತ್ವ ವಿಕಸನ ಹಾಗೂ ಸಮರ್ಥ ಸಂವಹನ ಕೌಶಲ್ಯದ ಬಗ್ಗೆ ಪ್ರಾಯೋಗಿಕ ತರಬೇತಿ ನೀಡಿದರು. ಚಟುವಟಿಕೆ ಆಧಾರಿತ ವಿಧಾನಗಳ ಮೂಲಕ ಈ ಕೌಶಲ್ಯದ ಸದ್ಬಳಕೆ ಮಾಡುವ ಬಗ್ಗೆ ಸ್ಪಷ್ಟತೆ ನೀಡಲಾಯಿತು. ಕಾರ್ಯಾಗಾರದ ಸಮಾರೋಪದಲ್ಲಿ ಪ್ರಾಥಮಿಕ ಶಾಲಾ ವಿಭಾಗದ ಮುಖ್ಯೋಪಾಧ್ಯಾಯಿನಿ ಸುಜಾತಾ ಸದಾರಾಮ್ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ವಿಷು ಸಂಭ್ರಮ: ಉಡುಪಿ ಶ್ರೀಕೃಷ್ಣ ಮಠದಲ್ಲಿ 'ಸುವರ್ಣ ರಥೋತ್ಸವ'



ಉಡುಪಿ: ಶ್ರೀಕೃಷ್ಣ ಮಠದಲ್ಲಿ ಬುಧವಾರ ಸೌರ ಯುಗಾದಿಯ ವಿಷು ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ನಡೆಯಿತು.

ಪರ್ಯಾಯ ಶ್ರೀ ಶೀರೂರು ಮಠಾಧೀಶ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಹಾಗೂ ಕೃಷ್ಣಾಪುರ ಮಠಾಧೀಶ ಶ್ರೀ ವಿದ್ಯಾಸಾಗರ ತೀರ್ಥ ಶ್ರೀಪಾದರು ಪೇಜಾವರ ಮಠಾಧೀಶರಾದ ಶ್ರೀವಿಶ್ವ ಪ್ರಸನ್ನ ತೀರ್ಥ ಶ್ರೀಪಾದರು, ಕಾಣಿಯೂರು ಮಠಾಧೀ ಶರಾದ ಶ್ರೀವಿದ್ಯಾವಲ್ಲಭ ತೀರ್ಥ ಶ್ರೀ ಪಾದರ ಉಪಸ್ಥಿತಿಯಲ್ಲಿ ಇದೇ ಸಂದರ್ಭ ಸುವರ್ಣ ರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ಬಳಿಕ ಶ್ರೀ ಕೃಷ್ಣದೇವರ ಮುಂಭಾಗ ಚಂದ್ರ ಶಾಲೆಯಲ್ಲಿ 'ಪರಾಭವ' ಸಂವತ್ಸರದ ಪಂಚಾಂಗ ಶ್ರವಣವನ್ನು ಪರ್ಯಾಯ ಮಠದ ಪುರೋಹಿತ ಸುದರ್ಶನ ಆಚಾರ್ಯರು ನಡೆಸಿದರು. ದಿವಾನರಾದ ಡಾ. ಉದಯ ಕುಮಾರ ಸರಳತ್ತಾಯರು ಉಪಸ್ಥಿತರಿದ್ದರು.

ಏಷ್ಯಾ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ: ಆಯುಷ್ ಶೆಟ್ಟಿಗೆ ಸಿಎಂ ಅಭಿನಂದನೆ



ಕಾರ್ಕಳ: ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್ ಶಿಪ್‌ನಲ್ಲಿ ಬೆಳ್ಳಿ ಗೆದ್ದ ಮೊದಲ ಭಾರತೀಯ ಕಾರ್ಕಳದ ಆಯುಷ್ ಶೆಟ್ಟಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ವಿಧಾನಸೌಧದ ಕಚೇರಿಯಲ್ಲಿ ಅಭಿನಂದಿಸಿ ಶಾಲು ಹಾಕಿ ಗೌರವಿಸಿದರು.

ಈ ಸಂದರ್ಭ ಮಾಜಿ ಸಚಿವ ವಿಜಯಕುಮಾರ್ ಸೊರಕೆ, ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ, ಕಾರ್ಕಳ ಕಾಂಗ್ರೆಸ್ ನಾಯಕರಾದ ಉದಯ ಶೆಟ್ಟಿ ಮುನಿಯಾಲು, ವಿಧಾನಪರಿಷತ್ ಸದಸ್ಯ ಗೋವಿಂದರಾಜು, ಆಯುಶ್ ಶೆಟ್ಟಿಯವರ ತಂದೆ ರಾಮ ಪ್ರಕಾಶ್ ಶೆಟ್ಟಿ ತಾಯಿ ಶಾಲ್ಮಲಿ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಆಯುಶ್ ಶೆಟ್ಟಿಯವರು ಚೀನಾದ ನಿಂಗ್ಬೋದಲ್ಲಿ ನಡೆದ ಪಂದ್ಯಾಟದಲ್ಲಿ ವಿಶ್ವದ ನಂ. 1 ಆಟಗಾರ ಕುನ್ಲಾವುತ್ ವಿಟಿಡ್ಸರ್ನ್ ಅವರನ್ನು ಭರ್ಜರಿಯಾಗಿ ಸೋಲಿಸಿ ಫೈನಲ್ ಪ್ರವೇಶಗೈದು 61 ವರ್ಷದ ಬಳಿಕ ಭಾರತಕ್ಕೆ ಬೆಳ್ಳಿ ಪದಕದ ಸಾಧನೆ ಮಾಡಿದ್ದರು.

ಕೋಟ: 'ಶಿಕ್ಷಣದೊಂದಿಗೆ ಯಕ್ಷಗಾನ' ಗುರುಕುಲ ವಸತಿ ಶಾಲೆ ಅರ್ಜಿ ಆಹ್ವಾನ

ಕೋಟ: 54 ವರ್ಷಗಳಿಂದ ಯಕ್ಷಗಾನ ತರಬೇತಿ ತರಗತಿ ನಡೆಸುತ್ತಾ ಬಂದ, ಯಕ್ಷಗಾನ ಪ್ರಪಂಚಕ್ಕೆ 3000ಕ್ಕೂ ಮಿಕ್ಕಿ ಕಲಾವಿದರನ್ನು ನೀಡಿರುವ, ಯಕ್ಷಗಾನ ಚಿಂತಕ, ರಾಷ್ಟ್ರಪ್ರಶಸ್ತಿ ಪುರಸ್ಕೃತ ಮುಖ್ಯೋಪಾಧ್ಯಾಯ ದಿವಂಗತ ಐರೋಡಿ ಸದಾನಂದ ಹೆಬ್ಬಾರರಿಂದ ಸ್ಥಾಪಿಸಲ್ಪಟ್ಟ ಪ್ರಾಚಾರ್ಯ ನಾರ್ಣಪ್ಪ ಉಪ್ಪೂರರು ಪ್ರಾಚಾರ್ಯರಾಗಿದ್ದ ಯಕ್ಷಗಾನ ಕಲಾಕೇಂದ್ರ ಹಂಗಾರ ಕಟ್ಟೆಯು ಶಾಲಾ ಬಾಲಕರಿ ಗಾಗಿ ಗುರುಕುಲ ಪದ್ಧತಿಯಂತೆ ವಸತಿ ಶಾಲೆಯನ್ನು ಕಳೆದ ಹನ್ನೆರಡು ವರ್ಷಗಳಿಂದ ನಡೆಸುತ್ತಾ ಬಂದಿದೆ.

> ■ ಅವಕಾಶ ಪಡೆದ ಬಾಲಕರಿಗೆ ಹತ್ತಿರದ ಶಾಲೆಯಲ್ಲಿ ಶಿಕ್ಷಣ
>
> ■ ವಿದ್ಯಾರ್ಥಿಗಳಿಗೆ ಉಚಿತ ಊಟ, ಉಪಹಾರ, ವಸತಿಯ ವ್ಯವಸ್ಥೆಯೊಂದಿಗೆ ಯಕ್ಷಗಾನದ ಭಾಗವತಿಗೆ, ಮದ್ದಲೆ, ಚಂಡೆ, ನೃತ್ಯ ಶಿಕ್ಷಣ



ವಿಶೇಷ ಸೌಲಭ್ಯ

'ಶಿಕ್ಷಣದೊಂದಿಗೆ ಯಕ್ಷಗಾನ' ಎಂಬ ಧ್ಯೇಯದೊಂದಿಗೆ ಪ್ರಾರಂಭವಾಗಿರುವ ಈ ವಸತಿ ಶಾಲೆಯಲ್ಲಿ ಆರನೆಯ ತರಗತಿಯಿಂದ ಹತ್ತನೆಯ ತರಗತಿಯ ತನಕದ ಬಾಲಕರಿಗೆ ಪ್ರವೇಶ ನೀಡಲಾಗುವುದು. ಅವಕಾಶ ಪಡೆದ ಬಾಲಕರಿಗೆ ಹತ್ತಿರದ ಶಾಲೆಯಲ್ಲಿ ಶಿಕ್ಷಣ ನೀಡಲಾಗುವುದಲ್ಲದೇ ಉಚಿತ ಊಟ, ಉಪಹಾರ, ವಸತಿಯ ವ್ಯವಸ್ಥೆಯೊಂದಿಗೆ ಯಕ್ಷಗಾನದ ಭಾಗವತಿಗೆ, ಮದ್ದಲೆ. ಚಂಡೆ. ನೃತ್ಯ ಶಿಕ್ಷಣವನ್ನೂ ನೀಡಲಾಗುವುದು. ಅಲ್ಲದೇ ನಮ್ಮ ಸಂಸ್ಥೆಯು ಕರ್ನಾಟಕ ರಾಜ್ಯ ಸರಕಾರದ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದ್ದು, ವಿಶ್ವವಿದ್ಯಾನಿಲಯದ ನಿಯಮದಂತೆ ಯಕ್ಷಗಾನದ ಸರ್ಟಿಫಿಕೇಟ್ ಮತ್ತು ಡಿಪ್ಲೋಮೋ ಕೋರ್ಸ್‌ಗಾಗಿ ಪರೀಕ್ಷೆ ನಡೆಸುವುದಲ್ಲದೇ ಉತ್ತೀರ್ಣರಾದವರಿಗೆ ವಿಶ್ವವಿದ್ಯಾನಿಲಯದ ಸರ್ಟಿಫಿಕೇಟ್ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಗುರುಕುಲ ಪದ್ಧತಿ ಯಂತೆ ನಡೆಸಲುದ್ದೇಶಿಸುವ ಈ ಶಾಲೆಗೆ ಸೇರ ಬಯಸುವವರು 2026ರ ಮೇ 25ರ ಒಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿದ್ದು ಯಕ್ಷಗಾನ ಕಲಾಕೇಂದ್ರ ಹಂಗಾರಕಟ್ಟೆ ಅಂಚೆ: ಐರೋಡಿ 576226, ಉಡುಪಿ ತಾಲೂಕು ಮತ್ತು ಜಿಲ್ಲೆ, ದೂರವಾಣಿ 9880605610 ಅನ್ನು ಸಂಪರ್ಕಿಸುವಂತೆ ಕಲಾಕೇಂದ್ರದ ಕಾರ್ಯದರ್ಶಿ ಐರೋಡಿ ರಾಜಶೇಖರ ಹೆಬ್ಬಾರ ಅವರು ತಿಳಿಸಿದ್ದಾರೆ.

ಏ.18,19: ಅಂಬಲಪಾಡಿಯಲ್ಲಿ ನೇಮ

ಉಡುಪಿ: ಶ್ರೀ ಬಬ್ಬುಸ್ವಾಮಿ ದೈವಸ್ಥಾನ (ಪಡುಪಾಲು) ಅಂಬಲಪಾಡಿ ಇದರ ನೇಮೋತ್ಸವ ಸಮಿತಿ ವತಿಯಿಂದ ಸಮಿತಿಯ ಅಧ್ಯಕ್ಷ ಪಠೇಲರ ಮನೆ ಎ.ಜಯಕರ ಶೆಟ್ಟಿ ಅಂಬಲಪಾಡಿ ಅವರ ನೇತೃತ್ವದಲ್ಲಿ ಗೌರವಾಧ್ಯಕ್ಷ ಡಾ. ನಿ.ಬೀ. ವಿಜಯ ಬಲ್ಲಾಳ್ ಅಂಬಲಪಾಡಿ ಅವರ ಮಾರ್ಗದರ್ಶನದಲ್ಲಿ ಶ್ರೀ ಬಬ್ಬುಸ್ವಾಮಿ ಹಾಗೂ ಪರಿವಾರ ದೈವಗಳ ನೇಮವು ಏ.18, ಏ.19ಕ್ಕೆ ಗ್ರಾಮಸ್ಥರ, ಹತ್ತು ಸಮಸ್ತರ ಹಾಗೂ ಊರ-ಪರವೂರ ಭಕ್ತಾಭಿಮಾನಿಗಳ ಸೇವೆಯಾಗಿ ಅಂಬಲಪಾಡಿ ಬಂಕೇರಕಟ್ಟದಲ್ಲಿ ನಡೆಯಲಿದೆ ಎಂದು ನೇಮೋತ್ಸವ ಸಮಿತಿಯ ಗೌರವ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಅಂಬಲಪಾಡಿ ತಿಳಿಸಿದ್ದಾರೆ.

ವಿವಿಧ ಕಾರ್ಯಕ್ರಮ

ಏ.18ರ ಬೆಳಿಗ್ಗೆ ಗಂಟೆ 7.30ಕ್ಕೆ ಮಹಾ ಚಪ್ಪರದ ಗಜಕಂಬ ಪ್ರತಿಷ್ಠೆ ಮಧ್ಯಾಹ್ನ ಗಂಟೆ 12.00ಕ್ಕೆ ಮಹಾ ಚಪ್ಪರದ ಆರೋಹಣ ಹಾಗೂ ಮಧ್ಯಾಹ್ನ 12.30ಕ್ಕೆ ನೇಮ ಚಪ್ಪರದ ಬಳಿ ಸಾರ್ವಜನಿಕ ಮಹಾ ಅನ್ನಸಂತರ್ಪಣೆ ನಡೆಯಲಿದೆ. ಸಂಜೆ 4ಕ್ಕೆ ದೈವಸ್ಥಾನದಲ್ಲಿ ಮಹಾಪೂಜೆ ಮತ್ತು ಶ್ರೀ ದೈವಗಳ ದರ್ಶನ ಸೇವೆ ನಡೆಯಲಿದೆ. ಸಂಜೆ 5ಕ್ಕೆ ದೈವಸ್ಥಾನದಿಂದ ಮಹಾಚಪ್ಪರಕ್ಕೆ ಮುಖಮೂರ್ತಿ ಬಂಡಾರಗಳ ಮೆರವಣಿಗೆ ಹೊರಡಲಿದೆ. ರಾತ್ರಿ 9ರಿಂದ ಶ್ರೀ ಬಬ್ಬುಸ್ವಾಮಿಯ ನೇಮ ಹಾಗೂ ರಾತ್ರಿ 12ಕ್ಕೆ ತನ್ನಿಮಾನಿಗ ದೇವಿಯ ನೇಮ ನಡೆಯಲಿದೆ. ಏ.19ಕ್ಕೆ ಬೆಳಿಗ್ಗೆ 9ಕ್ಕೆ ಶ್ರೀ ಧೂಮಾವತಿ ಬಂಟ ದೈವಗಳ ನೇಮ, ಮಧ್ಯಾಹ್ನ ಗಂಟೆ 12ರಿಂದ ಶ್ರೀ ಮಹಾ ಗುಳಿಗದ್ವಯ ದೈವಗಳ ನೇಮ, ಸಂಜೆ 4ರಿಂದ ಶ್ರೀ ಕೊರಗಜ್ಜ ದೈವದ ನೇಮ ಹಾಗೂ ಸಂಜೆ ಗಂಟೆ 5.00ಕ್ಕೆ ಪ್ರಸಾದ ವಿತರಣೆ ನಡೆಯಲಿದ್ದು, ಊರ-ಪರವೂರ ಭಕ್ತರು ಭಾಗವಹಿಸುವಂತೆ ಎಂದು ಅವರು ತಿಳಿಸಿದ್ದಾರೆ.

ಸಣ್ಣ ಉದ್ದಿಮೆಗೆ ಸಹಾಯಧನ: ಅರ್ಜಿ ಆಹ್ವಾನ

ಉಡುಪಿ: ನಗರಸಭೆಯ 2025-26 ನೇ ಸಾಲಿನ ಎಸ್.ಎಫ್.ಸಿ ಅನುದಾನದ ಶೇ. 7.25ರ ಇತರೆ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮದಡಿ ಹಾಗೂ ವ್ಯಕ್ತಿ ಸಂಬಂಧಿತ ಕಾರ್ಯಕ್ರಮದಡಿ ಸಣ್ಣ ಉದ್ದಿಮೆಗೆ ಸಹಾಯಧನ ನೀಡುವ ಸಲುವಾಗಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ನಿಗದಿತ ಅರ್ಜಿಯೊಂದಿಗೆ ಪೂರಕ ದಾಖಲಾತಿ ಸಲ್ಲಿಸಲು ಏ.21 ಕಡೇ ದಿನ. ಹೆಚ್ಚಿನ ಮಾಹಿತಿಗಾಗಿ ಪೌರಾಯುಕ್ತರ ಕಚೇರಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಗದು ರಹಿತ ಚಿಕಿತ್ಸೆಗೆ ಮೊದಲ ಆದ್ಯತೆ | ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಪಿ.ವಿ. ಭಂಡಾರಿ ಘೋಷಣೆ

ಉಡುಪಿಯ ಡಾ.ಎ.ವಿ. ಬಾಳಿಗಾ ಆಸ್ಪತ್ರೆಯಲ್ಲಿ ಇನ್ನು ಇಎಸ್‌ಐ ಚಿಕಿತ್ಸಾ ಸೌಲಭ್ಯ

ಉಡುಪಿ: ಮಾನಸಿಕ ಆರೋಗ್ಯ ಮತ್ತು ಪುನರ್ವಸತಿ ವಿಭಾಗದಲ್ಲಿ ಕಳೆದ ಎರಡು ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ದೊಡ್ಡಣಗುಡ್ಡೆಯ ಡಾ. ಎ.ವಿ. ಬಾಳಿಗಾ ಸ್ಮಾರಕ ಆಸ್ಪತ್ರೆಯು ತನ್ನ ಸೇವಾ ವ್ಯಾಪ್ತಿ ಈಗ ಕಾರ್ಮಿಕ ವರ್ಗಕ್ಕೂ ವಿಸ್ತರಿಸಿದೆ. ಶ್ರಮಜೀವಿಗಳಿಗೆ ಅತ್ಯುತ್ತಮ ವೈದ್ಯಕೀಯ ಸೇವೆ ಒದಗಿಸಲಿ ಆಸ್ಪತ್ರೆಯಲ್ಲಿ ನೌಕರರ ರಾಜ್ಯ ವಿಮಾ (ಇಎಸ್‌ಐ) ಸೌಲಭ್ಯ ಆರಂಭಿಸಲಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ಪಿ.ವಿ. ಭಂಡಾರಿ ತಿಳಿಸಿದ್ದಾರೆ.

ಉಡುಪಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ಮಹತ್ವದ ವಿಷಯವನ್ನು ಹಂಚಿಕೊಂಡ ಅವರು, ಇಎಸ್‌ಐ ನಿಯಮಗಳನ್ನು ಅಕ್ಷರಶಃ ಪಾಲಿಸುವ ಮೂಲಕ ಅರ್ಹ ಫಲಾನುಭವಿಗಳಿಗೆ ಪ್ರಾಮಾಣಿಕ ಮತ್ತು ಗುಣಮಟ್ಟದ ಚಿಕಿತ್ಸೆ ನೀಡಲು ಆಸ್ಪತ್ರೆ



ಬದ್ಧವಾಗಿದೆ ಎಂದರು. ವಿಮೆ ಹೊಂದಿರುವ ಪ್ರತಿಯೊಬ್ಬ ಕಾರ್ಮಿಕನಿಗೂ ಗೌರವಯುತ ಹಾಗೂ ನಗದು ರಹಿತ ಚಿಕಿತ್ಸೆ ತಲುಪಿಸುವುದು ತಮ್ಮ ಆದ್ಯತೆಯಾಗಿದ್ದು, ಇಎಸ್‌ಐ ಯೋಜನೆಯ ಮೂಲ ಆಶಯಕ್ಕೆ ಚ್ಯುತಿ ಬಾರದಂತೆ ಸೇವೆಯನ್ನು ವಿನ್ಯಾಸಗೊಳಿಸಲಾಗಿದೆ ಎಂದು ಅವರು ವಿವರಿಸಿದರು.

ಸಂಪೂರ್ಣ ವೈದ್ಯಕೀಯ ಸೇವೆಗಳ ಲಭ್ಯತೆ

ಈಗಾಗಲೇ ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಹೆಸರು ಮಾಡಿರುವ ಈ ಆಸ್ಪತ್ರೆಯಲ್ಲಿ ತಜ್ಞ ಮನೋವೈದ್ಯರಿಂದ ಎಲ್ಲಾ ತರಹದ ಮಾನಸಿಕ ಕಾಯಿಲೆಗಳಿಗೆ ಚಿಕಿತ್ಸೆ ಮತ್ತು ಆಪ್ತ ಸಮಾಲೋಚನೆ ಲಭ್ಯವಿದೆ. ಇದರೊಂದಿಗೆ ಮದ್ಯಪಾನ ಹಾಗೂ ಮಾದಕ ವ್ಯಸನ ಮುಕ್ತರಾಗಲು ವೈಜ್ಞಾನಿಕ ಪುನರ್ವಸತಿ ಕೇಂದ್ರ, ವಿಶೇಷ ಅಗತ್ಯವಿರುವ ಮಕ್ಕಳಿಗಾಗಿ ಆಟಿಸಂ ಮತ್ತು ಕಲಿಕಾ ನ್ಯೂನತೆಗಳ ಚಿಕಿತ್ಸೆ ಹಾಗೂ ತರಬೇತಿ ಸೌಲಭ್ಯಗಳಿವೆ. ಸಂವಹನ ಸಮಸ್ಯೆಗಳ ನಿವಾರಣೆಗೆ ಪರಿಣಿತರಿಂದ ವಾಕ್ ಚಿಕಿತ್ಸೆ ಹಾಗೂ ದೈಹಿಕ-ಮಾನಸಿಕ ಸಾಮರ್ಥ್ಯ ವೃದ್ಧಿಗೆ ವೃತ್ತಿಪರ ಚಿಕಿತ್ಸೆ ನೀಡಲಾಗುತ್ತಿದೆ. ಕೇವಲ ಮಾನಸಿಕ ಆರೋಗ್ಯ ಮಾತ್ರವಲ್ಲದೆ, ಸುಧಾರಿತ ತಂತ್ರಜ್ಞಾನದೊಂದಿಗೆ ಸಂಪೂರ್ಣ ಕಣ್ಣಿನ ಮತ್ತು ದಂತ ಆರೋಗ್ಯ ಸೇವೆಗಳು ಕೂಡ ಇಲ್ಲಿ ಲಭ್ಯವಿರುವುದು ವಿಶೇಷವಾಗಿದೆ.

ಸರ್ಕಾರಿ ಯೋಜನೆಗಳ ಯಶಸ್ವಿ ಸಹಭಾಗಿತ್ವ

ಡಾ. ಎ.ವಿ. ಬಾಳಿಗಾ ಆಸ್ಪತ್ರೆಯು ಈಗಾಗಲೇ ಸರ್ಕಾರದ ಹಲವಾರು ಮಹತ್ವಾಕಾಂಕ್ಷಿ ಯೋಜನೆಗಳೊಂದಿಗೆ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಆಯುಷ್ಮಾನ್ ಭಾರತ್ - ಆರೋಗ್ಯ ಕರ್ನಾಟಕ ಯೋಜನೆ, ಐ.ಟಿ.ಡಿ.ಪಿ ಹಾಗೂ ಕೊಂಕಣ ರೈಲ್ವೆ ಸಿಬ್ಬಂದಿಗಳ ಆರೋಗ್ಯ ಸೇವೆಯಲ್ಲಿ ಸಕ್ರಿಯವಾಗಿದೆ. ಕರ್ನಾಟಕ ಸರ್ಕಾರದ ಸಹಭಾಗಿತ್ವದ 'ಮಾನಸಧಾರ' ಯೋಜನೆ ಹಾಗೂ ಬೀದಿಯಲ್ಲಿ ಅಲೆದಾಡುವ ಮಾನಸಿಕ ಅಸ್ವಸ್ಥರ ರಕ್ಷಣೆ ಮತ್ತು ಚಿಕಿತ್ಸೆಗಾಗಿ ಇರುವ ಇ.ಸಿ.ಆರ್.ಸಿ ಕೇಂದ್ರದ ನಿರ್ವಹಣೆಯನ್ನು ಆಸ್ಪತ್ರೆ ಅತ್ಯಂತ ಜವಾಬ್ದಾರಿಯುತವಾಗಿ ನಿಭಾಯಿಸುತ್ತಿದೆ.

ಇಎಸ್‌ಐ ಸೌಲಭ್ಯದ ಪ್ರಯೋಜನ ಪಡೆಯಲು ಇಚ್ಛಿಸುವ ಫಲಾನುಭವಿಗಳು ತಮ್ಮ ಇ-ಪಹಚಾನ್ ಕಾರ್ಡ್ ಹಾಗೂ ಅಗತ್ಯ ದಾಖಲೆಗಳೊಂದಿಗೆ ಆಸ್ಪತ್ರೆಯನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0820-2535299 / 2535399 ಮೂಲಕ ಮಾಹಿತಿ ಪಡೆಯಬಹುದು ಎಂದು ತಿಳಿಸಲಾಗಿದೆ. ಮನೋವೈದ್ಯರಾದ ಡಾ. ವಿರೂಪಾಕ್ಷ ದೇವರುಮನೆ, ಡಾ. ದೀಪಕ್ ಮಲ್ಯ, ಡಾ. ಮಾನಸ್ ಇ.ಆರ್ ಹಾಗೂ ಆಸ್ಪತ್ರೆಯ ಆಡಳಿತಾಧಿಕಾರಿ ಸೌಜನ್ಯ ಶೆಟ್ಟಿ ಉಪಸ್ಥಿತರಿದ್ದರು.

ಮಹಾಲಿಂಗೇಶ್ವರನ ವೀರಮಂಗಲ ಜಳಕ ಸವಾರಿ




ಪುತ್ತೂರು ಜಾತ್ರೆಯ ವಿಶೇಷತೆಗಳಲ್ಲಿ ಶ್ರೀ ಮಹಾಲಿಂಗೇಶ್ವರನ ಜಳಕದ ಸವಾರಿ ಅಥವಾ ಅವಭೃತ ಮೆರವಣಿಗೆ ಸೇರಿದೆ. ಪುತ್ತೂರು ದೇವಾಲಯದಿಂದ 14ಕಿ.ಮೀ. ದೂರವಿರುವ ವೀರಮಂಗಲ ಕುಮಾರಾಧಾರ ನದಿಯಲ್ಲಿ ಶ್ರೀ ದೇವರ ಜಾತ್ರೆಯ ಸಂದರ್ಭದ ಅವಭೃತ ಸ್ನಾನ ನೆರವೇರುತ್ತದೆ. ಪ್ರತೀ ವರ್ಷ ಏಪ್ರಿಲ್ 18ರಂದು ಶ್ರೀ ದೇವರ ಅವಭೃತ ಸವಾರಿ ನಡೆಯುತ್ತದೆ.

ಅತೀ ಉದ್ದದ ಸವಾರಿ

ಬೇರೆಬೇರೆ ಧಾರ್ಮಿಕ ಸೀಮೆಗಳ ಜಾತ್ರೆಗಳಿಗೆ ಸಂಬಂಧಿಸಿದಂತೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಅವಭೃತ ಸವಾರಿ ಅತ್ಯಂತ ಉದ್ದದ ಉತ್ಸವ ಎಂದು ಪರಿಗಣಿಸಲ್ಪಟ್ಟಿದೆ. ಪುತ್ತೂರು ದೇವಾಲಯದ ಅಂಗಣದಿಂದ ಹೊರಟ ಶ್ರೀ ದೇವರ ಅವಭೃತ ಸವಾರಿಯ ಉತ್ಸವದ ಸಂದರ್ಭ 47 ಕಡೆ ಕಟ್ಟೆಪೂಜೆಗಳು ನಡೆಯುತ್ತವೆ. ದಾರಿಯುದ್ದಕ್ಕೂ ಭಕ್ತರು ಆರತಿ ಹಣ್ಣು-ಕಾಯಿಗಳನ್ನು ಶ್ರೀ ದೇವರಿಗೆ ಸಮರ್ಪಿಸುತ್ತಾರೆ. ಮತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ಹೊರಾಂಗಣದಲ್ಲಿನ ಮೊದಲ ಕಟ್ಟೆಯಿಂದ ತೊಡಗಿ ವೀರಮಂಗಲದಲ್ಲಿರುವ ಜಳಕದ ಕಟ್ಟೆಯುವರೆಗೆ ಶ್ರೀ ದೇವರು ಕಟ್ಟೆಪೂಜೆಯನ್ನು ಸ್ವೀಕರಿಸುತ್ತಾರೆ.

ಗರಿಷ್ಠ ಹಣ್ಣು-ಕಾಯಿ ಸೇವೆ

ವೀರಮಂಗಲ ಅವಭೃತ ಸವಾರಿಯ ದಿನ ದಾರಿಯಲ್ಲಿಸಿಗುವ ಪುರುಷರಕಟ್ಟೆ ಎಂಬಸ್ಥಳದಲ್ಲಿ ಶ್ರೀ ದೇವರಿಗೆ ಕಟ್ಟೆಪೂಜೆ ನಡೆಯುತ್ತದೆ. ಪುರುಷರ ಕಟ್ಟೆಯಲ್ಲಿ ಗರಿಷ್ಠ ಸಂಖ್ಯೆಯ ಅಂದರೆ 2ಸಾವಿರಕ್ಕೂ ಮಿಕ್ಕಿ ಹಣ್ಣು-ಕಾಯಿ ಸಮರ್ಪಣೆಯಾಗುವುದು ಪುತ್ತೂರು ಜಾತ್ರೆಯಲ್ಲಿ ಒಂದು ದಾಖಲೆಯಾಗಿದೆ. ಪುರುಷರಕಟ್ಟೆಯಲ್ಲಿ ಶ್ರೀ ದೇವರ ಅವಭೃತ ಸವಾರಿಯ ಸಂದರ್ಭಕ್ಕಾಗಿ ಯಕ್ಷಗಾನ ಪ್ರದರ್ಶನ, ನಾಟಕ ಪ್ರದರ್ಶನ, ರಸಮಂಜರಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ.

ದಾರಿಯುದ್ದಕ್ಕೂ ಬೀದಿ ದೀಪ

ಪುತ್ತೂರು ನಗರದಿಂದ ವೀರಮಂಗಲದವರೆಗೆ 14ಕಿ.ಮೀ ಉದ್ದಕ್ಕೆ ರಸ್ತೆಯ ಬದಿಗಳಲ್ಲಿ ದಾರಿದೀಪಗಳನ್ನು ಅಳವಡಿಸಲಾಗುತ್ತದೆ. ವಿವಿಧ ಸಂಘ ಸಂಸ್ಥೆಗಳ ವತಿಯಿಂದ ದಾರಿದೀಪ ಅಳವಡಿಸುವ ಸೇವೆ ನಡೆಯುತ್ತವೆ. ಸಂಬಂಧಪಟ್ಟ ಕಟ್ಟೆ ಪೂಜೆ ಸೇವೆದಾರರೂ ಕೂಡಾ ದಾರಿದೀಪಗಳನ್ನು ಅಳವಡಿಸುತ್ತಾರೆ. ಪುತ್ತೂರಿನಿಂದ 14ಕಿ.ಮೀ. ದೂರದ ವೀರಮಂಗಲದವರೆಗೆ ಜಾತ್ರೆಯ ವಾತಾವರಣನಿರ್ಮಾಣವಾಗುತ್ತದೆ.

ದೇವರೊಂದಿಗೆ ಭಕ್ತರ ಜಳಕ

ಏ. 19ರಂದು ಬೆಳಗ್ಗೆ ವೀರಮಂಗಲ ಕುಮಾರಾಧಾರ ನದಿಯಲ್ಲಿ ಶ್ರೀ ದೇವರ ಅವಧೃತ ಸವಾರಿಯೊಂದಿಗೆ ಪುತ್ತೂರಿನಿಂದ ವೀರಮಂಗಲಕ್ಕೆ ತೆರಳಿದ ಸಾವಿರಾರು ಭಕ್ತರು ಶ್ರೀ ದೇವರ ಜೊತೆ ಜಳಕ ನೆರವೇರಿಸುತ್ತಾರೆ. ದೇವರೊಂದಿಗೆ ತೀರ್ಥಸ್ನಾನ ಮಾಡುವ ಅಪೂರ್ವ ಸುಯೋಗವೆಂದು ಭಕ್ತಿಯಿಂದ ಸ್ನಾನ ನೆರವೇರಿಸುತ್ತಾರೆ. ಮತ್ತೂರು ಸೀಮೆಯ ವಿವಿಧ ವರ್ಗಗಳ, ವಿವಿಧ ವೃತ್ತಿಗಳ ಭಕ್ತರು ಶ್ರೀ ದೇವರೊಂದಿಗೆ ಜಳಕ ನೆರವೇರಿಸಿ ಪಾವನರಾಗುತ್ತಾರೆ.

ಬಲ್ನಾಡ್ ಉಳ್ಳಾಲ್ತಿಯ ಅಪ್ಪಣೆ ಪಡೆದ ಬಳಿಕ ಪುತ್ತೂರ ಉಳ್ಳಾಯನ ರಥೋತ್ಸವ

ಇತಿಹಾಸ ಪ್ರಸಿದ್ಧ ಮತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ವಾರ್ಷಿಕ ಜಾತ್ರೋತ್ಸವದ ಸಂದರ್ಭ ಪ್ರತೀ ವರ್ಷ ಎ. 16ರಂದು ದೇವಾಲಯದಿಂದ 5 ಕಿ.ಮೀ. ದೂರದಲ್ಲಿರುವ ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಸ್ಥಾನದಿಂದ ಶ್ರೀ ದೈವಗಳ ಕಿರುವಾಳು (ಭಂಡಾರ) ಆಗಮಿಸುವ ಪೂರ್ವಶಿಷ್ಠ ಪದ್ಧತಿ ಇದೆ. ಸೀಮೆಯ ಉಳ್ಳಾಯನ ಭೇಟಿಗೆ ಉಳ್ಳಾಲ್ತಿ ಬರುವ ಮತ್ತು ಉಳ್ಳಾಲ್ತಿ ಹಾಗೂ ಪರಿವಾರ ದೈವಗಳನ್ನು ಸ್ವಾಗತಿಸಿ ಜೊತೆಯಲ್ಲಿಯೇ ಜಾತ್ರೆ ನಡೆಸುವ ಸಂಪ್ರದಾಯ ಮತ್ತೂರಿನಲ್ಲಿದೆ. ದೇವ ಮತ್ತು ದೈವಗಳ ಧಾರ್ಮಿಕ ಅನುಸಂಧಾನವಿರುವ ಮತ್ತೂರು ಸೀಮೆಯ ವಿಶಿಷ್ಟ ಸಂಪ್ರದಾಯಗಳು ಮತ್ತು ಕಟ್ಟು ಕಟ್ಟಲೆಗಳಲ್ಲಿ ಸೇರಿದೆ.

ಸೂಟೆಯ ಬೆಳಕಲ್ಲಿ ಬರುವಳು ಉಳ್ಳಾಲ್ತಿ

ಬಲ್ನಾಡು ಶ್ರೀ ದಂಡ ನಾಯಕ ಉಳ್ಳಾಲ್ತಿ ದೈವಸ್ಥಾನದಿಂದ ದೈವಗಳ ಭಂಡಾರದ ಪಲ್ಲಕ್ಕಿ ಹಾಗೂ ದೈವ ಪಾತ್ರಿಗಳು, ಉಳ್ಳಾಲ್ತಿ ಮಾಣಿ, ಬ್ಯಾಂಡ್ ವಾಲಗ, ಬಿರುದಾವಳಿಗಳೊಂದಿಗೆ ತೆಂಗಿನ ಮರದ ಗರಿಗಳ ಸೂಟೆಯ ಬೆಳಕಿನಲ್ಲಿ ಆಗಮಿಸುತ್ತವೆ. ಬಲ್ನಾಡು ದೈವಸ್ಥಾನದಿಂದ ಹೊರಟು ಕರ್ಕುಂಜ, ಬಪ್ಪಳಿಗೆ ಮಾರ್ಗವಾಗಿ ಶ್ರೀ ದೈವಗಳ ಭಂಡಾರ ಐತಿಹಾಸಿಕ ಬಂಗರ ಕಟ್ಟೆಯ ಬಳಿ ಆಗಮಿಸುತ್ತದೆ. ದಾರಿಯುದ್ದಕ್ಕೂ ಇಕ್ಕಡೆಗಳಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಲಾಗುತ್ತಿದ್ದರೂ ಪೂರ್ವಶಿಷ್ಠ ಸಂಪ್ರದಾಯದಂತೆ ಶ್ರೀ ದೈವಗಳ ಭಂಡಾರವು ಸೂಟೆಯ ಬೆಳಕಿನಲ್ಲಿ ಇಂದಿಗೂ ಶ್ರೀ ಮಹಾಲಿಂಗೇಶ್ವರ ದೇವರ ರಾಜಾಂಗಣವನ್ನು ಪ್ರವೇಶಿಸುತ್ತದೆ. ಶ್ರೀದೇವರ ರಾಜಾಂಗಣದಲ್ಲಿ ಎ. 16ರಂದು ರಾತ್ರಿ ಸಾಂಪ್ರದಾಯಿಕ ದೇವ-ದೈವ ಸಂಭಾಷಣೆ ಬಳಿಕ ಶ್ರೀ ದೇವರ ಉತ್ಸವ, ಹೂತೇರು ಉತ್ಸವ (ಸಣ್ಣ ರಥೋತ್ಸವ), ಮುತ್ತು ಬೆಳೆದ ಕೆರೆಯಲ್ಲಿ ಕೆರೆ ಆಯನ ನಡೆಯುತ್ತದೆ.



ಮಲ್ಲಿಗೆ ದಂಡೆಗಳೇ ಹಾರ

ಬಲ್ನಾಡಿನಿಂದ ಮತ್ತೂರ್ದ ಉಳ್ಳಾಯನ ಸನ್ನಿಗೆ ಆಗಮಿಸುವ ದೈವಗಳ ಭಂಡಾರವನ್ನು ಬಂಗರ ಕಾಯರ್ ಕಟ್ಟೆಯ ಬಳಿ ಶ್ರೀ ದೇವಾಲಯದ ವ್ಯವಸ್ಥಾಪನಾ ಸಮಿತಿಯ ವತಿಯಿಂದ ಮಲ್ಲಿಗೆ ಹೂವಿನ ದಂಡೆಗಳ ಹಾರವನ್ನು ಹಾಕಿ ಸ್ವಾಗತಿಸಲಾಗುತ್ತದೆ. ಸೀಮೆಯ ಭಕ್ತರು ಶ್ರೀ ಉಳ್ಳಾಲ್ತಿಗೆ ಬಲ್ನಾಡು ದೈವಸ್ಥಾನದಲ್ಲಿ, ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಮತ್ತು ಬಂಗರ ಕಾಯರ್ ಕಟ್ಟೆ ದಾರಿಯಲ್ಲಿರುವ ಅಂಕದ ಕಟ್ಟೆಯ ಬಳಿ ಮಲ್ಲಿಗೆ ಹೂವಿನ ಚೆಂಡುಗಳನ್ನು ಸಮರ್ಪಿಸುತ್ತಾರೆ.

ಭಕ್ತರಿಗೆ ಪ್ರಸಾದ ವಿತರಣೆ

ಎ. 17ರಂದು ಬೆಳಗ್ಗೆ ಶ್ರೀ ದೇವಾಲಯಕ್ಕೆ ಆಗಮಿಸಿದ ಭಕ್ತರಿಗೆ ಮಲ್ಲಿಗೆ ಹಾರದ ತುಂಡು ಮತ್ತು ಕುಂಕುಮವನ್ನು ಪ್ರಸಾದ ರೂಪದಲ್ಲಿ ಶ್ರೀದಂಡನಾಯಕ ಶ್ರೀ ಉಳ್ಳಾಲ್ತಿ ದೈವಸ್ಥಾನದ ಪರವಾಗಿ ಕಾರ್ಯಸ್ಥರು ವಿತರಿಸುತ್ತಾರೆ. ಅಂದು ಶ್ರೀ ದೇವಾಲಯದಲ್ಲಿ ದರ್ಶನ ಬಲಿ ಉತ್ಸವ ನಡೆಯುವುದರಿಂದ ಬಟ್ಟಲು ಕಾಣಿಕೆ ಸಮರ್ಪಿಸುವ ಭಕ್ತರು ದೇವಾಲಯಕ್ಕೆ ಆಗಮಿಸುತ್ತಾರೆ. ತಪ್ಪದೇ ಶ್ರೀ ಉಳ್ಳಾಲ್ತಿಯ ಮಲ್ಲಿಗೆ ಮತ್ತು ಕುಂಕುಮ ಪ್ರಸಾದವನ್ನು ಸ್ವೀಕರಿಸುತ್ತಾರೆ.

ಉಳ್ಳಾಲ್ತಿಯ ಅಪ್ಪಣೆ ಬೇಕು

ಶ್ರೀ ಮಹಾಲಿಂಗೇಶ್ವರ ದೇವರ ಬ್ರಹ್ಮರಥೋತ್ಸವವು ಪ್ರತೀ ವರ್ಷ ಎ. 17ರಂದು ನಡೆಯುತ್ತದೆ. ಅಂದು ಬೆಳಗ್ಗೆ ಶ್ರೀ ದೇವಾಲಯದ ಒಳಾಂಗಣದಲ್ಲಿ ಶ್ರೀದೇವರ ದರ್ಶನ ಬಲಿ ಉತ್ಸವ ನಡೆಯುತ್ತದೆ. ಬಳಿಕ ಸೀಮೆಯ ಭಕ್ತರಿಂದ ಬಟ್ಟಲು ಕಾಣಿಕೆ ಸಮರ್ಪಣೆ ನಡೆಯುತ್ತದೆ. ಬಟ್ಟಲು ಕಾಣಿಕೆಯ ಸಮರ್ಪಣೆ ವರ್ಷಕ್ಕೆ ಒಂದು ಬಾರಿ ಮಾತ್ರ ನಡೆಯುತ್ತದೆ. ಆದರೆ ಬಟ್ಟಲು ಕಾಣಿಕೆ ಸಮರ್ಪಿಸುವ ಮೊದಲು ಬಲ್ನಾಡು ಶ್ರೀ ಉಳ್ಳಾಲ್ತಿ ದೈವ ಬಟ್ಟಲು ಕಾಣಿಕೆ ಸ್ವೀಕಾರದ ಹರಿವಾಣದ ಮುಂದೆ ನಿಂತು "ಬಟ್ಟಲ್ ಕಾಣಿಕೆಗ್ ಅನುವು ಮಲ್ತ್ ಕೊರ್ಪೆ" ಎಂದು ಅಪ್ಪಣೆ ನೀಡಿದ ಬಳಿಕವಷ್ಟೇ ಬಟ್ಟಲು ಕಾಣಿಕೆ ಸ್ವೀಕಾರ ಮಾಡಲಾಗುತ್ತದೆ.



ಡಿ.ಕೆ ಶಿವಕುಮಾರ್ ಅವರಿಂದ ತುಪ್ಪ ದೀಪ ಸೇವೆ



ವೇದಪಾಠ ಶಾಲೆ ಉದ್ಘಾಟನೆ



ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ಅಮ್ಮನವರ ಭಂಡಾರ ಬರುವ ಇಕ್ಕಟ್ಟಿನ ಜಾಗದಲ್ಲಿದ್ದ ಅಪಾಯಕಾರಿ ಕಟ್ಟಡ ತೆರವು



ಗೋಪೂಜೆ

ಮಹಾಲಿಂಗಾಚಾರ್ಯರಿಂದ ರಚಿಸಲ್ಪಟ್ಟ ಶ್ರೀ ಮಹಾಲಿಂಗೇಶ್ವರನ ಮುಖ ಕವಚ

ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಬೆಳ್ಳಿಯ ಮುಖ ಕವಚ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ದೇವಾಲಯಗಳಿಗಿಂತಲೂ ಸುಂದರವಾಗಿದೆ. ಅದಕ್ಕೆ ಶಿಲ್ಪ ನೈಪುಣ್ಯತೆ ಕಾರಣವಾದರೂ 1921ರಲ್ಲಿ ತ್ರಿ ನೇತ್ರಗಳನ್ನೊಳಗೊಂಡ ಸುಂದರ ಬೆಳ್ಳಿಯ ಮುಖ ಕವಚವನ್ನು ನಿರ್ಮಿಸಲಾಯಿತು.

ಪ್ರಸನ್ನ ವದನ

ಈ ಸುಂದರ ಬೆಳ್ಳಿಯ ಮುಖ ಕವಚವನ್ನು ನಿರ್ಮಿಸಿದವರ ಹೆಸರು ಅಂದಿನ ಪುತ್ತೂರಿನ ಪ್ರಸಿದ್ಧ ಶಿಲ್ಪಿ ಮಹಾಲಿಂಗಾಚಾರ್ಯ. ಆ ಕಾಲದಲ್ಲಿ ಚಿನ್ನ ಮತ್ತು ಬೆಳ್ಳಿಯ ಆಭರಣಗಳು ದೈವ-ದೇವರುಗಳ ಮುಖವಾಡಗಳನ್ನು ನಿರ್ಮಿಸುವಲ್ಲಿ ಪರಿಣಿತರಾಗಿದ್ದ ಮಹಾಲಿಂಗಾಚಾರ್ಯರು 283ತೊಲೆ ಬೆಳ್ಳಿಯನ್ನು ಬಳಸಿ ಸೌಮ್ಯರೂಪಿ, ಪ್ರಸನ್ನ ವದನ, ಕೊರಳಲ್ಲಿ ನಾಗನನ್ನು ಸುತ್ತುವರಿದು ಹೆಡೆಗಳನ್ನು ಶಿರದ ಮೇಲಿರಿಸಿದ ಶೋಭೆಯೊಂದಿಗೆ ಆಕ್ಯಾಕರ್ಷಕ ಬೆಳ್ಳಿಯ ಕವಚವನ್ನು ತಯಾರಿಸಿ ಕೊಟ್ಟರು. ಈ ಬೆಳ್ಳಿಯ ಮುಖ ಕವಚದ ನೇತ್ರಗಳನ್ನು ಸ್ವರ್ಣದಿಂದ ರಚಿಸಲಾಗಿದೆ. ಅಂದು ಅರ್ಪಣೆಗೊಂಡ ಬೆಳ್ಳಿಯ ಮುಖ ಕವಚವನ್ನು ಶ್ರೀ ದೇವರಿಗೆ ಇಂದಿಗೂ ಅಲಂಕರಿಸಲಾಗುತ್ತದೆ.

ಎಲ್ಲರ ಮನೆ ಮನಗಳಲ್ಲಿ

ಪುತ್ತೂರಿನ ದರ್ಬೆ ನಿವಾಸಿಯಾಗಿದ್ದ ದಿವಂಗತ ಮಹಾಲಿಂಗ ಆಚಾರ್ಯರು ವಂಶ ಪಾರಂಪರ್ಯವಾಗಿ ತಮಗೆ ಬಂದಿದ್ದ ಬೆಳ್ಳಿ ಮತ್ತು ಬಂಗಾರದ ಕುಸುರಿ ಕೆಲಸದ ವಿಶೇಷ ನೈಪುಣ್ಯತೆಯ ಕಾರಣದಿಂದ ಶ್ರೀ ಮಹಾಲಿಂಗೇಶ್ವರ ದೇವರ ಬೆಳ್ಳಿಯ ಮುಖ ಕವಚ ಅಷ್ಟು ಸುಂದರವಾಗಿ ರೂಪುಗೊಂಡಿವೆ. ದೇಶ-ವಿದೇಶಗಳಲ್ಲಿರುವ ಪುತ್ತೂರಿನ ಭಕ್ತಾಗಳು ಆರಾಧಿಸುವ ಶ್ರೀ ಮಹಾಲಿಂಗೇಶ್ವರನ ಆಕರ್ಷಕ ಮುಖ ಕವಚ ಪ್ರಭಾವಳಿಯೊಂದಿಗೆ ಭಕ್ತರನ್ನು ಆಕರ್ಷಿಸಿದೆ.



ಪುತ್ತೂರಿನ ಪ್ರತಿಯೊಬ್ಬರ ಮನೆ ಮನಗಳಲ್ಲಿ ಇದು ಅಚ್ಚೊತ್ತಿದೆ.

ಕೊಡಿ ಏರುವುದು ಮತ್ತು ಇಳಿಯುವುದು

ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಏ.10ರಂದು ವಾರ್ಷಿಕ ಜಾತ್ರೆಗಾಗಿ ಕೊಡಿ ಏರುವ ಸಮಯ ಬೆಳಗ್ಗೆ 9.30ರ ವೃಷಭ ಲಗ್ನ. ಅದೇ ರೀತಿ ಶ್ರೀ ದೇವರು ಏ.19ರಂದು ಅವಭೃತ ಸ್ನಾನ ಮುಗಿಸಿ ದೇವಾಲಯಕ್ಕೆ ಮರಳಿ ಕೊಡಿ ಇಳಿಸುವ ಹೊತ್ತು ಕೂಡ ಹೆಚ್ಚು ಕಡಿಮೆ ಅದೇ ಲಗ್ನವೇ ಆಗಿರುತ್ತದೆ. ಪುತ್ತೂರಿನ ಕೊಡಿಮರದ ಕಟ್ಟೆಗೆ ಕಟ್ಟಲು ಸೀಮೆಯ ಭಕ್ತರು ತಂದೊಪ್ಪಿಸುವ ಸುವಸ್ತುಗಳ ರಾಶಿಯನ್ನು ನೋಡಿ ದೇವಾಲಯಕ್ಕೆ ಭೇಟಿ ನೀಡಿದವರು ಅಚ್ಚರಿ ಪಡದೆ ಇರಲಾರರು. ಅಡಿಕೆ, ಎಳನೀರು, ಕಬ್ಬು, ಫಲವಸ್ತುಗಳು ಹೀಗೆ ನಾನಾ ರೀತಿಯ ಸುವಸ್ತುಗಳನ್ನು ದೇವಾಲಯಕ್ಕೆ ಭಕ್ತರು ತಂದೊಪ್ಪಿಸುತ್ತಾರೆ. ಇವುಗಳನ್ನು ಕೊಡಿಮರದ ಕಟ್ಟೆಯನ್ನು ಸಿಂಗರಿಸಲು ಬಳಸಿಕೊಳ್ಳಲಾಗುತ್ತದೆ.

'ಭಕ್ತರ ಕಾಯುವ ಹರ'ನೆಂದು ಪ್ರಸಿದ್ಧಿ ಪಡೆದ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರು

ಪುತ್ತೂರು ಸೀಮೆಯ ಧಾರ್ಮಿಕ ಅಧಿಪತಿಯಾಗಿರುವ ಶ್ರೀ ಮಹಾಲಿಂಗೇಶ್ವರನು ವರ್ಷಕ್ಕೆ ಒಂದು ಬಾರಿ ಜಾತ್ರೆಯ ಸಂದರ್ಭ ಪೇಟೆ ಸವಾರಿಯ ಮೂಲಕ ಭಕ್ತರ ಮನೆ ಬಾಗಿಲಿಗೆ ಬಂದು ಕಟ್ಟೆ ಪೂಜೆ ಸೇವೆಯನ್ನು ಸ್ವೀಕರಿಸಿ ನಂಬಿದವರಿಗೆ ಇಂಬು ನೀಡುವ ಮಹಾದೇವನೆಂಬ ಹೆಸರಿಗೆ ಪಾತ್ರನಾಗಿದ್ದಾನೆ.

ಜಾತ್ರೆ ಎಂಬ ವಿಸ್ಮಯ

ಪುತ್ತೂರು ಜಾತ್ರೆ ಎಂದರೆ ಅದೊಂದು ವಿಸ್ಮಯ. ಸೀಮೆಯಲ್ಲಿನ ಧಾರ್ಮಿಕ ಹಬ್ಬ, ಹತ್ತೂರುಗಳಲ್ಲಿರುವ ಪುತ್ತೂರಿನವರು ತಮ್ಮ ಒಡೆಯನ ಸನ್ನಿಧಿಗೆ ಬಂದು ಆತನಿಗೆ ಪೊಡಮಡುವ ವಿಶೇಷ ಸಂದರ್ಭವನ್ನು ಜಾತ್ರೆ ಸೃಷ್ಟಿಸುತ್ತದೆ. ಯಾಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಭಕ್ತರು ಜಮಾಯಿಸುವ ಜಾತ್ರೆ ಬೇರೊಂದಿಲ್ಲ. ದೇವಾಲಯದ ಮುಂಭಾಗದಲ್ಲಿ 10ಎಕರೆಗಳಷ್ಟು ವಿಶಾಲವಾದ ಗದ್ದೆಯನ್ನು ಹೊಂದಿರುವ ಏಕೈಕ ದೇವಾಲಯ ಶ್ರೀ ಮಹಾಲಿಂಗೇಶ್ವರನ ಸನ್ನಿಧಿ.

ಹತ್ತು ದಿನಗಳ ಧಾರ್ಮಿಕ ಹಬ್ಬ

ಪುತ್ತೂರು ಜಾತ್ರೆ ಎಂದರೆ ಹತ್ತು ದಿನಗಳ ಧಾರ್ಮಿಕ ಹಬ್ಬ. ಪ್ರತೀ ವರ್ಷವೂ ಏಪ್ರಿಲ್ 10ರಿಂದ 20ರವರೆಗೆ ಈ ಧಾರ್ಮಿಕ ಹಬ್ಬ ನಡೆಯುತ್ತದೆ. ಪೂರ್ವ ಶಿಷ್ಟ ಸಂಪ್ರದಾಯದಂತೆ ನಡೆಯುವ ಪುತ್ತೂರಿನ ಜಾತ್ರೆ ಹಲವು ವಿಶೇಷಗಳನ್ನು ಹೊಂದಿದೆ. ಊರಿನ ಮತ್ತು ಸೀಮೆಯ ವಿವಿಧ ಮಾರ್ಗಗಳಲ್ಲಿ ಶ್ರೀ ದೇವರ ಸಂಚಾರ ಮತ್ತು ಕಟ್ಟೆಪೂಜೆ ಸ್ವೀಕಾರ. ಕರ್ನಾಟಕದಲ್ಲಿಯೇ ಅತೀ ಎತ್ತರವಾದ ಬ್ರಹ್ಮರಥದಲ್ಲಿ ಶ್ರೀ ದೇವರ ಬ್ರಹ್ಮರಥೋತ್ಸವ. ಮುತ್ತು ಬೆಳೆದ ಕೆರೆಯಲ್ಲಿ ಶ್ರೀ ದೇವರ ಕೆರೆ ಆಯನ. ಮಲ್ಲಿಗೆ ಹೂಗಳಿಂದ ಸಿಂಗರಿಸಲ್ಪಡುವ ಹೂತೇರಿನಲ್ಲಿ ಶ್ರೀ ದೇವರ ರಥೋತ್ಸವ. ಹೀಗೆ ಹತ್ತು ಹಲವು ಸಂಗತಿಗಳಿಂದ ಪುತ್ತೂರು ಜಾತ್ರೆಯು ತನ್ನ ವಿಶೇಷತೆಯನ್ನು ಪಡೆದಿದೆ.

ಮಹಾಲಿಂಗೇಶ್ವರ ದೇವರ "ಸಕ್ಕರೆ ಕಟ್ಟೆ"

ಪುತ್ತೂರು ಸೀಮೆಯ ಒಡೆಯ ಶ್ರೀ ಮಹಾಲಿಂಗೇಶ್ವರ ದೇವರ ಕಟ್ಟೆಪೂಜೆಗಳು ಎ. 10 ರಿಂದ 18ರವರೆಗೆ ಸೀಮೆಯ ಉದ್ದಗಲಕ್ಕೆ ನಡೆಯುತ್ತವೆ. ಒಂದೊಂದು ಕಟ್ಟೆಗಳ ಆರಂಭಕ್ಕೂ ಒಂದೊಂದು ಧಾರ್ಮಿಕ ಕಾರಣವಿದೆ. ದೇವಾಲಯದ ಇತಿಹಾಸದಂತೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಕಟ್ಟೆಗಳಿಗೆ ಶತಮಾನಗಳ ಇತಿಹಾಸವಿದೆ. ಪುತ್ತೂರು ಜಾತ್ರೆಯ ಸಂದರ್ಭ ಎ. 14ರಂದು ಮೇಷ ಸಂಕ್ರಮಣದ ಅಂಗವಾಗಿ ಶ್ರೀ ದೇವರ ಪೇಟೆ ಸವಾರಿ ಕೊಂಬೆಟ್ಟು, ಬೊಳುವಾರು, ಹಾರಾಡಿ, ತಾಳೆಪ್ಪಾಡಿ, ದ್ರಾವಿಡ ಬ್ರಾಹ್ಮಣ ಹಾಸ್ಟೆಲ್ ಮಾರ್ಗದಲ್ಲಿ ವಿವಿಧ ಕಟ್ಟೆಗಳಲ್ಲಿ ಪೂಜೆ ಸ್ವೀಕರಿಸಿ ಶ್ರೀ ದೇವಾಲಯಕ್ಕೆ ಮರಳುವ ದಾರಿಯ ಕೊನೆಯಲ್ಲಿ ಪೂಜೆ ಸ್ವೀಕರಿಸುವ ಕಟ್ಟೆಯೇ ಸಕ್ಕರೆ ಕಟ್ಟೆ. ಶ್ರೀ ದೇವರ ಪೇಟೆ ಸವಾರಿಯು ಸುದೀರ್ಘ ಪಥದಲ್ಲಿ ಸಾಗಿ ಇಲ್ಲಿಗೆ ಬರುವ ಸಂದರ್ಭ ಎಲ್ಲರೂ ಆಯಸಗೊಂಡಿರುತ್ತಾರೆ. ಆಯಸ ಪರಿಹಾರಕ್ಕಾಗಿ ಪ್ರಸಾದ ರೂಪವಾಗಿ ಸಕ್ಕರೆಯನ್ನು ವಿತರಿಸುತ್ತಾರೆ. ಆದ ಕಾರಣ ಈ ಕಟ್ಟೆಗೆ ಸಕ್ಕರೆ ಕಟ್ಟೆ ಎಂದು ಕರೆಯುತ್ತಾರೆ.

ಸೂಟೆ ಬೆಳಕಿನಲ್ಲಿ ಸ್ವಾಗತ

ಅನಾದಿಕಾಲದಲ್ಲಿ ವಿದ್ಯುತ್ ಶಕ್ತಿ ಇರಲಿಲ್ಲ. ದಂಡ್ ಸಿಲಾಲ್‌ನ ಬೆಳಕಿನಲ್ಲಿ ಶ್ರೀ ದೇವರ ಪೇಟೆ ಸವಾರಿ ನಡೆಯುತ್ತಿತ್ತು. ನಂತರ ಪೆಟ್ರೋಮ್ಯಾಕ್ಸ್ ಲೈಟ್‌ಗಳ ಬಳಕೆ ಆರಂಭವಾಯಿತು. ಈಗ ದಾರಿದೀಪಗಳನ್ನು ಅಳವಡಿಸಲಾಗುತ್ತಿದೆ. ಆದರೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರು ಕಟ್ಟೆಪೂಜೆ ಸ್ವೀಕರಿಸುವ ಆಕಿರೆ ಬರಿ ಕಟ್ಟೆ ಮತ್ತು ಬನ್ನೂರು ಜೋಡುಕಟ್ಟೆಯಲ್ಲಿ ಈಗಲೂ ಶ್ರೀ ದೇವರು ಬರುವಾಗ ತೆಂಗಿನ ಗರಿಗಳಿಂದ ತಯಾರಿಸಿದ ಸೂಟೆಗಳನ್ನು ಉರಿಸಿ ಬೆಳಕಿನ ವ್ಯವಸ್ಥೆ ಮಾಡುವ ಪದ್ಧತಿ ಮುಂದುವರಿದಿದೆ.

ರೈಲ್ವೇ ನಿಲ್ದಾಣಕ್ಕೆ ಉತ್ಸವದಲ್ಲಿ ತೆರಳುವ ಪುತ್ತೂರು ಶ್ರೀ ಮಹಾಲಿಂಗೇಶ್ವರ ಮಾತ್ರ...!

ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವರ ಪೇಟೆ ಉತ್ಸವ ಸವಾರಿ ಕಬಕಪುತ್ತೂರು ರೈಲ್ವೇ ನಿಲ್ದಾಣಕ್ಕೆ ತೆರಳುತ್ತದೆ. ಏ. 15ರಂದು ಶ್ರೀ ದೇವರ ಪೇಟೆ ಸವಾರಿಯು ರೈಲ್ವೇ ನಿಲ್ದಾಣದ ಮುಂಭಾಗದ ಕಟ್ಟೆಯಲ್ಲಿ ಕಟ್ಟೆಪೂಜೆ ಸ್ವೀಕರಿಸಿದ ಬಳಿಕ ರೈಲ್ವೇ ಸ್ಟೇಷನ್‌ನ ಒಳಗಡೆ ತೆರಳಿ ರೈಲ್ವೇ ಹಳಿಗಳನ್ನು ದಾಟಿ ಮುಂದುವರಿಯುತ್ತದೆ. ಕಬಕಪುತ್ತೂರು ರೈಲ್ವೇ ನಿಲ್ದಾಣವಿರುವ ಪ್ರದೇಶವು ಹಿಂದೆ ಗದ್ದೆಯಾಗಿತ್ತು. ಬಳಿಕ ಗದ್ದೆಗೆ ಮಣ್ಣುಹಾಕಿ ಎತ್ತರಿಸಿ ಇಲ್ಲಿ ರೈಲ್ವೇ ನಿಲ್ದಾಣವನ್ನು ಕಟ್ಟಲಾಯಿತು. ಪೂರ್ವಶಿಷ್ಟ ಸಂಪ್ರದಾಯದಂತೆ ಪ್ರತೀವರ್ಷ ಏ. 15ರಂದು ರೈಲ್ವೇ ದೇವರ ಪೇಟೆ ಸವಾರಿಯು ಇದೇ ಪ್ರದೇಶದಿಂದ ಹಾದು ಹೋಗುತ್ತದೆ. ಗದ್ದೆ ಇದ್ದ ಸ್ಥಳದಲ್ಲಿ ರೈಲ್ವೇ ನಿಲ್ದಾಣ ನಿರ್ಮಾಣವಾದರೂ ದೇವರು ಮಾಮೂಲು ಪ್ರಕಾರ ರೈಲ್ವೇ ನಿಲ್ದಾಣದ ಒಳಗೆ ಪ್ರವೇಶಿಸಿ ರೈಲ್ವೇ ಹಳಿಯನ್ನು ದಾಟಿ ಸವಾರಿಯನ್ನು ಮುಂದುವರಿಸುತ್ತಾರೆ.